
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ: ಸುಸ್ಥಿರ ಅಭಿವೃದ್ಧಿ ಗುರಿ ಸಾಧನ ದುಬಾರಿ
9.27 ಲಕ್ಷ ಮಕ್ಕಳಲ್ಲಿ 'ತೀವ್ರ ಸ್ವರೂಪದ ಅಪೌಷ್ಟಿಕತೆ' 9
ಸಿ.ಎಂ ಮನೆ ಕದ ತಟ್ಟದ ರೋಹಿಣಿ ಸಿಂಧೂರಿ 4
ರಾಜ್ಯದಲ್ಲಿ ಕೋವಿಡ್ ಮರಣ ಪ್ರಮಾಣ ದರ ಶೇ 2.62 ರಷ್ಟು
ದೃಢ ಪ್ರಮಾಣ ಶೇ 7.71ಕ್ಕೆ ಇಳಿಕೆ 8

ಅಧಿಕಾರದಿಂದ ಇಳಿಸಿದರೆ ಅನುಕಂಪ ಗಿಟ್ಟಿಸುವ ಲೆಕ್ಕ

ಸವಾಲು ಕೂಗಿದ ಬಿಎಸ್‌ವೈ!

• ವೈ.ಗ. ಜಗದೀಶ್

ಬೆಂಗಳೂರು: 'ಮುಂದಿನ ಎರಡು ವರ್ಷ ನಾನೇ ಮುಖ್ಯಮಂತ್ರಿ' ಎಂದು ಕಿಂಚಿತ್ತೂ ಅಳುಕಿಲ್ಲದಂತೆ ಘಂಟಾಘೋಷವಾಗಿ ಮಾರ್ನುಡಿಯುತ್ತಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಏಕಾಏಕಿ 'ವೈರಾಗ್ಯ'ದ ಮಾತುಗಳನ್ನಾಡಿರುವುದು ಬಿಜೆಪಿಯೊಳಗೆ ಮಾತ್ರವಲ್ಲ, ರಾಜ್ಯದಲ್ಲಿಯೇ ರಾಜಕೀಯ ಕಲ್ಲೋಲ ಸೃಷ್ಟಿಸಿದೆ.

2021ರ ಹೊಸ ವರ್ಷದ ಆರಂಭದ ದಿನ ತಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳ ಜತೆ ಪತ್ರಿಕಾಗೋಷ್ಠಿ ನಡೆಸಿದ್ದ ಯಡಿಯೂರಪ್ಪ, 'ಇನ್ನು ಎರಡೂವರೆ ವರ್ಷ ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆಂದು ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಸ್ಪಷ್ಟವಾಗಿ ಹೇಳಿದ್ದಾರೆ. ನಮ್ಮ ಪಕ್ಷದಲ್ಲಿ ನಾಯಕತ್ವಕ್ಕೆ ಸಂಬಂಧಿಸಿದಂತೆ ಯಾವ ಗೊಂದಲವೂ ಇಲ್ಲ. ಒಂದೆರಡು ಶಾಸಕರು ಅಸಮಾಧಾನ ವ್ಯಕ್ತಪಡಿಸಿರಬಹುದು. ಸಚಿವರು, ಶಾಸಕರು, ಜನರಲ್ಲಿ ಯಾವ ಗೊಂದಲವೂ ಇಲ್ಲ' ಎಂದು ತುಸು ಏರಿದ ಧ್ವನಿಯಲ್ಲೇ ಹೇಳಿದ್ದರು.

ಅವರ ನಡೆಗಳಲ್ಲಿ ಅಧೈರ್ಯದ ಲವಲೇಶವೂ ಇಣುಕುತ್ತಿರಲಿಲ್ಲ. ಆದರೆ, ಕಳೆದ ಒಂದು ತಿಂಗಳ ವಿದ್ಯಮಾನ ಅವರನ್ನು ಕಂಗೆಡಿಸಿದಂತೆ ಕಾಣುತ್ತಿದೆ.

'ರಾಜ್ಯದಲ್ಲಿನ ಇತ್ತೀಚಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ಯಡಿಯೂರಪ್ಪ ಅವರಿಗೆ ತುಂಬಾ ಬೇಸರ ಇದ್ದಂತಿದೆ. ಅವರ ಜತೆ ಮಾತನಾಡುವಾಗ ನೋವು ಗೊತ್ತಾಯಿತು' ಎಂದು ಸಚಿವರಾದ ಬಸವರಾಜ ಬೊಮ್ಮಾಯಿ, ಆರ್. ಅಶೋಕ ಆಡಿರುವ ಮಾತುಗಳು ಇದನ್ನೇ ಖುಜುಪಡಿಸುತ್ತವೆ.

ಬಡಿದಾಡಿ ದಕ್ಕಿಸಿಕೊಂಡ ಅಧಿಕಾರವನ್ನು ಸುಖಾಸುಮ್ಮನೆ ಬಿಟ್ಟುಹೋಗುವಷ್ಟು ಔದಾರ್ಯ ಅಥವಾ ದಡ್ಡತನ ಯಡಿಯೂರಪ್ಪ ಅವರಲ್ಲಿ ಇಲ್ಲ. ಅಖಾಡಕ್ಕಿಳಿದ ಜಟ್ಟಿ ಕೊನೆಯವರೆಗೂ ಎದುರಾಳಿಯನ್ನು ಮಣಿಸಲು ಪಟ್ಟು ಹಾಕುವುದು, ಕೈಸೋಲುವ ಸನ್ನಿವೇಶ ಎದುರಾದಾಗ ಅಬ್ಬರಿಸಿ ಬೊಬ್ಬಿರಿದು ಸವಾಲು ಹಣಿಯುವುದು, ಸೋತು ಕುಸಿಯುವ ಹೊತ್ತಿನಲ್ಲೂ, ವೀರಾವೇಶದಿಂದ ಹೋರಾಡಿದ ಜಗಜಟ್ಟಿಯನ್ನು ಹೇಗೆ ಹೆಡೆಮುರಿ ಕಟ್ಟಿ ನೆಲಕ್ಕೆ ಕುಕ್ಕಲಾಯಿತು ಎಂದು ನೋಡುಗರ ಅನುಕಂಪ ಪಡೆಯುವಷ್ಟರ ಮಟ್ಟಿಗೆ 'ವೀರಸೋಲು' ಅನುಭವಿಸುವುದು ಕುಸ್ತಿಯ ಜಾಯಮಾನ.

ಬರ–ನೆರೆ, ಕೋವಿಡ್ ವೇಳೆ ಕೇಂದ್ರವು ನೆರವಿಗೆ ಬರದೇ ಇದ್ದಾಗಲೂ, ತಮ್ಮದೇ ಬಿಜೆಪಿ ಸರ್ಕಾರವನ್ನು ಪ್ರಧಾನಿ ನರೇಂದ್ರ ಮೋದಿ ಕಡೆಗಣಿಸಿದಾಗಲೂ ಮೌನವಾಗಿಯೇ ಇದ್ದ ಯಡಿಯೂರಪ್ಪ, ಈಗ ದಿಢೀರ್ ಮಾತಿನ ವರಸೆ ಬದಲಿಸಿರುವುದರ ಹಿಂದೆ ಈ ಎಲ್ಲ ಆಯಾಮಗಳೂ ಇದ್ದಂತಿವೆ.

'ವರಿಷ್ಠರು ನನ್ನ ಮೇಲೆ ವಿಶ್ವಾಸ ಇಟ್ಟಿದ್ದಾರೆ. ಅವರು ಎಷ್ಟು ದಿನ ಮುಂದುವರಿಯಿರಿ ಎನ್ನುತ್ತಾರೋ ಅಲ್ಲಿಯವರೆಗೂ ಇರುತ್ತೇನೆ. ರಾಜೀನಾಮೆ ಕೊಡಿ ಎಂದ ದಿನ ಕೊಟ್ಟು ಹೋಗುತ್ತೇನೆ' ಎಂದು ಯಡಿಯೂರಪ್ಪ ಹೇಳಿದ್ದಾರೆ. ಅವರು ಹೀಗೆ ಹೇಳಬೇಕಾದರೆ 'ನೀವು ಗೌರವಯುತವಾಗಿ ನಿರ್ಗಮಿಸಿ' ಎಂದು ಬಿಜೆಪಿ ವರಿಷ್ಠರು ಸೂಚನೆ ಕೊಟ್ಟಿರಬೇಕು. ಅದಕ್ಕೆ ಬೇಕಾದ ಮಾನಸಿಕ ಸಿದ್ಧತೆ ಮಾಡಿಕೊಳ್ಳುವ ಸಲುವಾಗಿ ಹೀಗೆ ಹೇಳಿರುವ ಸಾಧ್ಯತೆ ಉಂಟು.

'ನನಗೆ ಕೊಟ್ಟಿರುವ ಅವಕಾಶವನ್ನು ಶಕ್ತಿ ಮೀರಿ ಬಳಸಿಕೊಂಡು ಅಭಿವೃದ್ಧಿ ಕೆಲಸ ಮಾಡುತ್ತೇನೆ. ಉಳಿದಿದ್ದು ವರಿಷ್ಠರಿಗೆ ಬಿಟ್ಟಿದ್ದು' ಎಂದು ಅವರು ಹೇಳಿದ್ದಾರೆ. ಹೀಗೆ ಹೇಳುವ ಮೂಲಕ 'ಕೋವಿಡ್‌ನಂತಹ ಕರುಣಾಜನಕ ಕಾಲದಲ್ಲೂ ವಯಸ್ಸು, ಆರೋಗ್ಯ ಲೆಕ್ಕಿಸದೇ ಕೆಲಸ ಮಾಡುತ್ತಿದ್ದೇನೆ. ಹಾಗಿದ್ದರೂ ನನ್ನನ್ನು ಕುರ್ಚಿಯಿಂದ ಇಳಿಸುವ ಲೆಕ್ಕಾಚಾರವನ್ನು ವರಿಷ್ಠರು ಮಾಡುತ್ತಿದ್ದಾರೆ' ಎಂದು ತಮ್ಮ ಅಭಿಮಾನಿಗಳಿಗೆ, ತಮ್ಮ ಭದ್ರ ಮತಬ್ಯಾಂಕ್ ಎಂದು ಅವರು ನಂಬಿಕೊಂಡಿರುವ ವೀರಶೈವ–ಲಿಂಗಾಯತರಿಗೆ ಸಂದೇಶ ರವಾನಿಸಿ, ಅನುಕಂಪ ಗಿಟ್ಟಿಸುವ ಅಂದಾಜು ಇದರ ಹಿಂದೆ ಇದ್ದಂತಿದೆ.

ಸುದ್ದಿ ವಿಶ್ಲೇಷಣೆ

'ನನ್ನನ್ನು ಇಳಿಸುವುದಾದರೆ ಇಳಿಸಿ; ನಾನೂ ಒಂದು ಕೈ ನೋಡುವೆ' ಎಂದು ವರಿಷ್ಠರಿಗೆ ಸವಾಲು ಒಡ್ಡುವ ಮತ್ತೊಂದು ಉದ್ದೇಶವೂ ಇದೆ. 'ಪರ್ಯಾಯ ನಾಯಕರು ಇಲ್ಲ ಎಂಬುದನ್ನು ನಾನು ಒಪ್ಪುವುದಿಲ್ಲ' ಎಂದು ಯಡಿಯೂರಪ್ಪ ಹೇಳಿರುವುದು ಸರಳ ಹೇಳಿಕೆಯಲ್ಲ. 'ನನ್ನ ಬಿಟ್ಟರೆ ಪರ್ಯಾಯ ನಾಯಕ ಇದ್ದರೆ ತಂದು ಕೂರಿಸಿ ನೋಡುವಾ' ಎಂದು ವರಿಷ್ಠರಿಗೆ ಪರೋಕ್ಷವಾಗಿ ಸವಾಲು ಒಡ್ಡಲು ಇದನ್ನು ಹೇಳಿದಂತಿದೆ.

ಕಳೆದ ಒಂದು ತಿಂಗಳ ಬೆಳವಣಿಗೆಗಳು, ರಾಜಕೀಯ ವಾತಾವರಣ ಯಡಿಯೂರಪ್ಪ ಪರ ಇಲ್ಲ ಎಂಬುದನ್ನೂ ಸೂಚ್ಯವಾಗಿ ಹೇಳುತ್ತವೆ. ಯಡಿಯೂರಪ್ಪ ಮತ್ತು ಬಿ.ವೈ. ವಿಜಯೇಂದ್ರ ವಿರುದ್ಧ ಸಚಿವ ಸಿ.ಪಿ. ಯೋಗೇಶ್ವರ್ ಹಾಗೂ ಶಾಸಕ ಬಸನಗೌಡ ಪಾಟೀಲ ಯತ್ನಾಳ ಒಂದೇ ಸಮನೆ ವಾಕ್‌ಪ್ರಹಾರ ನಡೆಸುತ್ತಿದ್ದರೂ ಆ ಪಕ್ಷ ಯಾವುದೇ ಶಿಸ್ತು ಕ್ರಮ ಕೈಗೊಂಡಿಲ್ಲ. ಸಚಿವರೊಬ್ಬರು ತಮ್ಮದೇ ನಾಯಕನ ವಿರುದ್ಧ ಮಾತನಾಡಿದರೂ ಅದನ್ನು ಸಹಿಸಿಕೊಂಡು ಬಿಜೆಪಿ ಸುಮ್ಮನಿದೆ ಎಂದರೆ, ಅವರ ಹಿಂದೆ ವರಿಷ್ಠರು ಇರಬೇಕು. ಇಲ್ಲ, ಪಕ್ಷದ ನಾಯಕತ್ವ ಯೋಗೇಶ್ವರ್‌ಗಿಂತ ದುರ್ಬಲರಾಗಿರಬೇಕು. ಆದರೆ, ಮೋದಿ–ಅಮಿತ್ ಶಾ ದುರ್ಬಲರೇನಲ್ಲ. ಇವೆಲ್ಲವೂ ಯಡಿಯೂರಪ್ಪನವರ ಮೇಲೆ ವರಿಷ್ಠರಿಗೆ ವಿಶ್ವಾಸ ಕುಸಿಯುತ್ತಿರುವುದರ ದ್ಯೋತಕವಾಗಿರುವುದಂತೂ ಹೌದು.

ಯಡಿಯೂರಪ್ಪನವರ ಮಾತುಗಳನ್ನು ಈ ಎಲ್ಲ ಬೆಳವಣಿಗೆಗಳ ಬೆಳಕಿನಲ್ಲಿ ನೋಡಿದರೆ ನಾಯಕತ್ವ ಬದಲಾವಣೆ ಸುಳಿವಂತೂ ಕಾಣಿಸುವುದು ಸ್ಪಷ್ಟ.

ಅಧ್ಯಕ್ಷ ಸ್ಥಾನಕ್ಕೆ ವಿಜಯೇಂದ್ರ ಬೇಡಿಕೆ?

'ಯಡಿಯೂರಪ್ಪ ಅವರನ್ನು ಪದಚ್ಯುತಿ ಮಾಡುವುದಾದರೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ತಮಗೆ ಕೊಡಬೇಕು' ಎಂದು ಹಾಲಿ ಉಪಾಧ್ಯಕ್ಷರಾಗಿರುವ ಬಿ.ವೈ.ವಿಜಯೇಂದ್ರ ಬೇಡಿಕೆ ಇಟ್ಟಿದ್ದಾರೆಯೇ?

ಇಂತಹದೊಂದು ಚರ್ಚೆ ದೆಹಲಿ ಮಟ್ಟದ ನಾಯಕರ ವಲಯದಲ್ಲಿ ಹರಿದಾಡುತ್ತಿದೆ.

ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರನ್ನು ಇತ್ತೀಚೆಗೆ ದೆಹಲಿಯಲ್ಲಿ ಭೇಟಿಯಾದ ವಿಜಯೇಂದ್ರ, ಈ ಬೇಡಿಕೆಯ ಜತೆಗೆ ಯತ್ನಾಳ ಹಾಗೂ ಯೋಗೇಶ್ವರ್ ಅವರನ್ನು ಉಚ್ಚಾಟಿಸಬೇಕು ಎಂಬ ಅಹವಾಲನ್ನೂ ಸಲ್ಲಿಸಿದ್ದಾರೆ.

'ಭಿನ್ನಮತೀಯರಿಗೆ ತಕ್ಕ ಶಾಸ್ತಿ ಕಲಿಸುವ ಬಗ್ಗೆ ವರಿಷ್ಠರು ಭರವಸೆ ಕೊಟ್ಟಿದ್ದು, ಸದ್ಯದಲ್ಲೇ ಅವರೆಲ್ಲರ ವಿರುದ್ಧ ಶಿಸ್ತು ಕ್ರಮ ಜರುಗಲಿದೆ ಎಂಬ ಸುದ್ದಿಯನ್ನು ಈ ಬೆಳವಣಿಗೆ ಬೆನ್ನಲ್ಲೇ ಹರಿಬಿಡಲಾಯಿತು. ಪಕ್ಷದ ಅಧ್ಯಕ್ಷ ಸ್ಥಾನದ ಮೇಲೆ ವಿಜಯೇಂದ್ರ ಕಣ್ಣಿಟ್ಟಿರುವ ಕಾರಣಕ್ಕೆ, ಈಗಿನ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರನ್ನು ದುರ್ಬಲ ಅಧ್ಯಕ್ಷ ಎಂದು ಬಿಂಬಿಸುವ ಯತ್ನವೂ ನಡೆಯುತ್ತಿದೆ' ಎಂದೂ ಬಿಜೆಪಿ ಮೂಲಗಳು ಹೇಳುತ್ತಿವೆ.

ಹೈಕಮಾಂಡ್ ಹೇಳಿದರೆ ರಾಜೀನಾಮೆ

ರಾಜಕೀಯ ಸಂಚಲನ ತಂದ ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಕ್ಷದ ಹೈಕಮಾಂಡ್‌ನ ವಿಶ್ವಾಸ ಇರುವವರೆಗೂ ಮುಖ್ಯಮಂತ್ರಿ ಹುದ್ದೆಯಲ್ಲಿರುವೆ. ಹೈಕಮಾಂಡ್ ಸೂಚಿಸಿದ ತಕ್ಷಣ ರಾಜೀನಾಮೆ ನೀಡಲು ಸಿದ್ಧ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.



ಡಿ. ದೇವರಾಜ ಅರಸು ಪುಣ್ಯಸ್ಮರಣೆ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ಅರಸು ಪ್ರತಿಮೆಗೆ ಭಾನುವಾರ ಮಾಲಾರ್ಪಣೆ ಮಾಡಿದ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು.

'ಹೈಕಮಾಂಡ್ ನನ್ನ ಮೇಲೆ ವಿಶ್ವಾಸ ಇಟ್ಟಿದೆ. ಪಕ್ಷದ ವರಿಷ್ಠರು ಎಷ್ಟು ದಿನಗಳ ಕಾಲ ನನ್ನ ಮೇಲೆ ವಿಶ್ವಾಸ ಇಟ್ಟು ಮುಂದುವರಿಯಿರಿ ಎನ್ನುತ್ತಾರೋ ಅಲ್ಲಿಯವರೆಗೂ ಇರುತ್ತೇನೆ. ಈ ವಿಚಾರದಲ್ಲಿ ನಾನು ಗೊಂದಲದಲ್ಲಿ ಇಲ್ಲ' ಎಂದರು.

'ನೀವು ಬೇಡ ಎಂದು ಹೈಕಮಾಂಡ್ ಹೇಳಿದ ದಿನವೇ ರಾಜೀನಾಮೆ ಸಲ್ಲಿಸಿ, ರಾಜ್ಯದ ಅಭಿವೃದ್ಧಿಗಾಗಿ ಹಗಲು ರಾತ್ರಿ ಕೆಲಸ ಮಾಡುತ್ತೇನೆ. ನನಗೆ ಅವಕಾಶ ಕೊಟ್ಟಿದ್ದಾರೆ. ಅದನ್ನು ಶಕ್ತಿಮೀರಿ ಸದುಪಯೋಗಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಉಳಿದದ್ದು ಹೈಕಮಾಂಡ್‌ಗೆ ಬಿಟ್ಟದ್ದು' ಎಂದು ಯಡಿಯೂರಪ್ಪ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.

'ಪರ್ಯಾಯ ನಾಯಕರು ಇಲ್ಲ ಎಂಬುದನ್ನು ನಾನು ಒಪ್ಪುವುದಿಲ್ಲ. ರಾಜ್ಯದಲ್ಲಿ, ದೇಶದಲ್ಲಿ ಪರ್ಯಾಯ ವ್ಯಕ್ತಿಗಳು ಯಾವಾಗಲೂ ಇದ್ದೇ ಇರುತ್ತಾರೆ' ಎಂದರು.

ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆಯ ಕುರಿತು ಬಿಜೆಪಿಯಲ್ಲಿ ಕೆಲವು ದಿನಗಳಿಂದ ನಿರಂತರವಾಗಿ ಚಟುವಟಿಕೆಗಳು ನಡೆಯುತ್ತಿವೆ. ಯಡಿಯೂರಪ್ಪ ವಿರೋಧಿ ಬಣದ ಶಾಸಕರು ನಾಯಕತ್ವ ಬದಲಾವಣೆಗೆ ಆಗ್ರಹಿಸಿ ಹೈಕಮಾಂಡ್ ಮೇಲೆ ಒತ್ತಡ ತರುವ ಕೆಲಸದಲ್ಲಿ ಸಕ್ರಿಯರಾಗಿದ್ದಾರೆ. ದೆಹಲಿಗೆ ಹೋಗಿ ವರಿಷ್ಠರನ್ನು ಭೇಟಿಮಾಡಿ ಬಂದಿದ್ದ ಸಚಿವ ಸಿ.ಪಿ. ಯೋಗೇಶ್ವರ್, ಮುಖ್ಯಮಂತ್ರಿ ವಿರುದ್ಧವೇ ಹೇಳಿಕೆ ನೀಡಿದ್ದರು.

ಶಾಸಕಾಂಗ ಪಕ್ಷದ ಸಭೆ ನಡೆಸಬೇಕೆಂಬ ಒತ್ತಡವೂ ಬಿಜೆಪಿಯಲ್ಲಿ ಹೆಚ್ಚಲಾರಂಭಿಸಿತ್ತು.

8ನೇ ಪುಟ ನೋಡಿ

ರಾಜೀನಾಮೆ ಕೊಡಿಸುವ ಉದ್ದೇಶವಿಲ್ಲ: ಜೋಶಿ



ಹುಬ್ಬಳ್ಳಿ: 'ಕೋವಿಡ್ ಸಂಕಷ್ಟದ ಸಮಯದಲ್ಲಿಯೂ ಯಡಿಯೂರಪ್ಪ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಅವರಿಂದ ರಾಜೀನಾಮೆ ಕೊಡಿಸುವ ಯಾವ ಉದ್ದೇಶವೂ ಪಕ್ಷಕ್ಕಿಲ್ಲ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

'ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ಮಾಧ್ಯಮಗಳಲ್ಲಿ ಪದೇ ಪದೇ ಚರ್ಚೆ ನಡೆದ ಕಾರಣದಿಂದ ಅವರು ಆ ರೀತಿ ಹೇಳಿಕೆ ಕೊಟ್ಟಿರಬಹುದು. 'ನಾನು ರಾಜೀನಾಮೆ ಕೊಟ್ಟು ಮನೆಗೆ ಹೋಗುತ್ತೇನೆ' ಎಂದು ಅವರು ಎಲ್ಲಿಯೂ ಹೇಳಿಲ್ಲ. ಪಕ್ಷ ಹೇಳಿದ ಹಾಗೆ ಕೇಳುತ್ತೇನೆ ಎನ್ನುವುದಷ್ಟೇ ಅವರ ಮಾತಿನ ಅರ್ಥ. ಹೈಕಮಾಂಡ್‌ನಿಂದ ಅವರಿಗೆ ಯಾವುದೇ ರೀತಿಯ ಸೂಚನೆ ಬಂದಿಲ್ಲ' ಎಂದರು.

ಕೋವಿಡ್ ನಿರ್ವಹಣೆಯಷ್ಟೇ ನಮ್ಮೆಲ್ಲರ ಮುಂದಿರುವ ಸವಾಲು ಎಂದರು.

ನಾಯಕತ್ವ ಬದಲಾವಣೆ ಇಲ್ಲ: ನಳಿನ್



ಮಂಗಳೂರು: 'ಪಕ್ಷದಲ್ಲಿ ನಾಯಕತ್ವ ಬದಲಾವಣೆಯ ಪ್ರಶ್ನೆಯೇ ಇಲ್ಲ. ಈ ಬಗ್ಗೆ ಚರ್ಚೆಯೇ ನಡೆದಿಲ್ಲ. ನಮ್ಮ ಸರ್ವಸಮ್ಮತ ನಾಯಕ ಯಡಿಯೂರಪ್ಪ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಪುನರುಚ್ಚರಿಸಿದರು. 'ಒಬ್ಬ ಕಾರ್ಯಕರ್ತನಾಗಿ, ಪಕ್ಷದ ವರಿಷ್ಠರ ಸೂಚನೆಗೆ ಬದ್ಧನಾಗಿರುವುದಾಗಿ ಯಡಿಯೂರಪ್ಪ ಹೇಳಿರುವುದು ಎಲ್ಲರಿಗೂ ಆದರ್ಶ' ಎಂದರು.'ಪಕ್ಷದಲ್ಲಿ ಆಂತರಿಕವಾಗಿ ಯಾವುದೇ ಬಂಡಾಯವಿಲ್ಲ. ನೋವು, ಅಸಮಾಧಾನ ಇದ್ದರೆ ಮಾತುಕತೆ ನಡೆಸಲು ತಿಳಿಸಲಾಗಿದೆ. ಸರ್ಕಾರ ನಡೆಸುವಾಗ ಇಂತಹ ಸಣ್ಣಪುಟ್ಟ ಸಮಸ್ಯೆಗಳು ಇರುತ್ತವೆ' ಎಂದು ಹೇಳಿದರು.

ಯಡಿಯೂರಪ್ಪ ಹೇಳಿಕೆ ಹಿಂದೆ ತಂತ್ರಗಾರಿಕೆ: ಡಿಕೆಶಿ

ಬೆಂಗಳೂರು: 'ರಾಜಕಾರಣದಲ್ಲಿ ನಾನಾ ತಂತ್ರಗಾರಿಕೆಗಳಿರುತ್ತವೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ರಾಜೀನಾಮೆ ಕುರಿತ ಹೇಳಿಕೆಯ ಹಿಂದೆಯೂ ಬೇರೆಯದೇ ತಂತ್ರಗಾರಿಕೆ ಇದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟರು.



ಸದಾಶಿವನಗರದ ತಮ್ಮ ನಿವಾಸದಲ್ಲಿ ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಯಡಿಯೂರಪ್ಪ ಅವರನ್ನು ಬದಲಿಸುವ ನಿರ್ಧಾರ ಅವರ ಪಕ್ಷಕ್ಕೆ ಸಂಬಂಧಿಸಿದ್ದು. ನಮಗೂ ಅದಕ್ಕೂ ಸಂಬಂಧ ಇಲ್ಲ. ಆದರೆ, ನನ್ನ ಪ್ರಕಾರ ಯಡಿಯೂರಪ್ಪ ಗಟ್ಟಿ ಮನುಷ್ಯ, ಅಷ್ಟು ಸಲೀಸಾಗಿ ಜಗ್ಗಲ್ಲ' ಎಂದರು.

'ಯಡಿಯೂರಪ್ಪ ಅವರ ಹೇಳಿಕೆಯನ್ನು 2–3 ರೀತಿಯಲ್ಲಿ ವಿಶ್ಲೇಷಿಸಬಹುದು. ನನ್ನನ್ನು ಮುಟ್ಟಿ ನೋಡಿ ಎಂಬ ಎಚ್ಚರಿಕೆ ಇರಬಹುದು. ನಾನು ಶಿಸ್ತಿನ ಸಿಪಾಯಿ ಎಂದೂ ಇರಬಹುದು' ಎಂದರು.

'ರಾಜ್ಯ ಹಾಗೂ ಬಿಜೆಪಿ ರಾಜಕಾರಣದಲ್ಲಿ ಯಡಿಯೂರಪ್ಪ ಅವರು ಗಟ್ಟಿ ನಾಯಕ. ಅವರ ನಾಯಕತ್ವದಲ್ಲಿ ಚುನಾವಣೆ ನಡೆದಿದೆ. ಅವರ ನಾಯಕತ್ವದಲ್ಲೇ ನಮ್ಮ ಪಕ್ಷದ ಸ್ನೇಹಿತರನ್ನು ಕರೆದುಕೊಂಡು ಹೋಗಿ, ಬಿಜೆಪಿ ಸರ್ಕಾರ ಮಾಡಿದ್ದಾರೆ. ಜನ ಒಪ್ಪುವುದು ಬಿಡುವುದು ಬೇರೆ ವಿಚಾರ. ವಿರೋಧ ಪಕ್ಷವಾಗಿ ನಾವು ಏನು ಬೇಕಾದರೂ ಹೇಳಬಹುದು' ಎಂದರು.

'ಆಡಳಿತ ವೈಫಲ್ಯ, ಆಂತರಿಕ ಬಿಕ್ಕಟ್ಟು, ಏಳೆಂಟು ನಾಯಕರು ತಾವೇ ಮುಖ್ಯಮಂತ್ರಿ ಆಗಬೇಕು ಎಂದು ಸಿದ್ಧವಾಗಿದ್ದಾರೆ. ಯಡಿಯೂರಪ್ಪನವರೇ ಮುಖ್ಯಮಂತ್ರಿ ಎನ್ನುವವರು ಕೂಡಾ ತಾವೇ ಸೂಟ್ ಹೊಲಿಸಿ, ಮುಹೂರ್ತ ಇಟ್ಟುಕೊಂಡು ಸಿದ್ಧವಾಗಿದ್ದಾರೆ' ಎಂದರು.

ಸಿಇಟಿ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ,
ಈ ವರ್ಷದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)ಗೆ ಸಿದ್ಧತೆ ನಡೆಸಿದ್ದೀರಾ? ಹಾಗಿದ್ದರೆ ಪ್ರಜಾವಾಣಿಯ ವಿಶೇಷ ಪುಟದಲ್ಲಿ ಮಂಗಳವಾರದಿಂದ ಗುರುವಾರದವರೆಗೆ ಪ್ರಕಟವಾಗುವ ಸಿಇಟಿ ದಿಕ್ಸೂಚಿಯಲ್ಲಿ ಅನುಭವಿ ಶಿಕ್ಷಕರು ನೀಡುವ ಮಾರ್ಗದರ್ಶನದ ಪ್ರಯೋಜನ ಪಡೆಯಬಹುದು.

ರಾಜ್ಯ ಕೋವಿಡ್ ಅಂಕಿ–ಅಂಶ

26,95,523 ▲ ಒಟ್ಟು ಸೋಂಕಿತರು (26,83,314 ನಿನ್ನೆಯ ವಿವರ)
2,54,505 ▼ ಸಕ್ರಿಯ ಪ್ರಕರಣಗಳು
24,09,417 ▲ ಗುಣಮುಖರಾದವರು
31,580 ಒಟ್ಟು ಸಾವು ▲

ದಿನದ ಏರಿಕೆ		
ಹೊಸ ಪ್ರಕರಣ	12,209	▼
ಗುಣಮುಖ	25,659	▲
ಸಾವು	320	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಒಳ ಪುಟ
ಆಮ್ಲಜನಕ ಪೂರೈಕೆ ತಡೆದಿದ್ದರೇ ಸಿಂಧೂರಿ? 4

ಬಳ್ಳಾರಿ, ಶಿರಸಿಯಲ್ಲಿ ₹ 100ಕ್ಕಿಂತ ಹೆಚ್ಚಾದ ಬೆಲೆ

ಶತಕ ದಾಟಿದ ಪೆಟ್ರೋಲ್ ದರ

ಪ್ರಜಾವಾಣಿ ವಾರ್ತೆ


ಬೆಂಗಳೂರು / ಶಿರಸಿ / ಬಳ್ಳಾರಿ: ರಾಜ್ಯದ ಬಳ್ಳಾರಿ ಮತ್ತು ಶಿರಸಿಯಲ್ಲಿ ಪೆಟ್ರೋಲ್ ದರವು ಭಾನುವಾರ ₹ 100ರ ಗಡಿ ದಾಟಿದೆ. ಬಳ್ಳಾರಿಯಲ್ಲಿ ಲೀಟರ್ ಪೆಟ್ರೋಲ್ ದರ ₹ 100.08, ಶಿರಸಿಯಲ್ಲಿ ₹ 100.28 ಆಗಿದೆ. ರಾಜ್ಯದಲ್ಲಿ ಪೆಟ್ರೋಲ್ ಬೆಲೆ ₹ 100ಕ್ಕಿಂತ ಹೆಚ್ಚಾಗಿರುವುದು ಇದೇ ಮೊದಲು.

ಪಶ್ಚಿಮ ಬಂಗಾಳ ಸೇರಿದಂತೆ ನಾಲ್ಕು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶ ಪುದುಚೇರಿ ವಿಧಾನಸಭೆಗೆ ಚುನಾವಣಾ ಪ್ರಕ್ರಿಯೆ ಜಾರಿಯಲ್ಲಿದ್ದ ಸಂದರ್ಭ ತೈಲ ಬೆಲೆ ಏರಿಕೆ ಆಗಿರಲಿಲ್ಲ. ಮೇ 4ರಿಂದ ಇದುವರೆಗೆ ಒಟ್ಟು 20 ಬಾರಿ ಬೆಲೆ ಏರಿಕೆ ಮಾಡಲಾಗಿದೆ.

ಬೆಂಗಳೂರಿನಲ್ಲಿ ಕಳೆದ ವರ್ಷದ ಜೂನ್ 6ರಂದು ಪೆಟ್ರೋಲ್ ದರ ಲೀಟರಿಗೆ ₹ 73.55ರಷ್ಟು ಇತ್ತು. ಭಾನುವಾರ ಲೀಟರ್ ಪೆಟ್ರೋಲ್ ₹ 98.26ಕ್ಕೆ ಏರಿಕೆ ಆಗಿದೆ. ಅಂದರೆ, ಒಂದು ವರ್ಷದ ಅವಧಿಯಲ್ಲಿ ಲೀಟರ್ ಪೆಟ್ರೋಲ್ ಬೆಲೆ ₹ 24.71ರಷ್ಟು ಏರಿಕೆ ಆದಂತಾಗಿದೆ.

ಡೀಸೆಲ್ ದರವು ಬೆಂಗಳೂರಿನಲ್ಲಿ ಕಳೆದ ವರ್ಷದ ಜೂನ್ 6ರಂದು ಲೀಟರಿಗೆ ₹ 65.96 ಇದ್ದಿದ್ದು, ಭಾನುವಾರ ₹ 91.18ಕ್ಕೆ ಏರಿಕೆ ಆಗಿದೆ. ಒಂದು ವರ್ಷದಲ್ಲಿ ಲೀಟರ್ ಡೀಸೆಲ್ ದರ ₹ 25.22ರಷ್ಟು ಏರಿಕೆ ಆಗಿದೆ.

ಇನ್ನೊಂದು ಸುದ್ದಿ 10



ಪೆಟ್ರೋಲ್ ದರದಲ್ಲಿ ಶತಕ ಬಾರಿಸಿದ್ದೇ ಕೇಂದ್ರ ಸರ್ಕಾರದ ಸಾಧನೆ. ಜನವರಿಯಿಂದ ಇಲ್ಲಿಯವರೆಗೆ 48 ಬಾರಿ ಪೆಟ್ರೋಲ್, ಡೀಸೆಲ್ ದರ ಏರಿಸಿರುವ ಸರ್ಕಾರ, ಚುನಾವಣೆ ನಡೆದ ತಿಂಗಳಲ್ಲಿ ಮಾತ್ರ ಸುಮ್ಮನಿತ್ತು. ಚುನಾವಣೆ ಮುಗಿದ ಬಳಿಕ ದರ ಏರಿಕೆಯ ಬಾರುಕೋಲು ಹಿಡಿದು ಜನ ಸಾಮಾನ್ಯರನ್ನು ಥಳಿಸಲು ಶುರು ಮಾಡಿದೆ.

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಕೋವಿಡ್, ಲಾಕ್‌ಡೌನ್‌ನಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಆದಾಯ ಕಡಿಮೆ ಆಗಿದೆ. ಸರ್ಕಾರಗಳಿಗೆ ಆದಾಯಕ್ಕೆ ಪೆಟ್ರೋಲ್, ಡೀಸೆಲ್ ಪ್ರಮುಖ ಮೂಲ. ತೈಲ ಬೆಲೆ ನಿಯಂತ್ರಣ ಸರ್ಕಾರದ ಕೈಯಲ್ಲೂ ಇಲ್ಲ. ಕಂಪನಿಗಳೇ ಅದನ್ನು ನಿರ್ಧರಿಸುತ್ತವೆ. ಆದರೂ ಸಾರ್ವಜನಿಕರ ಹಿತಾಸಕ್ತಿಯಿಂದ ಹೊರೆ ಕಡಿಮೆ ಮಾಡಲು ರಾಜ್ಯಗಳು ಮುಂದಾಗಬೇಕು

ಎನ್.ರವಿಕುಮಾರ್, ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ

ಪೆಟ್ರೋಲ್ ದರ ನಿಗದಿ ಹೇಗೆ? (ಲೀಟರಿಗೆ)

ಮೂಲ ದರ	₹ 37
ಎಕ್ಸೈಸ್ ಸುಂಕ	₹ 33
ವ್ಯಾಟ್	₹ 24.5
ವಿತರಕರ ಕಮಿಷನ್	₹ 3.5

(ಇದು ಮಂಗಳೂರು ಡಿಪೊದ ಮಾಹಿತಿ. ಸಾಗಣೆ ವೆಚ್ಚ ಆಧರಿಸಿ ಸ್ಥಳದಿಂದ ಸ್ಥಳಕ್ಕೆ ದರದಲ್ಲಿ ವ್ಯತ್ಯಾಸ ಇರುತ್ತದೆ)

(ಮಾಹಿತಿ: ಕರ್ನಾಟಕ ರಾಜ್ಯ ಪೆಟ್ರೋಲಿಯಂ ವಿತರಕರ ಒಕ್ಕೂಟ)



ಲಸಿಕೆಗೆ ಸಾಲು ವಿದೇಶ ಪ್ರವಾಸದ ತುರ್ತು ಅಗತ್ಯವಿದ್ದವರು ಕೋವಿಡ್ ಲಸಿಕೆ ಪಡೆಯಲು ಭಾನುವಾರ ಮಂಗಳೂರಿನ ಡೊಂಗರಕೇರಿ ಕೆನರಾ ಪ್ರೌಢಶಾಲೆ ಆವರಣದಲ್ಲಿ ಕಾದು ನಿಂತಿದ್ದರು
ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ವಿವಾದಿತ ಚಿತ್ರ ಬದಲಿಸಿದ ಅಮೆಜಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಒಳ ಉಡುಪಿನ ಮೇಲೆ ಕನ್ನಡ ಬಾವುಟದ ಬಣ್ಣ ಮತ್ತು ರಾಜ್ಯ ಲಾಂಛನ ಇದ್ದ ಚಿತ್ರದ ಜಾಹೀರಾತನ್ನು ಅಮೆಜಾನ್ ಇ ಕಾಮರ್ಸ್ ಕಂಪನಿಯು ಬದಲಿಸಿದೆ.

ಈ ವಿವಾದಿತ ಜಾಹೀರಾತನ್ನು Amazon.ca ಕಂಪನಿಯು ಶನಿವಾರ ಆನ್‌ಲೈನ್‌ನಲ್ಲಿ ಪ್ರಕಟಿಸಿತ್ತು. ಕನ್ನಡದ ಅಸ್ಮಿತೆಯನ್ನು ಅಣಕಿಸುವಂತಹ ಜಾಹೀರಾತು ಕಣ್ಣಿಗೆ ಬೀಳುತ್ತಿದ್ದಂತೆ ವಿಶ್ವದಾದ್ಯಂತ ಕನ್ನಡಿಗರು ಆಕ್ರೋಶ ವ್ಯಕ್ತಪಡಿಸಿದ್ದರು. ಕಾನೂನು ಕ್ರಮ ಕೈಗೊಳ್ಳುವಂತೆ ಸಾಮಾಜಿಕ ಜಾಲತಾಣಗಳ ಮೂಲಕ ಒತ್ತಾಯಿಸಿದ್ದರು.

https://www.amazon.ca/BKDMHHH-Karnataka--Original-Triangle-Trimmer/dp/B07FBMC4X2 ಈ ಲಿಂಕ್‌ನಲ್ಲಿ BKDMHHH ಎಂಬ ಬ್ರಾಂಡ್‌ನ ಒಳಉಡುಪಿನ ಮೇಲೆ ಈ ಚಿತ್ರ ಮುದ್ರಿಸಲಾಗಿತ್ತು. ಈಗ ಬದಲಿಸಲಾಗಿದೆ.

ಅಮೆಜಾನ್ ಕಂಪನಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ರಾಜ್ಯಸರ್ಕಾರ ಹೇಳಿದೆ.

ಮುಖ್ಯಾಂಶಗಳು
- ಕನ್ನಡ ಬಾವುಟ, ರಾಜ್ಯ ಲಾಂಛನಕ್ಕೆ ಅವಮಾನ
- ವಿಶ್ವದಾದ್ಯಂತ ಕನ್ನಡಿಗರ ಆಕ್ರೋಶ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ: ಲಸಿಕೆ ಸಿಗದೆ ಪರದಾಡುತ್ತಿರುವ ಗ್ರಾಮಸ್ಥರು

ಕೋವಿಡ್ ಮರಣ: ಹಳ್ಳಿಗಳಲ್ಲಿ ತಲ್ಲಣ

• ಸಿದ್ದು ಆರ್.ಜಿ.ಹಳ್ಳಿ

ಗ್ರಾಮಾರೋಗ್ಯ
ಆಗಲಿ ಇನ್ನಷ್ಟು ಯೋಗ್ಯ

ಹಾವೇರಿ: 'ನಮ್ಮೂರಾಗ ಹನ್ನೆರಡು–ಹದಿಮೂರು ಮಂದಿಗೆ ಕೋವಿಡ್ ಬಂದಿತ್ತು. ಯಾರ್ಗೂ ಸರಿಯಾದ ಚಿಕಿತ್ಸೆ ಸಿಗ್ಲಿಲ್ಲ. ಜಿಲ್ಲಾಸ್ಪತ್ರೆಗೆ ಹೋದವ್ರು ಎಲ್ರೂ ಹೆಣವಾಗಿ ಬಂದವ್ರೆ' ಎಂದು ಬೇಸರ ವ್ಯಕ್ತಪಡಿಸಿದವರು ಹಾವೇರಿ ತಾಲ್ಲೂಕಿನ ಕರ್ಜಗಿ ಗ್ರಾಮದ ನಿವಾಸಿ ಅಂಕಿತ್ ಊದಗಟ್ಟಿ.

'ನಮ್ಮೂರಲ್ಲಿ ಸುಸಜ್ಜಿತ ಆರೋಗ್ಯ ಕೇಂದ್ರದ ಕಟ್ಟಡವಿದೆ. ಆದರೆ, ಯಾವ ಪ್ರಯೋಜನವೂ ಇಲ್ಲ. ಕಾಯಿಲೆ ಬಂದರೆ 8 ಕಿ.ಮೀ. ದೂರದ ಕಬ್ಬೂರು ಆಸ್ಪತ್ರೆಗೆ ಹೋಗಬೇಕು. ಮೊನ್ನೆ ನಮ್ಮೂರಿನ ವ್ಯಕ್ತಿಯೊಬ್ಬರಿಗೆ ಉಸಿರಾಟದ ಸಮಸ್ಯೆಯಾಯಿತು. ಗಂಟೆಗಟ್ಟಲೆ ಕಾದರೂ ಆಂಬುಲೆನ್ಸ್ ಬರಲಿಲ್ಲ. ಕೇಳಿದಷ್ಟು ಬಾಡಿಗೆ ಕೊಟ್ಟು ಖಾಸಗಿ ವಾಹನದಲ್ಲಿ ಕಳುಹಿಸಿಕೊಟ್ಟೆವು' ಎಂದು ಸಂಗೂರ ಗ್ರಾಮದ ರೈತ ಮುಖಂಡ ಆಸೀಂ ಜಿಗಳೂರು ಸಮಸ್ಯೆ ಬಿಚ್ಚಿಟ್ಟರು.

'ಎರಡು ದಿನ ಕೋವಿಡ್ ಲಸಿಕೆ ಹಾಕಿದ ಆರೋಗ್ಯ ಸಿಬ್ಬಂದಿ, ಮತ್ತೆ ಬರ್ತೀವಿ ಅಂತ ಹೇಳಿ ಹೋದವರು ಎರಡು ತಿಂಗಳು ಕಳೆದರೂ ಬಂದಿಲ್ಲ. ಲಸಿಕೆ ಸಿಗದೆ ಶಿಗ್ಗಾವಿ ತಾಲ್ಲೂಕಿನ ಜೋಂಡಲಗಟ್ಟಿ, ಗೌಳಿದಡ್ಡಿ, ಅರಟಾಳ, ಬಸವನಕೊಪ್ಪ ಗ್ರಾಮಸ್ಥರು ಪರದಾಡುತ್ತಿದ್ದಾರೆ' ಎಂದು ಲಸಿಕಾ ಅಭಿಯಾನದ ನೈಜತೆಯನ್ನು ಶಿಗ್ಗಾವಿ ತಾಲ್ಲೂಕು ಹೊಸೂರು ನಿವಾಸಿ ವಿನಾಯಕ ಸೊಗಲಿ ಅನಾವರಣಗೊಳಿಸಿದರು.

9ನೇ ಪುಟ ನೋಡಿ
ವಿಶೇಷ ಪುಟ 9

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ



ಕೋವಿಡ್ ಸೋಂಕಿತರೊಬ್ಬರನ್ನು ಆಕ್ಸಿಜನ್ ಸಿಲಿಂಡರ್ ಸಹಿತ ಹಾವೇರಿ ಕೋವಿಡ್ ಆಸ್ಪತ್ರೆಗೆ ಕರೆತಂದ ದೃಶ್ಯ ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

'ನಮ್ಮ ಮನೀಗೆ ಬರಬ್ಯಾಡ್ರಿ...'

'ಈಗ ಸಮೀಕ್ಷೆಗೆ ಹೋದರೆ, ನಮ್ಮ ಮನೆಗೆ ಬರಬ್ಯಾಡ್ರಿ ಎಂದು ಗ್ರಾಮಸ್ಥರು ಬೈಯ್ಯುತ್ತಾರೆ. ಕೆಮ್ಮು, ನೆಗಡಿ, ಜ್ವರ ಇದ್ರೂ ಸುಳ್ಳು ಹೇಳುತ್ತಾರೆ. ಸೋಂಕಿನ ಲಕ್ಷಣ ಕಂಡು ಬಂದವರ ಗಂಟಲು ದ್ರವ ಪರೀಕ್ಷೆಗೆ ಹೋದರೆ ಸಹಕರಿಸುವುದಿಲ್ಲ. ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಪತ್ತೆ ಹಚ್ಚುವುದು ದೊಡ್ಡ ಸವಾಲಾಗಿದೆ' ಎಂದು ಶಿಗ್ಗಾವಿ ತಾಲ್ಲೂಕು ಚಂದಾಪುರದ ಆಶಾ ಕಾರ್ಯಕರ್ತೆ ನೇತ್ರಾವತಿ ಚಕ್ರಸಾಲಿ ಸಮಸ್ಯೆ ತೋಡಿಕೊಂಡರು.

ಕಲಾಪ ದಿನಗಳು: ಕರ್ನಾಟಕ ವಿಧಾನಮಂಡಲ ಮೊದಲು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 19 ರಾಜ್ಯಗಳ ವಿಧಾನಸಭೆಗಳ ವಿಶ್ಲೇಷಣೆ
- ಸರಾಸರಿ ಕಲಾಪ ದಿನ 18
- 2016–19ರಲ್ಲಿ ಈ ಸರಾಸರಿಯು 29 ದಿನ

ನವದೆಹಲಿ: ಕರ್ನಾಟಕ ವಿಧಾನ ಮಂಡಲವು ಕೋವಿಡ್ ಸಂಕಷ್ಟ ಮತ್ತು ನಿರ್ಬಂಧಗಳ ನಡುವೆಯೂ 2020ರಲ್ಲಿ ಅತಿ ಹೆಚ್ಚು ದಿನಗಳ ಕಲಾಪವನ್ನು ನಡೆಸಿದೆ ಮತ್ತು ಅತಿ ಹೆಚ್ಚು ಮಸೂದೆಗಳಿಗೆ ಅಂಗೀಕಾರ ನೀಡಿದೆ.

ಕರ್ನಾಟಕದಲ್ಲಿ ಒಟ್ಟು 31 ದಿನ ಕಲಾಪ ನಡೆದಿದೆ. ರಾಜಸ್ಥಾನ (29), ಹಿಮಾಚಲ ಪ್ರದೇಶ (25), ತಮಿಳುನಾಡು, ಛತ್ತೀಸಗಡ ಮತ್ತು ಗುಜರಾತ್ (ತಲಾ 23 ದಿನಗಳು) ಮತ್ತು ಕೇರಳ (20) ನಂತರದ ಸ್ಥಾನಗಳಲ್ಲಿವೆ ಎಂದು ಪಿಆರ್‌ಎಸ್ ಲೆಜಿಸ್ಲೇಟಿವ್ ರಿಸರ್ಚ್ ಸಂಸ್ಥೆ ನಡೆಸಿದ ಅಧ್ಯಯನ ಹೇಳಿದೆ.

2016–19ರ ಅವಧಿಯನ್ನು ನೋಡಿದರೆ ಇತರ ರಾಜ್ಯಗಳಿಗಿಂತ ಕೇರಳ ಬಹಳ ಮುಂದೆ ಇದೆ. ಈ ಅವಧಿಯಲ್ಲಿ ಕೇರಳ ವಿಧಾನಸಭೆಯು ಪ್ರತಿ ವರ್ಷ ನಡೆಸಿದ ಕಲಾಪಗಳ ಸರಾಸರಿ ದಿನಗಳು 53. ಮಹಾರಾಷ್ಟ್ರವು 41 ದಿನಗಳ ಕಲಾಪ ನಡೆಸಿ ನಂತರದ ಸ್ಥಾನದಲ್ಲಿದೆ. ಕರ್ನಾಟಕದ ಸರಾಸರಿ 32 ದಿನಗಳು ಮಾತ್ರ.

2020ರಲ್ಲಿ ವಿಧಾನ ಸಭೆಗಳು ಅಂಗೀಕರಿಸಿದ ಸರಾಸರಿ ಮಸೂದೆಗಳ ಸಂಖ್ಯೆ 22. ಆದರೆ, ಕರ್ನಾಟಕ ವಿಧಾನ ಮಂಡಲವು 61 ಮಸೂದೆಗಳಿಗೆ ಅನುಮೋದನೆ ಕೊಟ್ಟಿದೆ. ಒಂದೇ ಒಂದು ಮಸೂದೆ ಅಂಗೀಕರಿಸಿದ ದೆಹಲಿ ಕೊನೆಯ ಸ್ಥಾನದಲ್ಲಿ ಇದೆ.

ರಾಜ್ಯಗಳು ಹೊರಡಿಸಿದ ಸುಗ್ರೀವಾಜ್ಞೆಗಳ ಸರಾಸರಿಯು ಕಳೆದ ವರ್ಷ 14 ಇತ್ತು. ಕೇರಳವು 81 ಸುಗ್ರೀವಾಜ್ಞೆ ಹೊರಡಿಸಿ ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕ (24), ಉತ್ತರ ಪ್ರದೇಶ (23) ಮತ್ತು ಮಹಾರಾಷ್ಟ್ರ (21) ನಂತರದ ಸ್ಥಾನಗಳಲ್ಲಿವೆ.

ಬಿಬಿಎಂಪಿ: ಹೊರಗುತ್ತಿಗೆ ಶಿಕ್ಷಕರ ಸೇವೆ ಮುಂದುವರಿಕೆ– ಮುಖ್ಯ ಆಯುಕ್ತರ ಭರವಸೆ

ಸೇವೆ ಕಡಿತದ ತೂಗುಗತ್ತಿಯಲ್ಲಿ ಹೊರಗುತ್ತಿಗೆ ಶಿಕ್ಷಕರು

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ತನ್ನ ಅಧೀನದ ಶಾಲಾ ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಹಾಗೂ ಉಪನ್ಯಾಸಕರು ಸೇವೆ ಕಡಿತಗೊಳ್ಳುವ ತೂಗುಗತ್ತಿಯ ನಡುವೆ ದಿನ-ದೂಡುತ್ತಿದ್ದಾರೆ. ಅವರ ಸೇವೆಯನ್ನು ಜೂನ್ ತಿಂಗಳ ನಂತರ ಮುಂದುವರಿಸದೇ ಇರುವ ಪ್ರಸ್ತಾವನೆಯನ್ನು ಸಿದ್ಧ-ಪಡಿಸಿದ್ದ ಬಿಬಿಎಂಪಿ ಸದ್ಯಕ್ಕೆ ಅದನ್ನು ಕೈಬಿಡುವುದಾಗಿ ಭರವಸೆ ನೀಡಿದೆ.

ಶಿಶುವಿಹಾರದಿಂದ ಸ್ನಾತಕೋತ್ತರ ಪದವಿ ಕೇಂದ್ರಗಳವರೆಗೆ ಒಟ್ಟು 161 ಶಿಕ್ಷಣ ಸಂಸ್ಥೆಗಳು ಬಿಬಿಎಂಪಿ ಆಡಳಿತಕ್ಕೆ ಒಳಪಟ್ಟಿವೆ. ಇವುಗಳಿಗೆ 1996ರ ಬಳಿಕ ನೇಮಕಾತಿಯೇ ನಡೆದಿಲ್ಲ. ಈ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರು ಹಾಗೂ ಉಪನ್ಯಾಸಕರು ಸೇರಿ 621 ಮಂದಿ ಹೊರಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರನ್ನು ಕ್ರಿಸ್ಟಲ್ ಇನ್‌ಫೊ ಸಿಸ್ಟಮ್ಸ್ ಆ್ಯಂಡ್ ಸರ್ವಿಸಸ್ ಸಂಸ್ಥೆ ಮೂಲಕ ಬಿಬಿಎಂಪಿ

> **ಶಿಕ್ಷಕರ ಸೇವೆಯನ್ನು ಬಿಬಿಎಂಪಿ ಮುಂದುವರಿಸಲಿದೆ. ಅವರು ಆತಂಕಪಡುವ ಅಗತ್ಯ ಇಲ್ಲ**
> **ಗೌರವ್ ಗುಪ್ತ,** ಬಿಬಿಎಂಪಿ ಮುಖ್ಯ ಆಯುಕ್ತ

ನೇಮಿಸಿಕೊಂಡಿದೆ. ಪ್ರತಿವರ್ಷವೂ ಅವರ ಗುತ್ತಿಗೆಯನ್ನು ನವೀಕರಿಸಲಾಗುತ್ತದೆ. ಬಿಬಿಎಂಪಿ ಆಡಳಿತಕ್ಕೊಳಪಟ್ಟ ಶಾಲಾ ಕಾಲೇಜುಗಳು ಮುಚ್ಚಿರುವ ಕಾರಣ ಹೊರಗುತ್ತಿಗೆ ಶಿಕ್ಷಕರು ಹಾಗೂ ಉಪನ್ಯಾಸಕರಿಗೆ ವೇತನ ನೀಡಲಾಗದು ಎಂದು ಬಿಬಿಎಂಪಿಯ ಹಣಕಾಸು ವಿಭಾಗ ಆಕ್ಷೇಪ ವ್ಯಕ್ತಪಡಿಸಿತ್ತು.

ಶಿಶುವಿಹಾರ, ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪದವಿಪೂರ್ವ ಕಾಲೇಜುಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಹಾಗೂ ಉಪನ್ಯಾಸಕರ ಸೇವೆಯನ್ನು ಜೂನ್ 1ರಿಂದ ಕಡಿತಗೊಳಿಸುವ ಕುರಿತು ಶಿಕ್ಷಣ ವಿಭಾಗದ ಹಿರಿಯ ಸಹಾಯಕ ನಿರ್ದೇಶಕರು ಪ್ರಸ್ತಾವನೆ ಸಿದ್ಧಪಡಿಸಿದ್ದರು. ಈ ವಿಚಾರ ತಿಳಿಯುತ್ತಿ

> **ವಿದ್ಯಾರ್ಥಿಗಳ ಬಾಳು ಬೆಳಗುವ ಶಿಕ್ಷಣ ನೀಡುವ ಶಿಕ್ಷಕರ ಬದುಕೇ ಕತ್ತಲಿನಲ್ಲಿದೆ. ಕ್ಷಣ ಕ್ಷಣವೂ ಆತಂಕದಲ್ಲೇ ದಿನ ದೂಡುವ ಸ್ಥಿತಿ ನಮ್ಮದು. ನಮಗೂ ಸೇವಾ ಭದ್ರತೆ ಒದಗಿಸಬೇಕು**
> **ಎನ್.ಲೋಕೇಶ್,** ಬಿಬಿಎಂಪಿ ಹೊರಗುತ್ತಿಗೆ ಶಿಕ್ಷಕರ ಸಂಘದ ಅಧ್ಯಕ್ಷ

ದ್ದಂತೆಯೇ ಬಿಬಿಎಂಪಿ ಹೊರಗುತ್ತಿಗೆ ಶಿಕ್ಷಕರ ಸಂಘದವರು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ ಅವರನ್ನು ಭೇಟಿಯಾಗಿ ತಮ್ಮ ಸೇವೆಯನ್ನು ಕೈಬಿಡದಂತೆ ಮನವಿ ಮಾಡಿದ್ದರು.

'ಸದ್ಯಕ್ಕೆ ಶಿಕ್ಷಕರನ್ನು ಕೋವಿಡ್ ನಿಯಂತ್ರಣ ಕಾರ್ಯಕ್ಕೆ ಬಳಸಿಕೊಳ್ಳು-ತ್ತಿದ್ದೇವೆ. ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪದವಿಪೂರ್ವ ಪರೀಕ್ಷೆಗಳಿಗೆ ವಿದ್ಯಾ-ರ್ಥಿಗಳನ್ನು ತಯಾರುಗೊಳಿಸುವ ಸಲುವಾಗಿ ಅವರು ಆನ್‌ಲೈನ್ ತರಗತಿ-ಗಳನ್ನು ಮುಂದುವರಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಅವರ ಸೇವೆಯನ್ನು ಕೈಬಿಡುವುದು ಸೂಕ್ತ ಅಲ್ಲ. ಆದರೂ ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಅವರ ಸೇವೆ ಕೈಬಿಡುವ ಬಗ್ಗೆ ಪ್ರಸ್ತಾವನೆ ಸಿದ್ಧವಾಗಿರುವುದು ನಿಜ. ಈ ಬಗ್ಗೆ ಹಿರಿಯ ಅಧಿಕಾರಿಗಳೇ ಅಂತಿಮ ತೀರ್ಮಾನ ಕೈಗೊಳ್ಳಬೇಕು' ಎಂದು ಶಿಕ್ಷಣ ವಿಭಾಗದ ಅಧಿಕಾರಿಯೊ-ಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಬಿಬಿಎಂಪಿ ಶಾಲಾ ಕಾಲೇಜುಗಳಲ್ಲಿ ತರಗತಿಗಳು ನಡೆಯುತ್ತಿಲ್ಲ ಎಂಬ ಕಾರಣಕ್ಕೆ ಹೊರಗುತ್ತಿಗೆ ಶಿಕ್ಷಕರ ಸೇವೆಯನ್ನು ಕೈಬಿಡುವುದು ಸಮಂಜಸ ಅಲ್ಲ. ಈ ವಿಚಾರ ನನ್ನ ಗಮನಕ್ಕೆ ಬಂದ ತಕ್ಷಣವೇ ಈ ಪ್ರಸ್ತಾಪ ಸ್ಥಗಿತಗೊಳಿಸು-ವಂತೆ ಸೂಚನೆ ನೀಡಿದ್ದೇವೆ. ಕೋವಿಡ್ ನಿಯಂತ್ರಣಕ್ಕೆ ಅವರನ್ನು ಬಳಸಿಕೊಳ್ಳು-ತ್ತೇವೆ. ಅವರ ಸೇವೆಯನ್ನು ಮುಂದುವ-ರಿಸುತ್ತೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

'ಅತಂತ್ರದಿಂದ ಕೂಡಿದ ಬದುಕು'

'ಬಿಬಿಎಂಪಿ ಶಾಲಾ ಕಾಲೇಜುಗಳ ಶಿಕ್ಷಕರ ಬದುಕು ಅತಂತ್ರದಿಂದ ಕೂಡಿದೆ. ನಮ್ಮಲ್ಲಿ ಅನೇಕರು 13ರಿಂದ 15 ವರ್ಷಗಳಿಂದ ಬಿಬಿಎಂಪಿಯ ಶಿಕ್ಷಣ ಸಂಸ್ಥೆಗಳಲ್ಲಿ ದುಡಿಯುತ್ತಿದ್ದೇವೆ. ನಮಗೆ ಯಾವುದೇ ಸೇವಾ ಭದ್ರತೆಯೂ ಇಲ್ಲ. ಈ ಹಿಂದೆಯೂ ನಮ್ಮನ್ನು ದಿಢೀರ್ ಕೆಲಸದಿಂದ ಕಿತ್ತು ಹಾಕುವ ಬಗ್ಗೆ ಚರ್ಚೆಗಳು ನಡೆದಿದ್ದವು. ಈಗ ಮತ್ತೆ ಈ ಚರ್ಚೆ ಮುನ್ನೆಲೆಗೆ ಬಂದಿದೆ. ನಮ್ಮ ಸೇವೆ ಕೈಬಿಡುವುದಿಲ್ಲ ಎಂದು ಬಿಬಿಎಂಪಿ ಸದ್ಯಕ್ಕೆ ಭರವಸೆ ನೀಡಿದೆ. ಆದರೆ, ನಾಳೆ ಮತ್ತೆ ಇಂತಹ ಅತಂತ್ರ ಸ್ಥಿತಿ ಬರುವುದಿಲ್ಲ ಎನ್ನಲಾಗದು' ಎಂದು ಬಿಬಿಎಂಪಿ ಹೊರಗುತ್ತಿಗೆ ಶಿಕ್ಷಕರ ಸಂಘದ ಅಧ್ಯಕ್ಷ ಎನ್.ಲೋಕೇಶ್ ಬೇಸರ ವ್ಯಕ್ತಪಡಿಸಿದರು.

'ತರಗತಿಗಳು ನಡೆಯದಿದ್ದರೂ ಕೋವಿಡ್ ಸೋಂಕಿತ ವಿಳಾಸ ಪತ್ತೆ ಕಾರ್ಯಕ್ಕೆ, ಮನೆಯಲ್ಲೇ ಆರೈಕೆಗೆ ಒಳಗಾ-ಗುವವರಿಗೆ ಮಾಹಿತಿ ನೀಡುವವರಿಗೆ ಹಾಗೂ ದತ್ತಾಂಶ ನೋಂದಣಿ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೇವೆ. ಜೊತೆಗೆ ಆನ್‌ಲೈನ್ ತರಗತಿಗಳನ್ನು ನಡೆಸುತ್ತಿದ್ದೇವೆ' ಎಂದು ಅವರು ತಿಳಿಸಿದರು.

'ನಮಗೆ ಮೊದಲೇ ಸಂಬಳ ಕಡಿಮೆ. ಏಪ್ರಿಲ್ ಸಂಬಳ ಇನ್ನೂ ಆಗಿಲ್ಲ. ಜೀವನ ನಿರ್ವಹಣೆಯೇ ಕಷ್ಟ ಎನ್ನುವಂತಾಗಿದೆ. ಜೀತ ಮಾಡುವ ಸ್ಥಿತಿ ನಮ್ಮದು. ಬಡ ಶಿಕ್ಷಕರ ಗೋಳು ಕೇಳುವವರು ಯಾರು' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಲಿಂಗರಾಜು ನೋವು ತೋಡಿಕೊಂಡರು.

ಸುದ್ದಿ 2 ನಿಮಿಷ

800 ಜನರಿಗೆ ಆಹಾರ ವಿತರಣೆ

ಬೆಂಗಳೂರು: ಬಸವನಗುಡಿಯ ಡಿ.ವಿ.ಜಿ.ರಸ್ತೆಯಲ್ಲಿರುವ ನ್ಯೂ ಬಾಂಡ್ಸ್ ರೇಮಂಡ್ಸ್ ಮಳಿಗೆಯ ಮಾಲೀಕ ಟಿ.ನಾಗರಾಜ ರಾವ್ ಅವರು ಕೋವಿಡ್ ಸಂಕಷ್ಟದ-ಲ್ಲಿರುವ 800 ಮಂದಿಗೆ ಪ್ರತಿ ದಿನ ಮಧ್ಯಾಹ್ನದ ಊಟವನ್ನು ಉಚಿತವಾಗಿ ವಿತರಿಸುತ್ತಿದ್ದಾರೆ.

'ಕೋವಿಡ್ ಎರಡನೇ ಅಲೆಯ ಹೊಡೆತದಿಂದ ಹಲವರು ಜನ ಆಹಾರಕ್ಕಾಗಿ ಪರದಾಡುತ್ತಿದ್ದಾರೆ. ಇದನ್ನು ಮನಗಂಡು ಕುಟುಂಬದ ಸದಸ್ಯ ಸಹಕಾರದೊಂದಿಗೆ ಏಪ್ರಿಲ್ ಕೊನೆಯ ವಾರದಲ್ಲಿ ಮಳಿಗೆಯ ಬಳಿ ಆಹಾರ ವಿತರಿಸಲು ಆರಂಭಿಸಿದೆವು. 300ರಿಂದ ಆರಂಭವಾದ ಈ ಕಾರ್ಯ ಇಂದು 800 ಜನರ ಹಸಿವು ನೀಗಿಸುತ್ತಿದೆ' ಎಂದು ಟಿ.ನಾಗರಾಜ ರಾವ್ ತಿಳಿಸಿದರು.

'ಹಿರಿಯರಿಗೆ ಆಹಾರ ಹಾಗೂ ಮಕ್ಕಳಿಗೆ ಬಿಸ್ಕತ್, ಬಾಳೆಹಣ್ಣು, ಮಜ್ಜಿಗೆ ಹಾಗೂ ಸಿಹಿ ತಿಂಡಿಗಳನ್ನು ವಿತರಿಸಲಾಗುತ್ತಿದೆ' ಎಂದರು.

'ನಕಲಿ ರಸಗೊಬ್ಬರ ಮಾರಾಟಗಾರರ ವಿರುದ್ಧ ಕ್ರಮ'



ಯಲಹಂಕ: 'ನಕಲಿ ರಸಗೊಬ್ಬರ ಹಾವಳಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಕ್ರಮ ಮಾರಾಟಗಾರರ ಪರವಾನಗಿ ರದ್ದುಗೊಳಿಸುವ ಜೊತೆಗೆ ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಕೇಂದ್ರ ರಸಗೊಬ್ಬರ ಸಚಿವ ಡಿ.ವಿ.ಸದಾನಂದಗೌಡ ಎಚ್ಚರಿಸಿದರು.

ಸಿಎಂಕೆ ಚಾರಿಟಬಲ್ ಟ್ರಸ್ಟ್ ಹಾಗೂ ಬಿಜೆಪಿ ಹೆಬ್ಬಾಳ ಘಟಕದ ವತಿಯಿಂದ ಚೋಳನಾಯಕನಹಳ್ಳಿಯಲ್ಲಿ ಭಾನುವಾರ ಆಯೋಜಿಸಿದ್ದ ಕೊರೊನಾ ಸೇನಾನಿಗಳಿಗೆ ಆಹಾರದ ಕಿಟ್ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕಳೆದ ವರ್ಷವೂ ಕೇಂದ್ರ ಸರ್ಕಾರದ ಆದೇಶದ ಮೇರೆಗೆ ನಕಲಿ ರಸಗೊಬ್ಬರ ಮಾರಾಟವನ್ನು ತಡೆಗಟ್ಟುವಲ್ಲಿ ರಾಜ್ಯ ಕೃಷಿ ಇಲಾಖೆ ಕ್ರಮ ಕೈಗೊಂಡಿತ್ತು. ಒಟ್ಟು 168 ಡೀಲರ್‌ಗಳ ಪರವಾನಗಿ ರದ್ದುಗೊಳಿಸಲಾಗಿತ್ತು. ಅಂತವರಿಗೆ ಮತ್ತೆ ಪರವಾನಗಿ ನೀಡದಿರಲು ನಿರ್ಧರಿಸಲಾಗಿದೆ' ಎಂದರು.

'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ರಸಗೊಬ್ಬರ ಚೀಲ ₹2,400ರಂತೆ ಮಾರಾಟವಾಗುತ್ತಿದೆ. ಆದರೆ, ಕೋವಿಡ್ ಪರಿಸ್ಥಿತಿಯಲ್ಲಿ ರೈತರಿಗೆ ಹೊರೆಯಾಗದಂತೆ, ಮೋದಿ ಅವರ ನಿರ್ದೇಶನದಂತೆ ಶೇ 50ರಷ್ಟು ರಿಯಾಯಿತಿ ನೀಡಿ, ₹1,200ರಂತೆ ವಿತರಿಸಲಾಗುತ್ತಿದೆ' ಎಂದರು.

ಚಿತ್ರಾವಳಿ



ಮಾಜಿ ಮುಖ್ಯಮಂತ್ರಿ, ಹಿಂದುಳಿದ ವರ್ಗಗಳ ನೇತಾರ ಡಿ. ದೇವರಾಜ ಅರಸು ಅವರ 39ನೇ ಪುಣ್ಯತಿಥಿ ನಿಮಿತ್ತ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ವಿಧಾನಸೌಧದ ಆವರಣದಲ್ಲಿರುವ ಅರಸು ಅವರ ಭಾವಚಿತ್ರಕ್ಕೆ ಭಾನುವಾರ ಪುಷ್ಪ ನಮನ ಸಲ್ಲಿಸಿದರು. ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಇದ್ದಾರೆ ಪ್ರಜಾವಾಣಿ ಚಿತ್ರ



ಶಾಸಕ ಮುನಿರತ್ನ ನೇತೃತ್ವದಲ್ಲಿ ಲಗ್ಗೆರೆಯಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಡ ಜನರಿಗೆ ಉಪಮುಖ್ಯಮಂತ್ರಿ ಸಿ.ಎನ್.ಅಶ್ವತ್ಥನಾರಾಯಣ ಆಹಾರ ಕಿಟ್ ವಿತರಿಸಿದರು. ಸ್ಥಳೀಯ ಬಿಜೆಪಿ ಮುಖಂಡರು ಇದ್ದರು



ನಗರದ ಗಿರಿನಗರದಲ್ಲಿರುವ ಮಾಂಸದ ಅಂಗಡಿಯೊಂದರ ಬಳಿ ಸಾರ್ವಜನಿಕರು ಭಾನುವಾರ ಮಾಂಸ ಖರೀದಿಸಲು ನಿಂತಿದ್ದರು

'ಜುಲೈ ವೇಳೆಗೆ ಯಶವಂತಪುರ ಲಸಿಕೆಪೂರ್ಣ ಕ್ಷೇತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಶವಂತಪುರ ವ್ಯಾಪ್ತಿಯಲ್ಲಿ ಕೋವಿಡ್ ಲಸಿಕೆ ಪ್ರಕ್ರಿಯೆಗೆ ಕಾರ್ಯಯೋಜನೆ ಸಿದ್ಧಗೊಂಡಿದ್ದು, ಜುಲೈ ಅಂತ್ಯದ ವೇಳೆಗೆ ಯಶವಂತಪುರ ಶೇ 100ರಷ್ಟು ಲಸಿಕೆ ಪಡೆದುಕೊಂಡ ಕ್ಷೇತ್ರವಾಗಲಿದೆ' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ತರಳುಬಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಕುಟುಂಬದವರಿಗೆ ವೈಯಕ್ತಿಕವಾಗಿ ₹1 ಲಕ್ಷ ಸಹಾಯಧನ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಲಸಿಕೆಗೆ ಸಂಬಂಧಿಸಿದ ಹಲವು ಗೊಂದಲಗಳು ಬಗೆಹರಿದಿವೆ. ಸೋಮವಾರದಿಂದಲೇ ಪ್ರತಿ ವಾರ್ಡ್‌ನ ಒಂದು ಸಾವಿರ ಮಂದಿಗೆ ಲಸಿಕೆ ಸಿಗಲಿದೆ. 18ರಿಂದ 45 ವರ್ಷದವರಿಗೂ ಲಸಿಕೆ ಲಭ್ಯ. ಲಸಿಕೆ ಬಗ್ಗೆ ಇರುವ ತಪ್ಪು ಕಲ್ಪನೆ-ಗಳನ್ನು ದೂರ ಮಾಡಿಕೊಳ್ಳಿ' ಎಂದರು.



ಕೋವಿಡ್‌ನಿಂದ ಮೃತಪಟ್ಟವರ ಕುಟುಂಬದವರಿಗೆ ಸಚಿವ ಎಸ್.ಟಿ.ಸೋಮಶೇಖರ್ ₹1ಲಕ್ಷ ಸಹಾಯಧನದ ಚೆಕ್ ವಿತರಿಸಿದರು

'ಕೋವಿಡ್ ನಿಯಂತ್ರಣಕ್ಕಾಗಿ ಕ್ಷೇ-ತ್ರದಲ್ಲಿನ ಹಳ್ಳಿಗಳ ಮನೆ ಮನೆಗೂ ವೈದ್ಯರು ಭೇಟಿ ನೀಡುತ್ತಿದ್ದು, ಸೋಂಕು ಲಕ್ಷಣಗಳು ಕಂಡು ಬಂದರೆ ಸ್ಥಳದಲ್ಲೇ ಪರೀಕ್ಷೆ ನಡೆಸಿ, ಚಿಕಿತ್ಸೆ ಕೊಡಿಸಲಾಗು-ತ್ತಿದೆ. ಹಾಗಾಗಿ, ಕ್ಷೇತ್ರದಲ್ಲಿ ಸೋಂಕಿತರ ಸಂಖ್ಯೆ ಹಾಗೂ ಸಾವಿನ ಪ್ರಮಾಣ ಕಡಿಮೆಯಾಗಿದೆ' ಎಂದು ವಿವರಿಸಿದರು.

ಹೆಮ್ಮಿಗೆಪುರ ವಾರ್ಡ್‌ನ ತಲಘ-ಟಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ಥಳೀಯ ಮುಖಂಡ ಅರುಣ್ ಕುಮಾರ್ ಅವರು ಎಸ್.ಟಿ.ಸೋಮಶೇಖರ್ ಅವರ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಗೊಂಡರು.

'50 ಸಾವಿರ ವಯಲ್ಸ್ ತಕ್ಷಣ ಪೂರೈಸಿ'

ಬೆಂಗಳೂರು: 'ಕೇಂದ್ರ ಸರ್ಕಾರ ತಕ್ಷಣವೇ ರಾಜ್ಯಕ್ಕೆ 50 ಸಾವಿರ ಆ್ಯಂಫೋಟೆರಿಸಿನ್ ವಯಲ್ಸ್‌ಗಳನ್ನು ಪೂರೈಸುವ ಮೂಲಕ ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ಸೋಂಕಿನಿಂದ ಜೀವನ್ಮರಣದ ನಡುವೆ ಹೋರಾಡುತ್ತಿರುವ ಜನರನ್ನು ರಕ್ಷಿಸಬೇಕು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಆಗ್ರಹಿಸಿದ್ದಾರೆ.

'ಬೀದರ್‌ನಿಂದ ಚಾಮರಾಜ-ನಗರದವರೆಗೆ ಎಲ್ಲ ಕಡೆಗಳಲ್ಲೂ ಆ್ಯಂಫೋಟೆರಿಸಿನ್ ವಯಲ್ಸ್ ಕೊರತೆ ಎದುರಾಗಿದೆ. ಆರೋಗ್ಯ ಇಲಾಖೆ ಈ ಬಗ್ಗೆ ಗಮನಹರಿಸದಿರುವುದು ದುರ್ದೈವದ ಸಂಗತಿ. ಇಲಾಖೆಗೆ ಜನರ ಕಾಳಜಿ ಇಲ್ಲವೇ' ಎಂದು ಅವರು ಪ್ರಶ್ನಿಸಿದ್ದಾರೆ.

'ಕೋವಿಡ್ ಸೋಂಕಿತರ, ಮರಣ ಹೊಂದಿದವರ ಸಂಖ್ಯೆ ಬಗ್ಗೆ ಸುಳ್ಳು ಹೇಳಿದ ಸರ್ಕಾರ ಈಗ, ಕಪ್ಪು ಶಿಲೀಂಧ್ರ ಸೋಂಕಿನಿಂದ ನರಳು-ತ್ತಿರುವವರ ಮತ್ತು ಸಾವಿಗೀಡಾಗು-ತ್ತಿರುವವರ ಸಂಖ್ಯೆಯಲ್ಲೂ ಅಸ್ಪಷ್ಟ ಮಾಹಿತಿ ನೀಡುತ್ತಿದೆ. ಹೀಗಾಗಿ, ರಾಜ್ಯಕ್ಕೆ ಸೂಕ್ತ ಪ್ರಮಾಣದಲ್ಲಿ ಆ್ಯಂಫೋಟೆರಿಸಿನ್ ವಯಲ್ಸ್ ಹಂಚಿಕೆ ಆಗುತ್ತಿಲ್ಲ. ಕೋವಿಡ್‌ನಿಂದ ಚೇತರಿ-ಸಿಕೊಂಡಿರುವ 2 ಸಾವಿರಕ್ಕೂ ಹೆಚ್ಚು ಜನರಲ್ಲಿ ಕಪ್ಪು ಶಿಲೀಂಧ್ರ ಸೋಂಕು ಕಾಣಿಸಿಕೊಂಡಿದೆ. ರೋಗಿಗಳಿಗೆ ನಿತ್ಯ 4 ರಿಂದ 5 ಆ್ಯಂಫೋಟೆರಿಸಿನ್ ವಯಲ್ಸ್ ನೀಡಬೇಕಾಗುತ್ತದೆ. ಸಾಕಷ್ಟು ಪ್ರಮಾಣದಲ್ಲಿ ಪೂರೈಕೆ ಆಗದಿರು-ವುದರಿಂದ ಸೋಂಕಿತರ ಪಾಡು ಹೇಳತೀರದಂತಾಗಿದೆ' ಎಂದಿದ್ದಾರೆ.

ನಗರದಲ್ಲಿ ಇಂದು

'ದೇಶದ್ರೋಹದ ಕಾನೂನು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ' ಕುರಿತು ಉಪನ್ಯಾಸ: ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್, ಉದ್ಘಾಟನೆ– ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಹೇಮಂತ್ ಕುಮಾರ್, ಅತಿಥಿಗಳು–ಲಿಂಗರಾಜ ಗಾಂಧಿ, ಪ್ರೊ. ನಿರಂಜನ ವಾನಳ್ಳಿ, ಆಯೋಜನೆ– ಬೆಂಗಳೂರು ನಗರ ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳ ಪತ್ರಿಕೋದ್ಯಮ ವಿಭಾಗ, ಬೆಂಗಳೂರು ವಕೀಲರ ಸಂಘ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)



ನಾಗಮೋಹನ್ ದಾಸ್

ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯಲ್ಲಿ 24 ಐಸಿಯು ಹಾಸಿಗೆಗಳ ವ್ಯವಸ್ಥೆಗೆ ಚಾಲನೆ: ಬಿ.ಎಸ್. ಯಡಿಯೂರಪ್ಪ, ಭಾಗವಹಿಸುವವರು– ಉಪಮುಖ್ಯಮಂತ್ರಿ ಸಿ.ಎನ್. ಅಶ್ವತ್ಥನಾರಾಯಣ, ಸಚಿವ ಕೆ.ಸುಧಾಕರ್, ಸಂಸದ ಪಿ.ಸಿ. ಮೋಹನ್, ಎಸ್.ರಘು, ಸ್ಥಳ– ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಇಂದಿರಾನಗರ, ಬೆಳಿಗ್ಗೆ 11.30

'ಚಾಮರಸ ಕವಿಯ ಪ್ರಭುಲಿಂಗಲೀಲೆ' ಕಾವ್ಯ ಗಮಕ ವ್ಯಾಖ್ಯಾನ: ವಿಷಯ– ಪಾರ್ವತಿಯ ಪ್ರತಿಜ್ಞೆ ಮಾಯಾದೇವಿಯ ಬಾಲ್ಯ, ಆಯೋಜನೆ–ಕರ್ನಾಟಕ ಸಾಹಿತ್ಯ ಅಕಾಡೆಮಿ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

ಬಿಎಂಟಿಸಿ: ಚಾಲಕ–ನಿರ್ವಾಹಕರಿಗೆ ಆದ್ಯತೆ ಮೇರೆಗೆ ಲಸಿಕೆ

ಹಂತ-ಹಂತವಾಗಿ ಬಸ್ ಕಾರ್ಯಾಚರಣೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯಲ್ಲಿ ಅನ್‌ಲಾಕ್ ಪ್ರಕ್ರಿಯೆಗೆ ಅಧಿಕಾರಿಗಳು ಸಿದ್ಧತೆ ನಡೆಸುತ್ತಿದ್ದು, ನಗರದಲ್ಲಿ ಹಂತ–ಹಂತವಾಗಿ ಬಿಎಂಟಿಸಿ ಬಸ್ ಸಂಚಾರ ಆರಂಭವಾಗುವ ಸಾಧ್ಯತೆ ಇದೆ.

'ಲಾಕ್‌ಡೌನ್ ಸಡಿಲಿಕೆ ನಂತರ ಬಸ್‌ಗಳ ಕಾರ್ಯಾಚರಣೆ ಯಾವ ರೀತಿ ಇರಬೇಕು ಎಂಬುದರ ಬಗ್ಗೆ ಕಳೆದ ವರ್ಷದ ಅನುಭವ ಕಣ್ಮುಂದಿದೆ. ಅದರ ಆಧಾರದ ಮೇಲೆ ಹಂತ–ಹಂತವಾಗಿ ಬಸ್ ಸಂಚಾರ ಆರಂಭಿಸಲು ಎಲ್ಲ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ' ಎಂದು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ವ್ಯವಸ್ಥಾಪಕ ನಿರ್ದೇಶಕಿ ಸಿ. ಶಿಖಾ 'ಪ್ರಜಾವಾಣಿ'ಗೆ ತಿಳಿಸಿದರು.

'135 ಬಸ್‌ಗಳಿಂದ 3 ಸಾವಿರ ಬಸ್‌ಗಳವರೆಗೆ ಕಾರ್ಯಾಚರಣೆ ನಡೆಸಲು ಸಿದ್ಧವಾಗಿದ್ದೇವೆ. ಲಾಕ್‌ಡೌನ್ ಇದ್ದರೂ ನಮ್ಮ ಯಾವುದೇ ಡಿಪೊ ಬಂದ್ ಮಾಡಿರಲಿಲ್ಲ. ಸಿಬ್ಬಂದಿಯು ನಿಯಮಿತವಾಗಿ ಎಲ್ಲ ಬಸ್‌ಗಳ ಸರ್ವಿಸ್ ಮಾಡಿದ್ದು, ಎಲ್ಲವೂ ಸುಸ್ಥಿತಿಯಲ್ಲಿವೆ. ಯಾವುದೇ ದಿನದಲ್ಲಿ ಕಾರ್ಯಾಚರಣೆ ಆರಂಭಿಸಲು ಸಜ್ಜಾಗಿವೆ' ಎಂದರು.



ಸಿ. ಶಿಖಾ

ಮಧ್ಯಾಹ್ನದಲ್ಲಿ ಸ್ಥಗಿತ: 'ಬೆಳಿಗ್ಗೆ ಮತ್ತು ಸಂಜೆಯ ವೇಳೆಗೆ ಹೆಚ್ಚು ಬಸ್‌ಗಳು ರಸ್ತೆಗಿಳಿಯಲಿವೆ. ಆದರೆ, ಮಧ್ಯಾಹ್ನದ ವೇಳೆ ಬಸ್‌ಗಳ ಸಂಚಾರ ನಿರ್ಬಂಧಿಸುವ ಉದ್ದೇಶವಿದೆ. ಅಂದರೆ, ಪ್ರಯಾಣಿಕರೇ ಇಲ್ಲದ ಪ್ರದೇಶಗಳಲ್ಲಿ ಬಸ್ ಸಂಚಾರ ಸ್ಥಗಿತಗೊಳಿಸಲಾಗುವುದು. ಇದರಿಂದ ಇಂಧನದ ಉಳಿತಾಯವೂ ಆಗಲಿದೆ. ಮಧ್ಯಾಹ್ನದ ವೇಳೆ 3ರಿಂದ 4 ತಾಸಿನವರೆಗೆ ಬಸ್ ಸಂಚಾರ ಸ್ಥಗಿತಗೊಳಿಸುವ ಬಗ್ಗೆ ಚಿಂತಿಸಲಾಗುತ್ತಿದೆ' ಎಂದೂ ಶಿಖಾ ಹೇಳಿದರು.

ಸಿಬ್ಬಂದಿಗೆ ಲಸಿಕೆ: 'ಬಿಎಂಟಿಸಿಯಲ್ಲಿ ಶೇ 65ರಷ್ಟು ಸಿಬ್ಬಂದಿ ಈಗಾಗಲೇ ಕೋವಿಡ್ ಲಸಿಕೆ ಪಡೆದಿದ್ದಾರೆ. ಲಸಿಕೆ ಪಡೆದ ಚಾಲಕರು ಮತ್ತು ನಿರ್ವಾಹಕರನ್ನು ಮಾತ್ರ ಬಸ್‌ಗಳಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗುತ್ತದೆ. ಬಸ್ ಸಂಚಾರ ಪುನರಾರಂಭವಾಗುವುದರೊಳಗೆ ಎಲ್ಲ ಸಿಬ್ಬಂದಿಗೂ ಲಸಿಕೆ ಹಾಕುವ ಕಾರ್ಯ ಪೂರ್ಣಗೊಳಿಸಲಾಗುವುದು' ಎಂದು ತಿಳಿಸಿದರು.

ಕಿ.ಮೀ.ಗೆ ₹65 ವೆಚ್ಚ

'ಕೋವಿಡ್‌ನಿಂದ ಸಂಸ್ಥೆಗೂ ಸಹಜವಾಗಿಯೇ ನಷ್ಟವಾಗಿದೆ. ಬಸ್ ಸೇವೆ ನಡೆಯುತ್ತಿದ್ದಾಗ ಮೊದಲು ಪ್ರತಿ ಕಿ.ಮೀ.ಗೆ ₹60 ಖರ್ಚಾದರೆ, ₹45 ಆದಾಯ ಬರುತ್ತಿತ್ತು. ಕೋವಿಡ್ ನಂತರ ಡೀಸೆಲ್ ಬೆಲೆಯಲ್ಲಿಯೂ ನಿರಂತರವಾಗಿ ಏರಿಕೆಯಾಗಿದೆ. ಈಗ ಪ್ರತಿ ಕಿ.ಮೀ.ಗೆ ₹65 ವೆಚ್ಚವಾಗುತ್ತಿದ್ದು, ಆದಾಯವು ₹35ಕ್ಕೆ ಇಳಿದಿದೆ. ವೆಚ್ಚ ಮತ್ತು ಆದಾಯದ ನಡುವೆ ₹30 ವ್ಯತ್ಯಾಸವಿದ್ದು, ಈ ಅಂತರವನ್ನು ಕಡಿಮೆ ಮಾಡಲು ಪ್ರಯತ್ನಿಸಲಾಗುವುದು. ರಾಜ್ಯ ಸರ್ಕಾರದ ಸಹಕಾರದೊಂದಿಗೆ ಈ ನಷ್ಟವನ್ನು ನಿಭಾಯಿಸಲಾಗುತ್ತಿದೆ' ಎಂದು ತಿಳಿಸಿದರು.

'ಬಸ್ ಪ್ರಯಾಣ ದರ ಹೆಚ್ಚಿಸಲು ಅನುಮತಿ ನೀಡಬೇಕು ಎಂದು ಜನವರಿಯಲ್ಲಿಯೇ ನಾವು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದೇವೆ. ಈ ಬಗ್ಗೆ ಸರ್ಕಾರ ಕೈಗೊಳ್ಳುವ ನಿರ್ಧಾರದ ನಿರೀಕ್ಷೆಯಲ್ಲಿದ್ದೇವೆ' ಎಂದೂ ಶಿಖಾ ತಿಳಿಸಿದರು.

ಪ್ರಿನ್ಸ್ ಹ್ಯಾರಿ, ಮೇಘನ್ ಮಾರ್ಕೆಲ್ ದಂಪತಿಗೆ ಹೆಣ್ಣು ಮಗು

ಲಾಸ್‌ಏಂಜಲಿಸ್ (ಎಎಫ್‌ಪಿ): ಪ್ರಿನ್ಸ್ ಹ್ಯಾರಿ ಮತ್ತು ಪತ್ನಿ ಮೇಘನ್ ಮಾರ್ಕೆಲ್ ದಂಪತಿ ತಮಗೆ ಹೆಣ್ಣು ಮಗುವಾಗಿದೆ ಎಂದು ಭಾನುವಾರ ಪ್ರ-ಕಟಿಸಿದ್ದಾರೆ.

'ಕ್ಯಾಲಿಫೋರ್ನಿಯಾದಲ್ಲಿ ಮಗಳು ಲಿಲಿಬೆಟ್ ಡಯಾನಾ ಜನಿಸಿದ್ದಾಳೆ. ಮುತ್ತಜ್ಜಿ ಹೆಸರು ಲಿಲಿ ಇತ್ತು. ಹೀಗಾಗಿ, ಅದೇ ಹೆಸರಿಡಲಾಗಿದೆ' ಎಂದು ಪ್ರಕಟ-ಣೆಯಲ್ಲಿ ತಿಳಿಸಿದ್ದಾರೆ.

ಕಳೆದ ವರ್ಷ ರಾಜಮನೆತನದ ಹೊಣೆಗಾರಿಕೆಗಳಿಂದ ಹೊರಬಂದಿದ್ದ ದಂಪತಿ, ಈಗ ಲಾಸ್‌ಏಂಜಲಿಸ್ ಸಮೀಪ ನೆಲೆಸಿದ್ದಾರೆ.

ಪ್ರತಿ ತಿಂಗಳು ಬಿಜೆಪಿ ಸಮನ್ವಯ ಸಮಿತಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪಕ್ಷ ಮತ್ತು ಸರ್ಕಾರದ ಮಧ್ಯೆ ಸಮನ್ವಯಕ್ಕೆ ರಚಿಸಿರುವ ಸಮಿತಿಯಲ್ಲಿ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳನ್ನು ಸೇರಿಸಲಾಗಿದ್ದು, ಪ್ರತಿ ತಿಂಗಳೂ ಸಮಿತಿ ಸಭೆ ಸೇರಿ ಪಕ್ಷದ ಆಂತರಿಕ ಸಮಸ್ಯೆ-ಗಳನ್ನು ಬಗೆಹರಿಸಲು ತೀರ್ಮಾನಿಸ-ಲಾಗಿದೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅಧ್ಯಕ್ಷತೆ-ಯಲ್ಲಿ ಐವರ ಸಮನ್ವಯ ಸಮಿತಿ ರಚನೆ ಆದ ಬಳಿಕ, ಪ್ರಧಾನ ಕಾರ್ಯದರ್ಶಿಗ-ಳನ್ನು ಸಮಿತಿಗೆ ಸೇರಿಸಲು ನಿರ್ಧರಿಸ-ಲಾಗಿತ್ತು.

ಪಕ್ಷದಲ್ಲಿ ಸಂಘಟನೆಯನ್ನು ಬಲಪಡಿಸುವುದು ಮತ್ತು ಶಾಸಕರಲ್ಲಿ ಬೆಳೆಯುತ್ತಿರುವ ಅಸಮಾಧಾನವ-ನ್ನು ಶಮನಗೊಳಿಸುವ ಮೂಲಕ ಸಮನ್ವಯ ಸಾಧಿಸಲು ಹೆಚ್ಚಿನ ಆದ್ಯತೆ ನೀಡಲಾಗುವುದು. ಸಚಿವರಿರಲಿ, ಶಾಸಕರಿರಲಿ ತಮ್ಮ ಅಹವಾಲುಗಳನ್ನು ಸಮಿತಿಯ ಮುಂದೆಯೇ ಬಗೆಹರಿಸಿಕೊಳ್ಳಲು ಅವಕಾಶ ನೀಡಲಾಗುವುದು ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾಕಷ್ಟು ವಿಚಾರಗಳ ಬಗ್ಗೆ ಚರ್ಚೆ ಆಗಬೇಕಾಗುತ್ತದೆ, ಪಕ್ಷದಲ್ಲಿ ಸಮಸ್ಯೆಗಳು, ಸಚಿವರು ಮತ್ತು ಶಾಸಕರ ನಡುವೆ ಸಂಬಂಧ ಹಳಸಿದ್ದರೆ ಅದನ್ನು ಸರ್ಕಾರ ಸರ್ಕಾರದ ಗಮನಕ್ಕೆ ತಂದು ಸರಿಪಡಿಸುವತ್ತ ಸಮಿತಿ ಗಮನಹರಿಸಲಿದೆ ಎಂದು ಬಿಜೆಪಿ ಮುಖಂಡರೊಬ್ಬರು ತಿಳಿಸಿದ್ದಾರೆ.

ಸಿ.ಎ ಪರೀಕ್ಷೆ ಮುಂದೂಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಡುವೆಯೂ ಭಾರತೀಯ ಲೆಕ್ಕ ಪರಿಶೋಧಕರ ಸಂಸ್ಥೆ (ಐಸಿಎಐ) ಜುಲೈ 5 ರಿಂದ ಜುಲೈ 20ರವರೆಗೆ ಸಿ.ಎ (ಲೆಕ್ಕ ಪರಿಶೋಧಕ) ಪರೀಕ್ಷೆ ನಡೆಸಲು ಮುಂದಾಗಿದ್ದು, ಈ ಪರೀಕ್ಷೆಗಳನ್ನು ಮುಂದೂಡುವಂತೆ ಅಭ್ಯರ್ಥಿಗಳು ಆಗ್ರಹಿಸಿದ್ದಾರೆ.

'ಐಸಿಎಐ ಮೇ ತಿಂಗಳಲ್ಲಿ ಈ ಪರೀಕ್ಷೆಗಳನ್ನು ನಡೆಸಬೇಕಿತ್ತು. ಆದರೆ, ಕೋವಿಡ್ ಕಾರಣದಿಂದ ಮುಂದೂಡಲಾಗಿತ್ತು. ಇದೀಗ ಪರಿಷ್ಕೃತ ಪರೀಕ್ಷಾ ವೇಳಾ ಪಟ್ಟಿ ಪ್ರಕಟಿಸಲಾಗಿದೆ. ಆದರೆ, ಕೋವಿಡ್ ಪ್ರಕರಣಗಳ ಇನ್ನೂ ಕಡಿಮೆ ಆಗಿಲ್ಲ. ಈ ನಡುವೆ ಪರೀಕ್ಷೆಯ ದಿನ ಪ್ರಕಟಿಸಲಾಗಿದೆ' ಎಂದು ಅಭ್ಯರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪರಿಷ್ಕೃತ ವೇಳಾಪಟ್ಟಿ ಪ್ರಕಾರ, ಇಂಟರ್‌ಮಿಡಿಯೇಟ್ ಕೋರ್ಸ್‌ನ (ಹಳೆ ಮತ್ತು ಹೊಸ ಕ್ರಮ) ಗ್ರೂಪ್–1 ಪರೀಕ್ಷೆಗಳು ಜುಲೈ 6, 8, 10, 12ರಂದು, ಗ್ರೂಪ್–2 ಪರೀಕ್ಷೆಗಳು 14, 16, 18 ಮತ್ತು 20 ರಂದು ಹಾಗೂ ಅಂತಿಮ ಕೋರ್ಸ್ (ಗ್ರೂಪ್–1) ಪರೀಕ್ಷೆಗಳು ಜುಲೈ 5, 7, 9, 11 ರಂದು, ಗ್ರೂಪ್–2 ಪರೀಕ್ಷೆಗಳು 13, 15, 17, 19ರಂದು ನಿಗದಿಯಾಗಿದೆ. ಇನ್ಶೂರೆನ್ಸ್ ಮತ್ತು ರಿಸ್ಕ್ ಮ್ಯಾನೇಜ್‌ಮೆಂಟ್ (ಐಆರ್‌ಎಂ) ತಾಂತ್ರಿಕ ಪರೀಕ್ಷೆಗಳು 5, 7, 9 ಮತ್ತು 11ರಂದು ನಿಗದಿಯಾಗಿದೆ.

'ವಿವಿಧ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು ನೂರಾರು ಅಭ್ಯರ್ಥಿಗಳು ಹಾಜರಾಗುತ್ತಾರೆ. ಆದರೆ, ಕೋವಿಡ್ ಹರಡುತ್ತಿರುವುದರಿಂದ ಪರೀಕ್ಷೆಗೆ ಹಾಜರಾಗಲು ಸಮಸ್ಯೆ ಆಗಲಿದೆ' ಎಂದು ಅಭ್ಯರ್ಥಿಗಳು ಅಳಲು ತೋಡಿಕೊಂಡಿದ್ದಾರೆ.

ಸ್ಥಳೀಯ ತಳಿಗಳ ಬೇಸಾಯ, ಬೀಜ ಸಂರಕ್ಷಣೆಗೆ ಶಾಸಕರ ವಿಶಿಷ್ಟ ಕಾರ್ಯಕ್ರಮ

ಲಾಕ್‌ಡೌನ್ ಬೇಸರ ನೀಗಲು 'ಬೆಂಡೆ' ಮದ್ದು!

• ಎಸ್. ರವಿಪ್ರಕಾಶ್

ಬೆಂಗಳೂರು: ಕೋವಿಡ್ ಹಾಗೂ ಲಾಕ್‌ಡೌನ್‌ನಿಂದ ಜನರಲ್ಲಿರುವ ಮೂಡಿರುವ ಆತಂಕ ಹೋಗಲಾಡಿಸಿ, ಸೃಜನಾತ್ಮಕ ಚಟುವಟಿಕೆಯಲ್ಲಿ ತೊಡಗಿಸಲು ವಿಭಿನ್ನ ಪ್ರಯತ್ನಗಳು ನಡೆಯುತ್ತಿವೆ. ಕಾರ್ಕಳ ಶಾಸಕ ಹಾಗೂ ಸರ್ಕಾರದ ಮುಖ್ಯ ಸಚೇತಕ ವಿ.ಸುನಿಲ್ ಕುಮಾರ್ ಇದಕ್ಕಾಗಿ ಕೃಷಿಯನ್ನೇ 'ಅಸ್ತ್ರ'ವಾಗಿ ಬಳಸಿದ್ದಾರೆ.

ಕಳೆದ ವರ್ಷ ಲಾಕ್‌ಡೌನ್ ಸಂದರ್ಭದಲ್ಲಿ ಕಜೆ ಅಕ್ಕಿ ಬೆಳೆಯಲು ಪ್ರೋತ್ಸಾಹಿಸಿದ್ದ ಅವರು, ಈ ವರ್ಷ ಮನೆ–ಮನೆಗಳಲ್ಲಿ ಬಿಳಿ ಬೆಂಡೇಕಾಯಿ ಬೆಳೆಯುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದಾರೆ.

ಒಳ್ಳೆ ಸುದ್ದಿ

ಮನೆ– ಮನೆಗಳಲ್ಲೂ ಬಿಳಿ ಬೆಂಡೆ ಬೆಳೆಯುವಂತೆ ಜನರನ್ನು ಪ್ರೇರೇಪಿಸಲು ಸುನಿಲ್ ಕುಮಾರ್ ಮುಂದಾಗಿದ್ದಾರೆ. ಜೂನ್ 1 ರಿಂದ ಜನರಿಗೆ ಉಚಿತವಾಗಿ ಬೀಜ ವಿತರಣೆ ಆರಂಭಿಸಿದ್ದಾರೆ.

ಕಾರ್ಲ ಬೆಂಡೆಗೆ ಮನ್ನಣೆ: ಕರಾವಳಿ ಭಾಗದಲ್ಲಿ ಮಾತ್ರ ಬೆಳೆಯುವ ಕಾರ್ಕಳ ಮೂಲದ ಬಿಳಿ ಬೆಂಡೆ ವಿಶಿಷ್ಟ ಸ್ವಾದವುಳ್ಳದ್ದು. ರುಚಿ, ಬಣ್ಣ, ಆಕಾರ (ಎಂಟು ಕೋನಗಳು) ಮತ್ತು ಔಷಧೀಯ ಗುಣದಿಂದ ಪ್ರಸಿದ್ಧಿ ಪಡೆದಿದೆ. 'ಕಾರ್ಲ ಬೆಂಡೆ' ಎಂದೇ ಕರೆಯಲಾಗುತ್ತದೆ.

ಈ ಮಳೆಗಾಲದಲ್ಲಿ ಕಾರ್ಕಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ

> **ಮುಖ್ಯಾಂಶಗಳು**
> - ಕ್ಷೇತ್ರದ 20 ಸಾವಿರ ಮನೆಗಳಿಗೆ ಬೆಂಡೆ ಬೀಜ ವಿತರಣೆ
> - ಪ್ರತಿ ಮನೆಯಲ್ಲಿ ಕನಿಷ್ಠ 10 ಗಿಡಗಳನ್ನು ಬೆಳೆಸಬೇಕು
> - 40 ರಿಂದ 60 ಬೀಜಗಳ ಪೊಟ್ಟಣ ಪ್ರತಿ ಮನೆಗೆ

'ಕಾರ್ಕಳ ಬಿಳಿ ಬೆಂಡೆ' ಬ್ರ್ಯಾಂಡ್ ಅನ್ನು ಹೆಚ್ಚು ಜನಪ್ರಿಯಗೊಳಿಸುವುದರ ಜತೆಗೆ ರಾಸಾಯನಿಕ ಮುಕ್ತ ಆಹಾರ ಸೇವನೆ ಪ್ರ-ಚಾರಗೊಳಿಸುವುದು, ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ಮಾರುಕಟ್ಟೆ ಕಲ್ಪಿಸುವುದು ಈ ಅಭಿಯಾನದ ಪ್ರಮುಖ ಉದ್ದೇಶ. ಕಳೆದ ಮುಂಗಾರಿನ ಸಂದರ್ಭದಲ್ಲಿ 'ಕಾರ್ಲ ಕಜೆ' ಅಕ್ಕಿಯನ್ನು (ಕಾರ್ಕಳಕ್ಕೆ ತುಳುವಿನಲ್ಲಿ ಕಾರ್ಲ ಎನ್ನುತ್ತಾರೆ) ಜನಪ್ರಿಯಗೊಳಿಸಿದ



ಶಾಸಕ ಸುನಿಲ್ ಕುಮಾರ್ ದಂಪತಿ ತಮ್ಮ ಮನೆಯ ಹಿತ್ತಲಿನಲ್ಲಿ ಬೆಂಡೆ ಬೀಜ ಬಿತ್ತಲು ಸಿದ್ಧತೆ ನಡೆಸಿರುವುದು

ಬಳಿಕ ಸ್ಥಳೀಯವಾಗಿ ಬೆಳೆಯುವ ಅಕ್ಕಿಗೆ ವ್ಯಾಪಕ ಬೇಡಿಕೆ ಬಂದಿದೆ.

ಮನೆ ಅಂಗಳ, ಗದ್ದೆ, ಗುಡ್ಡೆ, ಕುಂಡ, ಗೋಣಿ ಚೀಲ ಹೀಗೆ ಎಲ್ಲಿ ಬೇಕಾದರೂ ಬೆಂಡೆಯನ್ನು ಬೆಳೆಸಬಹುದು. ರೈತರು ಮಾತ್ರವಲ್ಲ, ಎಲ್ಲರ ಮನೆಯಲ್ಲೂ ಇದನ್ನು ಬೆಳೆಯಬೇಕು. ಸ್ಥಳೀಯ ತಳಿಯನ್ನು ಪ್ರವರ್ಧಮಾನಕ್ಕೆ ತರಬೇಕು ಎಂಬ ಕಾರಣಕ್ಕೆ ಒಂದೂವರೆ ವರ್ಷದ ಹಿಂದೆ 200 ರೈತರನ್ನು ಸೇರಿಸಿ ಯೋಜನೆ ಸಿದ್ಧ-ಪಡಿಸಲಾಯಿತು. ಸ್ಥಳೀಯ ತಳಿಯ ಕಜೆ ಅಕ್ಕಿ, ಬೆಂಡೆ, ಅರಿಶಿಣ, ಜೇನು ಕೃಷಿ ಕೈಗೆತ್ತಿಕೊಳ್ಳುವ ಸಲಹೆಯೂ ಬಂದಿತ್ತು. ಅಂತಿಮವಾಗಿ ಕಜೆ ಅಕ್ಕಿ ಮೊದಲ ಬಾರಿಗೆ ಕೈಗೆತ್ತಿಕೊಂಡೆವು. ಇದೀಗ ಕ್ಷೇತ್ರದ ಎಲ್ಲರೂ ಪಾಲ್ಗೊಳ್ಳುವಂತೆ ಮಾಡಲು ಬೆಂಡೆ ಆಯ್ದುಕೊಂಡಿದ್ದೇವೆ ಎಂದು ಸುನಿಲ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ತಳಿಯೇ ಮರೆಯಾಗುತ್ತಿರುವ ಇದರ ಬೀಜಗಳನ್ನು ಕಷ್ಟಪಟ್ಟು ಸಂಪಾದಿಸಲಾಗಿದೆ. ಈ ಬಾರಿ ಹೆಚ್ಚು ಇಳುವರಿ ಬರುವುದರಿಂದ ಬಿತ್ತನೆ ಬೀಜವನ್ನು ಸಂಗ್ರಹಿಸಲಾಗುತ್ತದೆ' ಎಂದರು.

ಕಜೆ ಅಕ್ಕಿಯೇ ಉಡುಗೊರೆ

ವಿವಿಧ ಸರ್ಕಾರಿ ಮತ್ತು ಇತರ ಕಾರ್ಯಕ್ರಮಗಳಲ್ಲಿ ಒಂದು ಕೆ.ಜಿ ಅಥವಾ ಎರಡು ಕೆ.ಜಿಯಷ್ಟು ಕಜೆ ಅಕ್ಕಿ (ಕೆಂಪು ಅಕ್ಕಿ) ಪೊಟ್ಟಣವನ್ನು ನೆನಪಿನ ಕಾಣಿಕೆಯಾಗಿ ನೀಡುವ ಪರಿಪಾಠ ಕಾರ್ಕಳ ವಿಧಾನಸಭಾ ಕ್ಷೇತ್ರದಲ್ಲಿ ಆರಂಭವಾಗಿದೆ. ಮರದಿಂದ ಮಾಡಿದ ಅಥವಾ ಇತರ ರೀತಿಯ ಕಾಣಿಕೆ ನೀಡುವುದನ್ನು ನಿಲ್ಲಿಸಲಾಗಿದೆ ಎಂದು ಸುನಿಲ್ ಕುಮಾರ್ ತಿಳಿಸಿದರು.

ಕಳೆದ ವರ್ಷ 5,500 ಕ್ವಿಂಟಲ್ ಸಾವಯವ ಕಜೆ ಅಕ್ಕಿ ಬೆಳೆಯಲಾಯಿತು. 'ಪರಂಪರಾ ಸಹಕಾರ ಸಂಘ'ದ ಜತೆ ಒಪ್ಪಂದ ಮಾಡಿಕೊಂಡೆವು. ಮಾರುಕಟ್ಟೆ ದರಕ್ಕಿಂತ ₹2 ಜಾಸ್ತಿ ಕೊಟ್ಟು ರೈತರಿಂದ ಖರೀದಿ ಮಾಡಿದರು. ಮುಂಬೈ, ಬೆಂಗಳೂರು ಸೇರಿದಂತೆ ಹಲವು ನಗರಗಳಿಂದ ಬೇಡಿಕೆ ಬಂದಿತು. ಈ ವರ್ಷ 10,500 ಕ್ವಿಂಟಲ್ ಬೆಳೆಯುವ ಗುರಿ ಹಾಕಿಕೊಂಡಿದ್ದೇವೆ ಎಂದರು.

ವಿಕ್ಟೋರಿಯಾ: ಕಿರಿಯ ವೈದ್ಯರಿಗೆ ಹೆಚ್ಚಿದ ಕೋವಿಡ್ ಕೆಲಸದ ಒತ್ತಡ

ಸೇವೆಗೆ ಹಿರಿಯ ವೈದ್ಯರ ಹಿಂದೇಟು

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೋವಿಡ್ ಸೇವೆಗೆ ಹಿರಿಯ ವೈದ್ಯರು ಹಿಂದೇಟು ಹಾಕುತ್ತಿದ್ದಾರೆ. ಇದರಿಂದಾಗಿ ಕಿರಿಯ ವೈದ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳ ಮೇಲಿನ ಒತ್ತಡ ಹೆಚ್ಚಾಗಿದೆ.

ಅತ್ಯಂತ ಹಳೆಯ ಆಸ್ಪತ್ರೆಯಲ್ಲಿ ಒಂದಾದ ವಿಕ್ಟೋರಿಯಾ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ (ಬಿಎಂಸಿಆರ್‌ಐ) ಕಾರ್ಯನಿರ್ವಹಿಸುತ್ತಿದೆ. ಕಳೆದ ವರ್ಷ ಕೊರೊನಾ ಸೋಂಕು ಕಾಣಿಸಿಕೊಂಡ ಬಳಿಕ ಈ ಆಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗಿದೆ. ವಿಕ್ಟೋರಿಯಾ ಆವರಣದಲ್ಲಿರುವ ಟ್ರಾಮಾ ಕೇರ್ ಸೆಂಟರ್, ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಆಸ್ಪತ್ರೆಯಲ್ಲಿನ ಹಾಸಿಗೆಗಳನ್ನು ಕೂಡ ಕೋವಿಡ್ ಚಿಕಿತ್ಸೆಗೆ ಮೀಸಲಿಡಲಾಗಿದೆ. 500ಕ್ಕೂ ಅಧಿಕ ಹಾಸಿಗೆಗಳನ್ನು ಗುರುತಿಸಲಾಗಿದೆ. ಅಲ್ಲಿನ 40 ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆಗಳು ಹಾಗೂ 60 ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳು ಭರ್ತಿಯಾಗಿವೆ.



ವಿಕ್ಟೋರಿಯಾ ಆಸ್ಪತ್ರೆ

ಆಸ್ಪತ್ರೆಯಲ್ಲಿ 150 ಹಿರಿಯ ವೈದ್ಯರಿದ್ದಾರೆ. 50 ವರ್ಷ ಮೇಲ್ಪಟ್ಟ ಕಾರಣ ಅವರಲ್ಲಿ ಕೆಲವರಿಗೆ ಕೋವಿಡ್ ಸೇವೆಯಿಂದ ವಿನಾಯಿತಿ ನೀಡಲಾಗಿದೆ. ಇನ್ನುಳಿದವರು ಕೋವಿಡ್ ಸೇವೆಗೆ ನಿಯೋಜನೆಗೊಂಡರೂ ವಾರ್ಡ್‌ಗಳಿಗೆ ತೆರಳಿ, ರೋಗಿಗಳನ್ನು ಪರಿಶೀಲಿಸುತ್ತಿಲ್ಲ ಎಂದು ಕಿರಿಯ ವೈದ್ಯರು ಆರೋಪಿಸಿದ್ದಾರೆ.

ಮಾನಸಿಕ ಒತ್ತಡ: 'ಎರಡನೇ ಅಲೆಯಲ್ಲಿ ಹೆಚ್ಚಿನ ಸೋಂಕಿತರು ಗಂಭೀರವಾಗಿ ಅಸ್ವಸ್ಥರಾದ ಬಳಿಕ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಹೀಗಾಗಿ, ಅವರನ್ನು ನಿಭಾಯಿಸಲು ಹರಸಾಹಸ ಪಡಬೇಕಿದೆ. ಕೆಲಸದ ಒತ್ತಡ ಕೂಡ ಹೆಚ್ಚಳವಾಗಿದ್ದು, ಹಲವರು ಮಾನಸಿಕವಾಗಿ ಕುಗ್ಗುತ್ತಿದ್ದಾರೆ. ಹಿರಿಯ ವೈದ್ಯರು ಕೂಡ ಕೋವಿಡ್ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೆ ನಿರ್ವಹಣೆ ಅಷ್ಟು ಕಷ್ಟವಾಗುತ್ತಿರಲಿಲ್ಲ. ಈಗಾಗಲೇ ಎಲ್ಲ ವೈದ್ಯರು ಲಸಿಕೆ ಪಡೆದಿದ್ದಾರೆ. ಇಷ್ಟಾಗಿಯೂ ನಾನಾ ಕಾರಣಗಳನ್ನು ನೀಡಿ, ಕೋವಿಡ್ ಸೇವೆಯಿಂದ ವಿನಾಯಿತಿ ಪಡೆಯುತ್ತಿದ್ದಾರೆ' ಎಂದು ಕಿರಿಯ ವೈದ್ಯರೊಬ್ಬರು ತಿಳಿಸಿದರು.

'ಹಿರಿಯ ವೈದ್ಯರು ಆಸ್ಪತ್ರೆಗೆ ಬಂದರೂ ಕೋವಿಡ್ ವಾರ್ಡ್‌ಗಳಿಗೆ ಬರುತ್ತಿಲ್ಲ. ದೂರವಾಣಿ, ಆನ್‌ಲೈನ್ ಮೂಲಕವೇ ಕಿರಿಯ ವೈದ್ಯರಿಗೆ ಮಾರ್ಗದರ್ಶನ ನೀಡುತ್ತಾರೆ. ರೋಗಿಗಳಿಗೆ ತಜ್ಞ ವೈದ್ಯರ ಸೇವೆ ಸಿಗುತ್ತಿಲ್ಲ' ಎಂದು ಶುಶ್ರೂಷಕರೊಬ್ಬರು ಬೇಸರ ವ್ಯಕ್ತಪಡಿಸಿದರು.



50 ವರ್ಷ ಮೇಲ್ಪಟ್ಟ ಕೆಲ ವೈದ್ಯರಿಗೆ ಮಾತ್ರ ಕೋವಿಡ್ ಸೇವೆಯ ವಿನಾಯಿತಿ ನೀಡಲಾಗಿತ್ತು. ಉಳಿದ ಎಲ್ಲ ವೈದ್ಯರೂ ಕೋವಿಡ್ ವಾರ್ಡ್‌ಗಳಿಗೆ ತೆರಳಿ, ನಿರಂತರ ಸೇವೆ ನೀಡುತ್ತಿದ್ದಾರೆ

ಡಾ.ಸಿ.ಆರ್. ಜಯಂತಿ
ಬಿಎಂಸಿಆರ್‌ಐ ಡೀನ್

ಕಿರಿಯ ವೈದ್ಯರಿಗೆ ಮಾರ್ಗದರ್ಶನದ ಕೊರತೆ

'ಆಸ್ಪತ್ರೆಯಲ್ಲಿ 250 ಕಿರಿಯ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. 150 ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಕೋವಿಡ್ ಸೇವೆಗೆ ಬಳಸಿಕೊಳ್ಳಲಾಗಿದೆ. ಹಿರಿಯ ವೈದ್ಯರು ಕೋವಿಡ್ ವಾರ್ಡ್‌ಗಳಿಗೆ ತೆರಳುತ್ತಿಲ್ಲ. ಕೆಲವರು ಪಿಪಿಇ ಕಿಟ್ ಧರಿಸಿ, ವಾರ್ಡ್‌ಗಳಿಗೆ ಹೋದರೂ ರೋಗಿಗಳನ್ನು ತಪಾಸಣೆ ಮಾಡಿ, ಚಿಕಿತ್ಸೆ ನೀಡುತ್ತಿಲ್ಲ. ಕಿರಿಯ ವೈದ್ಯರಿಗೆ ಸೂಚನೆಗಳನ್ನು ಮಾತ್ರ ನೀಡುತ್ತಾರೆ' ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.

'ವಿಶ್ರಾಂತಿಗೂ ಅವಕಾಶ ಸಿಗುತ್ತಿಲ್ಲ'

'ಎಲ್ಲ ಆಸ್ಪತ್ರೆಗಳಲ್ಲಿ ಹಿರಿಯ ವೈದ್ಯರು ಕಿರಿಯ ವೈದ್ಯರಿಂದ ಕೋವಿಡ್ ಕೆಲಸ ಮಾಡಿಸುತ್ತಿದ್ದಾರೆ. ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಭಯದಲ್ಲಿ ಸೇವೆ ನೀಡುತ್ತಿದ್ದಾರೆ. ಇಲ್ಲವಾದಲ್ಲಿ ಅಂಕ ಕಡಿತ ಮಾಡುವ ಸಾಧ್ಯತೆ ಇರುತ್ತದೆ. ಸೂಕ್ತ ಸುರಕ್ಷಾ ಸಾಧನಗಳನ್ನು ಕೂಡ ಒದಗಿಸುತ್ತಿಲ್ಲ. ಸೋಂಕಿತರಾದಲ್ಲಿ ಕನಿಷ್ಠ 10 ದಿನ ವಿಶ್ರಾಂತಿಗೆ ಅವಕಾಶ ಕೂಡ ಸಿಗುತ್ತಿಲ್ಲ' ಎಂದು ಕರ್ನಾಟಕ ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ಯುವ ವೈದ್ಯರ ಸಂಘದ ಅಧ್ಯಕ್ಷ ಡಾ. ಭರತ್ ಕುಮಾರ್ ಬೇಸರ ವ್ಯಕ್ತಪಡಿಸಿದರು.

ಪ್ರತಿ 100 ಸೋಂಕಿತರಲ್ಲಿ 7ಕ್ಕೂ ಹೆಚ್ಚು ಮಂದಿ ಸಾವು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯಲ್ಲಿ ಸೋಂಕು ಪತ್ತೆ ಪ್ರಮಾಣಕ್ಕಿಂತ ಈ ರೋಗದಿಂದ ಸಾಯುತ್ತಿರುವವರ ಪ್ರಮಾಣವೇ ಹೆಚ್ಚಾಗಿದೆ. ನಗರದಲ್ಲಿ ಪ್ರತಿ 100 ಮಂದಿ ಸೋಂಕಿತರಲ್ಲಿ ಏಳಕ್ಕೂ ಅಧಿಕ ಮಂದಿ ಸಾವಿನ ಮನೆಯ ಕದ ತಟ್ಟುತ್ತಿದ್ದಾರೆ. ಜೂನ್ ತಿಂಗಳಲ್ಲಿ ಆರೇ ದಿನಗಳಲ್ಲಿ 1,529 ಮಂದಿ ಕೋವಿಡ್‌ನಿಂದ ಸತ್ತಿರುವುದು ವರದಿಯಾಗಿದೆ ಎಂದು ಬಿಬಿಎಂಪಿಯ ಅಧಿಕೃತ ಅಂಕಿ–ಅಂಶಗಳು ಹೇಳುತ್ತಿವೆ.

ಬಿಬಿಎಂಪಿ ಭಾನುವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ, ಸೊಂಕು ಪತ್ತೆ ದರ ಶೇ 5.46ಕ್ಕೆ ಇಳಿಕೆ ಕಂಡಿದೆ. ಆದರೆ, ಕೋವಿಡ್‌ನಿಂದ ಸತ್ತವರ ದರ ಶೇ 7.41ಕ್ಕೆ ಏರಿಕೆ ಕಂಡಿದೆ. 2021ರ ಏಪ್ರಿಲ್ ಆರಂಭದಲ್ಲಿ ಈ ದರವು ಕೇವಲ ಶೇ 0.37ರಷ್ಟಿತ್ತು. ಮೇ ತಿಂಗಳಲ್ಲಿ ನಗರದಲ್ಲಿ ಇದುವರೆಗೆ ಒಟ್ಟು 14,847 ಮಂದಿ ಕೋವಿಡ್‌ನಿಂದ ಅಸುನೀಗಿದ್ದಾರೆ.

'ಸೋಂಕು ಪತ್ತೆ ಪ್ರಮಾಣವು ಕುಸಿತ ಕಂಡಾಗ ಸಾಮಾನ್ಯವಾಗಿ ಈ ರೋಗದಿಂದ ಸಾಯುವವರ ದರ ಹೆಚ್ಚಳವಾಗುತ್ತದೆ. ಆದರೆ, ವಾಸ್ತವದಲ್ಲಿ ಕೋವಿಡ್‌ನಿಂದ ಸಾಯುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಈಗ ವರದಿಯಾದ ಸಾವುಗಳ ಸಂಖ್ಯೆಯಲ್ಲಿ 10– 15 ದಿನಗಳ ಹಿಂದೆಯೇ ಆಸ್ಪತ್ರೆಗೆ ದಾಖಲಾಗಿರುವವರು ಹೆಚ್ಚು. ಕೋವಿಡ್ ಪ್ರಕರಣಗಳು ಗಣನೀಯವಾಗಿ ಕಡಿಮೆ ಆಗಿರುವುದರಿಂದ ಕ್ರಮೇಣ ಈ ರೋಗದಿಂದ ಸಾಯುವವರ ದರವೂ ಕಡಿಮೆ ಆಗಲಿದೆ' ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಡಾ.ಬಿ.ಕೆ.ವಿಜಯೇಂದ್ರ ಅಭಿಪ್ರಾಯಪಟ್ಟರು.

'ಕೆಲವು ಆಸ್ಪತ್ರೆಗಳು ಕೋವಿಡ್ ಸಾವಿನ ಕುರಿತ ಮಾಹಿತಿಯನ್ನು ಅದೇ ದಿನ ಬಿಬಿಎಂಪಿಗೆ ನೀಡುತ್ತಿಲ್ಲ. ಮನೆಯಲ್ಲೇ ಪ್ರತ್ಯೇಕ ವಾಸಕ್ಕೆ ಒಳಗಾಗುವವರು ಕೊನೆಯುಸಿರೆಳೆದಾಗ ಅವರ ಕುಟುಂಬಸ್ಥರು ತಕ್ಷಣವೇ ಬಿಬಿಎಂಪಿಗೆ ಮಾಹಿತಿ ನೀಡುವುದಿಲ್ಲ. ಅಂತಹ ಸಾವಿನ ಪ್ರಕರಣಗಳು ತಡವಾಗಿ ವರದಿಯಾಗುತ್ತಿವೆ. ಆದರೆ, ಸಾವಿನ ಮಾಹಿತಿ ಖಚಿತಪಟ್ಟ ಬಳಿಕ ಆ ಅಂಕಿ–ಅಂಶಗಳನ್ನು ಬಿಬಿಎಂಪಿ ಪರಿಗಣಿಸುತ್ತದೆ. ಈ ಕಾರಣದಿಂದಾಗಿಯೂ ಸಾವಿದ ದರ ಹೆಚ್ಚು ಇರುವಂತೆ ತೋರುತ್ತದೆ' ಎಂದು ಅವರು ವಿವರಿಸಿದರು.



ಬಿಬಿಎಂಪಿಯ ಇನ್ನೊಬ್ಬ ಅಧಿಕಾರಿಯ ಪ್ರಕಾರ, ಕೋವಿಡ್‌ನಿಂದ ತೀವ್ರ ಉಸಿರಾಟದ ಸಮಸ್ಯೆ ಕಾಣಿಸಿಕೊಳ್ಳುವವರಿಗೆ ಚಿಕಿತ್ಸೆ ನೀಡಲು ತೀವ್ರ ನಿಗಾ ಘಟಕದಲ್ಲಿ (ಐಸಿಯು) ವೆಂಟಿಲೇಟರ್ ಸೌಲಭ್ಯ ಇರುವ ಹಾಸಿಗೆಗಳ ಕೊರತೆ ಇದ್ದಿದ್ದು ಕೂಡ ಕಾರಣ. '10 ದಿನಗಳ ಹಿಂದಿನವರೆಗೂ ಕೊರೊನಾ ಸೋಂಕಿತರ ಚಿಕಿತ್ಸೆಗೆ ಐಸಿಯುಗಳಲ್ಲಿ ಹಾಸಿಗೆಗಳ ಕೊರತೆ ತೀವ್ರವಾಗಿತ್ತು. ಈಗ ಸೊಂಕು ಪತ್ತೆ ಪ್ರಮಾಣ ಕಡಿಮೆಯಾಗಿದ್ದರಿಂದ ಈ ಸಮಸ್ಯೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ' ಎಂದರು.

'ಮನೆ ಆರೈಕೆ: ಸತ್ತವರ ಸಂಖ್ಯೆ 1,599ಕ್ಕೆ ಹೆಚ್ಚಳ'

ನಗರದಲ್ಲಿ ಮನೆಯಲ್ಲೇ ಪ್ರತ್ಯೇಕವಾಗಿದ್ದು ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿದ್ದ 778 ಮಂದಿ ಸಾವಿಗೀಡಾಗಿದ್ದಾರೆ ಎಂದು ಬಿಬಿಎಂಪಿ ಮೇ 21ರಂದು ಮಾಹಿತಿ ನೀಡಿತ್ತು. ಈಗ ಇಂತಹ ಸಾವುಗಳ ಪ್ರಮಾಣ ಮತ್ತಷ್ಟು ಏರಿಕೆಯಾಗಿದ್ದು, ಇದುವರೆಗೆ ಒಟ್ಟು 1,599 ಮಂದಿ ಮೃತಪಟ್ಟಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಬಿಡುಗಡೆ ಮಾಡಿರುವ ಅಂಕಿ–ಅಂಶಗಳಲ್ಲಿ ಈ ಮಾಹಿತಿ ಇದೆ. ಮನೆಯಿಂದ ಆಸ್ಪತ್ರೆಗೆ ದಾಖಲಿಸುವಷ್ಟರಲ್ಲಿ ಸತ್ತವರ ವಿವರಗಳನ್ನೂ ಇದು ಒಳಗೊಂಡಿದೆ. ಆದರೆ, ಜೂನ್ 2ರ ಬಳಿಕ ಇಂತಹ ಸಾವುಗಳು ವರದಿಯಾಗಿಲ್ಲ ಎಂದು ಅಧಿಕೃತ ಅಂಕಿ–ಅಂಶಗಳು ಹೇಳುತ್ತಿವೆ.

ಕೋವಿಡ್: ಸಾವಿರ ದರ, ಸೋಂಕು ಪತ್ತೆ ದರ

(ಎಂಟು ವಾರಗಳ ವಿವರ)

ದಿನಾಂಕ	ಸೋಂಕು ಪತ್ತೆ	ಸೋಂಕು ಪತ್ತೆ ದರ (ಶೇ)	ಸಾವಿನ ದರ (ಶೇ)
ಏ.11– ಏ.17	64,653	10.89	0.48
ಏ.18– ಏ.24	1,07,021	15.90	0.63
ಏ.25– ಮೇ 01	1,43,636	29.76	0.56
ಮೇ 02– ಮೇ 08	1,53,601	38.97	0.95
ಮೇ 09– ಮೇ 15	1,00,165	33.89	1.42
ಮೇ 16– ಮೇ 22	64,494	21.51	2.53
ಮೇ 23– ಮೇ 29	39,705	10.98	4.76
ಮೇ 30–ಜೂನ್ 05	23,883	5.46	7.41

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	17.39 ಕೋಟಿ	2.89 ಕೋಟಿ
ಸಕ್ರಿಯ ಪ್ರಕರಣ	1.32 ಕೋಟಿ	13.98 ಲಕ್ಷ
ಗುಣಮುಖ	15.68 ಕೋಟಿ	2.71 ಕೋಟಿ
ಸಾವು	37.40 ಲಕ್ಷ	3.49 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.00 ಲಕ್ಷ	1.00 ಲಕ್ಷ
ಗುಣಮುಖ	5.38 ಲಕ್ಷ	1.72 ಲಕ್ಷ
ಸಾವು	9,283	2,436

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)



65,471 ಬ್ರೆಜಿಲ್; 28,971 ಕೊಲಂಬಿಯಾ; 23,627 ಅರ್ಜೆಂಟಿನಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

54.88 ಅಮೆರಿಕ; 11.44 ಬ್ರೆಜಿಲ್; 3.60 ಅರ್ಜೆಂಟಿನಾ

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

1.00 ಲಕ್ಷ ಮಹಾರಾಷ್ಟ್ರ; 27,005 ತಮಿಳುನಾಡು; 24,591 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

58.31 ಮಹಾರಾಷ್ಟ್ರ; 26.33 ಕೇರಳ; 22.37 ಉತ್ತರ ಪ್ರದೇಶ

ಪ್ರಜಾವಾಣಿ ಗ್ರಾಫಿಕ್ಸ್

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

11,83,126 ಒಟ್ಟು ಸೋಂಕಿತರು (11,80,182 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
1,17,340	10,50,910	14,875

ಮಂಗಳವಾರದ ಏರಿಕೆ

ಹೊಸ ಪ್ರಕರಣ	2,944
ಗುಣಮುಖ	10,224
ಸಾವು	187

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

2 ತಿಂಗಳಲ್ಲಿ ಅತಿ ಕಡಿಮೆ ಹೊಸ ಪ್ರಕರಣಗಳು

ನವದೆಹಲಿ: 'ದೇಶದಲ್ಲಿ 1ಲಕ್ಷ ಹೊಸ ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಇದು 60 ದಿನಗಳಲ್ಲಿ ವರದಿಯಾದ ಅತಿ ಕಡಿಮೆ ಪ್ರಕರಣಗಳಾಗಿವೆ. ಇದರೊಂದಿಗೆ ದೈನಂದಿನ ಸೋಂಕು ದೃಢ ಪ್ರಮಾಣವು ಶೇಕಡ 5.62ಕ್ಕೆ ಇಳಿಕೆಯಾಗಿದೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಭಾನುವಾರ ತಿಳಿಸಿದೆ.

ಸ್ಪುಟ್ನಿಕ್ ವಿ: ಲಸಿಕೆ ವಿತರಣೆಗೆ ಮಣಿಪಾಲ್ ಆಸ್ಪತ್ರೆ ಒಪ್ಪಂದ



ಬೆಂಗಳೂರು: ಸ್ಪುಟ್ನಿಕ್ -ವಿ ಲಸಿಕೆ ವಿತರಣೆಯ ಸಂಬಂಧ ಮಣಿಪಾಲ್ ಆಸ್ಪತ್ರೆಗಳ ಸಮೂಹವು ಡಾ. ರೆಡ್ಡೀಸ್ ಲ್ಯಾಬೊರೇಟರೀಸ್ ಜತೆಗೆ ಒಪ್ಪಂದ ಮಾಡಿಕೊಂಡಿದೆ.

ನಗರದಲ್ಲಿ ಈ ಲಸಿಕೆ ವಿತರಣೆಗೆ ಭಾನುವಾರ ಚಾಲನೆ ದೊರೆತಿದ್ದು, ಮೊದಲ ಹಂತದಲ್ಲಿ ವಿಮಾನಯಾನದ ಸಿಬ್ಬಂದಿಗೆ ನೀಡಲಾಗುತ್ತಿದೆ. ಜೂನ್ ಮೂರನೇ ವಾರದ ಬಳಿಕ ಸಾರ್ವಜನಿಕರಿಗೆ ಈ ಲಸಿಕೆ ವಿತರಣೆ ಮಾಡುವುದಾಗಿ ಆಸ್ಪತ್ರೆ ಘೋಷಿಸಿದೆ.

'ಆಸ್ಪತ್ರೆಯಲ್ಲಿ ಈಗಾಗಲೇ ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆ ವಿತರಿಸಲಾಗುತ್ತಿದೆ. ಲಸಿಕೆ ವಿತರಣಾ ಅಭಿಯಾನಕ್ಕೆ ವೇಗ ನೀಡುವ ಸಂಬಂಧ ಸ್ಪುಟ್ನಿಕ್ -ವಿ ಲಸಿಕೆಯನ್ನೂ ಖರೀದಿಸಲಾಗಿದೆ. ಈ ಮೂಲಕ ಹೆಚ್ಚಿನ ಜನರಿಗೆ ಲಸಿಕೆ ಒದಗಿಸುವ ಗುರಿಯನ್ನು ಹೊಂದಿದ್ದೇವೆ. ಜನಸಾಮಾನ್ಯರಿಗೆ ಕೂಡ ಆದಷ್ಟು ಬೇಗ ನೂತನ ಲಸಿಕೆಯನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈ.ಲಿ.ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕಾರ್ತಿಕ್ ರಾಜಗೋಪಾಲ್ ತಿಳಿಸಿದ್ದಾರೆ.

'ಗೃಹ ಕಾರ್ಮಿಕರಿಗೆ ಹೆಚ್ಚಿನ ಪರಿಹಾರ ನೀಡಿ'

ಬೆಂಗಳೂರು: 'ಲಾಕ್‌ಡೌನ್‌ನಿಂದ ಗೃಹ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮನೆ ಕೆಲಸ ಮಾಡುವವರಿಗೆ ಹೆಚ್ಚಿನ ಪರಿಹಾರ ಮತ್ತು ಉಚಿತವಾಗಿ ಲಸಿಕೆ ವಿತರಿಸಬೇಕು' ಎಂದು ಒತ್ತಾಯಿಸಿ ಕರ್ನಾಟಕ ಗೃಹ ಕಾರ್ಮಿಕರ ಸಂಘವು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನವರಿಗೆ ಪತ್ರ ಬರೆದಿದೆ.

'ಸರ್ಕಾರವು ಗೃಹ ಕಾರ್ಮಿಕರಿಗೆ ₹2 ಸಾವಿರ ಪರಿಹಾರ ಘೋಷಿಸಿರುವುದು ಸ್ವಾಗತಾರ್ಹ. ಆದರೆ, ಗೃಹ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವವರಲ್ಲಿ ಹೆಚ್ಚಿನವರು ಮಹಿಳೆಯರು, ಅಲ್ಪಸಂಖ್ಯಾತರು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು. ಈಗ ಕೆಲಸವಿಲ್ಲದೆ ಕುಟುಂಬ ನಿರ್ವಹಣೆ ಕಷ್ಟವಾಗಿದೆ. ಪರಿಹಾರ ಮೊತ್ತ ಹೆಚ್ಚಿಸಿದರೆ ಅನುಕೂಲವಾಗುತ್ತದೆ' ಎಂದು ಸಂಘದ ಸಂಘಟನಾ ಕಾರ್ಯದರ್ಶಿ ಎಸ್. ಲೀಲಾವತಿ ಮನವಿ ಮಾಡಿದ್ದಾರೆ.

ಲಾಕ್‌ಡೌನ್: ಪಿಜಿ ಕಟ್ಟಡಗಳಿಗೆ ಬಾಗಿಲು

ಬೆಂಗಳೂರು: ಲಾಕ್‌ಡೌನ್ ಪರಿಣಾಮ ನಗರದ ಪೇಯಿಂಗ್ ಗೆಸ್ಟ್ (ಪಿಜಿ) ವಸತಿ ಕಟ್ಟಡಗಳು ಸ್ಥಗಿತಗೊಂಡಿವೆ. ಕೋವಿಡ್ ಕಾರಣದಿಂದ ಖಾಸಗಿ ಕಂಪನಿಗಳು ಉದ್ಯೋಗಿಗಳು ಮನೆಯಿಂದಲೇ ಕೆಲಸ ಮಾಡುತ್ತಿದ್ದು, ರಾಜಧಾನಿಯನ್ನು ತೊರೆದು ಸ್ವಂತ ಊರಿಗೆ ಹೋಗಿದ್ದಾರೆ. ಅಲ್ಲದೆ, ವಿದ್ಯಾರ್ಥಿಗಳು ಕೂಡ ಅವರ ಮನೆಯಿಂದಲೇ ತರಗತಿಗಳಿಗೆ ಹಾಜರಾಗುತ್ತಿದ್ದು, ಅವರೂ ಪಿಜಿಗಳನ್ನು ತೊರೆದಿದ್ದಾರೆ.

'ನಗರದಲ್ಲಿ ಸುಮಾರು 12 ಸಾವಿರ ಪಿಜಿ ಕಟ್ಟಡಗಳು ಇದ್ದವು. ಲಾಕ್‌ಡೌನ್ ಪರಿಣಾಮವನ್ನು ತಡೆದುಕೊಳ್ಳಲು 4 ಸಾವಿರ ಪಿಜಿಗಳಿಂದ ಮಾತ್ರ ಸಾಧ್ಯವಾಗಿದೆ. ಸುಮಾರು ಎಂಟು ಸಾವಿರ ಪಿಜಿ ಕಟ್ಟಡಗಳು ಶಾಶ್ವತವಾಗಿ ಸ್ಥಗಿತಗೊಂಡಿವೆ. ಇನ್ನೂ ಹಲವು ಮುಚ್ಚುವ ಸ್ಥಿತಿಯಲ್ಲಿವೆ' ಎಂದು ಪಿಜಿ ಕಟ್ಟಡಗಳ ಮಾಲೀಕರ ಸಂಘ ಹೇಳಿದೆ.

'ಪಿಜಿ ಕಟ್ಟಡಗಳನ್ನು ಮುಚ್ಚಬೇಕಾದ ಅನಿವಾರ್ಯತೆಯಿದ್ದು, ಕನಿಷ್ಠ 30 ಸಾವಿರ ಉದ್ಯೋಗಿಗಳು ಕೆಲಸ ಕಳೆದುಕೊಳ್ಳಲಿದ್ದಾರೆ' ಎಂದು ಸಂಘದ ಅಧ್ಯಕ್ಷ ಅಶೋಕ್‌ರಾಜ್ ಪಣಂಬೂರು 'ಪ್ರಜಾವಾಣಿ'ಗೆ ತಿಳಿಸಿದರು.

'ಪಿಜಿ ಕಟ್ಟಡಗಳಲ್ಲಿ ಗ್ರಾಹಕರು ಇಲ್ಲದಿದ್ದರೂ ಖರ್ಚು–ವೆಚ್ಚ ಅಷ್ಟೇ ಬರುತ್ತಿತ್ತು. ಕಟ್ಟಡದ ಬಾಡಿಗೆ, ನಿರ್ವಹಣಾ ವೆಚ್ಚ ಭರಿಸಲು ಸಾಧ್ಯವಾಗದೆ ಅನೇಕರು ಕಟ್ಟಡಗಳನ್ನು ಮುಚ್ಚುತ್ತಿದ್ದಾರೆ' ಎಂದು ಅವರು ಹೇಳಿದರು.

'ಸರ್ಕಾರದ ಆದೇಶದ ಪ್ರಕಾರವೇ ನಾವು ವ್ಯಾಪಾರ ಪರವಾನಗಿ ಪಡೆದು ಕಟ್ಟಡಗಳನ್ನು ನಡೆಸುತ್ತಿದ್ದೆವು. ಪರಿಣಾಮ, ಕೈಗಾರಿಕೆಗಳು ಅಥವಾ ವಾಣಿಜ್ಯ ಉದ್ದೇಶದ ಸಂಸ್ಥೆಗಳು ನೀಡುವಷ್ಟೇ ವಿದ್ಯುತ್ ಮತ್ತು ನೀರಿನ ಶುಲ್ಕವನ್ನು ನಾವೂ ನೀಡಬೇಕಾಗಿದೆ. ಆದರೆ, ಜನರಿಲ್ಲದೆ ಈಗ ಪಿಜಿ ನಡೆಸಲು ಆಗುತ್ತಿಲ್ಲ. ಬ್ಯಾಂಕ್‌ಗಳು ಕೂಡ ನಮಗೆ ಸಾಲ ನೀಡಲು ನಿರಾಕರಿಸುತ್ತವೆ' ಎಂದು ಪಿಜಿ ಕಟ್ಟಡವೊಂದರ ಮಾಲೀಕರೊಬ್ಬರು ಅಳಲು ತೋಡಿಕೊಂಡರು.

ರೈತರಿಗೆ ನೆರವಾದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ

ಕೋವಿಡ್: ಟನ್‌ಗಟ್ಟಲೆ ಹಣ್ಣು ಮಾರಾಟ

• ಮನೋಹರ್ ಎಂ.

ಬೆಂಗಳೂರು: ಕೋವಿಡ್ ಬಿಕ್ಕಟ್ಟಿನಿಂದಾಗಿ ಮಾರುಕಟ್ಟೆ ವ್ಯವಸ್ಥೆಯಿಲ್ಲದೆ ಪರದಾಡುತ್ತಿದ್ದ ಹಣ್ಣಿನ ಬೆಳೆಗಾರರಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘವು ಪರ್ಯಾಯ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ಮೂಲಕ ಟನ್‌ಗಟ್ಟಲೆ ಹಣ್ಣುಗಳ ಮಾರಾಟಕ್ಕೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ.


ನಾರಾಯಣ ಗೌಡ

ಬೆಲೆ ಕಾಣದೆ ತೋಟದಲ್ಲೇ ಕೊಳೆಯುತ್ತಿದ್ದ ದ್ರಾಕ್ಷಿ ಹಾಗೂ ಮಾವನ್ನು ಸಂಘದ ಸಹಕಾರದೊಂದಿಗೆ ಬೆಳೆಗಾರರೇ ನಗರದ ನಿವಾಸಿಗಳಿಗೆ ಮಾರಾಟ ಮಾಡುತ್ತಾ ಲಾಭ ಕಾಣುತ್ತಿದ್ದಾರೆ.

'ನಗರದ ಸೂಪರ್ ಮಾರ್ಕೆಟ್‌ಗಳು ಹಾಗೂ ಹಣ್ಣಿನ ಮಳಿಗೆಗಳಿಗೆ ತೋಟದಿಂದಲೇ ನೇರವಾಗಿ ತಲುಪುವ ಹಣ್ಣುಗಳು ಹೆಚ್ಚು ರುಚಿಯಾಗಿವೆ' ಎನ್ನುವುದು ಸಂಘದ ಸಹಕಾರದಿಂದ ಹಣ್ಣುಗಳನ್ನು ಖರೀದಿಸುತ್ತಿರುವ ಗ್ರಾಹಕರ ಮೆಚ್ಚುಗೆಯ ಮಾತು.

'ಬೆಂಗಳೂರಿಗೆ ಸಮೀಪದಲ್ಲೇ ಗುಣಮಟ್ಟದ ಹಣ್ಣುಗಳನ್ನು ಬೆಳೆಯಲಾಗುತ್ತದೆ. ಕೋವಿಡ್‌ನಿಂದಲೇ ನಮಗೂ ಈ ವಿಚಾರ ತಿಳಿಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ ಹಾಗೂ ಶಿಡ್ಲಘಟ್ಟ ಭಾಗಗಳಲ್ಲಿ ಗುಣಮಟ್ಟದ ದ್ರಾಕ್ಷಿ ಬೆಳೆಯುತ್ತಾರೆ. ಕೋವಿಡ್ ಮೊದಲನೇ ಅಲೆಯ ವೇಳೆ ಬೆಳೆಗಾರರಿಗೆ ಮಾರುಕಟ್ಟೆ ವ್ಯವಸ್ಥೆಯೇ ಸಿಕ್ಕಿರಲಿಲ್ಲ' ಎಂದು ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕೆ.ನಾರಾಯಣಗೌಡ ತಿಳಿಸಿದರು.

'ದೇವನಹಳ್ಳಿ ಸಮೀಪದ ದ್ರಾಕ್ಷಿ ತೋಟಗಳಿಗೆ ನಾವೇ ಖುದ್ದು ಭೇಟಿ ನೀಡಿ, ಅಲ್ಲಿ ಬೆಳೆಯಲಾಗಿದ್ದ ಅತ್ಯುತ್ತಮ ಗುಣಮಟ್ಟದ ದ್ರಾಕ್ಷಿ ಸವಿದು ಬೆರಗಾದೆವು. ದ್ರಾಕ್ಷಿ ಬೆಳೆಗಾರರು ಕೆ.ಜಿ.ಗೆ ₹10ರಂತೆ ಖರೀದಿಸಿದರೆ ಸಾಕು ಎಂಬಷ್ಟು ಅಸಹಾಯಕರಾಗಿದ್ದರು. ಲಾಕ್‌ಡೌನ್‌ನಿಂದ ಮನೆಯಲ್ಲೇ ಇದ್ದ ಸಹಕಾರ ನಗರದ ವಾಸಿಗಳಿಗೂ ಇದರ ಸವಿ ಉಣಬಡಿಸಿದೆವು. ಅಲ್ಲಿಂದ ಆರಂಭವಾದ ಮಾರಾಟದ ಪ್ರಯೋಗ ಇಂದು ನಗರದಾದ್ಯಂತ ಹಲವು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಿಗೆ ವಿಸ್ತರಣೆಯಾಗಿದೆ' ಎಂದರು.

'ಇಲ್ಲಿ ಬೆಳೆಯುವ ಹಣ್ಣುಗಳಲ್ಲಿ ಬಹುಪಾಲು ಬೇರೆ ರಾಜ್ಯಗಳಿಗೆ ಪೂರೈಕೆಯಾಗುತ್ತಿದ್ದ ಕಾರಣ ಬೆಂಗಳೂರಿನ ಜನರಿಗೆ ಇದರ ರುಚಿ ಸವಿಯಲು ಸಾಧ್ಯವಾಗಿರಲಿಲ್ಲ. ಸಂಘವೇ ಮುಂದೆ ನಿಂತು ಸಹಕಾರ ನಗರ ವ್ಯಾಪ್ತಿಯಲ್ಲಿ ರೈತರಿಗೆ ಮಾರುಕಟ್ಟೆ ಪ್ರಯೋಗ ನಡೆಸಿತು. ಮಾರಾಟಕ್ಕೆ ವಾಹನದ ವ್ಯವಸ್ಥೆಯನ್ನೂ ಮಾಡಿದೆವು. ಹಣ್ಣಿನ ಸವಿಗೆ ಮಾರುಹೋದ ಅಪಾರ್ಟ್‌ಮೆಂಟ್ ಸಮುಚ್ಚಯಗಳ ನಿವಾಸಿಗಳು, ಇಂದಿಗೂ ಬೆಳೆಗಾರರಿಂದಲೇ ನೇರವಾಗಿ ಹಣ್ಣುಗಳನ್ನು ಖರೀದಿಸುತ್ತಿದ್ದಾರೆ' ಎಂದು ವಿವರಿಸಿದರು.

ಮಾವು ಕಟಾವಿನ ತರಬೇತಿ: 'ಕೋವಿಡ್ ಎರಡನೇ ಅಲೆಯ ವೇಳೆ ಮಾವು ಬೆಳಗಾರರಿಗೂ ಸಂಘ ಮಾರುಕಟ್ಟೆ ಕಲ್ಪಿಸಿದೆ. ಗ್ರಾಹಕರಿಗೆ ಗುಣಮಟ್ಟದ ಮಾವು ತಲುಪಿಸುವ ಉದ್ದೇಶದಿಂದ ಸಂಘದ ವತಿಯಿಂದ ವೈಜ್ಞಾನಿಕವಾಗಿ ಮಾವು ಕಟಾವು ಮಾಡುವ ಹಾಗೂ ನೈಸರ್ಗಿಕವಾಗಿ ಹಣ್ಣನ್ನು ಮಾಗಿಸುವ ತರಬೇತಿಯನ್ನು ವಿಡಿಯೊಗಳ ಮೂಲಕ ನೀಡಲಾಗಿದೆ. ಮಾವಿಗೆ ಭಾರಿ ಬೇಡಿಕೆಯೂ ಸೃಷ್ಟಿಯಾಗಿದೆ' ಎಂದು ನಾರಾಯಣ ಗೌಡ ತಿಳಿಸಿದರು.

ವ್ಯಾಪಾರಕ್ಕೆ 'ವಾಟ್ಸ್‌ಆ್ಯಪ್' ವೇದಿಕೆ

'ರೈತರು ಬೆಳೆದ ಹಣ್ಣುಗಳನ್ನು ಗ್ರಾಹಕರಿಗೆ ತಲುಪಿಸಲು ಅನುಕೂಲವಾಗುವಂತೆ ಅಪಾರ್ಟ್‌ಮೆಂಟ್ ಸಮುಚ್ಚಯಗಳ ಕ್ಷೇಮಾಭಿವೃದ್ಧಿ ಸಂಘಗಳ ಹಾಗೂ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪದಾಧಿಕಾರಿಗಳ ವಾಟ್ಸ್‌ಆ್ಯಪ್ ಗುಂಪನ್ನು ರಚಿಸಲಾಗಿದೆ. ಮಾವಿನ ತಳಿ, ದರ ಹಾಗೂ ಮಾರಾಟಕ್ಕೆ ಲಭ್ಯವಿರುವ ಹಣ್ಣಿನ ಪ್ರಮಾಣವನ್ನು ಗುಂಪಿನಲ್ಲಿ ಹಂಚಿಕೊಳ್ಳಲಾಗುತ್ತದೆ. ಬೇಡಿಕೆ ಆಧರಿಸಿ ರೈತರು ಹಣ್ಣನ್ನು ಮಾರಾಟ ಮಾಡುತ್ತಾರೆ. ಮಾವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಲು ಇಚ್ಛಿಸುವವರು ದೂರವಾಣಿ ಸಂಖ್ಯೆ 9611567094, 9880325001 ಅಥವಾ alumniuasb83@gmail.com ಸಂಪರ್ಕಿಸಬಹುದು' ಎಂದು ' ಎಂದು ಸಂಘದ ಜಂಟಿ ಕಾರ್ಯದರ್ಶಿ, ಮಾವಿನ ವ್ಯಾಪಾರದ ಉಸ್ತುವಾರಿ ಎಸ್.ಚಂದ್ರಶೇಖರ್ ಮಾಹಿತಿ ನೀಡಿದರು.

900 ಟನ್ ದ್ರಾಕ್ಷಿ ಮಾರಾಟ

'ಸಂಘವು ಕೋವಿಡ್ ಮೊದಲ ಅಲೆ ವೇಳೆ ದ್ರಾಕ್ಷಿ ಬೆಳೆಗಾರರಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿತು. ಬೆಂಗಳೂರಿನ ನೆರೆಯ ಜಿಲ್ಲೆಗಳ 90ಕ್ಕೂ ಹೆಚ್ಚು ದ್ರಾಕ್ಷಿ ಬೆಳೆಗಾರರು ಸಂಘದ ಸಹಕಾರದೊಂದಿಗೆ ಕಳೆದ ಲಾಕ್‌ಡೌನ್ ವೇಳೆ 900 ಟನ್‌ಗಳಷ್ಟು ದ್ರಾಕ್ಷಿ ಮಾರಾಟ ಮಾಡಿದ್ದಾರೆ' ಎಂದು ಸಂಘದ ಎಂದು ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಎ.ಗೋಪಾಲ್ ತಿಳಿಸಿದರು.

'ರೈತರು ದ್ರಾಕ್ಷಿಯನ್ನು ಕೆ.ಜಿ.ಗೆ ₹55ರಿಂದ ₹80ವರೆಗೆ ಮಾರಾಟ ಮಾಡಿದರು. 250 ನಿವಾಸಿ ಸಂಘಗಳು ಬೆಳೆಗಾರರಿಂದ ನೇರವಾಗಿ ದ್ರಾಕ್ಷಿ ಖರೀದಿಸಿದ್ದವು. ಈ ವ್ಯವಸ್ಥೆಯಿಂದ ಬೆಳೆಗಾರರು ಈ ವರ್ಷವೂ ದ್ರಾಕ್ಷಿ ಮಾರಾಟ ಮಾಡುತ್ತಿದ್ದಾರೆ' ಎಂದರು.


ಕೃಷಿ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದ ಸಹಕಾರದಲ್ಲಿ ಗ್ರಾಹಕರಿಗೆ ಮಾವು ಮಾರಾಟ ಮಾಡುತ್ತಿರುವ ಬೆಳೆಗಾರ.

ತೋಟದಲ್ಲಿದ್ದ ಮಾವನ್ನು ವ್ಯಾಪಾರಿ ₹45 ಸಾವಿರಕ್ಕೆ ಕೇಳಿದ್ದರು. ಸಂಘದ ನೆರವಿನಿಂದ ಮಾವು ಮಾರಾಟ ಮಾಡಿ ₹1.5 ಲಕ್ಷ ಲಾಭ ಗಳಿಸಿದ್ದೇನೆ.

ಶ್ರೀನಾಥ್, ಮಾವು ಬೆಳೆಗಾರ, ಕೈವಾರ

ಅಂಕಿ–ಅಂಶ

60 ಟನ್
ಈವರೆಗೆ ಮಾರಾಟವಾಗಿರುವ ಮಾವು

75
ಮಾವು ಖರೀದಿಸುತ್ತಿರುವ ನಿವಾಸಿ ಸಂಘಗಳು

ಸುದ್ದಿ 2 ನಿಮಿಷ

ಬ್ಯಾಂಕ್ ಅವ್ಯವಹಾರ; ಠೇವಣಿದಾರರ ಆನ್‌ಲೈನ್ ಪ್ರತಿಭಟನೆ

ಬೆಂಗಳೂರು: ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಹಾಗೂ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್ ಅವ್ಯವಹಾರದಿಂದ ಹಣ ಕಳೆದುಕೊಂಡಿರುವ ಠೇವಣಿದಾರರು ಆನ್‌ಲೈನ್ ಮೂಲಕ ಭಾನುವಾರ ಪ್ರತಿಭಟನೆ ನಡೆಸಿದರು.

'ಫೇಸ್‌ಬುಕ್ ಖಾತೆಯಲ್ಲಿ ವಿಡಿಯೊ ಹರಿಬಿಟ್ಟಿದ್ದ ಠೇವಣಿದಾರರು, 'ಹಣ ದುರ್ಬಳಕೆ ಹಾಗೂ ಅವ್ಯವಹಾರ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳಿ. ನಮ್ಮ ಠೇವಣಿ ಹಣವನ್ನು ವಾಪಸು ಕೊಡಿಸಿ' ಎಂದು ಒತ್ತಾಯಿಸಿದರು.

'ರಾಜ್ಯ ಸರ್ಕಾರ, ಆರ್‌ಬಿಐ ಹಾಗೂ ಇತರೆ ಸಂಸ್ಥೆಗಳು ಬ್ಯಾಂಕ್ ವಹಿವಾಟು ಪರಿಶೀಲಿಸಿ, ಗ್ರಾಹಕರ ನಂಬಿಕೆಯ ಬ್ಯಾಂಕ್ ಎಂದು ಪ್ರಮಾಣ ಪತ್ರ ಸಮೇತ ಕೊಂಡಾಡಿದ್ದವು. ಅದನ್ನು ನಂಬಿ ಲಕ್ಷಾಂತರ ರೂಪಾಯಿ ಹಣವನ್ನು ಬ್ಯಾಂಕ್‌ನಲ್ಲಿ ಠೇವಣಿ ಇರಿಸಲಾಗಿತ್ತು. ಈಗ ಎಲ್ಲರೂ ಬೀದಿಗೆ ಬಂದಿದ್ದೇವೆ' ಎಂದೂ ಠೇವಣಿದಾರರು ಹೇಳಿದರು.

'ಸರ್ಕಾರಿ ನೌಕರರು, ನಿವೃತ್ತ ನೌಕರರು ಹಾಗೂ ಹಲವರು ಬ್ಯಾಂಕ್ ಠೇವಣಿದಾರರು. ನಿವೃತ್ತಿ ವೇತನ ಹಾಗೂ ಉಳಿತಾಯದ ಹಣವನ್ನೆಲ್ಲ ಬ್ಯಾಂಕ್‌ನಲ್ಲಿ ಠೇವಣಿ ಇರಿಸಿದ್ದರು. ಇದೀಗ ಹಣವನ್ನು ಕಳೆದುಕೊಂಡಿರುವ ಅವರೆಲ್ಲ ಹಾಸಿಗೆ ಹಿಡಿದಿದ್ದಾರೆ. ಆಸ್ಪತ್ರೆಗಳಿಗೆ ಅಲೆದಾಡುತ್ತಿದ್ದಾರೆ' ಎಂದರು.

ರ‍್ಯಾಪಿಡೊ: ಆರೈಕೆ ಕಿಟ್ ವಿತರಣೆ



ಬೆಂಗಳೂರು: ಕೊರೊನಾ ಸೇನಾನಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ, ಪೊಲೀಸ್ ಸಿಬ್ಬಂದಿ, ಪೌರ ಕಾರ್ಮಿಕರಿಗೆ ರ‍್ಯಾಪಿಡೊ ಸಂಸ್ಥೆಯು 10 ಸಾವಿರ ಕೋವಿಡ್ ಕೇರ್ ಕಿಟ್‌ಗಳನ್ನು ಉಚಿತವಾಗಿ ವಿತರಿಸಿದೆ.

ಬೆಂಗಳೂರು ಹಾಗೂ ದೆಹಲಿಯ ಎನ್‌ಸಿಆರ್ ಭಾಗದಲ್ಲಿ ಸಂಸ್ಥೆಯು ಈ ವಿತರಣಾ ಕಾರ್ಯಕ್ರಮ ಹಮ್ಮಿಕೊಂಡಿತ್ತು.

ರ‍್ಯಾಪಿಡೊ ಸಂಸ್ಥೆಯ ಸಹ ಸಂಸ್ಥಾಪಕ ಪವನ್ ಗುಂಟುಪಲ್ಲಿ,'ನಾಗರಿಕರ ಸುರಕ್ಷತೆಗಾಗಿ ಸಾವಿರಾರು ಮಂದಿ ಕೋವಿಡ್‌ನಂತಹ ತೀವ್ರತರ ಪರಿಸ್ಥಿತಿಯಲ್ಲೂ ಸೇವಾ ಮನೋಭಾವದೊಂದಿಗೆ ಕರ್ತವ್ಯದಲ್ಲಿ ಮುಂದುವರಿದಿದ್ದಾರೆ. ಇವರ ಸುರಕ್ಷತೆ ಹಾಗೂ ಆರೋಗ್ಯ ಕಾಪಾಡುವ ಉದ್ದೇಶದಿಂದ ಕೋವಿಡ್ ಕೇರ್ ಕಿಟ್ ವಿತರಣಾ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ' ಎಂದರು.

'ನಗರದ ತಾವರೆಕೆರೆ ಹಾಗೂ ಆಡುಗೋಡಿಯ ಪಾಲಿಕೆ ಆರೋಗ್ಯ ಕೇಂದ್ರ, ವಿಲ್ಸನ್ ಗಾರ್ಡನ್‌ನ ಅಗಡಿ ಆಸ್ಪತ್ರೆ ಹಾಗೂ ಸಂಶೋಧನಾ ಸಂಸ್ಥೆಯ ಸಿಬ್ಬಂದಿ, ಎಸ್‌ಎಸ್‌ಆರ್ ಬಡಾವಣೆ, ಜಯನಗರ, ಬಿಟಿಎಂ ಬಡಾವಣೆ, ಕೋರಮಂಗಲ ಭಾಗಗಳಲ್ಲಿ ಚೆಕ್‌ಪಾಯಿಂಟ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಹಾಗೂ ಪೌರಕಾರ್ಮಿಕರಿಗೆ ಮುಖಗವಸು, ಸ್ಯಾನಿಟೈಸರ್, ಆಹಾರ ಹಾಗೂ ಪಾನೀಯ ಒಳಗೊಂಡ ಕಿಟ್‌ಗಳನ್ನು ವಿತರಿಸಲಾಯಿತು' ಎಂದರು.



ನಗರದ ವಿಶ್ವೇಶ್ವರಯ್ಯ ಬಡಾವಣೆಯ ಮುದ್ದಿನಪಾಳ್ಯ ಮುಖ್ಯರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಾರ್ಮಿಕರು ಕುಡಿಯುವ ನೀರಿನ ಪೈಪ್‌ಗಳನ್ನು ಅಳವಡಿಸುತ್ತಿರುವುದು ಶುಕ್ರವಾರ ಕಂಡುಬಂತು– ಪ್ರಜಾವಾಣಿ ಚಿತ್ರ

ತಾಜಾ ಹಣ್ಣುಗಳ ಸಾಗಾಟ

ಬೆಂಗಳೂರು: ಕಂಟೈನರ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ ಸಹಯೋಗದಲ್ಲಿ ಐಜಿ ಇಂಟರ್‌ನ್ಯಾಷನಲ್ ಪ್ರೈ.ಲಿಮಿಟೆಡ್ ನಗರಗಳ ನಡುವೆ ತಾಜಾ ಹಣ್ಣುಗಳ ಸಾಗಾಣಿಕೆ ಆರಂಭಿಸಿದೆ.

'ತ್ವರಿತವಾಗಿ ಮತ್ತು ಸಮರ್ಥವಾಗಿ ಆಹಾರ ಉತ್ಪನ್ನಗಳನ್ನು ದೇಶದ ನಾಗರಿಕರಿಗೆ ತಲುಪಿಸುವಲ್ಲಿ ಮತ್ತಷ್ಟು ಹತ್ತಿರವಾಗಿದ್ದೇವೆ. ನಮ್ಮ ರೈಲು ಜಾಲದ ಮೂಲಕ ರೆಫ್ರಿಜರೇಟೆಡ್ ಕಂಟೈನರ್‌ಗಳ ಮೂಲಕ ರೈತರು ಬೆಳೆದ ತಾಜಾ ಉತ್ಪನ್ನಗಳನ್ನು ಸರಬರಾಜು ಮಾಡಲಾಗುತ್ತಿದೆ.' ಎಂದು ಸಂಸ್ಥೆ ಹೇಳಿದೆ.

'ಮಕ್ಕಳು, ಯುವಜನತೆ ಹೆಚ್ಚಿನ ಸಕ್ಕರೆ ಅಂಶ ಇರುವ ಪಾನೀಯಗಳಿಗೆ ಮಾರುಹೋಗುತ್ತಿದ್ದಾರೆ. ಇದರಿಂದ ಅವರ ಬೆಳವಣಿಗೆ ಕುಂಠಿತವಾಗುತ್ತಿದೆ. ಈ ಸಮಸ್ಯೆಗೆ ಪರಿಹಾರವಾಗಿ ತಾಜಾ ಉತ್ಪನ್ನಗಳ ಲಭ್ಯತೆ ಮತ್ತು ಪೌಷ್ಟಿಕಾಂಶಯುಕ್ತ ಆಹಾರಗಳ ಅಗತ್ಯತೆಯಿದೆ' ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ರಸ್ತೆ ಕಾಮಗಾರಿ ಸ್ಥಳದಲ್ಲಿ ಘಟನೆ • ಆರು ಮಂದಿ ಕೆಲಸಗಾರರಿಗೆ ಗಾಯ

ವಿಮಾನ ನಿಲ್ದಾಣದ ಬಳಿ ಸ್ಫೋಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಬಳಿ ರಸ್ತೆ ಕಾಮಗಾರಿ ಸ್ಥಳದಲ್ಲಿ ಭಾನುವಾರ ಸ್ಫೋಟ ಸಂಭವಿಸಿದ್ದು, ಆರು ಮಂದಿ ಕೆಲಸಗಾರರು ಗಾಯಗೊಂಡಿದ್ದಾರೆ.

'ಅವಿನಾಶ್, ಸಿರಾಜ್, ಪ್ರಶಾಂತ್, ಗೌತಮ್, ಅಜಯ್‌ಕುಮಾರ್ ಹಾಗೂ ನಾಗೇಶ್ ರಾವ್ ಗಾಯಗೊಂಡವರು. ಸಿರಾಜ್ ಹಾಗೂ ಅವಿನಾಶ್ ಅವರ ದೇಹದ ಶೇ 40ರಷ್ಟು ಭಾಗ ಸುಟ್ಟಿದ್ದು, ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ. ಎಲ್ಲರನ್ನೂ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಿಲ್ದಾಣದ ವಿಸ್ತರಣೆ ಹಾಗೂ ಎರಡನೇ ಟರ್ಮಿನಲ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಜೊತೆಗೆ, ನಿಲ್ದಾಣ ವ್ಯಾಪ್ತಿಯ ಜಾಗದಲ್ಲಿ ಹೊಸ ರಸ್ತೆ ನಿರ್ಮಿಸಲಾಗುತ್ತಿದೆ. ಟರ್ಮಿನಲ್ ಹಾಗೂ ರಸ್ತೆಗೆ ಸಂಚಾರ ಸಂಕೇತಗಳ ಬಿಳಿ ಬಣ್ಣದ ಪಟ್ಟಿಗಳನ್ನು ಹಾಕುವ ಕೆಲಸ ಕೆಲ ದಿಗಳಿಂದ ನಡೆಯುತ್ತಿತ್ತು. ಕೆಳ ಸೇತುವೆಯಲ್ಲೇ ಬಣ್ಣ, ರಾಸಾಯನಿಕ ಡಬ್ಬಿ ಹಾಗೂ ಇತರೆ ಸಲಕರಣೆಗಳನ್ನು ಇರಿಸಲಾಗಿತ್ತು.'

'ಭಾನುವಾರ ಕೆಲಸಕ್ಕೆ ಹಾಜರಾಗಿದ್ದ ಕೆಲಸಗಾರರು, ಕೆಳ ಸೇತುವೆಯಲ್ಲಿ ಸೇರಿದ್ದರು. ರಸ್ತೆಗೆ ಬಳಿಯಬೇಕಾದ ಬಣ್ಣವನ್ನು ರಾಸಾಯನಿಕದ ಜೊತೆ ಮಿಶ್ರಣ ಮಾಡಿ ಸಿಲಿಂಡರ್ ಬಳಸಿ ಕಾಯಿಸುತ್ತಿದ್ದರು. ಇದೇ ಸಂದರ್ಭದಲ್ಲೇ ಏಕಾಏಕಿ ಸ್ಫೋಟ ಸಂಭವಿಸಿ ಬೆಂಕಿ ಹೊತ್ತಿಕೊಂಡಿತ್ತು. ಕೆಲ ಕ್ಷಣಗಳಲ್ಲೇ ಬೆಂಕಿ ಕೆನ್ನಾಲಗೆ ಇಡೀ ಕೆಳ ಸೇತುವೆ ಆವರಿಸಿತ್ತು' ಎಂದು ಮೂಲಗಳು ಹೇಳಿವೆ.

'ಬೆಂಕಿ ಹಾಗೂ ಕೆಲಸಗಾರರ ಚೀರಾಟ ಕೇಳಿ ಭದ್ರತಾ ಸಿಬ್ಬಂದಿ ಸ್ಥಳಕ್ಕೆ ಬಂದಿದ್ದರು. ಕಾರ್ಮಿಕರನ್ನು ರಕ್ಷಿಸಿ ಆಸ್ಪತ್ರೆಗೆ ಕಳುಹಿಸಿದರು. ನಿಲ್ದಾಣದ ಅಗ್ನಿಶಾಮಕ ಸಿಬ್ಬಂದಿ, ಎರಡೂವರೆ ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಎರಡನೇ ಟರ್ಮಿನಲ್ ಕಾಮಗಾರಿ ಆರಂಭವಾಗಿ 3–4 ವರ್ಷವಾಗಿದ್ದು, ಇದೇ ಮೊದಲ ಬಾರಿಗೆ ದೊಡ್ಡ ಪ್ರಮಾಣದಲ್ಲಿ ಬೆಂಕಿ ಅವಘಡ ಸಂಭವಿಸಿದೆ. ಈ ಬಗ್ಗೆ ಪ್ರತಿಕ್ರಿಯೆ ನೀಡಲು ನಿಲ್ದಾಣದ ಆಡಳಿತ ಮಂಡಳಿ ಪ್ರತಿನಿಧಿಗಳು ಸಂಪರ್ಕಕ್ಕೆ ಸಿಗಲಿಲ್ಲ.


ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಬಳಿ ರಸ್ತೆಯ ಕೆಳಸೇತುವೆಯಲ್ಲಿ ಭಾನುವಾರ ಸ್ಫೋಟ ಸಂಭವಿಸಿ ಬೆಂಕಿ ಹೊತ್ತಿ ಉರಿಯಿತು

'ಯುಆರ್‌ಸಿ' ಕಂಪನಿ ವಿರುದ್ಧ ದೂರು

'ರಸ್ತೆ ಮೇಲೆ ಸಂಚಾರ ಸಂಕೇತ ಪಟ್ಟಿ ಹಾಕುವ ಕೆಲಸವನ್ನು ಗುತ್ತಿಗೆ ಪಡೆದಿದ್ದ ಯುಆರ್‌ಸಿ ಕನ್‌ಸ್ಟ್ರಕ್ಷನ್ ಕಂಪನಿ, ಬೇರೆಯವರಿಗೆ ಉಪ ಗುತ್ತಿಗೆ ನೀಡಿ ಕೆಲಸ ಮಾಡಿಸುತ್ತಿತ್ತು. ಕೆಲಸದ ಸ್ಥಳದಲ್ಲಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ್ದ ಆರೋಪದಡಿ ಕಂಪನಿ ಆಡಳಿತ ಮಂಡಳಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕೆಲಸ ಮಾಡಿಸುತ್ತಿದ್ದ ಮೇಲ್ವಿಚಾರಕನ ಸಂಬಂಧಿಯೂ ಗಾಯಗೊಂಡಿದ್ದಾರೆ. ಎಲ್ಲರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ನಂತರ ವೈದ್ಯರ ಸಲಹೆ ಪಡೆದು ಗಾಯಾಳುಗಳ ಹೇಳಿಕೆ ಪಡೆಯಲಾಗುವುದು' ಎಂದೂ ತಿಳಿಸಿದರು.

ಸಚಿವ ಸಿ.ಸಿ. ಪಾಟೀಲ ಬೆಂಗಾವಲು ವಾಹನಕ್ಕೆ ಲಾರಿ ಡಿಕ್ಕಿ

ಹಿರಿಯೂರು: ತಾಲ್ಲೂಕಿನ ಗುಯಿಲಾಳು ಟೋಲ್ ಸಮೀಪದ ಆತಿಥ್ಯ ಹೋಟೆಲ್ ಬಳಿ ಭಾನುವಾರ ವಾರ್ತಾ ಸಚಿವ ಸಿ.ಸಿ. ಪಾಟೀಲ ಅವರ ಬೆಂಗಾವಲು ವಾಹನಕ್ಕೆ ಲಾರಿ ಡಿಕ್ಕಿಯಾಗಿದ್ದು, ವಾಹನದ ಬಾನೆಟ್ ಜಖಂ ಆಗಿದೆ.

ಸಚಿವರು ಬೆಳಗಾವಿಯಿಂದ ಬೆಂಗಳೂರಿಗೆ ಪ್ರಯಾಣ ಮಾಡುತ್ತಿರುವಾಗ ಬೆಂಗಾವಲು ವಾಹನಕ್ಕೆ ಲಾರಿ ಡಿಕ್ಕಿ ಹೊಡೆದಿದೆ. ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಇನ್ನೊಂದು ಬೆಂಗಾವಲು ವಾಹನದ ವ್ಯವಸ್ಥೆ ಮಾಡಿ ಸಚಿವರನ್ನು ಕಳುಹಿಸಿಕೊಡಲಾಗಿದೆ. ಹಿರಿಯೂರಿನ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಬ್ಬರ ಬಂಧನ • ಪ್ರಮುಖ ಆರೋಪಿಗಾಗಿ ಪೊಲೀಸರ ಹುಡುಕಾಟ

ಅಪಹರಣ: ಹಣ ಕೊಡದಿದ್ದಕ್ಕೆ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಗೋಡಿ ಠಾಣೆ ವ್ಯಾಪ್ತಿಯಲ್ಲಿ ಹತ್ತು ವರ್ಷದ ಬಾಲಕನನ್ನು ಅಪಹರಿಸಿ ಹತ್ಯೆ ಮಾಡಲಾಗಿದ್ದು, ಈ ಸಂಬಂಧ ಇಬ್ಬರು ಆರೋಪಿಗಳನ್ನು ಛತ್ತೀಸಗಡದ ರಾಯಪುರದಲ್ಲಿ ಬಂಧಿಸಲಾಗಿದೆ. ಪ್ರಮುಖ ಆರೋಪಿ ಎನ್ನಲಾದ ಬಿಹಾರದ ವ್ಯಕ್ತಿ ತಲೆಮರೆಸಿಕೊಂಡಿದ್ದಾನೆ.

'ಹೆಬ್ಬಗೋಡಿ ಬಳಿಯ ಶಿಕಾರಿಪಾಳ್ಯ ನಿವಾಸಿ ಮಹಮ್ಮದ್ ಅಬ್ಬಾಸ್ ಅವರ 5ನೇ ಪುತ್ರ ಆಸೀಫ್ ಆಲಂ ಎಂಬಾತನನ್ನು ಜೂನ್ 3ರಂದು ಅಪಹರಿಸಲಾಗಿತ್ತು. ಬಾಲಕನ ಬಿಡುಗಡೆಗಾಗಿ ₹ 25 ಲಕ್ಷಕ್ಕೆ ಆರೋಪಿಗಳು ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಅಬ್ಬಾಸ್ ಠಾಣೆಗೆ ದೂರು ನೀಡಿದ್ದರು. ಇದು ಗೊತ್ತಾಗುತ್ತಿದ್ದಂತೆ ಆರೋಪಿಗಳು ಬಾಲಕನನ್ನು ಹತ್ಯೆ ಮಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಕರಣದ ತನಿಖೆ ಕೈಗೊಂಡಿದ್ದ ವಿಶೇಷ ತಂಡ ರಾಯಪುರಕ್ಕೆ ಹೋಗಿ, ಅಲ್ಲಿಯ ನಿವಾಸಿಗಳಾದ ಮೊಹಮ್ಮದ್ ನೌಶಾದ್ ಹಾಗೂ ಸಿರಾಜ್ ಎಂಬಾತನನ್ನು ಬಂಧಿಸಿದೆ. ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿ ಆರೋಪಿಗಳನ್ನು ನಗರಕ್ಕೆ ಕರೆತರುತ್ತಿದೆ' ಎಂದೂ ತಿಳಿಸಿವೆ.

ಮದುವೆಗೆ ಹಣ ಹೊಂದಿಸಲು ಕೃತ್ಯ: 'ಪ್ರಕರಣದ ಪ್ರಮುಖ ಆರೋಪಿ, ಬಿಹಾರದವ. ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ಹೆಬ್ಬಗೋಡಿಯಲ್ಲಿ ಸಿಸಿಟಿವಿ ಕ್ಯಾಮೆರಾ ನಿರ್ವಹಣೆ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ. ತನ್ನ ಮದುವೆಗೆ ಹಣ ಹೊಂದಿಸಲು ಸಂಬಂಧಿಕರ ಜೊತೆ ಸೇರಿ ಕೃತ್ಯ ಎಸಗಿದ್ದ.

ಅಪರಾಧ ಸುದ್ದಿ

ಸದ್ಯ ಆತ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಾಲಕನ ತಂದೆ ಮೊಹಮ್ಮದ್ ಅಬ್ಬಾಸ್, ಕಟ್ಟಡ ನಿರ್ಮಾಣ ಕೆಲಸದ ಮೇಲ್ವಿಚಾರಕರು. ಸ್ವಂತ ಮನೆ ಕಟ್ಟಿಕೊಂಡು ಮಕ್ಕಳ ಜೊತೆ ವಾಸವಿದ್ದರು. ಅವರ ಮನೆ ಬಳಿಯೇ ಪ್ರಮುಖ ಆರೋಪಿ ನೆಲೆಸಿದ್ದ. ಬಾಲಕನನ್ನು ನಿತ್ಯವೂ ನೋಡುತ್ತಿದ್ದ ಆರೋಪಿ, ಆತನನ್ನು ಅಪಹರಿಸಿ ತಂದೆಯನ್ನು ಬೆದರಿಸಿ ಹಣ ಪಡೆಯಲು ಸಂಚು ರೂಪಿಸಿದ್ದ' ಎಂದೂ ಮೂಲಗಳು ತಿಳಿಸಿವೆ.

ಹೆಬ್ಬಗೋಡಿಯಲ್ಲಿ ಅಪಹರಿಸಿ, ಜಿಗಣಿಯಲ್ಲಿ ಕೊಲೆ: 'ಪ್ರಮುಖ ಆರೋಪಿ, ಹೆಬ್ಬಗೋಡಿ ಠಾಣೆ ವ್ಯಾಪ್ತಿಯಲ್ಲಿ ಬಾಲಕನನ್ನು ಅಪಹರಿಸಿದ್ದ. ರಾಯಪುರದಲ್ಲಿದ್ದ ಸಂಬಂಧಿಕರಾದ ಮೊಹಮ್ಮದ್ ನೌಶಾದ್ ಹಾಗೂ ಮೊಹಮ್ಮದ್ ಸಿರಾಜ್‌ಗೆ ಕರೆ ಮಾಡಿ, 'ಬಾಲಕನ ತಂದೆಗೆ ಕರೆ ಮಾಡಿ ಹಣ ಕೇಳಿ. ಹಣ ಕೊಟ್ಟ ನಂತರ ನಾನು ಬಾಲಕನನ್ನು ಬಿಡುತ್ತೇನೆ' ಎಂದಿದ್ದ. ಅದರಂತೆ ಅವರಿಬ್ಬರು, ರಾಯಪುರದಿಂದಲೇ ಬಾಲಕನ ತಂದೆಗೆ ಕರೆ ಮಾಡಿ ₹ 25 ಲಕ್ಷ ಕೇಳಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕರೆ ಬರುತ್ತಿದ್ದಂತೆ ಠಾಣೆಗೆ ಬಂದಿದ್ದ ಬಾಲಕನ ತಂದೆ, ಆರೋಪಿಗಳ ಮೊಬೈಲ್ ನಂಬರ್ ಸಹಿತ ದೂರು ನೀಡಿದ್ದರು. ಮೊಬೈಲ್ ನೆಟ್‌ವರ್ಕ್ ಪರಿಶೀಲಿಸಿದಾಗ ರಾಯಪುರದಿಂದ ಕರೆ ಬಂದಿರುವುದು ಗೊತ್ತಾಗಿತ್ತು. ಅದೇ ಆಧಾರದಲ್ಲಿ ರಾಯಪುರಕ್ಕೆ ಹೋದ ತಂಡ ಆರೋಪಿಗಳನ್ನು ಬಂಧಿಸಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ದೂರು ನೀಡಿದ ಸಂಗತಿ ತಿಳಿಯುತ್ತಿದ್ದಂತೆ ಪ್ರಮುಖ ಆರೋಪಿ, ಬಾಲಕನನ್ನು ಜಿಗಣಿ ಠಾಣೆ ವ್ಯಾಪ್ತಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಂದಿದ್ದಾನೆ. ಆತನ ಜೊತೆ ಮತ್ತಷ್ಟು ಆರೋಪಿಗಳು ಕೃತ್ಯದಲ್ಲಿ ಭಾಗಿಯಾಗಿರುವ ಅನುಮಾನವಿದೆ' ಎಂದೂ ಮೂಲಗಳು ಹೇಳಿವೆ.

ಮೀನು ಮಳಿಗೆ ಷಟರ್ ಮೀಟಿ ಕಳವು

ಬೆಂಗಳೂರು: ಕೋಣನಕುಂಟೆ ಠಾಣೆ ವ್ಯಾಪ್ತಿಯ ಮೀನು ಮಾರಾಟ ಮಳಿಗೆಯೊಂದರ ಷಟರ್ ಮೀಟಿ ಒಳ ನುಗ್ಗಿದ್ದ ಕಳ್ಳರು, ಹಣದ ಬಾಕ್ಸ್ ಕದ್ದೊಯ್ದಿದ್ದಾರೆ.

'ಜೆ.ಪಿ. ನಗರದ 8ನೇ ಹಂತದಲ್ಲಿರುವ 'ಮಲ್ಪೆ ಫಿಶರೀಸ್' ಮಳಿಗೆಯಲ್ಲಿ ಕಳ್ಳತನ ನಡೆದಿದೆ. ಆರೋಪಿಗಳ ಕೃತ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಮಳಿಗೆ ಮಾಲೀಕ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಗರದಲ್ಲಿ ಲಾಕ್‌ಡೌನ್ ಜಾರಿಯಲ್ಲಿದ್ದು, ಬೆಳಿಗ್ಗೆ ಮಾತ್ರ ಮಳಿಗೆ ತೆರೆಯಲು ಅವಕಾಶವಿದೆ. ವ್ಯಾಪಾರ ಮುಗಿಸಿದ್ದ ಕೆಲಸಗಾರರು, ಮಳಿಗೆಗೆ ಬೀಗ ಹಾಕಿಕೊಂಡು ಹೋಗಿದ್ದರು. ಶನಿವಾರ ರಾತ್ರಿ ಮಳಿಗೆ ಷಟರ್ ಮೀಟಿ ಒಳ ನುಗ್ಗಿದ್ದ ಆರೋಪಿಗಳು, ಹಣದ ಬಾಕ್ಸ್ ಸಮೇತ ಕದ್ದುಕೊಂಡು ಪರಾರಿಯಾಗಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಮನೆಗೆ ನುಗ್ಗಿ ವೃದ್ಧೆ ಸರ ಕಿತ್ತೊಯ್ದು

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ನುಗ್ಗಿದ್ದ ಕಳ್ಳನೊಬ್ಬ, ವೃದ್ಧೆಯ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾನೆ.

'ಲೇಔಟ್‌ನ 18ನೇ ಅಡ್ಡರಸ್ತೆಯ ಮನೆಯೊಂದರಲ್ಲಿ ಸರೋಜಿನಿ (86) ಎಂಬುವವರು ವಾಸವಿದ್ದಾರೆ. ಅವರು ಒಬ್ಬಂಟಿಯಾಗಿದ್ದ ವೇಳೆ ಹಗಲಿನಲ್ಲೇ ಕಳ್ಳ ಮನೆಯೊಳಗೆ ನುಗ್ಗಿ ಕೃತ್ಯ ಎಸಗಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಂಕಿ ಟೋಪಿ ಹಾಕಿಕೊಂಡಿದ್ದ ಕಳ್ಳ, ಮನೆಯಲ್ಲಿ ಕುಳಿತಿದ್ದ ವೃದ್ಧೆ ಕುತ್ತಿಗೆಗೆ ಕೈ ಹಾಕಿ ಸರ ಕಿತ್ತುಕೊಂಡಿದ್ದ. ನಂತರ ವೃದ್ಧೆಯನ್ನು ತಳ್ಳಿ ಓಡಿ ಹೋಗಿದ್ದಾನೆ.' 'ಮನೆ ಹಾಗೂ ವೃದ್ಧೆ ಒಂಟಿಯಾಗಿರುವುದನ್ನು ತಿಳಿದುಕೊಂಡಿದ್ದವರೇ ಕೃತ್ಯ ಎಸಗಿರುವ ಸಾಧ್ಯತೆ ಇದೆ. ಕಳ್ಳನಿಗಾಗಿ ಶೋಧ ಮುಂದುವರಿದಿದೆ' ಎಂದೂ ಮೂಲಗಳು ತಿಳಿಸಿವೆ.

ಸಂಸದರ ಹೆಸರಿನಲ್ಲಿ ಚುಚ್ಚುಮದ್ದು ಮಾರಾಟ; ಬಂಧನ

ಬೆಂಗಳೂರು: ಸಂಸದ ತೇಜಸ್ವಿ ಸೂರ್ಯ ಕಚೇರಿ ಸಿಬ್ಬಂದಿ ಎಂಬುದಾಗಿ ಸುಳ್ಳು ಹೇಳಿಕೊಂಡು ರೆಮ್‌ಡಿಸಿವಿರ್ ಚುಚ್ಚುಮದ್ದು ಮಾರಾಟ ಮಾಡುತ್ತಿದ್ದ ಆರೋಪದಡಿ ಚೇತನ್ (26) ಎಂಬಾತನನ್ನು ಜಯನಗರ ಪೊಲೀಸರು ಬಂಧಿಸಿದ್ದಾರೆ.

'ಅಗ್ರಹಾರ ದಾಸರಹಳ್ಳಿ ನಿವಾಸಿ ಚೇತನ್, ಸ್ಥಳೀಯ ವಾರ್‌ರೂಮ್‌ನಲ್ಲಿ ಕೆಲಸ ಮಾಡುತ್ತಿದ್ದ. ಸಂಸದ ತೇಜಸ್ವಿ ಸೂರ್ಯ ಹೆಸರು ಬಳಸಿಕೊಂಡು ಚುಚ್ಚುಮದ್ದು ಮಾರುತ್ತಿದ್ದ. ಈ ಬಗ್ಗೆ ಸಂಸದ ಕಚೇರಿಯ ಆಪ್ತ ಸಹಾಯಕ ಭಾನುಪ್ರಕಾಶ್ ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ಭಾನುಪ್ರಕಾಶ್ ಅವರ ಪರಿಚಯಸ್ಥರೊಬ್ಬರಿಗೆ ಕರೆ ಮಾಡಿದ್ದ ಆರೋಪಿ ಚೇತನ್, 'ನಾನು ತೇಜಸ್ವಿ ಸೂರ್ಯ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಿಮ್ಮ ಕೋವಿಡ್ ರೋಗಿ ಚಿಕಿತ್ಸೆಗೆ ರೆಮ್‌ಡಿಸಿವಿರ್ ಚುಚ್ಚುಮದ್ದು ಅಗತ್ಯವಿದೆ. ₹ 10,000 ಕೊಟ್ಟರೆ ಚುಚ್ಚುಮದ್ದು ವ್ಯವಸ್ಥೆ ಮಾಡುತ್ತೇನೆ' ಎಂದಿದ್ದ.'

'ವಿಷಯ ತಿಳಿದ ಭಾನುಪ್ರಕಾಶ್ ಸಹ ಆರೋಪಿಗೆ ಕರೆ ಮಾಡಿ ಮಾತನಾಡಿದ್ದರು. ಅವರ ಬಳಿಯೂ ಆರೋಪಿ, ಸಂಸದರ ಕಚೇರಿ ಸಿಬ್ಬಂದಿ ಎಂದೇ ಮಾತನಾಡಿದ್ದ. ಹೆಸರು ಕೇಳಿದಾಗ, ಶಿವಲಿಂಗಯ್ಯ ಎಂದಿದ್ದ' ಎಂದೂ ಪೊಲೀಸರು ತಿಳಿಸಿದರು.

ಗ್ರಾ.ಪಂ: ₹ 30.04 ಕೋಟಿ ಬಿಡುಗಡೆ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕೆ ಗ್ರಾಮ ಪಂಚಾಯಿತಿಗಳಿಗೆ ತಲಾ ₹ 50 ಸಾವಿರದಂತೆ ನೀಡಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ (ಎಸ್‌ಡಿಆರ್‌ಎಫ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ₹ 30.04 ಕೋಟಿ ಶನಿವಾರ ಬಿಡುಗಡೆ ಮಾಡಲಾಗಿದೆ.

ರಾಜ್ಯದ 6,009 ಗ್ರಾಮ ಪಂಚಾಯಿತಿಗಳಿಗೆ ಹಂಚಿಕೆ ಮಾಡಲು ಈ ಮೊತ್ತ ಬಿಡುಗಡೆ ಮಾಡಲಾಗಿದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕೋವಿಡ್ ಆರೈಕೆ ಕೇಂದ್ರ ಸ್ಥಾಪಿಸಿ, ಮನೆ ಆರೈಕೆಗೆ ಸೌಲಭ್ಯ ಇಲ್ಲದ ಕೊರೊನಾ ಸೋಂಕಿತರಿಗೆ ಈ ಕೇಂದ್ರಗಳಲ್ಲಿ ಸೌಲಭ್ಯ ಕಲ್ಪಿಸಬೇಕು. ಸೋಂಕಿತರಿಗೆ ಊಟ, ಹಾಸಿಗೆ, ಸ್ವಚ್ಛತಾ ಸಿಬ್ಬಂದಿ ಇನ್ನಿತರ ಕೆಲಸಗಳ ವೆಚ್ಚಕ್ಕೆ ಈ ಹಣ ಬಳಸುವಂತೆ ಆದೇಶದಲ್ಲಿ ಸೂಚಿಸಲಾಗಿದೆ.


ಸುಂದರೀಕರಣ ಕಾಮಗಾರಿ
ಬಿಬಿಎಂಪಿಯು ಸ್ಯಾಂಕಿ ಕೆರೆಯ ಸುಂದರೀಕರಣ ಕಾಮಗಾರಿ ನಡೆಯುತ್ತಿರುವುದು ಶನಿವಾರ ಕಂಡುಬಂತು – ಪ್ರಜಾವಾಣಿ ಚಿತ್ರ

ಮಕ್ಕಳ ಚಿಕಿತ್ಸೆ ಸಿದ್ಧತೆಯ ಮಾಹಿತಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮೂರನೇ ಅಲೆಯ ಕಾರಣ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಲ್ಲೂಕು ಆಸ್ಪತ್ರೆಗಳು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಮಕ್ಕಳ ಚಿಕಿತ್ಸೆಗೆ ಮಾಡಿಕೊಂಡ ವ್ಯವಸ್ಥೆಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ತಜ್ಞರ ಸಮಿತಿ ಮುಂದಾಗಿದೆ. 'ಮಕ್ಕಳ ಚಿಕಿತ್ಸೆ ವಿಭಾಗವನ್ನು ಬಲಪಡಿಸಬೇಕು' ಎಂದು ಸಮಿತಿ ಸಲಹೆ ನೀಡಿದೆ.

ಕೋವಿಡ್ ಮೂರನೇ ಅಲೆಯು ಮಕ್ಕಳಿಗೆ ಅಪಾಯವನ್ನು ಉಂಟು ಮಾಡುವ ಸಾಧ್ಯತೆ ಇರುವ ಕಾರಣ ಸರ್ಕಾರವು ಡಾ. ದೇವಿಪ್ರಸಾದ್ ಶೆಟ್ಟಿ ನೇತೃತ್ವದಲ್ಲಿ 13 ಮಂದಿ ಒಳಗೊಂಡ ತಜ್ಞರ ಸಮಿತಿ ರಚಿಸಿದೆ. ಈ ಸಮಿತಿಯ ಸದಸ್ಯರು ಈಗಾಗಲೇ ಮೂರು ಪ್ರಾಥಮಿಕ ಸಭೆಗಳನ್ನು ನಡೆಸಿದ್ದಾರೆ.

'ಮೂರನೇ ಅಲೆಯಲ್ಲಿ ಮಕ್ಕಳಿಗೆ ಸೋಂಕು ತಗಲುವ ಸಾಧ್ಯತೆ ಇರುವ ಕಾರಣ ಮಕ್ಕಳ ವಿಭಾಗವನ್ನು ಎಲ್ಲ ಆಸ್ಪತ್ರೆಗಳಲ್ಲಿ ಬಲಗೊಳಿಸಬೇಕಿದೆ. ಅಳವಡಿಸಿಕೊಳ್ಳುವ ವೈದ್ಯಕೀಯ ಸೌಲಭ್ಯಗಳು ಮೂರನೇ ಅಲೆಗೆ ಮಾತ್ರ ಸೀಮಿತವಾಗಬಾರದು. ಭವಿಷ್ಯದಲ್ಲೂ ಮಕ್ಕಳ ಚಿಕಿತ್ಸೆಗೆ ನೆರವಾಗುವಂತಿರಬೇಕು. ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದಂತೆ ಈಗಿನ ಮಾರ್ಗಸೂಚಿ ಜತೆಗೆ ಕೆಲವೊಂದು ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕು. ಮಕ್ಕಳಿಗೆ ಲಸಿಕೆ ಒದಗಿಸಲೂ ಕ್ರಮ ಕೈಗೊಳ್ಳಬೇಕಿದೆ' ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ ಎಂದು ಮೂಲಗಳು ತಿಳಿಸಿವೆ.

'ಮಳೆ ಆರಂಭವಾಗಿರುವ ಕಾರಣ ಡೆಂಗಿ, ಮಲೇರಿಯಾ ಸೇರಿದಂತೆ ವಿವಿಧ ಸಾಂಕ್ರಾಮಿಕ ರೋಗಗಳು ಮಕ್ಕಳನ್ನು ಕಾಡುವ ಸಾಧ್ಯತೆ ಇರುತ್ತದೆ. ಈ ನಡುವೆ, ಕೋವಿಡ್ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ವರದಿಯಾದಲ್ಲಿ ಆರೋಗ್ಯ ಸೇವೆ ಒದಗಿಸುವುದು ಕಷ್ಟವಾಗುತ್ತದೆ. ಹಾಗಾಗಿ, ಸಮಗ್ರ ವೈದ್ಯಕೀಯ ಸೌಲಭ್ಯ ಒದಗಿಸಲು ಬೇಕಾದ ವ್ಯವಸ್ಥೆಯನ್ನು ಸಜ್ಜುಗೊಳಿಸಬೇಕು' ಎಂದು ಸಮಿತಿಯ ಸದಸ್ಯರೊಬ್ಬರು ಅಭಿಪ್ರಾಯ ವ್ಯಕ್ತಪಡಿಸಿದರು.

ತರಬೇತಿ ಪಡೆಯುತ್ತಿದ್ದ ಪೊಲೀಸ್ ಸಾವು

ಪ್ರಜಾವಾಣಿ ವಾರ್ತೆ

ಐಮಂಗಲ (ಹಿರಿಯೂರು): ತಾಲ್ಲೂಕಿನ ಐಮಂಗಲ ಪೊಲೀಸ್ ತರಬೇತಿ ಶಾಲೆಯಲ್ಲಿ ತರಬೇತಿ ಪಡೆಯುತ್ತಿದ್ದ ಪ್ರಶಿಕ್ಷಣಾರ್ಥಿಯೊಬ್ಬರು ಹೃದಯಾಘಾತದಿಂದ ಶನಿವಾರ ರಾತ್ರಿ ಮೃತಪಟ್ಟಿದ್ದಾರೆ.

ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ಮದ್ದೂರು ಗ್ರಾಮದ ಶರಣಪ್ಪ ಸಣ್ಣಗೌಡ (27) ಮೃತಪಟ್ಟವರು. ಶನಿವಾರ ಸಂಜೆ ತಮ್ಮ ಬ್ಯಾರಕ್ ಕೊಠಡಿಯಲ್ಲಿ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದಾಗ ಹೃದಯಾಘಾತವಾಗಿ ಅವರು ಕುಸಿದುಬಿದ್ದಿದ್ದರು. ತಕ್ಷಣ ಚಿತ್ರದುರ್ಗದ ಬಸವೇಶ್ವರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ.


ಶರಣಪ್ಪ ಸಣ್ಣಗೌಡ

ಬೆಂಗಳೂರಿನ ವಿವೇಕನಗರ ಠಾಣೆಯಲ್ಲಿ ಕಾನ್‌ಸ್ಟೆಬಲ್ ಆಗಿ ಡಿಸೆಂಬರ್ ತಿಂಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದರು. ಎಂಟು ತಿಂಗಳ ಬುನಾದಿ ತರಬೇತಿಗಾಗಿ ನಾಲ್ಕು ತಿಂಗಳಿಂದ ಐಮಂಗಲದ ಪೊಲೀಸ್ ತರಬೇತಿ ಶಾಲೆಯಲ್ಲಿ ಪ್ರಶಿಕ್ಷಣಾರ್ಥಿಯಾಗಿದ್ದರು.

ಐಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಆಡಾಡತಾ ಆಯುಷ್ಯ' 19 ತಾಸುಗಳ ವಾಚನ

ಧಾರವಾಡ: ಗಿರೀಶ ಕಾರ್ನಾಡರ ಪುಣ್ಯಸ್ಮರಣೆ (ಜೂನ್ 10)ಯ ದಿನದಂದು ಅವರ 'ಆಡಾಡತಾ ಆಯುಷ್ಯ' ಕೃತಿಯನ್ನು 52 ಜನ ನಿರಂತರವಾಗಿ ಓದುವ ಕಾರ್ಯಕ್ರಮವನ್ನು ಇಲ್ಲಿನ ಅಭಿನಯ ಭಾರತಿ ರಂಗಸಂಸ್ಥೆಯು ಆಯೋಜಿಸಿದೆ.

'ಸಂಸ್ಥೆಯ ಫೇಸ್‌ಬುಕ್ ಪುಟ (abhinay bharati ಅಭಿನಯ ಭಾರತಿ theatre group)ದಲ್ಲಿ ಜೂನ್ 10ರಂದು ಬೆಳಿಗ್ಗೆ 6ಕ್ಕೆ ಆರಂಭವಾಗಲಿರುವ ಈ ಓದು, ರಾತ್ರಿ 1ಕ್ಕೆ ಮುಗಿಯುವ ಸಾಧ್ಯತೆ ಇದೆ.' ಎಂದು ಸಂಸ್ಥೆಯ ಅಧ್ಯಕ್ಷ ಅರವಿಂದ ಕುಲಕರ್ಣಿ ತಿಳಿಸಿದ್ದಾರೆ.

'ಮಲ ಸ್ವಚ್ಛತೆಗೆ ಯಂತ್ರ ಬಳಕೆ–ಸರ್ಕಾರ ನಿರುತ್ಸಾಹ'

ಬೆಂಗಳೂರು:'ಮಲ ಸ್ವಚ್ಛತೆಗೆ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಬಳಕೆ ಮಾಡಿದರೆ, ಮಲದ ಗುಂಡಿಗೆ ಇಳಿದು ಪ್ರಾಣ ಕಳೆದುಕೊಳ್ಳುತ್ತಿರುವವರ ಪ್ರಮಾಣ ಕ್ರಮೇಣ ಕಡಿಮೆಯಾಗಲಿದೆ. ಆದರೆ, ಸರ್ಕಾರಗಳು ಇದಕ್ಕೆ ಸಿದ್ಧವಿಲ್ಲ' ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ಎಂದು ಬೇಸರ ವ್ಯಕ್ತಪಡಿಸಿದರು.

ಬಂಡಾಯ ಸಾಹಿತ್ಯ ಸಂಘಟನೆ ಹಾಗೂ ದಲಿತ ಹಕ್ಕುಗಳ ಸಮಿತಿ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ 'ಕೊರೊನಾ ಕಂಬನಿಯ ಕುಯಿಲು' ಸರಣಿಯಲ್ಲಿ ದಲಿತರ ಸ್ಥಿತಿಗತಿ ಕುರಿತು ಮಾತನಾಡಿದರು.

'ಮಲಸ್ವಚ್ಛಗೊಳಿಸುವವರು ಪ್ರತಿ ಬಾರಿ ಪ್ರಾಣ ಕಳೆದುಕೊಂಡಾಗಲೂ ಆ ವಿಚಾರವನ್ನು ಸರ್ಕಾರಗಳ ಮುಂದೆ ಇಡುತ್ತೇನೆ. ಆದರೆ, ಮುಂದೇನು ಮಾಡುವುದು? ಎಂದು ನನಗೇ ಮರುಪ್ರಶ್ನೆ ಮಾಡುತ್ತಾರೆ' ಎಂದರು.

'ಕೋವಿಡ್‌ನಿಂದ ಕೆಲಸ ಕಳೆದುಕೊಂಡಿರುವ ಅನೇಕರು ಹಳ್ಳಿಗಳತ್ತ ತೆರಳಿದ್ದಾರೆ. ಈ ವೇಳೆ ಗ್ರಾಮೀಣ ಭಾಗಗಳಲ್ಲಿ ಉದ್ಯೋಗ ಸೃಷ್ಟಿಸಬೇಕು. ಇದರಿಂದ ನಗರದತ್ತ ವಲಸೆ ನಿಯಂತ್ರಣಕ್ಕೆ ಬರಲಿದೆ. ' ಎಂದರು.

ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್ ವಾದ) ಸಂಚಾಲಕ ಮಾವಳ್ಳಿ ಶಂಕರ್,'ರಾಮನಗರದ ಮ್ಯಾನ್‌ಹೋಲ್ ದುರಂತದಲ್ಲಿ ಮೂವರು ಮೃತಪಟ್ಟ ಘಟನೆ ಖಂಡನೀಯ. ಇಷ್ಟೆಲ್ಲಾ ಆಧುನಿಕ ತಂತ್ರಜ್ಞಾನಗಳು ಬಂದರೂ ಇದೇ ಸ್ಥಿತಿ ಮುಂದುವರಿದಿದೆ. ವಿಶ್ವಗುರುವಾದ ಮೋದಿ ಅವರು ಏನು ಮಾಡುತ್ತಿದ್ದಾರೋ ತಿಳಿಯುತ್ತಿಲ್ಲ' ಎಂದರು.

ದಲಿತ ಹಕ್ಕುಗಳ ಸಮಿತಿಯ ಯು. ಬಸವರಾಜ, 'ಕೊರೊನಾ ಪರಿಸ್ಥಿತಿ ನಿಯಂತ್ರಣಕ್ಕೆ ಬರುವವರೆಗೆ ಸರ್ಕಾರ ಬಡವರು ಹಾಗೂ ದಲಿತರಿಗೆ ತಿಂಗಳಿಗೆ ₹10 ಸಾವಿರ ಸಹಾಯಧನ ವಿತರಿಸಬೇಕು' ಎಂದು ಆಗ್ರಹಿಸಿದರು.

ಸಾಹಿತಿ ಬರಗೂರು ರಾಮಚಂದ್ರಪ್ಪ ಹಾಗೂ ಇತರರು ಭಾಗವಹಿಸಿದ್ದರು.

ಲಾಕ್‌ಡೌನ್: ತೆವಳುತ್ತಾ ಸಾಗುತ್ತಿದ್ದ ರಸ್ತೆ ಕಾಮಗಾರಿಗೆ ಚುರುಕು

ಸ್ಮಾರ್ಟ್ ಸಿಟಿ: ಗಡುವಿನೊಳಗೆ ಮುಗಿದೀತೇ ಕಾಮಗಾರಿ?

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಲಾಕ್‌ಡೌನ್‌ನಿಂದ ನಗರದ ಜನತೆ ತರಹೇವಾರಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸದಾ ವಾಹನಗಳಿಂದ ಗಿಜಿಗುಡುತ್ತಿದ್ದ ರಸ್ತೆಗಳಲ್ಲೂ ಬೆರಳೆಣಿಕೆಯಷ್ಟೇ ವಾಹನಗಳು ಓಡಾಡುತ್ತಿವೆ. ಲಾಕ್‌ಡೌನ್‌ನಿಂದ ಇತರರಿಗೆ ಏನೇ ಸಮಸ್ಯೆ ಆಗಿರಬಹುದು. ಆದರೆ, ಇದರಿಂದ ಪ್ರಯೋಜನ ಪಡೆದಿದ್ದು ಮಾತ್ರ ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆ.

ನಗರದ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ ಸದಾ ಗಿಜಿಗುಡುವ ರಸ್ತೆಗಳಲ್ಲಿ ಕಾಮಗಾರಿಗಳನ್ನು ಅತ್ತ ಸರಾಗವಾಗಿ ನಡೆಸಲೂ ಆಗದೇ, ಇತ್ತ ವಾಹನ ಸಂಚಾರ ಮಾರ್ಗವನ್ನೂ ಮಾರ್ಪಾಡು ಮಾಡಲೂ ಆಗದೇ ಹೈರಾಣಾಗಿದ್ದ ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆ ಲಾಕ್‌ಡೌನ್ ಸಂದರ್ಭದ ವಿರಳ ವಾಹನ ಸಂಚಾರದ ಅನುಕೂಲವನ್ನು ಬಳಸಿಕೊಂಡು ರಸ್ತೆ ಅಭಿವೃದ್ಧಿ ಕಾಮಗಾರಿಗಳ ವೇಗ ಹೆಚ್ಚಿಸಿದೆ. ಸದಾ ತೆವಳುತ್ತಾ ಸಾಗುತ್ತಿದ್ದ ಸ್ಮಾರ್ಟ್ ಸಿಟಿ ಯೋಜನೆಯ ರಸ್ತೆ ಕಾಮಗಾರಿಗಳು ಒಂದೂವರೆ ತಿಂಗಳಿನಿಂದ ಜಾರಿಯಲ್ಲಿರುವ ಲಾಕ್‌ಡೌನ್ ಸಂದರ್ಭದಲ್ಲಿ ಸ್ವಲ್ಪ ಚುರುಕಿನಿಂದ ನಡೆದಿವೆ.

ಸ್ಮಾರ್ಟ್ ಸಿಟಿ ಯೋಜನೆ ಅಡಿ ಕೈಗೆತ್ತಿಕೊಳ್ಳಲಾದ ಒಟ್ಟು 36 ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಲ್ಲಿ 32 ಕಾಮಗಾರಿಗಳು ಅನುಷ್ಠಾನಗೊಳ್ಳುತ್ತಿವೆ. ಅವುಗಳಲ್ಲಿ ಒಂಬತ್ತು ಕಾಮಗಾರಿಗಳು ಪೂರ್ಣಗೊಂಡಿವೆ. 12 ರಸ್ತೆ ಕಾಮಗಾರಿಗಳನ್ನು ಜೂನ್ ತಿಂಗಳ ಅಂತ್ಯದೊಳಗೆ ಪೂರ್ಣಗೊಳಿಸುವ ಹುಮ್ಮಸ್ಸಿನಲ್ಲಿದೆ ಸ್ಮಾರ್ಟ್ ಸಿಟಿ ಸಂಸ್ಥೆ. ಇನ್ನುಳಿದ ಕಾಮಗಾರಿಗಳನ್ನು ಜುಲೈನಲ್ಲಿ ಪೂರ್ಣಗೊಳಿಸಲು ಸಂಸ್ಥೆಯು ಸಿದ್ಧತೆ ಮಾಡಿಕೊಂಡಿದೆ.

ಕೊರೊನಾ ಮೊದಲ ಅಲೆಯ ಸಂದರ್ಭದಲ್ಲಿ ನಗರದಲ್ಲಿ ಲಾಕ್‌ಡೌನ್ ಜಾರಿಗೊಳಿಸಿದ್ದಾಗ ಕಾಮಗಾರಿಗಳನ್ನು ನಡೆಸುವುದಕ್ಕೂ ಸರ್ಕಾರ ಅನುಮತಿ ನೀಡಿರಲಿಲ್ಲ. ಹಾಗಾಗಿ ಎರಡು ತಿಂಗಳು ಕಾಮಗಾರಿಗಳು ಸಂಪೂರ್ಣ ಸ್ಥಗಿತಗೊಂಡಿದ್ದವು. ನಂತರ ಅಭಿವೃದ್ಧಿ ಕಾಮಗಾರಿಗಳನ್ನು ಮುಂದುವರಿಸಲು ಸರ್ಕಾರ ಅನುಮತಿ ನೀಡಿತಾದರೂ, ಅಷ್ಟರಲ್ಲಿ ಬಹುತೇಕ ಕಾರ್ಮಿಕರು ನಗರವನ್ನು ತೊರೆದಿದ್ದರು. ಹಾಗಾಗಿ ಕಳೆದ ಲಾಕ್‌ಡೌನ್ ಸಂದರ್ಭದಲ್ಲಿ ವಾಹನ ಸಂಚಾರ ವಿರಳವಾಗಿದ್ದ ಪರಿಸ್ಥಿತಿಯ ಪ್ರಯೋಜನವನ್ನು ಪಡೆಯಲು ಸಂಸ್ಥೆಗೆ ಸಾಧ್ಯವಾಗಿರಲಿಲ್ಲ.

ಆದರೆ, ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಜಾರಿಗೊಂಡ ಲಾಕ್‌ಡೌನ್ ವೇಳೆ ಹಾಗಾಗಲಿಲ್ಲ. ಲಾಕ್‌ಡೌನ್ ಜಾರಿಯಲ್ಲಿದ್ದಾಗಲೂ ಅಭಿವೃದ್ಧಿ ಕಾಮಗಾರಿಗಳನ್ನು ಮುಂದುವರಿಸುವುದಕ್ಕೆ ಸರ್ಕಾರ ಅನುವು ಮಾಡಿಕೊಟ್ಟಿತು. ಹಾಗಾಗಿ ರಾಜಭವನ ರಸ್ತೆ, ಕಮರ್ಷಿಯಲ್ ಸ್ಟ್ರೀಟ್, ಅರಮನೆ ರಸ್ತೆ, ಕ್ವೀನ್ಸ್ ರಸ್ತೆ, ಬ್ರಿಗೇಡ್ ರಸ್ತೆಯಂತಹ ಸದಾ ವಾಹನ ದಟ್ಟಣೆಯಿಂದ ಕೂಡಿರುವ ರಸ್ತೆಗಳಲ್ಲೂ ಸ್ಮಾರ್ಟ್ ಸಿಟಿ ಕಾಮಗಾರಿಯನ್ನು ತ್ವರಿತವಾಗಿ ಜಾರಿಗೊಳಿಸಲು ಸಂಸ್ಥೆಯೂ ಸಿದ್ಧತೆ ಮಾಡಿಕೊಂಡಿತು.



ಪಿ.ರಾಜೇಂದ್ರ ಚೋಳನ್

'ಉನ್ನತ ಅಧಿಕಾರಿಗಳು ಮುತುವರ್ಜಿ ವಹಿಸಿ ಲಾಕ್‌ಡೌನ್ ಸಂದರ್ಭದಲ್ಲೂ ಸ್ಮಾರ್ಟ್‌ಸಿಟಿ ಕಾಮಗಾರಿ ಮುಂದುವರಿಸುವುದಕ್ಕೆ ಅನುಮತಿ ನೀಡಿದರು. ಅದಕ್ಕೆ ಪೂರಕವಾಗಿ ನಾವು ಕಾಮಗಾರಿಗೆ ಅಗತ್ಯವಿರುವ ಕಾರ್ಮಿಕರ ಓಡಾಟಕ್ಕೆ ವಿಶೇಷ ವಾಹನ ವ್ಯವಸ್ಥೆ ಮಾಡಿದೆವು. ಪೊಲೀಸ್ ಇಲಾಖೆಯವರೂ ಸಹಕಾರ ನೀಡಿದರು. ಸರಕುಗಳ ಹಾಗೂ ಪರಿಕರ ಸಾಗಾಟಕ್ಕೂ ವಿಶೇಷ ಅನುಮತಿ ಪಡೆದುಕೊಂಡಿದ್ದೆವು. ಹಾಗಾಗಿ ಲಾಕ್‌ಡೌನ್ ಅವಧಿಯಲ್ಲಿ ಸಂಚಾರ ದಟ್ಟಣೆ ಇಲ್ಲದ ಸಂದರ್ಭ ಬಳಸಿಕೊಂಡು ಬಹುತೇಕ ರಸ್ತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದೆವು' ಎಂದು ಬೆಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್‌ನ ಹಿರಿಯ ಎಂಜಿನಿಯರ್ ಒಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಕಾರ್ಮಿಕರೆಲ್ಲರಿಗೂ ಕೋವಿಡ್ ಲಸಿಕೆ ಹಾಕಿಸಿದ್ದೆವು. ಅವರು ಎಲ್ಲ ರೀತಿಯ ಸುರಕ್ಷತಾ ಕ್ರಮಗಳನ್ನು ಪಾಲಿಸಿ ಕೆಲಸದಲ್ಲಿ ನಿರತರಾಗಿದ್ದರು. ಅವರಿಗೆ ಊಟ ಹಾಗೂ ಉಪಾಹಾರವನ್ನು ಕಾಮಗಾರಿಯ ಸ್ಥಳಕ್ಕೆ ಪೂರೈಸಲು ವ್ಯವಸ್ಥೆ ಮಾಡಿದ್ದೆವು' ಎಂದು ಅವರು ಮಾಹಿತಿ ನೀಡಿದರು.

'ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೆತ್ತಿಕೊಂಡಿರುವ ಬಹುತೇಕ ರಸ್ತೆ ಕಾಮಗಾರಿಗಳಲ್ಲಿ ಶೇ 75ರಷ್ಟು ಪ್ರಮುಖ ಕಾಮಗಾರಿಗಳು ಪೂರ್ಣಗೊಂಡಿವೆ. ಇನ್ನು ಕೆಲವು ಕಡೆ ಅಂತಿಮ ಸ್ಪರ್ಶ ನೀಡುವ ಸಣ್ಣಪುಟ್ಟ ಕೆಲಸಗಳು ಬಾಕಿ ಇವೆ' ಎಂದು ಅವರು ತಿಳಿಸಿದರು.

ಮಿಲ್ಲರ್ಸ್ ರಸ್ತೆ, ಬೌರಿಂಗ್ ರಸ್ತೆ ಕಾಮಗಾರಿಗಳು ಜುಲೈನಲ್ಲಿ ಅಥವಾ ಆಗಸ್ಟ್‌ನಲ್ಲಿ ಪೂರ್ಣಗೊಳಿಸುವುದಾಗಿ ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆಯ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಅವೆನ್ಯೂ ರಸ್ತೆಯ ಕಾಮಗಾರಿ ಈಗಲೂ ಚುರುಕುಗೊಂಡಂತಿಲ್ಲ. ಲಾಕ್‌ಡೌನ್ ತೆರವುಗೊಳ್ಳುತ್ತಿದ್ದಂತೆಯೇ ಇಲ್ಲಿ ಜನದಟ್ಟಣೆ ಮತ್ತೆ ಯಥಾಸ್ಥಿತಿಗೆ ಬಂದರೆ ಕಾಮಗಾರಿ ಮುಂದುವರಿಸಲು ಕಷ್ಟವಾಗುತ್ತದೆ. ಹೆಚ್ಚು ಜನದಟ್ಟಣೆಯಿಂದ ಕೂಡಿರುವ ಈ ರಸ್ತೆಯ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.


ಜವಾಹರಲಾಲ್ ನೆಹರೂ ತಾರಾಲಯ ಬಳಿಯ ರಸ್ತೆ ಸ್ಮಾರ್ಟ್‌ಸಿಟಿ ಯೋಜನೆ ಅಡಿ ಅಭಿವೃದ್ಧಿಗೊಂಡಿರುವುದು



ಅಂಕಿ–ಅಂಶ

36 ಸ್ಮಾರ್ಟ್ ಸಿಟಿ ಯೋಜನೆಯಡಿ ಟೆಂಡರ್‌ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ರಸ್ತೆಗಳ ಸಂಖ್ಯೆ

₹ 481.65 ಕೋಟಿ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಅಂದಾಜು ಮೊತ್ತ



26 ಕಿ.ಮೀ ಅಭಿವೃದ್ಧಿಗೊಳ್ಳಲಿರುವ ರಸ್ತೆಗಳ ಒಟ್ಟು ಉದ್ದ

₹ 191.1 ಕೋಟಿ ಇದುವರೆಗೆ ವೆಚ್ಚವಾಗಿರುವ ಮೊತ್ತ

'ಜೂನ್ ಅಂತ್ಯದೊಳಗೆ 21 ರಸ್ತೆ ಲೋಕಾರ್ಪಣೆ'

'ನಗರದ ಕೇಂದ್ರ ವಾಣಿಜ್ಯ ಪ್ರದೇಶದ ಒಟ್ಟು 36 ರಸ್ತೆಗಳನ್ನು ಸ್ಮಾರ್ಟ್ ಸಿಟಿ ಯೋಜನೆಯಡಿ ಟೆಂಡರ್‌ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಅವುಗಳಲ್ಲಿ 32 ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದೇವೆ. ಇವುಗಳಲ್ಲಿ 21 ರಸ್ತೆಗಳ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಜೂನ್ ಅಂತ್ಯದೊಳಗೆ ಇವುಗಳನ್ನು ಲೋಕಾರ್ಪಣೆ ಮಾಡಲಿದ್ದೇವೆ' ಎಂದು ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪಿ.ರಾಜೇಂದ್ರ ಚೋಳನ್ 'ಪ್ರಜಾವಾಣಿ'ಗೆ ತಿಳಿಸಿದರು.

'11 ರಸ್ತೆಗಳ ಕಾಮಗಾರಿಗಳನ್ನು ಜುಲೈ ಅಂತ್ಯದೊಳಗೆ ಪೂರ್ಣಗೊಳಿಸುವ ಉದ್ದೇಶ ಹೊಂದಿದ್ದೇವೆ. ಈ ರಸ್ತೆಗಳಲ್ಲೂ ಒಂದು ಪಾರ್ಶ್ವದ ಕಾಮಗಾರಿ ಮುಗಿದಿದ್ದು, ಇನ್ನೊಂದು ಪಾರ್ಶ್ವದ ಕಾಮಗಾರಿ ಮಾತ್ರ ಬಾಕಿ ಇದೆ. ಅವೆನ್ಯೂ ರಸ್ತೆ ಕಾಮಗಾರಿ ಮಾತ್ರ ಸ್ವಲ್ಪ ವಿಳಂಬವಾಗಲಿದೆ. ಈ ಕಾಮಗಾರಿ ಆರಂಭಿಸುವಾಗಲೇ ತಡವಾಗಿತ್ತು' ಎಂದು ಮಾಹಿತಿ ನೀಡಿದರು.

'ಲಾಕ್‌ಡೌನ್ ಜಾರಿಯಾಗಿದ್ದರಿಂದ ರಸ್ತೆ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಯಿತು. ಕಾಮಗಾರಿ ಚುರುಕುಗೊಳಿಸಲು ಮಾರ್ಚ್‌ನಲ್ಲೇ ಸಿದ್ಧತೆ ಮಾಡಿಕೊಂಡಿದ್ದೆವು. ಗುತ್ತಿಗೆದಾರರಿಗೆ ಹಾಗೂ ಕಾರ್ಮಿಕರಿಗೆ ಬೇಕಾದ ಅನುಕೂಲ ಮಾಡಿಕೊಟ್ಟೆವು' ಎಂದರು.

'ರಸ್ತೆ ಕಾಮಗಾರಿಗಳಲ್ಲದೇ ಕೆ.ಆರ್.ಮಾರುಕಟ್ಟೆ ಅಭಿವೃದ್ಧಿ, ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಸಭಾಂಗಣ ನಿರ್ಮಾಣ ಕಾಮಗಾರಿಗಳೂ ಪ್ರಗತಿಯಲ್ಲಿವೆ. ಆದರೆ, ಲಾಕ್‌ಡೌನ್ ಸಂದರ್ಭದಲ್ಲಿ ಉಳಿದ ಕೆಲಸಗಳಿಗಿಂತ ರಸ್ತೆ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವುದಕ್ಕೆ ಆದ್ಯತೆ ನೀಡಿದೆವು. ಸಂಸ್ಥೆಯು ಅಭಿವೃದ್ಧಿಪಡಿಸುತ್ತಿರುವ ರಸ್ತೆಗಳೆಲ್ಲವೂ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿವೆ. ಇಲ್ಲಿ ವಾಹನಗಳು ಸದಾ ಗಿಜಿಗುಡುತ್ತಿರುತ್ತವೆ. ಈ ಪರಿಸ್ಥಿತಿಯಲ್ಲಿ ಒಳಚರಂಡಿ ಕೊಳವೆಗಳನ್ನು ಸ್ಥಳಾಂತರಿಸುವುದು ದೊಡ್ಡ ತಲೆನೋವಿನ ಕೆಲಸ. ಇದಕ್ಕಾಗಿ ಕೆಲವೊಮ್ಮೆ ವಾಹನ ಸಂಚಾರ ಮಾರ್ಗ ಮಾರ್ಪಾಡು ಮಾಡಬೇಕಾಗುತ್ತದೆ. ಅದಕ್ಕೆ ಸಂಚಾರ ಪೊಲೀಸರಿಂದ ಅನುಮತಿ ಪಡೆಯಲು ಸಮಯ ತಗಲುತ್ತದೆ. ಲಾಕ್‌ಡೌನ್ ಸಂದರ್ಭದಲ್ಲಿ ವಾಹನ ಸಂಚಾರ ವಿರಳವಾಗಿದ್ದರಿಂದ ಯಾವುದೇ ರಗಳೆಗಳಿಲ್ಲದೇ ಕಾಮಗಾರಿ ನಡೆಸಲು ಸಾಧ್ಯವಾಯಿತು' ಎಂದು ಅವರು ವಿವರಿಸಿದರು.

ಪೂರ್ಣಗೊಂಡಿರುವ ರಸ್ತೆ ಕಾಮಗಾರಿಗಳು

- ಹೇಯ್ಸ್ ರಸ್ತೆ
- ವುಡ್ ಸ್ಟ್ರೀಟ್
- ಟೇಟ್ ಲೇನ್
- ರಾಜಾ ರಾಮಮೋಹನರಾಯ್ ರಸ್ತೆ
- ಕಾನ್ವೆಂಟ್ ರಸ್ತೆ
- ಮೆಗ್ರಾತ್ ರಸ್ತೆ
- ಕ್ಯಾಸಲ್ ಸ್ಟ್ರೀಟ್
- ಲ್ಯಾವೆಲ್ಲೆ ರಸ್ತೆ
- ತಾರಾಲಯ ರಸ್ತೆ



2021ರ ಜೂನ್‌ನಲ್ಲಿ ಪೂರ್ಣಗೊಳ್ಳಲಿರುವ ರಸ್ತೆ ಕಾಮಗಾರಿಗಳು

- ಕ್ವೀನ್ಸ್ ರಸ್ತೆ
- ಇನ್ಫೆಂಟ್ರಿ ರಸ್ತೆ
- ಕಮರ್ಷಿಯಲ್ ಸ್ಟ್ರೀಟ್
- ಡಿಕೆನ್ಸನ್ ರಸ್ತೆ
- ಬ್ರಿಗೇಡ್ ರಸ್ತೆ
- ಕಂಟೋನ್ಮೆಂಟ್ ರಸ್ತೆ
- ಮಿಲ್ಲರ್ಸ್ ರಸ್ತೆ ಎಕ್ಸ್‌ಟೆನ್ಷನ್
- ರಾಜಭವನ ರಸ್ತೆ
- ಚಾಂದಿನಿ ಚೌಕ ರಸ್ತೆ
- ಜುಮ್ಮಾ ಮಸೀದಿ ರಸ್ತೆ
- ಕಸ್ತೂರಬಾ ರಸ್ತೆ
- ಅರಮನೆ ರಸ್ತೆ

2021ರ ಜುಲೈ/ ಆಗಸ್ಟ್‌ನಲ್ಲಿ ಪೂರ್ಣಗೊಳ್ಳುವ ರಸ್ತೆ ಕಾಮಗಾರಿಗಳು

- ಮಿಲ್ಲರ್ಸ್ ರಸ್ತೆ
- ಅವೆನ್ಯೂ ರಸ್ತೆ
- ಕಾಮರಾಜ ರಸ್ತೆ
- ಹಲಸೂರು ರಸ್ತೆ
- ಸೇಂಟ್ ಜಾನ್ಸ್ ರಸ್ತೆ
- ಸೇಂಟ್ ಜಾನ್ಸ್ ಚರ್ಚ್ ರಸ್ತೆ
- ಎಚ್‌ಕೆಪಿ ರಸ್ತೆ
- ಎನ್‌ಆರ್ ರಸ್ತೆ
- ರೇಸ್‌ಕೋರ್ಸ್ ರಸ್ತೆ
- ರೆಸ್ಟಿಯಸ್ ರಸ್ತೆ
- ಸೆಂಟ್ರಲ್ ಸ್ಟ್ರೀಟ್
- ಬೌರಿಂಗ್ ರಸ್ತೆ


ನಗರದ ಕಸ್ತೂರಬಾ ರಸ್ತೆಯಲ್ಲಿ ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿ
ಪ್ರಜಾವಾಣಿ ಚಿತ್ರ/ರಂಜು ಪಿ


ನರ್ಸಿಂಗ್ ಹೋಂನಲ್ಲಿ ಉಚಿತ ಸೇವೆ • ಹಣಕ್ಕಾಗಿ ದುಡಿಯಲು ನಿರಾಕರಣೆ

ಸೋಂಕಿತರ ಸೇವೆಗೆ ಮುಂದಾದ ರೈತ

• ಆರ್.ಚೌಡರೆಡ್ಡಿ

ಶ್ರೀನಿವಾಸಪುರ: ಕೊರೊನಾ ಎಂದರೆ ಜನ ಮಾರು ದೂರದಲ್ಲಿ ನಿಲ್ಲುವ ಸ್ಥಿತಿ ಇರುವಾಗ ಕೃಷಿಕರೊಬ್ಬರು ಸ್ವಇಚ್ಛೆಯಿಂದ ತಮ್ಮನ್ನು ಕೊರೊನಾ ಪೀಡಿತರ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ತಾಲ್ಲೂಕಿನ ಚೌಡನಹಳ್ಳಿಯ ರೈತ ಶ್ರೀನಿವಾಸರೆಡ್ಡಿ ಇತ್ತೀಚೆಗೆ ಅನಾರೋಗ್ಯದಿಂದ ಪಟ್ಟಣದ ವೆಂಕಟೇಶ್ವರ ನರ್ಸಿಂಗ್ ಹೋಂಗೆ ದಾಖಲಾಗಿದ್ದರು. ಅದೇ ನರ್ಸಿಂಗ್ ಹೋಂನಲ್ಲಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಕೊರೊನಾ ಪೀಡಿತರ ಮಧ್ಯೆ ಕೆಲಸ ಮಾಡಲು ಇಷ್ಟಪಡದ ನರ್ಸಿಂಗ್ ಹೋಂನ ಕೆಲವು ಸಿಬ್ಬಂದಿ ಕೆಲಸ ಬಿಟ್ಟು ಹೋದರು.


ನರ್ಸಿಂಗ್ ಹೋಂನಲ್ಲಿ ಸ್ವಯಂ ಪ್ರೇರಣೆಯಿಂದ ಕಾರ್ಯ ನಿರ್ವಹಿಸುತ್ತಿರುವ ಶ್ರೀನಿವಾಸರೆಡ್ಡಿ

ಹೊಸಬರು ಬರಲು ಹಿಂದೇಟು ಹಾಕಿದರು. ಸಮಸ್ಯೆ ಬಿಗಡಾಯಿಸಿತು.

ಕೊರೊನಾ ಪೀಡಿತರ ಸೇವೆ ಮಾಡಲು ಒಲ್ಲದ ಸಿಬ್ಬಂದಿಯನ್ನು ಕಂಡು ಬೇಸರಗೊಂಡ ಶ್ರೀನಿವಾಸರೆಡ್ಡಿ, ತಮ್ಮ ಆರೋಗ್ಯ ಸುಧಾರಣೆ ಆದ ಮೇಲೆ ಅದೇ ನರ್ಸಿಂಗ್ ಹೋಂನಲ್ಲಿ ಉಚಿತವಾಗಿ ಸೋಂಕಿತರ ಸೇವೆ ಮಾಡಲು ನಿರ್ಧರಿಸಿದರು.

ಸೇವೆಯಲ್ಲಿ ಸಿಗುವ ಸಂತೋಷ ಬೇರೆ ಯಾವುದರಲ್ಲೂ ಸಿಗುವುದಿಲ್ಲ. ಸಂಕಷ್ಟದ ಸಂದರ್ಭದಲ್ಲಿ ಕೈಲಾದ ಅಳಿಲು ಸೇವೆ ಮಾಡುತ್ತಿದ್ದೇನೆ
ಶ್ರೀನಿವಾಸ ರೆಡ್ಡಿ, ಕೃಷಿಕ

ತಮ್ಮ ಇಚ್ಛೆಯನ್ನು ಡಾ.ವೈ.ವಿ. ವೆಂಕಟಾಚಲ ಅವರಿಗೆ ತಿಳಿಸಿದಾಗ ಆಗಬಹುದು ಎಂದರು. ಸಂಬಳ ನಿಗದಿಪಡಿಸಲು ಮುಂದಾದರು. ಹಣಕ್ಕಾಗಿ ದುಡಿಯಲು ನಿರಾಕರಿಸಿದ ರೈತ, ಉಚಿತ ಸೇವೆ ಮಾಡುತ್ತ, ರೋಗಿಗಳ ಪ್ರೀತಿಗೆ ಪಾತ್ರರಾಗಿದ್ದಾರೆ.

ಶ್ರೀನಿವಾಸರೆಡ್ಡಿ ಅವರಿಗೆ ಸಾಕಷ್ಟು ತೋಟವಿದೆ. ಕೋವಿಡ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಲು ಮುಂದಾದಾಗ, ಮನೆ ಮಂದಿ ವಿರೋಧ ವ್ಯಕ್ತಪಡಿಸಿದರು. ಆದರೆ, ಮನೆಯವರ ಮನವೊಲಿಸಿ ಕೋವಿಡ್ ನಿಯಮ ಪಾಲನೆಯೊಂದಿಗೆ ತಮ್ಮ ಸೇವೆ ಮುಂದುವರಿಸಿದ್ದಾರೆ.

ಸೋಂಕಿತರನ್ನು ಆಂಬುಲೆನ್ಸ್‌ನಲ್ಲಿ ನರ್ಸಿಂಗ್ ಹೋಂಗೆ ಕರೆತರುವುದು, ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪುವ ರೋಗಿಗಳನ್ನು ಅಂತ್ಯ ಸಂಸ್ಕಾರಕ್ಕೆ ಕೊಂಡೊಯ್ಯುವುದು, ಅಗತ್ಯ ಬಿದ್ದಾಗ ಹೊರಗಡೆಯಿಂದ ಆಮ್ಲಜನಕದ ಸಿಲಿಂಡರ್‌ಗಳನ್ನು ತಂದುಕೊಡುವುದು ಅವರ ಕೆಲಸ.

'ಸೋಂಕಿತರ ಸೇವೆಗೆ ನಾನು ದಿನದ 24 ಗಂಟೆಯೂ ಸಿದ್ಧ. ಸಿಬ್ಬಂದಿ ಕೊರತೆಯಿಂದ ರೋಗಿಗಳು ಒದ್ದಾಡುತ್ತಿದ್ದುದನ್ನು ನೋಡಿ, ಸಹಿಸಲಾಗದೆ ಅವರ ಸೇವೆಗೆ ಮುಂದಾಗಿದ್ದೇನೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಶ್ರೀನಿವಾಸರೆಡ್ಡಿ ಜೀವದ ಮೇಲಿನ ಹಂಗು ತೊರೆದು ಧೈರ್ಯವಾಗಿ ಸೋಂಕಿತರ ಸೇವೆ ಮಾಡುತ್ತಿದ್ದಾರೆ. ಅವರ ನಿಸ್ಪೃಹ ಸೇವೆ ಆಸ್ಪತ್ರೆ ರೋಗಿಗಳು ಹಾಗೂ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಆದರೂ ಹೊಗಳಿಕೆಗೆ ಹಿಗ್ಗದೆ, ಸೇವೆ ಮಾಡುವುದರ ಮೂಲಕ ಮಾನವೀಯತೆ ಮೆರೆದಿದ್ದಾರೆ' ಎಂದು ವೆಂಕಟೇಶ್ವರ ಗ್ರಾಮೀಣ ಆರೋಗ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವೈ.ವಿ. ವೆಂಕಟಾಚಲ ಅವರ ಸೇವೆಯನ್ನು ಪ್ರಶಂಸಿಸಿದರು.



ಕಿಟ್ ವಿತರಣೆ

ಅರ್ನಾ ಸೇವಾ ಟ್ರಸ್ಟ್ ವತಿಯಿಂದ ಯಲಹಂಕ ವ್ಯಾಪ್ತಿಯ ಆಶಾ ಕಾರ್ಯಕರ್ತೆಯರಿಗೆ ಪಡಿತರ, ಹಾಲು, ಮೊಸರು ಹಾಗೂ ವೈದ್ಯಕೀಯ ಪರಿಕರಗಳನ್ನು ಒಳಗೊಂಡ ಕಿಟ್‌ಗಳನ್ನು ಕಾಂಗ್ರೆಸ್ ಮುಖಂಡ ಕೇಶವ್ ರಾಜಣ್ಣ, ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ಹಾಗೂ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಾ ರಾಮಯ್ಯ ನೇತೃತ್ವದಲ್ಲಿ ಭಾನುವಾರ ವಿತರಿಸಲಾಯಿತು. ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಇದ್ದರು


ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕಾಲೇಜು ವಿದ್ಯಾರ್ಥಿಗಳಿಗೆ ಉಚಿತವಾಗಿ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಇತ್ತೀಚೆಗೆ ಚಾಲನೆ ದೊರೆಯಿತು. ಸಿ.ಎನ್. ಅಶ್ವತ್ಥನಾರಾಯಣ ಮತ್ತು ಡಿ.ವಿ. ಸದಾನಂದ ಗೌಡ ಇದ್ದರು

ವಿದ್ಯಾರ್ಥಿಗಳಿಗೆ ಉಚಿತ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ವಿವಿಧ ಖಾಸಗಿ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳ ನೆರವಿನಿಂದ ಉಚಿತವಾಗಿ ಕೋವಿಡ್ ಲಸಿಕೆ ನೀಡುವ ಅಭಿಯಾನವನ್ನು ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ನೇತೃತ್ವದಲ್ಲಿ ಆರಂಭಿಸಲಾಗಿದೆ.

ಡೆಲ್ ಕಂಪನಿ, ಶಿಕ್ಷಣ ಫೌಂಡೇಷನ್ ಹಾಗೂ ಡಾ.ಸಿ.ಎನ್. ಅಶ್ವತ್ಥನಾರಾಯಣ ಫೌಂಡೇಷನ್ ಜಂಟಿಯಾಗಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ರಸಗೊಬ್ಬರ ಮತ್ತು ರಾಸಾಯನಿಕ ಸಚಿವ ಡಿ.ವಿ. ಸದಾನಂದ ಗೌಡ ಅಭಿಯಾನಕ್ಕೆ ಚಾಲನೆ ನೀಡಿದರು.

ಡೆಲ್ ಕಂಪನಿ ಲಸಿಕೆಯನ್ನು ಪ್ರಾಯೋಜಿಸಿತ್ತು. ಸರ್ಕಾರಿ ಕಾಲೇಜುಗಳ 525 ಮತ್ತು ಖಾಸಗಿ ಕಾಲೇಜುಗಳ 475 ವಿದ್ಯಾರ್ಥಿಗಳಿಗೆ ಮೊದಲ ದಿನ ಲಸಿಕೆ ನೀಡಲಾಗಿದೆ.

3.5 ಲಕ್ಷ ಡೋಸ್ ಕೊಡುಗೆ: 'ಮುಖ್ಯಮಂತ್ರಿಯವರ ಸಲಹೆಗಾರ ಪ್ರಶಾಂತ್ ಪ್ರಕಾಶ್ ಅವರು ವಿವಿಧ ಕಂಪನಿಗಳಿಂದ ಸುಮಾರು 3.5 ಲಕ್ಷ ಡೋಸ್‌ಗಳಷ್ಟು ಕೋವಿಡ್ ಲಸಿಕೆಯನ್ನು ಕೊಡಿಸಿದ್ದಾರೆ' ಎಂದು ಅಶ್ವತ್ಥನಾರಾಯಣ ತಿಳಿಸಿದರು.

'ಡಿಸೆಂಬರ್ ಒಳಗಾಗಿ ರಾಜ್ಯದ ಎಲ್ಲ ಜನರಿಗೂ ಲಸಿಕೆ ನೀಡುವ ಗುರಿ ಇದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸದಸ್ಯರಿಗೆ ಮುಂದಿನ ಹಂತದಲ್ಲಿ ಲಸಿಕೆ ವಿತರಿಸಲಾಗುತ್ತದೆ' ಎಂದರು.

ಸದಾನಂದ ಗೌಡ, 'ಅಶ್ವತ್ಥನಾರಾಯಣ ಅವರು ವಿದ್ಯಾರ್ಥಿಗಳಿಗೆ ಉಚಿತವಾಗಿ ಲಸಿಕೆ ವಿತರಣೆಗೆ ಕ್ರಮ ಕೈಗೊಂಡಿರುವುದು ಶ್ಲಾಘನೀಯ' ಎಂದರು.

ಕೋವಿಡ್ ಮೃತರ ನೆನಪಲ್ಲಿ ಆಂದೋಲನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾದಿಂದ ಮೃತಪಟ್ಟವರನ್ನು ಸ್ಮರಿಸುವುದು, ಅವರ ಸಾವಿಗೆ ನ್ಯಾಯ ಕೇಳುವುದು ಹಾಗೂ ಮೃತರ ಕುಟುಂಬದವರಿಗೆ ಧೈರ್ಯ ತುಂಬುವ ಉದ್ದೇಶದಿಂದ ಸಮಾನ ಮನಸ್ಕರು ಕರೆ ನೀಡಿರುವ 'ನನ್ನವರ ನೆನಪಿರಲಿ' ಆಂದೋಲನಕ್ಕೆ ಭಾನುವಾರ ಚಾಲನೆ ನೀಡಲಾಯಿತು.

ಸಾಮಾಜಿಕ ಕಾರ್ಯಕರ್ತರು, ಸಿನಿಮಾ ಕಲಾವಿದರು, ಹೋರಾಟಗಾರರು ಸೇರಿದಂತೆ ವಿವಿಧ ಕ್ಷೇತ್ರಗಳ ಜನರು ಈ ಆಂದೋಲನಕ್ಕೆ ಕೈಜೋಡಿಸಿದ್ದಾರೆ.

ಕೊರೊನಾದಿಂದಾಗಿ ಮೃತಪಟ್ಟ ನಗರದ ಪೌರಕಾರ್ಮಿಕರಾದ ಸುಶೀಲಮ್ಮ ಹಾಗೂ ಶಿಲ್ಪಾ ಅವರ ಸ್ಮರಣೆಯಲ್ಲಿ ದೀಪ ಬೆಳಗುವ ಮೂಲಕ ರಾಮಮೂರ್ತಿ ನಗರದಲ್ಲಿ ವಾಸವಿರುವ ಪೌರಕಾರ್ಮಿಕರು ಈ ಆಂದೋಲನಕ್ಕೆ ಚಾಲನೆ ನೀಡಿದರು.

ಹೋರಾಟಗಾರ್ತಿ ದು.ಸರಸ್ವತಿ, 'ಹಾಸಿಗೆ, ಔಷಧಿ, ಆಸ್ಪತ್ರೆ, ಚಿಕಿತ್ಸೆ ಸಿಗದೆ ಪ್ರಾಣ ತೆತ್ತ ಬಡಪಾಯಿಗಳು, ಹಸಿವಿನಿಂದ ಕಣ್ಣು ಮುಚ್ಚಿದವರು, ನೂರಾರು ಮೈಲಿ ನಡೆಯುತ್ತಲೇ ಮಣ್ಣು ಸೇರಿದವರನ್ನು ನೆನೆಯುವ ಈ ಆಂದೋಲನದಲ್ಲಿ ಇಷ್ಟೆಲ್ಲಾ ಅನ್ಯಾಯಗಳ ಜವಾಬ್ದಾರಿ ಹೊತ್ತ ಆಳುವ ಸರ್ಕಾರಗಳ ವಿಫಲತೆಯನ್ನು ಮನವರಿಕೆ ಮಾಡಿಸಬೇಕು' ಎಂದು ಹೇಳಿದರು.

'ಎಲ್ಲ ಸಂಕಷ್ಟಗಳ ನಡುವೆ ಜೀವದಾನದಲ್ಲಿ ತೊಡಗಿರುವ ವೈದ್ಯರು, ಆಶಾ ಕಾರ್ಯಕರ್ತೆಯರು, ಕೋವಿಡ್ ಮೃತದೇಹಗಳ ಅಂತ್ಯಸಂಸ್ಕಾರಕ್ಕೆ ಧಾವಿಸಿರುವ ಸ್ಮಶಾನ ಸಿಬ್ಬಂದಿಗೆ ಗೌರವ ಸೂಚಿಸೋಣ. ಅನ್ಯಾಯದ ಸಾವುಗಳನ್ನು ಪ್ರಶ್ನಿಸೋಣ. ಕುಟುಂಬದವರನ್ನು ಕಳೆದುಕೊಂಡಿರುವವರಿಗೆ ಧೈರ್ಯ ತುಂಬೋಣ' ಎಂದು ಹೇಳಿದರು.

ಪೌರಕಾರ್ಮಿಕೆ ನಾರಾಯಣಮ್ಮ, 'ನನ್ನೊಂದಿಗೆ ಕೆಲಸ ಮಾಡುತ್ತಿದ್ದ ಸುಶೀಲಮ್ಮ ಒಂದು ದಿನ ಏಕಾಏಕಿ ಕುಸಿದು ಬಿದ್ದರು. ಆಮ್ಲಜನಕ ಸಿಗದೆ ಮೃತಪಟ್ಟರು. ಅವರ ಕುಟುಂಬದವರಿಗೆ ಸರ್ಕಾರ ಉದ್ಯೋಗ ನೀಡಬೇಕು' ಎಂದು ಆಗ್ರಹಿಸಿದರು.


ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಆಮ್ಲಜನಕ ಸಿಗದೆ ಮೃತಪಟ್ಟ ರೋಗಿಯೊಬ್ಬರ ಸಂಬಂಧಿ ಸುನೀಲ್, 'ದುರಂತದಲ್ಲಿ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರನ್ನು ಕಳೆದುಕೊಂಡಿದ್ದೇನೆ. ಇದಕ್ಕೆ ವ್ಯವಸ್ಥೆ ಕಾರಣವೋ? ಅಧಿಕಾರಿಗಳು ಹೊಣೆಯೋ? ಎನ್ನುವುದೇ ತಿಳಿಯುತ್ತಿಲ್ಲ' ಎಂದು ಸಂಕಟ ಹೊರಹಾಕಿದರು.

ಹೈಕೋರ್ಟ್ ವಕೀಲರಾದ ಮೈತ್ರೇಯಿ ಕೃಷ್ಣನ್, 'ಕೋವಿಡ್ ಮೃತರ ಕುಟುಂಗಳಿಗೆ ತಲಾ ₹30 ಲಕ್ಷ ಪರಿಹಾರ ನೀಡಬೇಕು. ಅವರ ಕುಟುಂಬದ ಸದಸ್ಯರಿಗೆ ಉದ್ಯೋಗ, ಶಿಕ್ಷಣದ ಭರವಸೆ ನೀಡಬೇಕು. ಮೃತಪಟ್ಟವರ ಅಂಕಿಅಂಶಗಳನ್ನು ಸ್ಪಷ್ಟವಾಗಿ ವರದಿ ಮಾಡಬೇಕು. ಇವುಗಳ ಒತ್ತಾಯಕ್ಕಾಗಿ ಪ್ರತಿ ಭಾನುವಾರ ನಾವೆಲ್ಲ ಸೇರಲಿದ್ದೇವೆ' ಎಂದರು.

ಕೋವಿಡ್‌ನಿಂದ ಮೃತಪಟ್ಟವರ ಸ್ಮರಣಾರ್ಥ ಕವಯಿತ್ರಿ ಕೆ.ಷರೀಫಾ ಅವರು ಕಾವ್ಯ ವಾಚನ ಮಾಡಿದರು.

ನಿಧನ ವಾರ್ತೆ

ಹಿರಿಯ ನಟಿ ಸುರೇಖಾ



ಬೆಂಗಳೂರು: ಚಂದನವನದ ಹಿರಿಯ ನಟಿ ಸುರೇಖಾ (69) ಅವರು ಶನಿವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು.

ಡಾ.ರಾಜ್‌ಕುಮಾರ್ ಸೇರಿದಂತೆ ಹಲವು ಪ್ರಮುಖ ನಟರೊಂದಿಗೆ ನಟಿಸಿದ್ದ ಅವರು, 160 ಚಿತ್ರಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದರು.

'ಆಪರೇಷನ್ ಜಾಕ್‌ಪಾಟ್', 'ತ್ರಿಮೂರ್ತಿ', 'ಒಲವು ಗೆಲುವು', 'ಗಿರಿ ಕನ್ಯೆ', 'ಸಾಕ್ಷಾತ್ಕಾರ', 'ಕಸ್ತೂರಿ ನಿವಾಸ', 'ಹುಲಿಯ ಹಾಲಿನ ಮೇವು', 'ಶಿವಕನ್ಯೆ', 'ಕಾವೇರಿ', 'ಕೆಸರಿನ ಕಮಲ', 'ಬ್ಯಾಂಕರ್ ಮಾರ್ಗಯ್ಯ', 'ಆಲೆಮನೆ', 'ನಾಗರ ಹೊಳೆ', 'ತಾಯಿ ದೇವರು', 'ಭಕ್ತ ಸಿರಿಯಾಳ' ಮೊದಲಾದವು ಅವರು ಅಭಿನಯಿಸಿದ ಪ್ರಮುಖ ಚಿತ್ರಗಳು. 'ಮಾಯಾ ಮನುಷ್ಯ' ಮತ್ತು 'ನಾನು ಬಾಳಬೇಕು', 'ನಾನು ಅವನಿಲ್ಲೈ' ಚಿತ್ರಗಳಲ್ಲಿ ಅವರು ನಾಯಕಿಯಾಗಿ ಅಭಿನಯಿಸಿದ್ದರು.

ಮೂಲತಃ ಭರತನಾಟ್ಯ ಮತ್ತು ಕೂಚಿಪುಡಿ ನೃತ್ಯಗಾರ್ತಿ ಆಗಿದ್ದ ಸುರೇಖಾ. ಈ ಮೂಲಕವೇ ಚಿತ್ರರಂಗ ಪ್ರವೇಶಿಸಿದವರು. ಲಂಡನ್, ಪ್ಯಾರಿಸ್, ಮಾಸ್ಕೊ, ತಾಷ್ಕೆಂಟ್‌ಗಳಲ್ಲಿಯೂ ನೃತ್ಯ ಪ್ರದರ್ಶನ ನೀಡಿದ್ದರು.

ಈ ವರ್ಷ ಫೆಬ್ರುವರಿಯಲ್ಲಿ ಅವರು ಎಸ್.ಪಿ.ವರದರಾಜ್ ಪ್ರಶಸ್ತಿಗೆ ಪಾತ್ರರಾಗಿದ್ದರು. ಸೆನ್ಸಾರ್ ಮಂಡಳಿ, ರಾಜ್ಯ ಚಲನಚಿತ್ರ ಪ್ರಶಸ್ತಿ ಸಮಿತಿಯ ಸದಸ್ಯರಾಗಿಯೂ ಅವರು ಕಾರ್ಯನಿರ್ವಹಿಸಿದ್ದರು. ಬನಶಂಕರಿ ಚಿತಾಗಾರದಲ್ಲಿ ಭಾನುವಾರ ಅಂತ್ಯಕ್ರಿಯೆ ನಡೆಯಿತು.

ಗಣಗಲ್ ಜಯಮ್ಮ



ಬೆಂಗಳೂರು: ಹುಳಿಮಾವು ನಿವಾಸಿ ಗಣಗಲ್ ಜಯಮ್ಮ (82) ಭಾನುವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು ಇದ್ದಾರೆ. ಹುಳಿಮಾವು ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.


ಕೆಪಿಸಿಸಿ ಸಾರ್ವಜನಿಕರಿಗಾಗಿ ನೀಡಿರುವ ಆಂಬುಲೆನ್ಸ್‌ಗಳ ಜತೆ ಮುಖಂಡರು

ಕೆಪಿಸಿಸಿಯಿಂದ 125 ಆಂಬುಲೆನ್ಸ್

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕೋವಿಡ್ ಸೋಂಕಿತರನ್ನು ಆಸ್ಪತ್ರೆಗೆ ಸೇರಿಸಲು ಕೆಪಿಸಿಸಿಯಿಂದ 125 ಉಚಿತ ಆಂಬುಲೆನ್ಸ್‌ಗಳನ್ನು ಉಚಿತ ಸೇವೆಗೆ ಸಮರ್ಪಿಸಲಾಯಿತು.

ರಾಜರಾಜೇಶ್ವರಿ ನಗರದ ಗ್ಲೋಬಲ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಆಂಬುಲೆನ್ಸ್ ವಾಹನ ಚಾಲಕರು ಮತ್ತು ಸಿಬ್ಬಂದಿಗಳಿಗೆ ಮಾರ್ಗದರ್ಶನ ನೀಡಲಾಯಿತು.

'ಸೋಂಕಿತರಿಂದ ಯಾವುದೇ ಹಣ ವಸೂಲಿ ಮಾಡಬಾರದು. ಹಾಗೆ ಮಾಡಿದರೆ ಬಿಜೆಪಿಯವರು ವಿಡಿಯೊ ಮಾಡಿ ಹರಿಬಿಟ್ಟು ಪಕ್ಷಕ್ಕೆ ಕೆಟ್ಟ ಹೆಸರು ತರುತ್ತಾರೆ. ಎಚ್ಚರಿಕೆಯಿಂದ ಕೆಲಸ ಮಾಡಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಮಾತನಾಡಿ, 'ಕುತಂತ್ರ, ಅಬ್ಬರದ ಪ್ರಚಾರ, ಸುಳ್ಳು ಹೇಳುವ ಮೂಲಕ ಬಿಜೆಪಿ ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದೆ' ಎಂದು ವಾಗ್ದಾಳಿ ನಡೆಸಿದರು.

ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ರಾಜ್‌ಕುಮಾರ್, ಕಾಂಗ್ರೆಸ್ ಮುಖಂಡ ಎಚ್. ಕುಸುಮಾ, ಹನುಮಂತರಾಯಪ್ಪ ಮಾತನಾಡಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಕುಣಿಗಲ್ ಶಾಸಕ ಡಾ.ರಂಗನಾಥ್, ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಾ ರಾಮಯ್ಯ, ಮುಖಂಡ ಮಹಮದ್ ನಲಪಾಡ್ ಇದ್ದರು.

ಖಾಸಗಿ, ಪುನರಾವರ್ತಿತ ಅಭ್ಯರ್ಥಿಗಳ ತೇರ್ಗಡೆಗೆ ಒತ್ತಡ

ಬೆಂಗಳೂರು: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯು ರದ್ದಾದ ಬೆನ್ನಲ್ಲೇ ಪುನರಾವರ್ತಿತ, ಖಾಸಗಿ ಅಭ್ಯರ್ಥಿಗಳನ್ನು ಹಿಂದಿನ ವರ್ಷದ ಫಲಿತಾಂಶ ಆಧರಿಸಿ ತೇರ್ಗಡೆ ಮಾಡಲು ಒತ್ತಡ ಹೆಚ್ಚಾಗುತ್ತಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ಸರಳೀಕರಿಸಿರುವ ಜೊತೆಗೆ, ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪೂರಕ ಪರೀಕ್ಷೆ ನಡೆಸಲು ಚಿಂತನೆ ನಡೆದಿದೆ. ದ್ವಿತೀಯ ಪಿಯು ಪರೀಕ್ಷೆ ಬರೆಯಲು ಬಯಸುವವರು ಹಾಗೂ ಎಸ್ಸೆಸ್ಸೆಲ್ಸಿ ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಕೋವಿಡ್ ಸ್ಥಿತಿ ತಿಳಿಯಾದ ಬಳಿಕ ಪರೀಕ್ಷೆ ನಡೆಯಬಹುದು ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಮೂಲಗಳು ತಿಳಿಸಿವೆ.

ಗ್ರೇಡಿಂಗ್ ಜತೆಗೆ ಅಂಕ: ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಸಿಬಿಎಸ್‌ಇ ಮಾದರಿಯಲ್ಲೇ ಫಲಿತಾಂಶ ನೀಡಲು ಚಿಂತನೆ ನಡೆದಿದೆ. ಎ, ಎ+, ಬಿ, ಬಿ+, ಸಿ, ಸಿ+ ಮಾದರಿಯಲ್ಲಿ ಗ್ರೇಡಿಂಗ್ ಜತೆಗೆ ಅಂಕಗಳನ್ನೂ ನೀಡಲಾಗುತ್ತದೆ. ಪ್ರತಿ ವಿಷಯದ ಗ್ರೇಡಿಂಗ್ ಒಟ್ಟುಗೂಡಿಸಿ ಅಂಕಗಳಿಗೆ ಬದಲಿಸಬೇಕೇ ಅಥವಾ ಪ್ರತಿ ವಿಷಯಕ್ಕೂ ಅಂಕಗಳನ್ನು ನೀಡಿದ ನಂತರ, ಗ್ರೇಡಿಂಗ್‌ಗೆ ಪರಿವರ್ತಿಸಬೇಕೇ ಎಂಬ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

ಎಲ್ಲ ಪರೀಕ್ಷಾ ಮಂಡಳಿಗಳಿಗೂ ಪತ್ರ: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನೀಟ್, ಜೆಇಇ ಸೇರಿದಂತೆ ಆಯಾ ಸಂಸ್ಥೆಗಳು ನಡೆಸುವ ಪರೀಕ್ಷೆಗಳ ಅಂಕವನ್ನು ಮಾತ್ರ ಆಧರಿಸಿ ರ್‍ಯಾಂಕಿಂಗ್ ಪ್ರಕಟಿಸುವಂತೆ ಎಲ್ಲ ಪರೀಕ್ಷಾ ಮಂಡಳಿಗಳಿಗೂ ಪತ್ರ ಬರೆಯಲು ಇಲಾಖೆ ನಿರ್ಧರಿಸಿದೆ.

ಒಳನೋಟ

ಬೀಜ – ಗೊಬ್ಬರ ಸಮಸ್ಯೆ ನಿರಂತರ

ಬೆಂಗಳೂರು: 'ಅನ್ನದಾತರ ಸುತ್ತ ಸಮಸ್ಯೆಗಳ ಸುಳಿ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಜೂ.6) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ರೈತರ ಗೋಳಿಗೆ ಅಂತ್ಯವಿಲ್ಲ



'ನೇಗಿಲ ಕುಲದೊಳಗಡಗಿದೆ ಕರ್ಮ, ನೇಗಿಲ ಮೇಲೆ ನಿಂತಿದೆ ಧರ್ಮ' ಎನ್ನುವ ಸಾಲುಗಳು ವೇದಿಕೆಗಳ ಮೇಲೆ ರಾಜಕಾರಣಿಗಳ ಬಾಯಲ್ಲಿ ಹರಿದಾಡುತ್ತಿವೆಯೇ ಹೊರತು, ರೈತರ ಉತ್ಪನ್ನಗಳಿಗೆ ಬೀದಿಯೇ ಗತಿಯಾಗಿದೆ. ರೈತ ಸಾಲದ ಶೂಲಕ್ಕೆ ಸಿಲುಕಿ, ನೇಣಿನ ಕುಣಿಕೆಗೆ ತನ್ನ ಕೊರಳನ್ನು ಒಡ್ಡುತ್ತಿದ್ದಾನೆ. ಅನ್ನ ನೀಡುವವರನ್ನು ಕಡೆಗಣಿಸಬಾರದು.

ಮಧುಕುಮಾರ್, ದಾವಣಗೆರೆ



ಸಿಗುತ್ತಿಲ್ಲ. ಒಳ್ಳೆಯ ಬೆಲೆ ಬಂದರೆ ಉತ್ತಮ ಬೆಲೆ ಕೈಗೆಟುಕುವುದಿಲ್ಲ. ಆಗಾಗ ಪ್ರಾಕೃತಿಕ ವಿಕೋಪಗಳಿಂದಲೂ ರೈತ ಬೀದಿಗೆ ಬರುತ್ತಾನೆ. ಈಗ ಕಳಪೆ ಗುಣಮಟ್ಟದ ಬೀಜ ಹಾಗೂ ರಸಗೊಬ್ಬರದ ದಂಧೆ ಶುರುವಾಗಿ, ಸದಾ ಸಮಸ್ಯೆಗಳ ಸುಳಿಯಲ್ಲೇ ಸಿಲುಕುತ್ತಿದ್ದಾನೆ.

ಮಮತಾ, ದೊಡ್ಡಬಳ್ಳಾಪುರ

ಬೆನ್ನೆಲುಬಿಗೆ ಬೆಂಬಲ ಬೇಕು



ರೈತ ದೇಶದ ಬೆನ್ನೆಲುಬು, ಅವರಿಂದಲೇ ನಾವು ಎನ್ನುವುದು ಎಲ್ಲರ ಬಾಯಲ್ಲಿ ಸರಾಗವಾಗಿ ಬರುವ ಮಾತು. ಆದರೆ, ರೈತರಿಗೆ ಗುಣಮಟ್ಟದ ಬೀಜಗಳು ಸಿಗುತ್ತಿಲ್ಲ. ಕಳಪೆ ಗುಣಮಟ್ಟದ ರಸಗೊಬ್ಬರ ನೀಡುತ್ತಿರುವುದು ಸಾಮಾನ್ಯವಾಗಿದೆ. ಇದರಿಂದ ರೈತರು ಅನೇಕ ಸಮಸ್ಯೆಗಳನ್ನು ಅನುಭವಿಸುತ್ತಿದ್ದು, ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ.

ಪ್ರೀತಿ, ಹಂಪಿ

ರೈತನಿಗೆ ಸರ್ಕಾರ ಆಸರೆಯಾಗಲಿ



ಮುಂಗಾರು ಚುರುಕಾಗಿದ್ದರೂ ರೈತನ ಮುಖದಲ್ಲಿ ಮಂದಹಾಸ ಇಲ್ಲ. ಲಾಕ್‌ಡೌನ್ ಪರಿಣಾಮದಿಂದ ಸರಿಯಾದ ಸಮಯಕ್ಕೆ ಬೀಜ, ರಸಗೊಬ್ಬರ ಸಿಗದೆ ಪರದಾಡುತ್ತಿದ್ದಾನೆ. ಸಿಗುತ್ತಿರುವ ಬೀಜ ಹಾಗೂ ರಸಗೊಬ್ಬರಗಳು ದುಬಾರಿಯಾಗಿದ್ದು, ನಕಲಿಯೂ ಆಗಿವೆ. ಇದರಿಂದ ರೈತನ ಬದುಕು ಶೋಚನೀಯ.

ಅಜ್ಮೀರ್, ವಿಜಯನಗರ

ಕಾಳಸಂತೆ ನಿಯಂತ್ರಿಸಿ



ಕೊರೊನಾ ಸಂದರ್ಭವನ್ನೇ ದುರುಪಯೋಗ ಮಾಡಿಕೊಂಡಿರುವ ಕೆಲ ವರ್ತಕರು ಗೊಬ್ಬರ, ಬೀಜದ ಅಭಾವ ಸೃಷ್ಟಿಸಿ, ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಇದನ್ನು ಕಂಡರೂ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ.

ಶಿವಕುಮಾರ್, ದಾವಣಗೆರೆ

ರೈತರಿಗೆ ಸಾಲ ನೀಡಿ



ಕೃಷಿ ಇಲ್ಲದೆ ನಾವು ಬದುಕಲಾರೆವು. ಸರ್ಕಾರಗಳು ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಮೀಸಲಿಡಬೇಕು. ಸರ್ಕಾರಗಳು ರೈತರಿಗೆ ರಿಯಾಯಿತಿ ದರದಲ್ಲಿ ಬೀಜ, ಗೊಬ್ಬರ, ಇತರೆ ಕೃಷಿ ಪರಿಕರಗಳನ್ನು ಕೊಡಬೇಕು. ಕೃಷಿ ವಿರೋಧಿ ಕಾಯ್ದೆಗಳನ್ನು ಹಿಂಪಡೆಯಬೇಕು. ಬಂಡವಾಳಶಾಹಿ ನೀತಿಗಳನ್ನು ಕೈಬಿಟ್ಟು, ಕೃಷಿಗೆ ಹೆಚ್ಚು ಉತ್ತೇಜನ ನೀಡಬೇಕು. ಸದ್ಯಕ್ಕೆ ಮುಂಗಾರು ಆರಂಭವಾಗಿರುವುದರಿಂದ ಕೃಷಿ ಚಟುವಟಿಕೆಗಳಿಗೆ ನೆರವಾಗಲು ರೈತರಿಗೆ ಸಾಲ ನೀಡಬೇಕು.

ಭೀಮಾ ಶಂಕರ್, ಕಲಬುರ್ಗಿ

ಅನ್ನದಾತನ ಸುತ್ತ ಸಮಸ್ಯೆಗಳ ಹುತ್ತ

ದೇಶದ ಬೆನ್ನೆಲುಬಾದ ರೈತರ ಸಮಸ್ಯೆಗಳಿಗೆ ಪರಿಹಾರಗಳೇ

ಮೈಸೂರು ಅಧಿಕಾರಿಗಳು, ಆಮ್ಲಜನಕ ಪೂರೈಕೆ ಸಂಸ್ಥೆ ಸಿಬ್ಬಂದಿ ನಡುವಿನ ಸಂಭಾಷಣೆ ವೈರಲ್

ಆಮ್ಲಜನಕ ಪೂರೈಕೆ ತಡೆದಿದ್ದರೇ ಸಿಂಧೂರಿ?

ಪ್ರಜಾವಾಣಿ ವಾರ್ತೆ



ಚಾಮರಾಜನಗರದ ಕೋವಿಡ್19 ಆಸ್ಪತ್ರೆ

ಚಾಮರಾಜನಗರ: ಜಿಲ್ಲೆಯ ಕೋವಿಡ್ ಆಸ್ಪತ್ರೆಗೆ ಆಮ್ಲಜನಕ ಪೂರೈಕೆ ಸಂಬಂಧ ಮೈಸೂರಿನ ಅಧಿಕಾರಿಗಳು, ವೈದ್ಯಕೀಯ ಆಮ್ಲಜನಕ ಪೂರೈಸುವ ಅಲ್ಲಿನ ಎರಡು ಸಂಸ್ಥೆಗಳ ಸಿಬ್ಬಂದಿ ಜೊತೆಗೆ ದೂರವಾಣಿಯಲ್ಲಿ ಮಾತನಾಡಿದ್ದಾರೆ ಎನ್ನಲಾದ ಐದು ಆಡಿಯೊ ತುಣುಕುಗಳು ಭಾನುವಾರ ವಾಟ್ಸ್‌ಆ್ಯಪ್‌ನಲ್ಲಿ ವೈರಲ್ ಆಗಿವೆ.

ಚಾಮರಾಜನಗರಕ್ಕೆ ಆಮ್ಲಜನಕ ಸಿಲಿಂಡರ್ ನೀಡಬೇಕಾದರೆ, ಮೈಸೂರು ಜಿಲ್ಲಾಧಿಕಾರಿ (ಆಗ ರೋಹಿಣಿ ಸಿಂಧೂರಿ) ಅವರ ಅನುಮತಿ ಬೇಕು ಎಂದು ಸಂಸ್ಥೆಯ ಸಿಬ್ಬಂದಿ ಹೇಳುತ್ತಿರುವುದು ಆಡಿಯೊದಲ್ಲಿದೆ.

ಪ್ರತಿ ಧ್ವನಿಮುದ್ರಿಕೆಯ ಕುರಿತ ಒಕ್ಕಣೆಯೂ ವೈರಲ್ ಆಗಿದೆ. ಕರೆ ಮಾಡಿದ ದಿನ, ಸಮಯ, ಯಾರ ನಡುವಿನ ಸಂಭಾಷಣೆ, ಯಾರು ಏನು ಹೇಳುತ್ತಾರೆ ಎಂಬ ವಿವರಗಳು ಅದರಲ್ಲಿವೆ. ಆ ಮಾಹಿತಿ ಪ್ರಕಾರ, ಎಲ್ಲ ಸಂಭಾಷಣೆಗಳು ಆಮ್ಲಜನಕ ದುರಂತ ಸಂಭವಿಸುವುದಕ್ಕೂ ಮೊದಲೇ ನಡೆದಿವೆ.

ಮೂರು ಧ್ವನಿಮುದ್ರಿಕೆಗಳ ಸಂಭಾಷಣೆ ಮೇ 1ರಂದು ಹಾಗೂ ಮೇ 2ರ ರಾತ್ರಿ 8.35ಕ್ಕೆ ಇನ್ನೊಂದು ಹಾಗೂ ಮತ್ತೊಂದು ಏಪ್ರಿಲ್ 29ರಂದು ನಡೆದ ಸಂಭಾಷಣೆ ಎಂದು ಹೇಳಲಾಗಿದೆ.

ವಜಾಕ್ಕೆ ಶಿಫಾರಸು ಮಾಡಲಾ?: ಏ.29ರಂದು ನಡೆದ ಸಂಭಾಷಣೆಯು ರೋಹಿಣಿ ಸಿಂಧೂರಿ ಹಾಗೂ ಅಲ್ಲಿನ ಉಪ ಔಷಧ ನಿಯಂತ್ರಕ ಅರುಣ್ ಕುಮಾರ್ ಎಂಬುವವರ ನಡುವೆ ನಡೆದಿದೆ ಎನ್ನಲಾಗಿದೆ.

'ಅರುಣ್, ಡಿಸಿ ಮಾತಾಡ್ತಾ ಇದ್ದೇನೆ. ನಿನ್ನನ್ನು ವಜಾ ಮಾಡಲು ಶಿಫಾರಸು ಮಾಡಲಾ? ಏನು ಮಾಡಲಿ ಹೇಳು? ಆಮ್ಲಜನಕ ಮತ್ತೆ ಚಾಮರಾಜನಗರಕ್ಕೆ ಯಾಕೆ ಹೋಗುತ್ತಿದೆ? ನಾಳೆ ಮೈಸೂರಿಗೆ ರಿಫಿಲ್‌ಗೆ ಇಲ್ಲ ಎಂದು ಸದರ್ನ್ ಗ್ಯಾಸ್ ಏಜೆನ್ಸಿಯವನು ಹೇಳುತ್ತಿದ್ದಾನೆ. ಏನಕ್ಕೆ ಅಷ್ಟು ಹೋಗ್ತಾ ಇದೆ' ಎಂದು ಜಿಲ್ಲಾಧಿಕಾರಿ ಪ್ರಶ್ನಿಸುವುದು ಇದೆ.

ಇದಕ್ಕೆ ಅಧಿಕಾರಿ, 'ಚಾಮರಾಜನಗರದಲ್ಲಿ ಕೋವಿಡ್ ರೋಗಿಗಳಿಗೆ ಮಾತ್ರ ಅಲ್ಲ, ಆಸ್ಪತ್ರೆಗೇ ಆಮ್ಲಜನಕ ಇಲ್ಲ ಅದಕ್ಕೆ ಹೋಗುತ್ತಿದೆ' ಎನ್ನುತ್ತಾರೆ. 'ಮುಂದಿನ ಎರಡು ದಿನಗಳಿಗೆ 34 ಆಸ್ಪತ್ರೆಗಳಿಗೆ ಎಷ್ಟು ಆಮ್ಲಜನಕ ಬೇಕು ಎಂಬ ಮಾಹಿತಿ ಸಂಗ್ರಹಿಸಿ, ಕಚೇರಿಗೆ 11 ಗಂಟೆಗೆ ಬಾ' ಎಂದು ಜಿಲ್ಲಾಧಿಕಾರಿ ಹೇಳುವುದು ಧ್ವನಿಮುದ್ರಿಕೆಯಲ್ಲಿ ಕೇಳಿಸುತ್ತಿದೆ.

'ಸಿಲಿಂಡರ್ ನೀಡಬೇಕು ಎಂದರೆ ಜಿಲ್ಲಾಧಿಕಾರಿ ಅನುಮತಿ ಬೇಕು. ಅವರಿಂದ ಕರೆ ಮಾಡಿಸಿ, ಇಲ್ಲ ಅನುಮತಿ ಪತ್ರ ತನ್ನಿ' ಎಂದು ಆಮ್ಲಜನಕ ಪೂರೈಸುವ ಸಂಸ್ಥೆಯೊಂದರ ಸಿಬ್ಬಂದಿ ಹೇಳುವುದು ಮತ್ತೊಂದು ಧ್ವನಿಮುದ್ರಿಕೆಯಲ್ಲಿದೆ.

ಸಂಭಾಷಣೆ ಕೇಳಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

'ಮೌಖಿಕ ನಿರ್ದೇಶನ ಏನಿತ್ತು ಎಂಬುದು ಗೊತ್ತು'



ಪ್ರತಾಪ್ ಸಿಂಹ

ಆಮ್ಲಜನಕ ದುರಂತದ ಸಂದರ್ಭದಲ್ಲಿ ರೋಹಿಣಿ ಸಿಂಧೂರಿ ಅವರನ್ನು ಸಮರ್ಥಿಸಿಕೊಂಡಿದ್ದ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ, ಇದೀಗ ಭಿನ್ನ ಹೇಳಿಕೆ ನೀಡಿದ್ದಾರೆ. ಜಿಲ್ಲೆಗಳ ನಡುವೆ ಜಗಳ ಬೇಡ ಎಂದು ಜಿಲ್ಲಾಧಿಕಾರಿ ಅವರನ್ನು ಸಮರ್ಥಿಸಿಕೊಂಡಿದ್ದಾಗಿ ಹೇಳಿದ್ದಾರೆ.

ಎರಡು ದಿನದ ಹಿಂದೆ ಫೇಸ್ ಬುಕ್ ಲೈವ್‌ನಲ್ಲಿ ಮಾತನಾಡಿರುವ ಅವರು, 'ಅಂದು ಏನು ತಪ್ಪಾಗಿದೆ ಎಂಬುದು ನನಗೆ ಗೊತ್ತಿದೆ. ಕೆಲವು ವಿಚಾರಗಳನ್ನು ಹೇಳಲಾಗದು. ಸತ್ಯ ಏನು ಎಂಬುದು ನನಗೆ ಗೊತ್ತಿದೆ. ಮೌಖಿಕ ನಿರ್ದೇಶನ ಏನಿತ್ತು? ಚಾಮರಾಜನಗರಕ್ಕೆ ಯಾಕೆ ಅಂದು ಆಮ್ಲಜನಕ ಸಿಲಿಂಡರ್ ಹೋಗಿಲ್ಲ ಎಂಬುದು ಗೊತ್ತಿದೆ. ಹೈಕೋರ್ಟ್ ಉಸ್ತುವಾರಿಯ ತನಿಖೆ ಪೂರ್ಣಗೊಂಡ ಬಳಿಕ ಸತ್ಯಾಸತ್ಯತೆ ಗೊತ್ತಾಗಲಿದೆ' ಎಂದು ಪ್ರತಾಪ್ ಸಿಂಹ ಹೇಳಿದ್ದಾರೆ.

ಮೈಸೂರು: ನೂತನ ಡಿ.ಸಿ., ಪಾಲಿಕೆ ಆಯುಕ್ತರಿಂದ ಅಧಿಕಾರ ಸ್ವೀಕಾರ



ಬಗಾದಿ ಗೌತಮ್



ಲಕ್ಷ್ಮೀಕಾಂತ್ ರೆಡ್ಡಿ

ಮೈಸೂರು: ಮೈಸೂರಿನ ನೂತನ ಜಿಲ್ಲಾಧಿಕಾರಿಯಾಗಿ ಬಗಾದಿ ಗೌತಮ್ ಹಾಗೂ ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾಗಿ ಲಕ್ಷ್ಮೀಕಾಂತ್ ರೆಡ್ಡಿ ಭಾನುವಾರ ಅಧಿಕಾರ ವಹಿಸಿಕೊಂಡರು.

ಕೋವಿಡ್ ನಿರ್ವಹಣೆ ವಿಚಾರದಲ್ಲಿ ಜಟಾಪಟಿಗೆ ಇಳಿದಿದ್ದ ಹಿಂದಿನ ಆಯುಕ್ತೆ ಶಿಲ್ಪಾ ನಾಗ್ ಮತ್ತು ಹಿಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರನ್ನು ಸರ್ಕಾರ ಶನಿವಾರ ವರ್ಗಾವಣೆ ಮಾಡಿತ್ತು.

ಸಿ.ಎಂ ಮನೆ ಕದ ತಟ್ಟಿದ ರೋಹಿಣಿ ಸಿಂಧೂರಿ

ಪ್ರಜಾವಾಣಿ ವಾರ್ತೆ



ರೋಹಿಣಿ ಸಿಂಧೂರಿ

ಬೆಂಗಳೂರು: ಮೈಸೂರು ಜಿಲ್ಲಾಧಿಕಾರಿ ಹುದ್ದೆಯಿಂದ ವರ್ಗಾವಣೆಗೊಂಡ ಬೆನ್ನಲ್ಲೆ, ಆದೇಶವನ್ನು ಮರುಪರಿಶೀಲಿಸಲು ಕೋರಿ ಭಾನುವಾರ ರೋಹಿಣಿ ಸಿಂಧೂರಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮನೆಯ ಕದ ತಟ್ಟಿದರು.

ಆದರೆ, ಸಿಂಧೂರಿ ಮನವಿಯನ್ನು ತಿರಸ್ಕರಿಸಿದ ಮುಖ್ಯಮಂತ್ರಿ, ವರ್ಗಾವಣೆಗೊಂಡಿರುವ ಹುದ್ದೆಗೆ (ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತೆ) ವರದಿ ಮಾಡಿಕೊಳ್ಳುವಂತೆ ಸೂಚಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ವರ್ಗಾವಣೆ ಮಾಡಿದ ಕಾರಣಕ್ಕೆ ಸಿಂಧೂರಿ ಬಂದಿದ್ದರು. ವರ್ಗಾವಣೆಯಾದ ನಂತರ ಮತ್ತೆ ಮರು ಪರಿಶೀಲನೆ ಪ್ರಶ್ನೆ ಉದ್ಭವವಾಗುವುದಿಲ್ಲ. ಬಂದು ವರದಿ ಮಾಡಿಕೊಳ್ಳಲು ತಿಳಿಸಿದ್ದೇನೆ' ಎಂದರು.

ಮುಖ್ಯಮಂತ್ರಿಯ 'ಕಾವೇರಿ' ನಿವಾಸಕ್ಕೆ ಖಾಸಗಿ ಕಾರಿನಲ್ಲಿ ಬಂದ ರೋಹಿಣಿ ಸಿಂಧೂರಿ, 'ಇಡೀ ಪ್ರಕರಣದಲ್ಲಿ ನನ್ನದೇನೂ ತಪ್ಪಿಲ್ಲ' ಎಂದು ಮನವರಿಕೆ ಮಾಡುವ ಪ್ರಯತ್ನ ನಡೆಸಿದರು.

ಅಲ್ಲದೆ, ವರ್ಗಾವಣೆ ಆದೇಶದ ಮರುಪರಿಶೀಲನೆಗೆ ಮನವಿ ಮಾಡಿದರು. ಆದರೆ, ಅವರ ಮನವಿಯನ್ನು ಮುಖ್ಯಮಂತ್ರಿ ಯಡಿಯೂರಪ್ಪ ಪುರಸ್ಕರಿಸಲಿಲ್ಲ.

ಜಟಾಪಟಿ ಹಿನ್ನೆಲೆಯಲ್ಲಿ ಮೈಸೂರು ಪಾಲಿಕೆ ಆಯುಕ್ತರಾಗಿದ್ದ ಶಿಲ್ಪಾನಾಗ್ ಅವರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ನಿರ್ದೇಶಕಿ (ಇ-ಆಡಳಿತ) ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಜಮೀನು ಮಾಲೀಕ– ಸಾ.ರಾ. ಮಹೇಶ್ ಸಂಭಾಷಣೆ

ಭೂಮಾಲೀಕರಿಗೆ ಬೆದರಿಕೆ: ಆಡಿಯೊ ವೈರಲ್

ಪ್ರಜಾವಾಣಿ ವಾರ್ತೆ

ಮೈಸೂರು: ಜಮೀನಿನ ಮಾಲೀಕ ಗಣಪತಿ ರೆಡ್ಡಿ ಎಂಬುವವರ ಜೊತೆ ಶಾಸಕ ಸಾ.ರಾ.ಮಹೇಶ್ ನಡೆಸಿದ ಮೊಬೈಲ್ ಸಂಭಾಷಣೆಯ ಆಡಿಯೊ, ಸಾಮಾಜಿಕ ಜಾಲತಾಣಗಳಲ್ಲಿ ಭಾನುವಾರ ಹರಿದಾಡುತ್ತಿದೆ.

ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ವರ್ಗಾವಣೆ ಬೆನ್ನಲ್ಲೇ, ಈ ಆಡಿಯೊ ವೈರಲ್ ಆಗಿದೆ.

ರೆಡ್ಡಿ ಅವರಿಗೆ ಮೈಸೂರು ತಾಲ್ಲೂಕಿನ ಕೇರ್ಗಳ್ಳಿಯ ಸರ್ವೆ ನಂ.115ರ ಭೂಮಿಗೆ ಸಂಬಂಧಿಸಿದ ದಾಖಲೆಗಳನ್ನು ತರುವಂತೆ, ಶಾಸಕ ಗದರುವ ದನಿಯಲ್ಲಿ ಹೇಳುತ್ತಾರೆ. 'ನಾನು ಸಾ.ರಾ.ಮಹೇಶ್ ಮಾತಾಡ್ತಾ ಇದ್ದೀನಿ' ಎಂದು ಸಂಭಾಷಣೆ ಆರಂಭವಾಗುತ್ತದೆ. 'ಈ ಭೂಮಿ ನಿಮ್ಮದಲ್ಲ; ಮಂಜು ಎಂಬುವವರಿಗೆ ಸೇರಿದ್ದು. ನಿಮ್ಮ ಹುಡುಗನಿಗೆ ಫೆನ್ಸ್ ಹಾಕಿದಾಗಲೇ ದಾಖಲೆ ತಂದು ತೋರಿಸುವಂತೆ ಹೇಳಿದ್ದೆ. ಆದರೂ ಕೇಳಿಲ್ಲ. ನಾಳೆ ದಾಖಲೆ ತೆಗೆದುಕೊಂಡು ಬನ್ನಿ' ಎನ್ನುತ್ತಾರೆ. ಅದಕ್ಕೆ ರೆಡ್ಡಿ, 'ನೀವೇನು ಜಡ್ಜಾ?' ಎಂದು ಪ್ರಶ್ನಿಸುತ್ತಾರೆ.

ಆಗ ರೆಡ್ಡಿ, 'ನಮ್ಮ ಪ್ರಾಪರ್ಟಿಗೇ ಪೇಪರ್ ತಗೊಂಡು ಬನ್ನಿ ಎನ್ನಲುನೀವು ಜಡ್ಜಾ' ಎಂದು ಮತ್ತೆ ಕೇಳುತ್ತಾರೆ. ಆಗ ಸಾ.ರಾ.ಮಹೇಶ್, 'ರೀ ಅದು ನಂದು ರೀ ಪ್ರಾಪರ್ಟಿ' ಎನ್ನುತ್ತಾರೆ.

ತಮ್ಮ ದಾಖಲೆ ಸರಿಯಾಗಿದೆ ಎಂದು ರೆಡ್ಡಿ ಹೇಳಿದಾಗ, 'ನಾಳೆ ಡಾಕ್ಯುಮೆಂಟ್ ತನ್ನಿ. ಯಾರದೆಂದು ಗೊತ್ತಾಗುತ್ತೆ' ಎಂದು ಶಾಸಕರು ಹೇಳುತ್ತಾರೆ.

ಸಂಭಾಷಣೆಯ ಕೊನೆಯಲ್ಲಿ ರೆಡ್ಡಿ ಅವರು, ಈ ವಿಷಯವನ್ನು ಮಾಧ್ಯಮದವರಿಗೆ ಹೇಳುವುದಾಗಿ ಹೇಳಿದಾಗ, ಶಾಸಕರು, 'ಮಾಧ್ಯಮದವರಿಗಲ್ಲ; ಅವರಪ್ಪನಿಗೆ ಹೇಳು' ಎನ್ನುತ್ತಾರೆ.

ಈ ಆಡಿಯೊ ಬಿಡುಗಡೆ ಮಾಡಿರುವ ಮಾಹಿತಿ ಹಕ್ಕು ಕಾರ್ಯಕರ್ತ ಗಂಗರಾಜು, 'ಈ ಸಂಭಾಷಣೆ ಕೇರ್ಗಳ್ಳಿ ಸಮೀಪದ ಎರಡು ಎಕರೆ ಭೂಮಿಯ ಮಾಲೀಕ ಗಣಪತಿ ರೆಡ್ಡಿ ಹಾಗೂ ಶಾಸಕ ಸಾ.ರಾ.ಮಹೇಶ್ ಅವರದ್ದಾಗಿದ್ದು, ಐದು ತಿಂಗಳ ಹಿಂದೆ ಈ ಮಾತುಕತೆ ನಡೆದಿದೆ' ಎಂದು ಹೇಳಿದ್ದಾರೆ.

ಇದು ರೆಡ್ಡಿಗಳ ಪಿತೂರಿ; ತನಿಖೆಯಾಗಲಿ– ಸಾ.ರಾ.ಮಹೇಶ್



ಶಾಸಕ ಸಾ.ರಾ. ಮಹೇಶ್

ಆಡಿಯೊ ಕುರಿತು 'ಪ್ರಜಾವಾಣಿ' ಸಾ.ರಾ.ಮಹೇಶ್ ಅವರನ್ನು ಸಂಪರ್ಕಿಸಿದಾಗ, 'ಇದು ರೆಡ್ಡಿಗಳ ಪಿತೂರಿಯೇ ಹೊರತು ಬೇರೇನೂ ಅಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಯಾಗಲಿ' ಎಂದು ತಿಳಿಸಿದರು.

'ವಾಸ್ತವದಲ್ಲಿ ಈ ಭೂಮಿ ರುದ್ರಮೂರ್ತಿ ಎಂಬುವವರ ಪುತ್ರ ಮಂಜು ಅವರಿಗೆ ಸೇರಿದ್ದು. 2006ರಲ್ಲಿ ನಾನು 'ಮುಡಾ' ಅಧ್ಯಕ್ಷನಾಗಿದ್ದಾಗ ಆರ್.ಟಿ.ನಗರ ಬಡಾವಣೆಯ 60 ಅಡಿ ರಸ್ತೆಗಾಗಿ ಇವರ ಭೂಮಿ ಪಡೆಯಲಾಗಿತ್ತು. ರೆಡ್ಡಿ ಅವರು ಏಕಾಏಕಿ ಅಲ್ಲಿ ಬಂದು ತಮ್ಮ ಫಲಕ ಹಾಕಿದರು. ಈ ವಿಚಾರವನ್ನು ಮಂಜು ಅವರು ನನ್ನ ಗಮನಕ್ಕೆ ತರುತ್ತಿದ್ದಂತೆ, ನಾನು ರೆಡ್ಡಿ ಅವರಿಗೆ ಈ ರೀತಿ ಮಾಡಿದ್ದು ಸರಿಯಲ್ಲ ಎಂದು ಹೇಳಿದ್ದೆ. ಆರು ತಿಂಗಳ ಹಿಂದೆ ಮಾತಾಡಿದ್ದು. ಈ ಬಗ್ಗೆ ತನಿಖೆ ನಡೆಯಲಿ. ಆಗ ಯಾಕೆ ಮಾತಾಡಿದ್ದು ಎಂಬುದು ಗೊತ್ತಾಗುತ್ತದೆ' ಎಂದು ಅವರು ಹೇಳಿದರು.

ನೋಂದಣಿ ಕಚೇರಿ ತೆರೆಯಲು ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಮವಾರದಿಂದ ರಾಜ್ಯದ ಎಲ್ಲ ಜಿಲ್ಲಾ ನೋಂದಣಿ ಕಚೇರಿಗಳು ಮತ್ತು ಉಪ ನೋಂದಣಿ ಕಚೇರಿಗಳನ್ನು ತೆರೆಯಲು ಅನುಮತಿ ನೀಡಿ ಭಾನುವಾರ ಆದೇಶ ಹೊರಡಿಸಲಾಗಿದೆ.

ಮೇ 10 ರಿಂದ ರಾಜ್ಯದಲ್ಲಿ ಲಾಕ್‌ಡೌನ್ ಜಾರಿಯಾಗಿದ್ದು, ಅಂದಿನಿಂದಲೇ ನೋಂದಣಿ ಕಚೇರಿಗಳನ್ನು ಬಂದ್ ಮಾಡಲಾಗಿತ್ತು. ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸಿಕೊಂಡು ಜಿಲ್ಲಾ ಮತ್ತು ಉಪ ನೋಂದಣಿ ಕಚೇರಿಗಳನ್ನು ತೆರೆಯಲು ಅವಕಾಶ ನೀಡಿ ರಾಜ್ಯ ವಿಪತ್ತು ನಿರ್ವಹಣಾ ಕಾರ್ಯಕಾರಿ ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆಗಿರುವ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಆದೇಶ ಹೊರಡಿಸಿದ್ದಾರೆ.

ಬೀದಿನಾಯಿಗಳ ದಾಳಿ: ಬಾಲಕಿ ಗಂಭೀರ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಇಲ್ಲಿನ ಆಜಾದ್‌ನಗರದ ಮನೆಯಂಗಳದಲ್ಲಿದ್ದ ಬಾಲಕಿಯನ್ನು ಬೀದಿನಾಯಿಗಳು ಭಾನುವಾರ ಕಚ್ಚಿ ಎಳೆದುಕೊಂಡು ಹೋಗಿವೆ. ಬಾಲಕಿಯ ಸ್ಥಿತಿ ಗಂಭೀರವಾಗಿದೆ.

ತಲಾಂ ಶೇಖ್– ತಬುಸಂ ಬಾನು ದಂಪತಿಯ ನಾಲ್ಕು ವರ್ಷದ ಮಗು ಕನಿಷ್ ಫಾತಿಮಾ ಗಂಭೀರವಾಗಿ ಗಾಯಗೊಂಡವಳು. ಮುಂಜಾನೆ ಹೆತ್ತವರು ನಮಾಜ್ ಮಾಡುವಾಗ ಮಗು ಅಂಗಳಕ್ಕೆ ಬಂದಾಗ ನಾಲ್ಕೈದು ನಾಯಿಗಳು ಎರಗಿವೆ. ಕೂಡಲೇ ಮನೆಯವರು ಬಂದು ಬಿಡಿಸಿದ್ದಾರೆ.

ಅಷ್ಟು ಹೊತ್ತಿಗೆ ತಲೆ, ಕೈ. ಕಾಲು ಸಹಿತ ದೇಹದ ವಿವಿಧೆಡೆ ನಾಯಿಗಳು ಕಚ್ಚಿವೆ. ಮಗುವನ್ನು ಬಾಪೂಜಿ ಆಸ್ಪತ್ರೆಗೆ ದಾಖಲಿಸಲಾಗಿದೆ. ತಲಾಂ ಶೇಖ್ ಕೂಲಿ ಕಾರ್ಮಿಕರಾಗಿದ್ದು, ಈಗ ಕೆಲಸವೂ ಇಲ್ಲದೇ ಬಾಡಿಗೆ ಕಟ್ಟಲೂ ಆಗದ ಸ್ಥಿತಿಯಲ್ಲಿದ್ದಾರೆ.

ನಾಯಿಗಳ ಉಪಟಳ ಹೆಚ್ಚಾಗಿದೆ. ನಾಯಿಗಳನ್ನು ಹಿಡಿದು ಬೇರೆಡೆಗೆ ಸಾಗಿಸಬೇಕು. ತಲಾಂಶೇಖ್ ಕುಟುಂಬಕ್ಕೆ ಕೂಡಲೇ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ಸ್ಥಳೀಯರು ಪ್ರತಿಭಟನೆ ನಡೆಸಿದರು.





ಕೃಷಿ ಕ್ಷೇತ್ರದಲ್ಲಿ ಅವಕಾಶಗಳಿಗೆ ಅಗ್ರಿಕಲ್ಚರ್ ಎಂಜಿನಿಯರಿಂಗ್ ಕೋರ್ಸ್

ಆರ್.ಬಿ. ಗುರುಬಸವರಾಜ

ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಕೃಷಿಯಲ್ಲಿ ಹೊಸ ಹೊಸ ಆವಿಷ್ಕಾರಗಳು ನಡೆಯುತ್ತಿರುವುದು ಮತ್ತು ಉತ್ಪನ್ನಗಳ ಪ್ರಮಾಣ ಹೆಚ್ಚುತ್ತಿರುವುದು ಸಂತಸದ ಸಂಗತಿ. ಕೃಷಿಯ ಬಗ್ಗೆ ಅಧಿಕೃತ ಹಾಗೂ ವೈಜ್ಞಾನಿಕ ಅಧ್ಯಯನವೇ ಇದಕ್ಕೆ ಕಾರಣ. ಕೃಷಿ ವಿಜ್ಞಾನದ ಜೊತೆಗೆ ಎಂಜಿನಿಯರಿಂಗ್ ಅಧ್ಯಯನವೂ ಇತ್ತೀಚಿಗೆ ಹೆಚ್ಚು ಖ್ಯಾತಿ ಪಡೆಯುತ್ತಿದೆ. ಅಂತಹ ಕೋರ್ಸ್ ಎಂದರೆ ಕೃಷಿ ಎಂಜಿನಿಯರಿಂಗ್ ಅಧ್ಯಯನ.

ವಿಶೇಷತೆ ಏನು?

ಅಗ್ರಿಕಲ್ಚರ್ ಎಂಜಿನಿಯರಿಂಗ್ ಜೈವಿಕ ವಿಜ್ಞಾನ ಹಾಗೂ ಎಂಜಿನಿಯರಿಂಗ್ ತತ್ವಗಳ ಸಂಯೋಜನೆಯಾಗಿದೆ. ಇದು ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಮೆಕ್ಯಾನಿಕಲ್ ಎಂಜಿನಿಯರಿಂಗ್, ಸಿವಿಲ್ ಎಂಜಿನಿಯರಿಂಗ್ ಮತ್ತು ರಾಸಾಯನಿಕ ಎಂಜಿನಿಯರಿಂಗ್‌ನಂತಹ ಇತರೆ ಕ್ಷೇತ್ರಗಳ ಸಂಯೋಜನೆಯಾಗಿದೆ. ಕೃಷಿ ಕ್ಷೇತ್ರದಲ್ಲಿ ಕೃಷಿ ಎಂಜಿನಿಯರ್‌ಗಳ ಪ್ರಮುಖ ಪಾತ್ರವೆಂದರೆ ಉತ್ತಮ ಎಂಜಿನಿಯರಿಂಗ್ ವಿಧಾನಗಳು, ಹೊಸ ಹೊಸ ಆವಿಷ್ಕಾರಗಳು, ತಂತ್ರಜ್ಞಾನ ಆಧಾರಿತ ಸಲಕರಣೆಗಳ ಮೂಲಕ ಕೃಷಿ ಉತ್ಪಾದನೆಯನ್ನು ಸುಧಾರಿಸುವುದು. ಇದಕ್ಕಾಗಿ ವಾಸ್ತವತೆಯನ್ನು ಅರಿತು ಭವಿಷ್ಯಕ್ಕೆ ಬೇಕಾದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವತ್ತ ಚಿತ್ತ ಹರಿಸಬೇಕಾಗಿದೆ. ಅಲ್ಲದೇ ಕೃಷಿ ಯಂತ್ರೋಪಕರಣಗಳು, ಗ್ರಾಮೀಣ ವಿದ್ಯುದೀಕರಣ, ಜೈವಿಕ ಅನಿಲ, ಕೃಷಿ ಉತ್ಪನ್ನಗಳ ಹೆಚ್ಚಳದಲ್ಲಿ ತಂತ್ರಜ್ಞಾನದ ಅಳವಡಿಕೆ.. ಹೀಗೆ ಹಲವಾರು ವೃತ್ತಿಪರ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ವಿಪುಲ ಅವಕಾಶಗಳಿವೆ. ವೃತ್ತಿ ನೈಪುಣ್ಯತೆ ಪಡೆಯಲು ಬೇಕಾದ ಸಕಲ ಅವಕಾಶಗಳು ಇಲ್ಲಿವೆ.

ಕೋರ್ಸ್ ಇರುವ ಪ್ರಮುಖ ಶೈಕ್ಷಣಿಕ ಸಂಸ್ಥೆಗಳು

ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು, ಕಾಲೇಜ್ ಆಫ್ ಅಗ್ರಿಕಲ್ಚರ್, ಬೆಂಗಳೂರು, ಕಾಲೇಜ್ ಆಫ್ ಅಗ್ರಿಕಲ್ಚರ್ ಎಂಜಿನಿಯರಿಂಗ್, ರಾಯಚೂರು, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಧಾರವಾಡ, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ರಾಯಚೂರು.

ಪ್ರವೇಶಾರ್ಹತೆ

ಅಗ್ರಿಕಲ್ಚರ್ ಎಂಜಿನಿಯರಿಂಗ್ ಕೋರ್ಸ್ ಸೇರಲು ಪಿಯುಸಿಯಲ್ಲಿ ವಿಜ್ಞಾನ ವಿಭಾಗದಲ್ಲಿ ಉತ್ತೀರ್ಣರಾಗಿರಬೇಕು. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಮತ್ತು ಜೀವಶಾಸ್ತ್ರ ವಿಷಯಗಳನ್ನು ಅಭ್ಯಸಿಸಿರಬೇಕು. ಜೊತೆಗೆ ಸಂಬಂಧಿಸಿದ ಪ್ರಾಧಿಕಾರ ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಆಯ್ದ ಕಾಲೇಜುಗಳಲ್ಲಿ ಪ್ರವೇಶ ನೀಡಲಾಗುತ್ತದೆ. ಪದವಿ ಹಂತಕ್ಕೆ ಜೆಇಇ ಮೇನ್, ಕೆ–ಸೆಟ್, ಎಐಇಇಇ ಇತ್ಯಾದಿ ಪ್ರವೇಶ ಪರೀಕ್ಷೆಗಳನ್ನು ಎದುರಿಸಬೇಕು. ಸ್ನಾತಕೋತ್ತರ ಹಂತಕ್ಕೆ ಐಸಿಎಆರ್– ಎಐಇಇಎ ಪಿಜಿ, ಗೇಟ್ ಪ್ರವೇಶ ಪರೀಕ್ಷೆ ಬರೆಯುವುದು ಅಗತ್ಯ.

ಕೃಷಿ ಎಂಜಿನಿಯರಿಂಗ್ ಕೋರ್ಸ್ ನಂತರ ಅಂದರೆ ಅಗತ್ಯವಾದ ಶೈಕ್ಷಣಿಕ ಅರ್ಹತೆ ಹಾಗೂ ಕೌಶಲಗಳನ್ನು ಗಳಿಸಿದ ನಂತರ ಕೃಷಿ ಹಾಗೂ ಕೃಷಿಯೇತರ ಕ್ಷೇತ್ರದಲ್ಲಿ ವಿವಿಧ ಉದ್ಯೋಗಗಳು ಲಭ್ಯ ಇವೆ. ನಿಮ್ಮ ಆಸಕ್ತಿಯ ಆಧಾರದ ಮೇಲೆ ನಿಮ್ಮ ಆಯ್ಕೆ ಮಾಡಬಹುದು. ಕೃಷಿ ಎಂಜಿನಿಯರ್, ಕೃಷಿ ಇನ್‌ಸ್ಪೆಕ್ಟರ್, ಕೃಷಿ ತಜ್ಞ, ಫಾರ್ಮ /ಶಾಪ್ ಮ್ಯಾನೇಜರ್, ಕೃಷಿ ಮೇಲ್ವಿಚಾರಕ, ಕೃಷಿ ವಿಜ್ಞಾನಿ.. ಹೀಗೆ ವಿವಿಧ ಹುದ್ದೆಗಳನ್ನು ನಿರ್ವಹಿಸಬಹುದು.

ಉದ್ಯೋಗಾವಕಾಶಗಳು

ಕೃಷಿ ಎಂಜಿನಿಯರ್‌ಗೆ ವಿಪುಲ ಉದ್ಯೋಗಾವಕಾಶಗಳಿವೆ. ಇದೊಂದು ಸವಾಲಿನ ಕೆಲಸವಾದರೂ ಸಾಕಷ್ಟು ಅವಕಾಶಗಳಿರುವ ಕ್ಷೇತ್ರವಾಗಿದೆ. ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಲ್ಲಿ ತಾಂತ್ರಿಕ ತಜ್ಞರಾಗಿ ಕೆಲಸ ಮಾಡಬಹುದು. ಕೃಷಿ ಎಂಜಿನಿಯರ್ ಆದವರು ತಮ್ಮದೇ ಆದ ಕೃಷಿ ಯಂತ್ರಗಳು ಮತ್ತು ಉಪಕರಣಗಳ ಸಣ್ಣ ಉತ್ಪದನಾ ಘಟಕ ಪ್ರಾರಂಭಿಸಬಹುದು ಅಥವಾ ಅಂತಹ ಘಟಕಗಳ ತಾಂತ್ರಿಕ ಸಲಹೆಗಾರರಾಗಿ ಕಾರ್ಯನಿರ್ವಹಿಸಬಹುದು. ಸರ್ಕಾರಿ ಮತ್ತು ಖಾಸಗಿ ಕೃಷಿ ಸೇವಾ ವಲಯಗಳಲ್ಲಿ ಸಾಕಷ್ಟು ಉದ್ಯೋಗಾವಕಾಶಗಳಿವೆ.

ಉದ್ಯೋಗಾವಕಾಶದ ಕ್ಷೇತ್ರಗಳು: ಸರ್ಕಾರಿ ಹಾಗೂ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು, ನಾನ್ ಕಾರ್ಪೊರೇಟೆಡ್ ಕೃಷಿ ಇಲಾಖೆ, ಚಹಾ ಮತ್ತು ಕಾಫಿ ತೋಟಗಳು, ಕೃಷಿ ಉದ್ಯಮ, ಕೃಷಿ ಯಂತ್ರೋಪಕರಣ ಉತ್ಪಾದನಾ ಘಟಕಗಳು, ಡೇರಿ ಆಹಾರ ನಿಗಮಗಳು, ಕೃಷಿ ಹಣಕಾಸು ನಿಗಮಗಳು, ಕೃಷಿ ಉತ್ಪನ್ನ ಸಂಸ್ಕರಣಾ ಘಟಕಗಳು, ಕೃಷಿ ವಿಶ್ವವಿದ್ಯಾಲಯಗಳು, ಕೃಷಿ ಕನ್ಸಲ್ಟೆನ್ಸಿಗಳು, ಜಲ ನಿರ್ವಹಣಾ ಘಟಕಗಳು.

ಮದರ್ ಡೇರಿ, ಅಮುಲ್ ಡೇರಿ, ನೆಸ್ಲೆ ಇಂಡಿಯಾ, ನಬಾರ್ಡ್, ಕೃಷಿ ಸರಕು ಘಟಕಗಳು, ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ, ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್, ರಾಷ್ಟ್ರೀಯ ಬೀಜ ನಿಗಮ, ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ.



ವರ್ಚುವಲ್ ಇಂಟರ್ನ್‌ಶಿಪ್

ವೃತ್ತಿಕೌಶಲ ಕಲಿಕೆಯ ಹೊಸ ಮಾರ್ಗ

ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಅನುಭವ ನೀಡುವ ಮೂಲಕ ಉದ್ಯೋಗಕ್ಕೆ ಸಜ್ಜುಗೊಳಿಸುವ ಇಂಟರ್ನ್‌ಶಿಪ್ ಈಗ ವರ್ಚುವಲ್ ಸ್ವರೂಪ ಪಡೆದಿದೆ. ಮುಂದಿನ ದಿನಗಳಲ್ಲಿ ಇದು ಹೆಚ್ಚು ಜನಪ್ರಿಯವಾಗುವ ಸಾಧ್ಯತೆಯಿದ್ದು, ಭವಿಷ್ಯದ ದೃಷ್ಟಿಯಿಂದ ಕೂಡ ಅನುಕೂಲ ಎಂದೇ ವಿಶ್ಲೇಷಿಸಲಾಗುತ್ತಿದೆ.

ಪ್ರೊ. ಎಸ್.ಕೆ. ಜಾರ್ಜ್

ಪದವಿ ಅಥವಾ ಸ್ನಾತಕೋತ್ತರ ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ತಾವು ಓದಿದ ವಿಷಯಕ್ಕೆ ಸಂಬಂಧಿಸಿ ಯಾವುದಾದರೂ ಸಂಸ್ಥೆಯಲ್ಲಿ ಇಂಟರ್ನ್‌ಶಿಪ್ ಮಾಡುವುದನ್ನು ವಿಶ್ವವಿದ್ಯಾಲಯಗಳು ಕಡ್ಡಾಯ ಮಾಡಿವೆ. ಒಂದು ತಿಂಗಳು, ಎರಡು ತಿಂಗಳು, ಒಂದು ವರ್ಷ.. ಹೀಗೆ ವಿದ್ಯಾಸಂಸ್ಥೆಗಳ ನಿಯಮಕ್ಕನುಗುಣವಾಗಿ ಇಂಟರ್ನ್‌ಶಿಪ್ ಮಾಡುವುದು ಕಡ್ಡಾಯ. ಇಂಟರ್ನ್‌ಶಿಪ್ ಎನ್ನುವುದು ವಿದ್ಯಾರ್ಥಿಗಳ ವೃತ್ತಿ ಭವಿಷ್ಯದ ಹಾದಿಯಲ್ಲಿ ಇಡುವ ಮೊದಲ ಹೆಜ್ಜೆಯಾಗಿದೆ. ಇದರಿಂದ ವಿದ್ಯಾರ್ಥಿಗಳು ತಮ್ಮ ಕನಸಿನ ಕಂಪನಿಯಲ್ಲಿ ಕೆಲಸ ಮಾಡುವ ಅವಕಾಶ ಗಿಟ್ಟಿಸಿಕೊಳ್ಳಬಹುದು. ಈ ಅವಧಿಯಲ್ಲಿ ವಿದ್ಯಾರ್ಥಿಗಳು ತೋರಿದ ಕಾರ್ಯಕ್ಷಮತೆಯ ಆಧಾರದ ಮೇಲೆ ಅದೇ ಕಂಪನಿಯಲ್ಲಿ ಕಾಯಂ ಉದ್ಯೋಗವನ್ನು ಪಡೆಯಬಹುದು. ಆದರೆ ಕೋವಿಡ್ ಬಂದಾಗಿನಿಂದ ಇಂಟರ್ನ್‌ಶಿಪ್ ಸ್ವರೂಪವೂ ಬದಲಾಗಿದೆ. ಅಂದರೆ ಕಂಪನಿಗಳು ವರ್ಚುವಲ್ ಇಂಟರ್ನ್‌ಶಿಪ್ ವಿಧಾನವನ್ನು ಅನುಸರಿಸುತ್ತಿದ್ದು, ಆ ಮೂಲಕ ಇಂಟರ್ನ್‌ಗಳಿಗೆ ತರಬೇತಿ ನೀಡಲಾಗುತ್ತಿದೆ.

ಈ ವಿಧಾನದಿಂದ ವಿದ್ಯಾರ್ಥಿ ಹಾಗೂ ಕಂಪನಿ ಇಬ್ಬರಿಗೂ ಹಲವು ರೀತಿಯಲ್ಲಿ ಉಪಯೋಗವಾಗುತ್ತದೆ. ಶಾಲಾ–ಕಾಲೇಜು, ಹಲವು ಸಂಸ್ಥೆಗಳು ವರ್ಚುವಲ್ ವಿಧಾನವನ್ನೇ ಅನುಸರಿಸುತ್ತಿರುವುದರಿಂದ ಮುಂದಿನ ದಿನಗಳಲ್ಲಿ ವರ್ಚುವಲ್ ವಿಧಾನವೇ ಬಹುತೇಕ ಕ್ಷೇತ್ರಗಳಲ್ಲಿ ಪ್ರವೇಶ ಪಡೆಯುವ ಸಾಧ್ಯತೆಯೂ ಇದೆ. ಇದು ಮನೆಯಲ್ಲೇ ಇರುವ ಇಂಟರ್ನ್‌ಗಳಿಗೆ ಉತ್ತಮ ಕೆಲಸದ ತರಬೇತಿ ಹಾಗೂ ಅನುಭವ ಸಿಗುವಂತೆ ಮಾಡಲು ಸಹಕಾರಿಯಾಗಿದೆ. ಪ್ರಾಜೆಕ್ಟ್‌ಗಳ ನಿರ್ವಹಣೆಗೂ ಈಗ ವರ್ಚುವಲ್ ವಿಧಾನವನ್ನೇ ಅನುಸರಿಸಲಾಗುತ್ತಿದೆ. ಆನ್‌ಲೈನ್ ಸಹಯೋಗ, ವರ್ಚುವಲ್ ವಿಧಾನದಿಂದ ಸ್ಪಷ್ಟ ಸಂವಹನದ ಮೂಲಕ ತಂಡಗಳಿಗೆ ಮಾರ್ಗದರ್ಶನ ನೀಡುವುದು, ಮೌಲ್ಯಮಾಪನ ಹಾಗೂ ಇಂಟರ್ನ್‌ಶಿಪ್‌ನ ಸಮಯಾವಧಿ ಎಲ್ಲವೂ ಇದರ ಮೂಲಕವೇ ನಡೆಯುತ್ತಿವೆ.

ಉಪಯೋಗಗಳು

- ಕಂಪನಿಯ ಅಗತ್ಯಕ್ಕೆ ತಕ್ಕಂತಹ ಕೌಶಲಗಳನ್ನು ಕಲಿಯಲು ನೆರವಾಗುತ್ತದೆ.
- ಸಂಸ್ಥೆಗಳ ಹೊಸ ಶೈಲಿಯ ಕಾರ್ಯವೈಖರಿಯನ್ನು ತಿಳಿಯಲು ಸಹಾಯ ಮಾಡುತ್ತದೆ.
- ತೀರಾ ಹಳ್ಳಿಯ ವಿದ್ಯಾರ್ಥಿಗಳು ಕೂಡ ಆನ್‌ಲೈನ್ ಸಹಾಯದಿಂದ ತಾವಿರುವ ಕಡೆಯಿಂದಲೇ ಇಂಟರ್ನ್‌ಶಿಪ್ ಮುಗಿಸಬಹುದು.
- ವೈಯಕ್ತಿಕ ಜೀವನ ಹಾಗೂ ಕಚೇರಿ ಜೀವನ ಎರಡನ್ನೂ ಸಮನಾಗಿ ನಿರ್ವಹಿಸಲು ಸಹಾಯ ಮಾಡುತ್ತದೆ.
- ಕಚೇರಿಗೆ ಪ್ರಯಾಣಿಸುವ ಅವಧಿ ಹಾಗೂ ಇಂಧನ ಉಳಿತಾಯ.
- ಗೂಗಲ್ ಮೀಟ್, ಝೂಮ್ ಕರೆಗಳ ಮೂಲಕ ತಜ್ಞರಿಂದ ಸೂಕ್ತ ತರಬೇತಿ.
- ಯಾವುದೇ ಅಡೆತಡೆಗಳಿಲ್ಲದೇ ಉತ್ತಮ ಕಲಿಕೆಗೆ ಸಹಕಾರಿ.
- ಸಮಯ ನಿರ್ವಹಣೆಗೆ ನೆರವಾಗುತ್ತದೆ.
- ಕೋರ್ಸ್‌ವರ್ಕ್‌ಗಳನ್ನು ಯಾವುದೇ ಸಮಯದಲ್ಲಿ, ಯಾವುದೇ ಕಡೆಯಿಂದಾದರೂ ಮಾಡುವ ಅವಕಾಶವಿದೆ.
- ರಚನಾತ್ಮಕ ವಿಧಾನದಲ್ಲಿ ಕಲಿಕೆಗೆ ನೆರವಾಗುತ್ತದೆ.
- ಡಿಜಿಟಲ್ ಹಾಗೂ ತಂತ್ರಜ್ಞಾನ ಕೌಶಲವೂ ವೃದ್ಧಿಯಾಗುತ್ತದೆ.
- ವರ್ಚುವಲ್ ವಿಧಾನದಲ್ಲಿ ಕಾರ್ಯವೈಖರಿಗಳನ್ನು ಸಮಗ್ರವಾಗಿ ಕಲಿಯುವುದರಿಂದ ವಿದ್ಯಾರ್ಥಿಗಳಲ್ಲಿ ಕಲಿಕೆಯ ಜೊತೆಗೆ ಆತ್ಮವಿಶ್ವಾಸವೂ ಹೆಚ್ಚುತ್ತದೆ.
- ಹಣಕಾಸು ಹಾಗೂ ಸಮಯ ನಿರ್ವಹಣೆಗೂ ಸಹಾಯ ಮಾಡುತ್ತದೆ.

ವಿದ್ಯಾರ್ಥಿ ವೇತನ ಕೈಪಿಡಿ

ಆರ್.ಡಿ. ಬಿರ್ಲಾ ವಿದ್ಯಾರ್ಥಿವೇತನ ಪರೀಕ್ಷೆ 2021

- ವಿವರ: ವಿದ್ಯಾರ್ಥಿಗಳಲ್ಲಿನ ಪ್ರತಿಭೆಯನ್ನು ಗುರುತಿಸಿ ಅವರ ಕನಸುಗಳನ್ನು ನನಸು ಮಾಡಿಕೊಳ್ಳಲು ಸಹಾಯ ಮಾಡುವುದು.
- ಅರ್ಹತೆ: ಈ ಪರೀಕ್ಷೆಯಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದೆ.
- ಆರ್ಥಿಕ ಸಹಾಯ: ಗರಿಷ್ಠ ₹ 1 ಲಕ್ಷ
- ಹೆಚ್ಚಿನ ಮಾಹಿತಿಗೆ: scholarship(at) birlaopenminds.com, 73787 95942

ಲೀಡ್ ವಿದ್ಯಾರ್ಥಿವೇತನ

- ವಿವರ: ವಿದೇಶಗಳಲ್ಲಿನ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ಲೀಡ್ ವಿದ್ಯಾರ್ಥಿವೇತನ ಯೋಜನೆ ಸಹಾಯ ಮಾಡಲಿದೆ.
- ಅರ್ಹತೆ: ಹಿಂದಿನ ಪರೀಕ್ಷೆಯಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳೊಂದಿಗೆ ಉತ್ತೀರ್ಣ ಆಗಿರಬೇಕು. ವಿದೇಶಿ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ 2021ರಲ್ಲಿ ದಾಖಲಾಗುವವರು ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿಗಳ ಕಾಲೇಜು ಅಥವಾ ವಿಶ್ವವಿದ್ಯಾಲಯಗಳಿಂದ ಈಗಾಗಲೇ ಯಾವುದೇ ಧನಸಹಾಯ ಪಡೆದುಕೊಂಡಿರುವವರು ಇದಕ್ಕೆ ಅರ್ಜಿ ಸಲ್ಲಿಸಲು ಬರುವುದಿಲ್ಲ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30 ಜೂನ್, 2021
- ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿ
- ಹೆಚ್ಚಿನ ಮಾಹಿತಿಗಾಗಿ: ಲೀಡ್ ಸ್ಕಾಲರ್‌ಶಿಪ್ ವೆಬ್‌ಸೈಟ್

ಆಕ್ಸ್‌ಫರ್ಡ್ ಆ್ಯಂಡ್ ಕೇಂಬ್ರಿಡ್ಜ್ ಸೊಸೈಟಿ ಆಫ್ ಇಂಡಿಯಾ ಸ್ಕಾಲರ್‌ಶಿಪ್ 2021–22

- ವಿವರ: ಕೇಂಬ್ರಿಡ್ಜ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಪದವಿ ಶಿಕ್ಷಣ ಮತ್ತು ಸಂಶೋಧನೆಗಾಗಿ ಭಾಗಶಃ ಧನ ಸಹಾಯವನ್ನು ಮಾಡಲಾಗುವುದು.
- ಅರ್ಹತೆ: ಯಾರು ಬೇಕಾದರೂ ಅರ್ಜಿ ಸಲ್ಲಿಸಬಹುದಾಗಿದೆ.
- ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿದೆ. ಅರ್ಜಿ ಇದರ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.
- ಹೆಚ್ಚಿನ ಮಾಹಿತಿಗೆ: www.oxbridgeindia.com/scholarship/

ಎಸ್ಸೆಸ್ಸೆಲ್ಸಿ ಹೊಸ ಪರೀಕ್ಷಾ ಪದ್ಧತಿಗೆ ಬೇಕು ಸಿದ್ಧತೆ

ರಾಜ್ಯ ಸರ್ಕಾರವು ಸದ್ಯ ಹೊರಡಿಸಿರುವ ಅಧಿಸೂಚನೆಯ ಪ್ರಕಾರ, ಎಸ್ಸೆಸ್ಸೆಲ್ಸಿ ಪರೀಕ್ಷೆಯು ಜುಲೈ ಮೂರನೇ ವಾರದಲ್ಲಿ ಹೊಸ ಪದ್ಧತಿಯಲ್ಲಿ ನಡೆಯಲಿದೆ. ವಿದ್ಯಾರ್ಥಿಗಳು ಈ ಹೊಸ ಪದ್ಧತಿಗೆ ಅನುಗುಣವಾಗಿ ತಮ್ಮ ಸಿದ್ಧತೆಯನ್ನು ಚುರುಕುಗೊಳಿಸುವುದು ಸೂಕ್ತ.

ಡಾ. ಎಚ್.ಎಸ್. ಗಣೇಶಭಟ್ಟ



ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಕೋವಿಡ್ ಎರಡನೆಯ ಅಲೆಯಲ್ಲಿ ತತ್ತರಿಸಿರುವ ಅನೇಕ ವಿದ್ಯಮಾನಗಳಲ್ಲಿ ಶಿಕ್ಷಣವೂ ಒಂದು ಎಂದು ಈಗಾಗಲೇ ಎಲ್ಲರಿಗೂ ಗೊತ್ತಿದೆ. ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಆಗಿರುವ ಬದಲಾವಣೆ ಊಹಾತೀತ. ಸಾಂಪ್ರದಾಯಿಕ ಶಿಕ್ಷಣದ ಪದ್ಧತಿಯಿಂದ ಆನ್‌ಲೈನ್ ಶಿಕ್ಷಣಕ್ಕೆ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪೋಷಕರು ಹೊಂದಿಕೊಂಡಿದ್ದು, ಈಗ ನೂತನ ಪರೀಕ್ಷಾ ಪದ್ಧತಿಗೂ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಒದಗಿದೆ.

ರಾಜ್ಯ ಸರ್ಕಾರದ ಜೂನ್ 4ರ ಪ್ರಕಟಣೆಯಂತೆ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಜುಲೈ ಮೂರನೇ ವಾರದಲ್ಲಿ ಎರಡು ದಿನಗಳಲ್ಲಿ ನಡೆಸಲು ನಿರ್ಧರಿಸಲಾಗಿದೆ. ಈ ಸಂದರ್ಭದಲ್ಲಿ ಈ ನಿರ್ಧಾರ ಸ್ವಾಗತಾರ್ಹವೇನೋ ಹೌದು. ಆದರೆ ಈ ಸಾರಿ ಎರಡೇ ದಿನದ ಪರೀಕ್ಷೆ ಎಂದು ವಿದ್ಯಾರ್ಥಿಗಳು ಸಮಾಧಾನ ಪಟ್ಟುಕೊಳ್ಳುವ ವಿಷಯವಲ್ಲ. ಸರ್ಕಾರದ ಈ ಪ್ರಕಟಣೆಯ ಅನ್ವಯ 120 ಅಂಕಗಳ ಎರಡು ಪ್ರಶ್ನೆ ಪತ್ರಿಕೆಗಳನ್ನು ವಿದ್ಯಾರ್ಥಿಗಳು ಎರಡು ದಿನಗಳಲ್ಲೇ ಉತ್ತರಿಸಬೇಕು. ಆರು ದಿನಗಳ ಪರೀಕ್ಷೆಗೆ ಮಾಡಿಕೊಳ್ಳಬೇಕಾದ ತಯಾರಿಯನ್ನು ಈ ಪರೀಕ್ಷೆಗೆ ಎರಡು ದಿನಗಳಲ್ಲೇ ವಿದ್ಯಾರ್ಥಿಗಳು ಮಾಡಿಕೊಳ್ಳಬೇಕು.

ಬಹು ಮಾದರಿ ಆಯ್ಕೆ

ಪರೀಕ್ಷೆಯಲ್ಲಿ ಬಹು ಆಯ್ಕೆ ಮಾದರಿಯ ಪ್ರಶ್ನೆ (ಎಂಸಿಕ್ಯೂ) ಗಳಿದ್ದು ನೇರ ಮತ್ತು ಸರಳವಾದ ಪ್ರಶ್ನೆಗಳಿರುತ್ತವೆ. ಕನ್ನಡ, ಇಂಗ್ಲಿಷ್ ಮತ್ತು ತೃತೀಯ ಭಾಷೆ ಒಂದು ಪತ್ರಿಕೆಯಾದರೆ, ಗಣಿತ, ವಿಜ್ಞಾನ ಮತ್ತು ಸಮಾಜವಿಜ್ಞಾನ ಇನ್ನೊಂದು ಪತ್ರಿಕೆಯಾಗಿರುತ್ತದೆ. ಪ್ರತಿ ವಿಷಯಕ್ಕೂ 40 ಅಂಕಗಳಿದ್ದು, ಒಂದು ಪ್ರಶ್ನೆ ಪತ್ರಿಕೆಯಲ್ಲಿ 120 ಪ್ರಶ್ನೆಗಳಿರುತ್ತವೆ. ಈ ಪ್ರಶ್ನೆ ಪತ್ರಿಕೆಗಳು ಕಡಿತಗೊಳಿಸಿರುವ ಪಠ್ಯ ವಿಷಯದ ರೂಪುರೇಷೆಗಳ ಆಧಾರದ ಮೇಲಿರುತ್ತವೆ. ಮೂರು ಗಂಟೆಗಳ ಅವಧಿಯಲ್ಲಿ ವಿದ್ಯಾರ್ಥಿಗಳು ಉತ್ತರಿಸಬೇಕಾಗಿರುತ್ತದೆ.

ಸಾಂಪ್ರದಾಯಿಕ ಪರೀಕ್ಷೆ ಪದ್ಧತಿಯಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ದಿನಕ್ಕೊಂದರಂತೆ ವಿಷಯವನ್ನು ಓದಿಕೊಂಡು ಪರೀಕ್ಷೆಗೆ ಸನ್ನದ್ಧರಾಗುತ್ತಿದ್ದರು. ಒಂದು ವಿಷಯಕ್ಕೂ - ಮತ್ತೊಂದು ವಿಷಯಕ್ಕೂ ಪರೀಕ್ಷಾ ಅವಧಿಗೆ ಸಾಕಷ್ಟು ಅಂತರವೂ ಇರುತ್ತಿತ್ತು. ಇಡೀ ವರ್ಷ ಓದಿದ ವಿಷಯಗಳನ್ನು ಗ್ರಹಿಸಿಕೊಂಡು ಉತ್ತರಿಸಲು ಮನಸ್ಸನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು.

ಆದರೆ ಈಗಿನ ಮಾದರಿಯಂತೆ ಮೂರೂ ಭಾಷೆಯ ವಿಷಯಗಳನ್ನು ಒಂದೇ ದಿನ, ಒಂದೇ ಅವಧಿಯಲ್ಲಿ (3 ಗಂಟೆಗಳು) ಉತ್ತರಿಸಬೇಕು. ಹೀಗಾಗಿ ಶಾಲೆಗಳು ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಿದ್ಧಪಡಿಸಲು ವಿಶೇಷ ಆದ್ಯತೆಯನ್ನು ಉಳಿದಿರುವ ಸಮಯದಲ್ಲಿ ಮಾಡಬೇಕಿದೆ. ಜೂನ್ 3ರವರೆಗೆ ವಿದ್ಯಾರ್ಥಿಗಳನ್ನು ಸಾಂಪ್ರದಾಯಿಕ ಪರೀಕ್ಷಾ ಪದ್ಧತಿಗೆ ಸಿದ್ಧಗೊಳಿಸಿ, ಪೂರ್ವಸಿದ್ಧತಾ ಪರೀಕ್ಷೆಗಳನ್ನೂ ನಡೆಸಲಾಗಿತ್ತು. ಈಗ ವಿದ್ಯಾರ್ಥಿಗಳ ಮನೋಭೂಮಿಕೆಯನ್ನು ಬಹು ಅಂಶ ಆಯ್ಕೆ ಮಾದರಿ ಪ್ರಶ್ನೆಗಳಿಗೆ ಸಿದ್ಧಗೊಳಿಸಬೇಕಾದ ಸವಾಲು ಶಿಕ್ಷಕರ ಮುಂದಿದೆ. ಇದು ವಿದ್ಯಾರ್ಥಿಗಳಿಗೆ ಪೂರಕವಾಗಿ ಹೊಸದೇನಲ್ಲ. ಪ್ರತಿ ವಿಷಯದಲ್ಲೂ 5– 10 ಪ್ರಶ್ನೆಗಳು ಈ ರೂಪದಲ್ಲೇ ಇರುತ್ತಿದ್ದವು.

ಆದರೆ ಈಗ ಎಲ್ಲಾ ಪ್ರಶ್ನೆಗಳು ಬಹು ಆಯ್ಕೆ ಪ್ರಶ್ನೆಗಳೇ ಆಗಿರುವುದರಿಂದ ಸಿದ್ಧತಾ ಪರೀಕ್ಷೆಗಳನ್ನು ಶಾಲೆಗಳು ಇದೇ ಮಾದರಿಯಲ್ಲೇ ನಡೆಸಬೆಕಾಗುತ್ತದೆ. ಕೆಎಸ್‌ಇಇಬಿ ಮುಂದೆ ಕೊಡುವ ಮಾರ್ಗದರ್ಶನದಂತೆ ಶಾಲೆಗಳು ಎಲ್ಲಾ ವಿಷಯಗಳಲ್ಲೂ ವಿದ್ಯಾರ್ಥಿಗಳನ್ನು ಪುನಶ್ಚೇತನಗೊಳಿಸಬೇಕಾಗುತ್ತದೆ. ಶಿಕ್ಷಕರೂ ಸಹ ವಿಶೇಷವಾಗಿ ತಯಾರಿ ನಡೆಸಬೇಕಾಗುತ್ತದೆ.

ವಿಶೇಷ ಸಿದ್ಧತೆ

ವಿದ್ಯಾರ್ಥಿಗಳು ಜುಲೈ ಮೂರನೇ ವಾರದಲ್ಲಿ ನಡೆಯಲಿರುವ ಈ ಪರೀಕ್ಷೆಗೆ ವಿಶೇಷ ರೀತಿಯಲ್ಲಿ ತಯಾರಾಗಬೇಕು.

- ಎಲ್ಲಾ ಪಾಠಗಳನ್ನೂ ಪೂರ್ತಿಯಾಗಿ ಓದಿ ಅರ್ಥ ಮಾಡಿಕೊಳ್ಳಿ.
- ಪ್ರತಿಯೊಂದು ಪದ ಹಾಗೂ ವಾಕ್ಯವೂ ಸಹ ಬಹು ಮುಖ್ಯವಾಗಿರುತ್ತದೆ.
- ನಕ್ಷೆಗಳು, ಚಿತ್ರಗಳು, ರಚನೆಗಳು, ವ್ಯಾಕರಣ, ಸಂದರ್ಭಕ್ಕೆ ತಕ್ಕಂತೆ, ಚಿಂತಿಸುವುದು ಎಲ್ಲವೂ ಮುಖ್ಯ.
- ನೀವು ಓದುತ್ತಲೇ ಪ್ರಶ್ನೆಯ ಸ್ವರೂಪ ಹೇಗಿರಬಹುದು ಎಂದು ಆಲೋಚಿಸಿ.
- ಒಂದು ಎಂಸಿಕ್ಯೂ ಪ್ರಶ್ನೆಗೆ ಉತ್ತರಿಸಲು ಪರೀಕ್ಷೆಯಲ್ಲಿ ಸಿಗುವ ಸಮಯ ಎರಡು ನಿಮಿಷಗಳಿಗಿಂತಲೂ ಕಡಿಮೆ ಇರುತ್ತದೆ.
- ಪರೀಕ್ಷೆಗೆ ತಯಾರಿ ನಡೆಸುವಾಗ ಮೂರು ವಿಷಯಗಳನ್ನೂ ಒಟ್ಟಾಗಿ ಓದಿ ಉತ್ತರಿಸುವ ಕೌಶಲವನ್ನು ಬೆಳೆಸಿಕೊಳ್ಳಿ.
- ಪ್ರಥಮ, ದ್ವಿತೀಯ ಹಾಗೂ ತೃತೀಯ ಭಾಷೆಯನ್ನೊಳಗೊಂಡ ಒಂದು ಪ್ರಶ್ನೆಪತ್ರಿಕೆಯಾದರೆ, ಇನ್ನೊಂದು ಗಣಿತ, ಸಮಾಜವಿಜ್ಞಾನ ಹಾಗೂ ವಿಜ್ಞಾನದ್ದಾಗಿರುತ್ತದೆ.
- ಎಂಸಿಕ್ಯೂ ಮಾದರಿಯ ಪ್ರಶ್ನೆಗಳಿಗೆ ಉತ್ತರಿಸಲು ಒಎಂಆರ್ ಉತ್ತರ ಪತ್ರಿಕೆಗಳನ್ನು ನೀಡಲಾಗುತ್ತದೆ. ಅದಕ್ಕೆ ಉತ್ತರಿಸುವ ವಿಧಾನವೇ ಬೇರೆಯ ರೀತಿಯದ್ದಾಗಿರುತ್ತದೆ.

ನಿಮಗೆ ಸೂಕ್ತವಾದ ಪರೀಕ್ಷಾಕೇಂದ್ರಕ್ಕೆ ನೀವು ನೋಂದಾಯಿಸಿಕೊಳ್ಳಬಹುದು. ಪರೀಕ್ಷಾ ವೇಳಾಪಟ್ಟಿಯನ್ನು ಸರಿಯಾಗಿ ಗಮನಿಸಿ ತಯಾರಾಗಿ.

(ಲೇಖಕ: ನಿವೃತ್ತ ಪ್ರಾಂಶುಪಾಲರು, ಎಂಇಎಸ್ ಶಿಕ್ಷಣ ಕಾಲೇಜು, ಬೆಂಗಳೂರು)

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿದ್ಯಾರ್ಥಿಗಳೇ,
ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಬೆಂಗಳೂರಿನ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. **ಪ್ರದೀಪ್ ಕುಮಾರ್** ಉತ್ತರಿಸಲಿದ್ದಾರೆ. ವಿಶೇಷವಾಗಿ 10ನೇ ತರಗತಿ ಮತ್ತು ಪಿಯುಸಿ ಮಕ್ಕಳು ಹಾಗೂ ಅವರ ಪೋಷಕರು ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ–1

ಈಗಾಗಲೇ ತಿಳಿದಿರುವಂತೆ 3533 ಸಿವಿಲ್ ಪೊಲೀಸ್ ಕಾನ್‌ಸ್ಟೇಬಲ್ (ಪುರುಷ/ಮಹಿಳೆ) ಹುದ್ದೆಗಳ ನೇಮಕಾತಿಗೆ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಈ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿ 100 ಪ್ರಶ್ನೆಗಳು ಇರಲಿದ್ದು, ಒಂದು ಸರಿ ಉತ್ತರಕ್ಕೆ 1 ಅಂಕ ನೀಡಲಾಗುತ್ತದೆ. 1 ತಪ್ಪು ಉತ್ತರಕ್ಕೆ 0.25 ಅಂಕಗಳನ್ನು ಕಳೆಯಲಾಗುತ್ತದೆ. ಪರೀಕ್ಷೆಯ ಅವಧಿ 1 ಗಂಟೆ 30 ನಿಮಿಷ ಇರುತ್ತದೆ.
ಪರೀಕ್ಷೆಯು ಸಾಮಾನ್ಯ ಜ್ಞಾನ, ಭಾರತ ಸಂವಿಧಾನ, ಇತಿಹಾಸ (ಭಾರತ ಮತ್ತು ಕರ್ನಾಟಕ), ಭೂಗೋಳ (ಭಾರತ ಮತ್ತು ಕರ್ನಾಟಕ), ವಿಜ್ಞಾನ ಮತ್ತು ತಂತ್ರಜ್ಞಾನ, ಭಾರತದ ಸ್ವಾತಂತ್ರ್ಯ ಸಂಗ್ರಾಮ, ಭಾರತದ ಆಡಳಿತ, ಕರ್ನಾಟಕ ಸರ್ಕಾರ ಮತ್ತು ರಾಜಕೀಯ, ಅರ್ಥಶಾಸ್ತ್ರ, ನೀತಿ ಶಿಕ್ಷಣ, ಪ್ರಚಲಿತ ವಿದ್ಯಮಾನಗಳು, ಮಾನಸಿಕ ಸಾಮರ್ಥ್ಯಕ್ಕೆ ಲೆಕ್ಕಗಳನ್ನು ಆಧರಿಸಿದ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

ಈ ನಿಟ್ಟಿನಲ್ಲಿ ಈ ಮೇಲ್ಕಂಡ ವಿಷಯಗಳನ್ನು ಆಧರಿಸಿ, ಮಾದರಿ ಪ್ರಶ್ನೆಗಳನ್ನು ಇಲ್ಲಿ ನೀಡಲಾಗಿದ್ದು, ಮರುದಿನ ಆ ಪ್ರಶ್ನೆಗಳ ಕೀ ಉತ್ತರಗಳನ್ನು ಪ್ರಕಟಿಸಲಾಗುವುದು.

1.‘ಕಳಸಾ ಬಂಡೂರಿ’ ವಿವಾದ ಯಾವ ರಾಜ್ಯಗಳ ನಡುವೆ ನಡೆಯುತ್ತಿದೆ?
ಎ) ಕರ್ನಾಟಕ, ಗೋವಾ ಮತ್ತು ಕೇರಳ
ಬಿ) ಕರ್ನಾಟಕ,ಮಹಾರಾಷ್ಟ್ರ ಮತ್ತು ಗೋವಾ
ಸಿ) ಕರ್ನಾಟಕ, ಗೋವಾ ಮತ್ತು ತಮಿಳುನಾಡು
ಡಿ) ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ

2. ಮಹಾತ್ಮಗಾಂಧೀಜಿ ಅವರ ‘ರಾಜಕೀಯ ಗುರು’ ಎಂದು ಪ್ರಸಿದ್ಧರಾದವರು ಯಾರು?
ಎ) ಗೋಪಾಲಕೃಷ್ಣ ಗೋಖಲೆ
ಬಿ) ದಾದಾಭಾಯಿ ನವರೋಜಿ
ಸಿ) ಬಾಲಗಂಗಾಧರ ತಿಲಕ್
ಡಿ) ರವೀಂದ್ರನಾಥ ಟ್ಯಾಗೋರ

3. ‘ಹಂದಿ ಜ್ವರ’ಕ್ಕೆ ಕಾರಣವಾಗುವ ವೈರಸ್ ಯಾವುದು?
ಎ) H1N1 ವೈರಸ್
ಬಿ) ಎಂಟರೊ ವೈರಸ್
ಸಿ) ಮೈಕ್ರೊ ವೈರಸ್
ಡಿ) ವರಿಸ್ಸೆಲ್ಲಾ ವೈರಸ್

4.ಕರ್ನಾಟಕ ಸಂಗೀತದ ಪಿತಾಮಹ ಎಂದು ಪ್ರಸಿದ್ಧರಾದವರು ಯಾರು?
ಎ) ಕನಕದಾಸರು
ಬಿ) ಪುರಂದರದಾಸರು
ಸಿ) ತುಳಸಿದಾಸರು
ಡಿ)ರಾಮದಾಸರು

5.ಈ ಕೆಳಗಿನವುಗಳಲ್ಲಿ ಯಾವುದು ಕಲ್ಲಿದ್ದಲಿನ ವಿಧ ಅಲ್ಲ?
ಎ) ಅಂತ್ರಾಸೈಟ್
ಬಿ) ಬಿಟುಮಿನಸ್
ಸಿ) ಲಿಗ್ನೈಟ್
ಡಿ) ಹೆಮಟೈಟ್

6. ‘ಆದಿಗ್ರಂಥ’ವನ್ನು ರಚಿಸಿದವರು?
ಎ) ಗುರುನಾನಕ್
ಬಿ) ಗುರು ಅಮರದಾಸ್
ಸಿ) ಗುರು ರಾಮದಾಸ್
ಡಿ) ಗುರು ಅರ್ಜುನ್‌ದೇವ್

7.ಜೈನಧರ್ಮದ ಕೊನೆಯ ತೀರ್ಥಂಕರ ಯಾರು?
ಎ) ಅರಿಷ್ಟನೇಮಿ
ಬಿ) ವೃಷಭನಾಥ
ಸಿ) ಪಾರ್ಶ್ವನಾಥ
ಡಿ) ಮಹಾವೀರ

8. ನೆಫ್ರಾನ್‌ಗಳು ಈ ಕೆಳಗಿನ ಯಾವ ಅಂಗಕ್ಕೆ ಸಂಬಂಧಿಸಿವೆ?
ಎ) ಹೃದಯ
ಬಿ) ಮೂತ್ರಕೋಶ
ಸಿ) ಪಿತ್ತಕೋಶ
ಡಿ) ಮೆದುಳು

9. ಕರ್ನಾಟಕವು ಒಟ್ಟು ಎಷ್ಟು ರಾಜ್ಯಗಳ ಜೊತೆ ಗಡಿ ಹಂಚಿಕೊಂಡಿದೆ?
ಎ) 4 ಬಿ) 5
ಸಿ) 6 ಡಿ) 7

10. ‘ಕರ್ನಾಟಕದಲ್ಲಿ ಸಮಗ್ರ ಪಂಚಾಯತ್ ರಾಜ್ ಕಾಯ್ದೆ’ ಜಾರಿಯಾಗಿದ್ದು ಯಾವ ವರ್ಷದಲ್ಲಿ?
ಎ) 1993 ಬಿ) 1995
ಸಿ) 2005 ಡಿ) 2010

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನೀವೇ ನಿಮ್ಮ ಅತ್ಯಂತ ಅಮೂಲ್ಯವಾದ ಸಂಪನ್ಮೂಲ. ಹೀಗಾಗಿ, ವೈಯಕ್ತಿಕ ನೆಲೆಯ ಸುಧಾರಣೆಗೆ ನಿರಂತರವಾದ ಪ್ರಯತ್ನ ನಿಮ್ಮದಾಗಿರಲಿ.

–ಬ್ರಯಾನ್ ಟ್ರೇಸಿ

ಕೋರ್ಟ್ ಕಲಾಪದ ನೇರಪ್ರಸಾರ ಹೈಕೋರ್ಟ್ ಕ್ರಮ ಸ್ವಾಗತಾರ್ಹ

ಮೊಹಮ್ಮದ್ ಶಹಾಬುದ್ದೀನ್ ಮತ್ತು ಬಿಹಾರ ರಾಜ್ಯ ಸರ್ಕಾರದ ನಡುವಿನ ಪ್ರಕರಣದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ 'ಮುಕ್ತ ನ್ಯಾಯಾಲಯ'ದ ಪರಿಕಲ್ಪನೆಯ ಬಗ್ಗೆ ಹೇಳಿರುವ ಒಂದೆರಡು ಮಾತುಗಳು ಸ್ಮರಣೀಯ. ಈ ತೀರ್ಪು ಬಂದಿದ್ದು 2010ರ ಮಾರ್ಚ್ ತಿಂಗಳಿನಲ್ಲಿ. 'ನ್ಯಾಯಾಲಯದ ಕಲಾಪಗಳನ್ನು ವರದಿ ಮಾಡಲು ಮಾಧ್ಯಮ ಪ್ರತಿನಿಧಿಗಳು ಇದ್ದರೂ, ಅಲ್ಲಿಗೆ ಸಾರ್ವಜನಿಕರಿಗೆ ಪ್ರವೇಶ ನಿರಾಕರಿಸಿದ್ದೇ ಆದಲ್ಲಿ ಅಂತಹ ಕಲಾಪವು ಮುಕ್ತ ನ್ಯಾಯಾಲಯದಲ್ಲಿ ನಡೆದಿದೆ ಎನ್ನಲು ಆಗದು. ನ್ಯಾಯಾಲಯಕ್ಕೆ ಪ್ರವೇಶಿಸಲು ಸಾರ್ವಜನಿಕರಿಗೆ ಹಕ್ಕು ಇರಬೇಕು, ಯಾರಿಗೆಲ್ಲ ಕಲಾಪ ವೀಕ್ಷಿಸುವ ಇಚ್ಛೆ ಇರುತ್ತದೆಯೋ ಅವರಿಗೆಲ್ಲ ಕೋರ್ಟ್ ಪ್ರವೇಶಕ್ಕೆ ಅವಕಾಶ ಇರಬೇಕು. ಆಗ ಅಂತಹ ವ್ಯವಸ್ಥೆಯನ್ನು ಮುಕ್ತ ನ್ಯಾಯಾಲಯ ವ್ಯವಸ್ಥೆ ಎನ್ನಲು ಸಾಧ್ಯ' ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಭಾರತದಲ್ಲಿ ಕೋರ್ಟ್ ಕಲಾಪಗಳು 'ಮುಕ್ತ ನ್ಯಾಯಾಲಯ' ವ್ಯವಸ್ಥೆಯನ್ನು ಒಪ್ಪಿಕೊಂಡಿವೆ. ಅಂದರೆ, ಕೋರ್ಟ್ ಕೊಠಡಿಗೆ ಹೋಗಿ ಅಲ್ಲಿನ ಕಲಾಪಗಳನ್ನು ವೀಕ್ಷಿಸುವ ಹಕ್ಕು ಪ್ರಜೆಗಳಿಗೆ ಇದೆ. ಕೆಲವು ನಿರ್ದಿಷ್ಟ ಸ್ವರೂಪದ ಪ್ರಕರಣಗಳ ವಿಚಾರಣೆಯು ಗೋಪ್ಯವಾಗಿ ನಡೆಯುವುದರಿಂದ, ಹಾಗೆ ನಡೆಯಬೇಕಿರುವುದು ಸರಿ ಕೂಡ ಆಗಿರುವುದರಿಂದ ಅಂತಹ ಪ್ರಕರಣಗಳ ವಿಚಾರಣೆಯ ವೇಳೆ ಸಾರ್ವಜನಿಕರಿಗೆ ಪ್ರವೇಶ ಇರುವುದಿಲ್ಲ ಎಂಬುದು ನಿಜ. ಕರ್ನಾಟಕ ಹೈಕೋರ್ಟ್ ಒಂದು ಪ್ರಕರಣದ ವಿಚಾರಣೆಯನ್ನು ಈಚೆಗೆ ನೇರ ಪ್ರಸಾರ ಮಾಡಿದೆ. ಹೀಗೆ ಕಲಾಪದ ನೇರ ಪ್ರಸಾರಕ್ಕೆ ಮುಂದಾಗಿದ್ದರಲ್ಲಿ ಕರ್ನಾಟಕ ಹೈಕೋರ್ಟ್ ಮೊದಲನೆಯದು ಅಲ್ಲದಿದ್ದರೂ, ಈ ಕ್ರಮವು ಮೆಚ್ಚುಗೆಗೆ ಅರ್ಹ. ನ್ಯಾಯಾಂಗದ ಕಲಾಪಗಳನ್ನು ಮತ್ತಷ್ಟು ಪಾರದರ್ಶಕ ಆಗಿಸುವ ದಿಸೆಯಲ್ಲಿ ಇದು ಬಹಳ ದೊಡ್ಡ ಹೆಜ್ಜೆ. ಸ್ವಪ್ನಿಲ್ ತ್ರಿಪಾಠಿ ಮತ್ತು ಸುಪ್ರೀಂ ಕೋರ್ಟ್ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, 'ನಮ್ಮ ದೇಶದಲ್ಲಿ ಬಹುದೊಡ್ಡ ಸಂಖ್ಯೆಯ ಜನರಿಗೆ ನ್ಯಾಯಾಲಯದ ಕಲಾಪಗಳನ್ನು ನೋಡುವ ಅವಕಾಶ ಅಪರೂಪಕ್ಕೆ ಒಮ್ಮೆ ಸಿಗುತ್ತದೆ. ಇದು ಮುಕ್ತ ನ್ಯಾಯಾಲಯದ ಉದ್ದೇಶವನ್ನು ಕುಗ್ಗಿಸುತ್ತದೆ. ಹೀಗೆ ಅವಕಾಶ ಸಿಗದೆ ಇರುವುದಕ್ಕೆ ಕಾರಣ ಬಡತನ, ಅನಕ್ಷರತೆ, ನ್ಯಾಯಾಲಯ ದೂರದಲ್ಲಿರುವುದು, ಖರ್ಚು ಮತ್ತು ಕಲಾಪಗಳ ಬಗ್ಗೆ ಅರಿವಿನ ಕೊರತೆ' ಎಂದು ಹೇಳಿದೆ.



ಸಾರ್ವಜನಿಕರಲ್ಲಿ ಕಾನೂನಿನ ಅರಿವು ಹೆಚ್ಚಿಸುವ ಕೋರ್ಟ್ ಕಲಾಪಗಳ ನೇರ ಪ್ರಸಾರದ ವ್ಯವಸ್ಥೆ ಆದಷ್ಟು ಬೇಗ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರಬೇಕು

ಕೋರ್ಟ್ ಕಲಾಪಗಳ ನೇರ ಪ್ರಸಾರ ಬೇಕು ಎಂಬ ಅಭಿಪ್ರಾಯವು ದೇಶದ ಉನ್ನತ ನ್ಯಾಯಾಂಗದಲ್ಲಿ ಈಗಾಗಲೇ ಮೂಡಿದೆ. ಅದರ ಫಲವಾಗಿಯೇ ಕೆಲವು ಹೈಕೋರ್ಟ್‌ಗಳು ಕಲಾಪಗಳ ನೇರ ಪ್ರಸಾರವನ್ನು ಪ್ರಾಯೋಗಿಕವಾಗಿ ನಡೆಸಿವೆ. ಈ ಪ್ರಯೋಗ ಯಶಸ್ಸು ಕಂಡು, ಕಲಾಪಗಳ ನೇರ ಪ್ರಸಾರವು ಅನುದಿನವೂ ಇರುವಂತೆ ಆಗಬೇಕು. 'ನ್ಯಾಯದಾನ ಮಾತ್ರವೇ ಮುಖ್ಯವಲ್ಲ, ನ್ಯಾಯದಾನ ಆಗುತ್ತಿರುವುದು ಇತರರಿಗೆ ಗೊತ್ತಾಗುವಂತೆಯೂ ಇರಬೇಕು' ಎಂದು ನ್ಯಾಯಶಾಸ್ತ್ರ ಹೇಳುತ್ತದೆ. ಈ ಮಾತಿನ ಕ್ರಿಯಾರೂಪ ಮುಕ್ತ ನ್ಯಾಯಾಲಯದ ವ್ಯವಸ್ಥೆ. ಈ ವ್ಯವಸ್ಥೆಯು ತಂತ್ರಜ್ಞಾನದ ನೆರವು ಪಡೆದು, ಕಲಾಪಗಳ ನೇರ ಪ್ರಸಾರ ಹೆಚ್ಚೆಚ್ಚು ಆಗುವಂತಾದರೆ, ನ್ಯಾಯಾಲಯದ ಕಲಾಪಗಳ ಬಗ್ಗೆ ಸಾರ್ವಜನಿಕರಿಗೆ ಇನ್ನಷ್ಟು ಅರಿವು ಮೂಡುತ್ತದೆ. ಆಗ ವ್ಯವಸ್ಥೆಯ ಮೇಲಿನ ವಿಶ್ವಾಸ ಇನ್ನಷ್ಟು ಹೆಚ್ಚುತ್ತದೆ. 'ನ್ಯಾಯಾಲಯದಲ್ಲಿನ ವಿಚಾರಣೆಗಳಿಗೆ ಪ್ರಜೆಗಳು ಹಾಜರಾಗಿ, ವಿಚಾರಣೆಗಳನ್ನು ಗಮನವಿಟ್ಟು ಕೇಳಿಸಿಕೊಳ್ಳಬೇಕು' ಎಂದು ತತ್ವಶಾಸ್ತ್ರಜ್ಞ ಪ್ಲೇಟೊ ಹೇಳಿದ್ದ. ಪ್ರಜೆಗಳು ಈ ರೀತಿ ಮಾಡಿದಾಗ ಸಾಂವಿಧಾನಿಕ ವಿಷಯಗಳಲ್ಲಿ, ಕಾನೂನಿಗೆ ಸಂಬಂಧಿಸಿದ ವಿಷಯಗಳಲ್ಲಿ ಅವರ ಅರಿವು ವಿಸ್ತಾರವಾಗುತ್ತದೆ. ವ್ಯವಸ್ಥೆಯ ಬಗ್ಗೆ ಅರಿವು ಹೊಂದಿರುವ ವ್ಯಕ್ತಿ ಪ್ರಜಾತಂತ್ರ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗಿಯಾಗುತ್ತಾನೆ. ದೇಶದ ಉನ್ನತ ನ್ಯಾಯಾಲಯಗಳಲ್ಲಿ ನಡೆಯುವ ವಿಚಾರಣೆಯ ವೇಳೆ ಹಿರಿಯ ವಕೀಲರು ಮಾಡುವ ವಾದ–ಪ್ರತಿವಾದಗಳು ಬಹಳ ಮಾಹಿತಿಪೂರ್ಣವೂ, ವಿಶ್ಲೇಷಣಾತ್ಮಕವೂ, ಪ್ರಜ್ಞೆಯನ್ನು ವಿಸ್ತರಿಸುವಂಥವೂ ಆಗಿರುತ್ತವೆ. ಕಲಾಪಗಳ ನೇರ ಪ್ರಸಾರ ಪೂರ್ಣ ಪ್ರಮಾಣದಲ್ಲಿ ಆರಂಭವಾದರೆ, ಹಿರಿಯ ವಕೀಲರು ಮಂಡಿಸುವ ವಾದ–ಪ್ರತಿವಾದಗಳನ್ನು ವಿವರವಾಗಿ ನೋಡುವ ಅವಕಾಶ ಪ್ರತೀ ಪ್ರಜೆಗೂ ಲಭ್ಯವಾಗುತ್ತದೆ. ಅದು ಕಾನೂನಿನ ಅರಿವನ್ನು ಸಾರ್ವಜನಿಕರಲ್ಲಿ ಹೆಚ್ಚಿಸುತ್ತದೆ. ಹತ್ತು ಹಲವು ಒಳ್ಳೆಯ ಸಂಗತಿಗಳನ್ನು ಹೊತ್ತಿರುವ ಕಲಾಪಗಳ ನೇರ ಪ್ರಸಾರದ ವ್ಯವಸ್ಥೆಯು ಆದಷ್ಟು ಬೇಗ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರುವಂತೆ ಆಗಬೇಕು.

ದಿನದ ಟ್ವೀಟ್

ಹಳೆ ಫೋನ್ ಸದ್ಬಳಕೆಯಾಗಲಿ



ನಿಮ್ಮ ಹಳೆಯ ಸ್ಮಾರ್ಟ್ ಫೋನ್‌ಗಳು ಕಾರ್ಯನಿರ್ವಹಿಸುವಂತೆ ಮಾಡಿ ಮತ್ತು ನಿಮ್ಮ ಸುತ್ತಮುತ್ತ ಇರುವ ಸೌಲಭ್ಯವಂಚಿತ ಮಕ್ಕಳಿಗೆ ಅಭ್ಯಾಸದ ಸಲುವಾಗಿ (ಸ್ಟಡಿ ಫ್ರಮ್ ಹೋಮ್) ಅವುಗಳನ್ನು ನೀಡಿ. ಸಾಂಕ್ರಾಮಿಕವು ತೊಲಗಲು ತನ್ನದೇ ಸಮಯ ತೆಗೆದುಕೊಳ್ಳುತ್ತದೆ. ಹೀಗಾಗಿ, ಅದರ ಅಲೆಗಳ ಜೊತೆಗೇ ಬದುಕಲು ನಾವು ಸಿದ್ಧರಾಗಿ ಇರಬೇಕಾಗುತ್ತದೆ.

ಭಾಸ್ಕರ್ ರಾವ್, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಎಡಿಜಿಪಿ), ರೈಲ್ವೆ

25 ವರ್ಷಗಳ ಹಿಂದೆ

ಶುಕ್ರವಾರ, 7-6-1996

- **ಸಿಂಧ್ಯಾಗೆ ಸಾರಿಗೆ, ಬಸವಣ್ಣೆಪ್ಪ ಆಹಾರ, ಲೀಲಾದೇವಿ ಪ್ರವಾಸ, ರೇವಣ್ಣ ವಸತಿ**

ಬೆಂಗಳೂರು, ಜೂನ್ 6– ಕುತೂಹಲ ಕೆರಳಿಸಿದ್ದ ಸಚಿವ ಖಾತೆ ಹಂಚಿಕೆಯಲ್ಲಿ ಪಿ.ಜಿ.ಆರ್. ಸಿಂಧ್ಯಾ ಅವರಿಂದ ಗೃಹ ಖಾತೆ ಕಸಿದುಕೊಂಡು ಅವರಿಗೆ ಪ್ರಿಯವಾದ ಸಾರಿಗೆ ಇಲಾಖೆ ನೀಡಿರುವ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ವಿದ್ಯುತ್ ಖಾತೆಯನ್ನು ತಮ್ಮಲ್ಲೇ ಉಳಿಸಿಕೊಂಡು ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಣಕಾಸು ಇಲಾಖೆಯನ್ನೇ ಕೊಟ್ಟಿದ್ದಾರೆ.

ಎಂ.ಪಿ. ಪ್ರಕಾಶ್‌ಗೆ ಗ್ರಾಮೀಣಾಭಿವೃದ್ಧಿ-ಪಂಚಾಯತ್ ರಾಜ್, ಮಧ್ಯಮ ಹಾಗೂ ಭಾರಿ ಕೈಗಾರಿಕೆಯನ್ನು ಆರ್.ವಿ. ದೇಶಪಾಂಡೆ, ಕೃಷಿಯನ್ನು ಸಿ.ಬೈರೇಗೌಡ ಅವರಿಗೆ ನೀಡುವ ಮೂಲಕ ನೂತನ ಸಚಿವ ಸಂಪುಟ ಮಹತ್ತರ ಬದಲಾವಣೆಗಳನ್ನು ತೋರದಿದ್ದರೂ ಲೇಪನವನ್ನು ಪಡೆದಿದೆ.

ರಾಜ್ಯದಲ್ಲಿ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಬಗ್ಗೆ ಸರ್ಕಾರ ಬದ್ಧವಾಗಿದೆ ಎಂಬುದನ್ನು ತೋರಲು ಇದಕ್ಕಾಗಿಯೇ ಪ್ರತ್ಯೇಕ ಖಾತೆ ಸೃಷ್ಟಿಸಿರುವುದು ವಿಶೇಷವಾಗಿದೆ.

- **ಸಂಪುಟ ವಿಸ್ತರಣೆ ಅತೃಪ್ತಿ 16 ಶಾಸಕರ ರಾಜೀನಾಮೆ**

ಬೆಂಗಳೂರು, ಜೂನ್ 6– ಜೆ.ಎಚ್.ಪಟೇಲ್ ನೇತೃತ್ವದ ಸಚಿವ ಸಂಪುಟ ಪ್ರಾತಿನಿಧಿಕವಲ್ಲ ಮತ್ತು ಅಸಮತೋಲನದಿಂದ ಕೂಡಿದೆ ಎಂದು ಆರೋಪಿಸಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವವರ ಸಂಖ್ಯೆ 16ಕ್ಕೆ ಏರಿದೆ. ಆದರೆ ಈ ರಾಜೀನಾಮೆ ಪತ್ರಗಳು ನಿಯಮ ಪ್ರಕಾರ ಇಲ್ಲದಿರುವುದರಿಂದ ಅವುಗಳ ಅಂಗೀಕಾರ ಸಾಧ್ಯವಿಲ್ಲ ಎಂದು ವಿಧಾನಸಭೆ ಅಧ್ಯಕ್ಷ ರಮೇಶ್ ಕುಮಾರ್ ಸ್ಪಷ್ಟಪಡಿಸಿದ್ದಾರೆ.

ಈ ಪೈಕಿ ಐವರು ಶಾಸಕರು ತಾವು ರಾಜೀನಾಮೆ ನೀಡುತ್ತಿರುವುದಾಗಿ ಟೆಲಿಫೋನ್ ಮೂಲಕ ಹೇಳಿದ್ದಾರೆ. ಉಳಿದವರು ಬರೆದು ಕಳಿಸಿದ್ದರಾದರೂ ಅದು ಇರಬೇಕಾದ ರೀತಿಯಲ್ಲಿ ಇಲ್ಲ ಎಂದು ತಮ್ಮನ್ನು ಭೇಟಿಯಾದ ವರದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 7-6-1971

- **ಹೈಯರ್ ಸೆಕೆಂಡರಿ ಶಾಲೆಗಳಲ್ಲಿ ಪಿ.ಯು.ಸಿ. ಬೋಧನೆಗೆ ವಿಶೇಷ ಭತ್ಯೆ: ಅಧ್ಯಾಪಕರ ಆಗ್ರಹ**

ಬೆಂಗಳೂರು ಜೂನ್ 6– ಹೈಯರ್ ಸೆಕೆಂಡರಿ ಶಾಲೆಗಳಲ್ಲಿ ಹೊಸ ಪಿ.ಯು.ಸಿ.ಯ ಪ್ರಥಮ ವರ್ಷದ ತರಗತಿಗಳನ್ನೆತ್ತಿಕೊಳ್ಳುವ ಶಿಕ್ಷಕರಿಗೆ ವಾರಕ್ಕೆ ತಲಾ ಒಂದು ತರಗತಿಗೆ ತಿಂಗಳಿಗೆ 20 ರೂಪಾಯಿಗಳ ಭತ್ಯೆ ನೀಡಬೇಕು ಎಂದು ಹೈಯರ್ ಸೆಕೆಂಡರಿ ಶಾಲೆಗಳ ಮುಖ್ಯೋಪಾಧ್ಯಾಯರು ಮತ್ತು ಉಪಾಧ್ಯಾಯರುಗಳ ಸಭೆಯು ಸರ್ಕಾರವನ್ನು ಒತ್ತಾಯಪಡಿಸಿದೆ.

ಈ ವರ್ಷದಿಂದ ಜಾರಿಗೆ ಬರಲಿರುವ ಎರಡು ವರ್ಷಗಳ ಪಿ.ಯು.ಸಿ.ಯ ತರಗತಿಗಳನ್ನು ಹೈಯರ್ ಸೆಕೆಂಡರಿ ಶಾಲಾ ಶಿಕ್ಷಕರೂ ಹಲವು ಪ್ರಸಂಗಗಳಲ್ಲಿ ತೆಗೆದುಕೊಳ್ಳಬೇಕಾಗಿರುವುದರಿಂದ ಅವರ ಶ್ರಮಕ್ಕೆ ಸೂಕ್ತ ಪರಿಹಾರ ಅಗತ್ಯ ಎಂದು ಸಭೆ ಅಭಿಪ್ರಾಯಪಟ್ಟಿತು.


- **ಹೊಸ ಸೋಷಲಿಸ್ಟ್ ಪಕ್ಷ ಸೇರಲು ಕಾಂಗ್ರೆಸ್(ಸಂ) ಯುವಜನರ ಯತ್ನ**

ನವದೆಹಲಿ, ಜೂನ್ 6– ಪ್ರಜಾ ಸೋಷಲಿಸ್ಟ್ ಮತ್ತು ಸಂಯುಕ್ತ ಸೋಷಲಿಸ್ಟ್ ಪಕ್ಷಗಳು ವಿಲೀನವಾಗಿ ಒಂದೇ ಒಂದು ಸಮಾಜವಾದಿ ಪಕ್ಷವಾಗುವ ನಿರೀಕ್ಷೆ ಇರುವ ಈ ಸಮಯದಲ್ಲಿ, ಈ ಹೊಸ ಪಕ್ಷದೊಡನೆ ಮಾತುಕತೆ ನಡೆಸಲು ಸಂಸ್ಥಾ ಕಾಂಗ್ರೆಸ್ಸಿನಲ್ಲಿನ ಕೆಲ ಮಂದಿ ಯುವಜನರು ತಮ್ಮ ತಮ್ಮಲ್ಲೇ ಬೆಂಬಲವನ್ನು ಸಂಘಟಿಸುತ್ತಿದ್ದಾರೆ.

ಈ ಮಾತುಕತೆಗಳು ಸಂಸ್ಥಾ ಕಾಂಗ್ರೆಸ್ಸಿನ ಒಂದು ವರ್ಗದವರು ಹೊಸ ಪಕ್ಷದೊಡನೆ ಸೇರಲು ಅವಕಾಶ ಮಾಡಿಕೊಡಬಹುದು.

ನಮ್ಮ ಪೂರ್ವಿಕರ ಭಾಷಾ ಸೂಕ್ಷ್ಮತೆಯ ಅರಿವು ಅರತ ಭಾವಸ್ಥಿತಿ ನಮ್ಮದಾಗಿದೆ

ಕನ್ನಡ: ಜೀವಂತ ಭಾಷೆಯ ಅಸ್ಮಿತೆ



ವಿಶ್ಲೇಷಣೆ

ಎಸ್.ಜಿ.ಸಿದ್ಧರಾಮಯ್ಯ

ಲಿಪಿಗಳ ರಾಣಿ ಕನ್ನಡ ಲಿಪಿ– ವಿನೋಬಾ ಭಾವೆ

ಕನ್ನಡ ಭಾಷೆಯ ಅನನ್ಯತೆಯು ವರ್ಣಮಾಲೆಯನ್ನೊಳಗೊಂಡು ಉಚ್ಚಾರದ ವ್ಯತ್ಯಯ ಸೂಕ್ಷ್ಮದಲ್ಲಿ ಪ್ರಕಟವಾಗುವುದು. ಅಷ್ಟೇ ಅಲ್ಲ, ಜಗತ್ತಿನಲ್ಲಿರುವ ಯಾವುದೇ ಭಾಷೆಯ ಉಚ್ಚಾರವನ್ನು ಮೂಲ ಉಚ್ಚಾರಕ್ಕೆ ಎರವಾಗದಂತೆ ಅಕ್ಷರ ರೂಪದಲ್ಲಿ ಹಿಡಿದಿಡಲು ಕನ್ನಡ ವರ್ಣಮಾಲೆಗೆ ಸಾಧ್ಯ. ಏಕೆಂದರೆ ಒಂದು ಜೀವಂತ ಭಾಷೆಯಾದ ಕನ್ನಡ, ಜಗತ್ತಿನ ಹಲವು ಭಾಷೆಗಳಿಗೆ ಮುಖಾಮುಖಿಯಾದಾಗ ಕೊಡು-ಪಡೆಗೆ ಆರೋಗ್ಯಕರವಾದ ರೀತಿಯಲ್ಲಿ ತೆರೆದುಕೊಂಡ ಭಾಷೆಯಾಗಿದೆ. ತನ್ನ ಪ್ರಭಾವಳಿಯ ಆವರಣಕ್ಕೆ ಬಂದ ಎಷ್ಟು ಭಾಷೆಗಳಿಗೆ ತನ್ನ ಪದಗಳನ್ನೂ ಪರಿಭಾಷೆಗಳನ್ನೂ ಕನ್ನಡ ನೀಡಿದೆಯೋ ಗೊತ್ತಿಲ್ಲ. ಆದರೆ ಆ ಭಾಷೆಗಳಿಂದ ಸಮೃದ್ಧವಾಗಿ ಪದ, ಪಾರಿಭಾಷಿಕ ಪದಸಂಪತ್ತನ್ನು ಪಡೆದುಕೊಂಡಿದೆ. ಹೀಗೆ ಪಡೆದುಕೊಳ್ಳುವಾಗ ಅವುಗಳನ್ನು ಕನ್ನಡದ ಜಾಯಮಾನಕ್ಕೆ ಒಗ್ಗಿಸಿಕೊಂಡಂತೆ ಉಚ್ಚಾರ ಭಿನ್ನತೆಯಲ್ಲಿ ಬದಲಾವಣೆ ಮಾಡಿಕೊಂಡಿದೆ. ಇದು ಯಾವುದೇ ಜೀವಂತ ಭಾಷೆಯ ಗುಣಲಕ್ಷಣ.

ಕನ್ನಡದ ವಿಶೇಷವೆಂದರೆ, ವರ್ಣಮಾಲೆಯಲ್ಲೂ ಅಕ್ಷರಗಳ ಕುರಿತಾಗಿ ಬಹಳಷ್ಟು ಸ್ವೀಕಾರ ಕ್ರಿಯೆಗಳು ನಡೆದಿವೆ. ಈಗ ಸದ್ಯ ಬಳಕೆಯಲ್ಲಿರುವ ಕನ್ನಡ ವರ್ಣಮಾಲೆಯ ಅಕ್ಷರಗಳು ಐವತ್ತೆರಡು. ಆಧುನಿಕ ವೈಯ್ಯಾಕರಣಿಗಳು, ಭಾಷಾ ತಜ್ಞರು ಕನ್ನಡ ವರ್ಣಮಾಲೆಯಲ್ಲಿನ ಈ ಅಕ್ಷರಗಳನ್ನು ಕಡಿಮೆ ಮಾಡಲು ಹೊರಟಿದ್ದಾರೆ. ಈ ರೀತಿಯ ಪ್ರಯೋಗ ಹಿಂದೆಯೂ ನಡೆದಿತ್ತು. ಸಂಪೂರ್ಣ ಅಚ್ಚ ಕನ್ನಡದ ಪದಗಳನ್ನು ಬಳಸಿ ಕಾವ್ಯ ಬರೆಯುವ ಹಟಕ್ಕೆ ಬಿದ್ದಂತೆ ಆಂಡಯ್ಯ ಕವಿ 'ಕಬ್ಬಿಗರ ಕಾವಂ ಬರೆದ. ಆದರೆ ಆ ಪ್ರಯೋಗ ಕೇವಲ ಒಂದು ಪ್ರಯೋಗವಾಗಿ ಉಳಿಯಿತೇ ಹೊರತು ಮತ್ತೊಬ್ಬ ಆ ದಾರಿಯ ಪಯಣಿಗನಾಗಲಿಲ್ಲ. ಈಗಲೂ ಈ ವೈಯ್ಯಾಕರಣಿಗಳು ತಾತ್ವಿಕವಾಗಿ ತಮ್ಮ ಪ್ರಯೋಗಗಳನ್ನು ಹೇಳಿದರೂ ಪ್ರಾಯೋಗಿಕವಾಗಿ ಅವರು ತಮ್ಮ ಬರಹದಲ್ಲಿ ಅದನ್ನು ರೂಢಿಗೆ ತರುತ್ತಿಲ್ಲ. ಉದಾಹರಣೆಗೆ 'ಪ್ರಶ್ನೆ'ಗೆ ಬದಲಾಗಿ 'ಕೇಳ್ವಿ' ಕನ್ನಡಪದ ಪ್ರಯೋಗಿಸಲು ಸೂಚಿಸುತ್ತಾರೆ. ಆದರೆ ಅವರೇ ತಮ್ಮ ಎಲ್ಲಾ ರೀತಿಯ ಬರಹದಲ್ಲೂ 'ಪ್ರಶ್ನೆ'ಯನ್ನೇ ಪ್ರಯೋಗಿಸುತ್ತಾರೆ. ಹಾಗೆಯೇ ಮಹಾಪ್ರಾಣಗಳು ಕನ್ನಡಕ್ಕೆ ಬೇಕಿಲ್ಲವೆನ್ನುತ್ತಾರೆ. ಆದರೆ ಅವರ ಬರಹದಲ್ಲಿ ಎಲ್ಲೂ ಮಹಾಪ್ರಾಣಗಳನ್ನು ಬಿಟ್ಟು ಬರವಣಿಗೆ ಮಾಡಿಲ್ಲ, ಮಾಡುತ್ತಿಲ್ಲ.

ಹೀಗಾಗಿ ಯಾರು ಏನೇ ಬದಲಾವಣೆಗೆ ವ್ಯಕ್ತಿಗತ ನೆಲೆಯಲ್ಲಿ ಪ್ರಯೋಗಶೀಲರಾದರೂ ಅದು ಕೇವಲ ಒಂದು ಪ್ರಯೋಗಾತ್ಮಕ ಉದಾಹರಣೆಯಾಗಿ ಉಳಿದಿದೆಯೇ ಹೊರತು ಕನ್ನಡದ ವರ್ಣಮಾಲೆಯ ಐವತ್ತೆರಡು ಅಕ್ಷರಗಳೂ ಇಂದು ಸಹಜಗತಿಯ ಬಳಕೆಯಲ್ಲಿರುವುದು ಸತ್ಯ. ಈ ಐವತ್ತೆರಡು ಅಕ್ಷರಗಳು ಬಳಕೆಯಲ್ಲಿರುವುದರಿಂದಲೇ ಜಗತ್ತಿನ ಎಲ್ಲ ಭಾಷೆಗಳನ್ನು ಆಯಾ ಭಾಷೆಯ ಉಚ್ಚಾರಕ್ಕೆ ಎರವಾಗದಂತೆ ಕನ್ನಡ ಅಕ್ಷರಗಳಲ್ಲಿ ಬರೆದುಕೊಳ್ಳುವುದು ಸಾಧ್ಯವಿದೆ. ಉದಾಹರಣೆಗೆ, ಕನ್ನಡದಲ್ಲಿ ಫರ್ಷ್ಯ ಧ್ವನಿ ಇಲ್ಲ. ಇಂಗ್ಲಿಷಿನ Za - Fa ಧ್ವನಿಗಳು ಕನ್ನಡದಲ್ಲಿ ಇಲ್ಲ. ಡಜನ್, ಕಾಫಿ ಪದಗಳನ್ನು ಕನ್ನಡ ಅಕ್ಷರದಲ್ಲಿ ಉಚ್ಚಾರಕ್ಕೆ ಎರವಾಗದಂತೆ ಬಳಸಲಾಗುತ್ತಿದೆ. ಮೊದಲು ಜ ಗೆ ಜ಼.ಎಂದೂ ಫ ಗೆ ಫ಼.ಎಂದೂ ಅಕ್ಷರಗಳ ಕೆಳಗೆ ಎರಡು ಚುಕ್ಕಿಗಳನ್ನು ಇಟ್ಟು ಪ್ರಯೋಗಿಸಲಾಗುತ್ತಿತ್ತು. ಈಗ ಚುಕ್ಕಿಗಳನ್ನು ಬಿಟ್ಟು ಪ್ರಯೋಗ ನಡೆದಿದೆ. ಆದರೆ ಸಂದರ್ಭಾನುಸಾರ ಉಚ್ಚಾರದಲ್ಲಿ ವ್ಯತ್ಯಾಸಗಳನ್ನು ತರಲಾಗುತ್ತದೆ. ಉದಾಹರಣೆಗೆ, ಫಲ ಅಂದಾಗ ಅದು ಕನ್ನಡ ಉಚ್ಚಾರದ ಫಲವೇ ಆಗುತ್ತದೆ. ಅದೇ ಫ ಅಕ್ಷರ ಇಂಗ್ಲಿಷಿನ ಫಿನಾಯಿಲ್ ಎನ್ನುವಾಗ ಉಚ್ಚಾರದಲ್ಲಿ ಫ಼ಿ. ಎಂಬ ಉಚ್ಚಾರ ಅಯಾಚಿತವಾಗಿ ಚುಕ್ಕಿಗಳ ಪ್ರಯೋಗವಿಲ್ಲದೆಯೂ ಆಗುತ್ತದೆ. ಇದು ರೂಢಿಗೆ ಬಂದ ಪ್ರಯೋಗವಾಗಿ ಒಗ್ಗಿ ಹೋಗಿದೆ. ಇಂಥ ಕಿಂಚಿತ್ ಪ್ರಯೋಗ ವ್ಯತ್ಯಯಗಳನ್ನು ಬಿಟ್ಟರೆ ಮಿಕ್ಕಂತೆ ಎಲ್ಲ ಉಚ್ಚಾರಗಳೂ ಸಹಜ ದನಿ ಸ್ಪಂದನದ ವೈಜ್ಞಾನಿಕ ಸಮೀಕರಣದಲ್ಲಿ ಪ್ರಯೋಗಕ್ಕೆ ಹೊಂದಿಕೊಳ್ಳುತ್ತವೆ. ಇದು ಕನ್ನಡದ ವಿಶೇಷ.

ವೈಜ್ಞಾನಿಕ ವಿಧಾನದ ಈ ಸೌಲಭ್ಯ ಎಷ್ಟು ಭಾಷೆಗಳಲ್ಲಿದೆಯೋ ಗೊತ್ತಿಲ್ಲ. ಆದರೆ ಕನ್ನಡಕ್ಕೆ ಮಾತ್ರ ಉಚ್ಚಾರಕ್ಕೂ ಅಕ್ಷರ ಬರಹಕ್ಕೂ ಇರುವ ಸಾಮ್ಯ ಅಚ್ಚರಿ ಹುಟ್ಟಿಸುವ ಸಮೀಕರಣ ಸಾಂಗತ್ಯದಿಂದ ಕೂಡಿದೆ. ಈ ಅನುಕೂಲವು ಕನ್ನಡದ ಸೋದರಿ ಭಾಷೆಗಳಾದ ಇತರ ದ್ರಾವಿಡ ಭಾಷೆಗಳಿಗೆ ಇಲ್ಲ. ತಮಿಳಿನಲ್ಲಿ 'ಸ' ಅಕ್ಷರ ಬಿಟ್ಟರೆ 'ಶ', 'ಷ'ಗಳಿಲ್ಲ. ಕನ್ನಡಕ್ಕೆ ಇವು ಹೊರೆ ಅಲ್ಲ; ಅನುಕೂಲ. ಶಂಕರ ಸಂಕರನಾಗಲಾರ. ಷಣ್ಮುಖ ಸಣ್ಮುಖನಾಗಲಾರ. ಇದನ್ನು ಕನ್ನಡ ಭಾಷೆಯ ಜಾಯಮಾನ ಅಚ್ಚುಕಟ್ಟಾಗಿ ರೂಢಿಸಿಕೊಂಡಿದೆ. ಈ ರೀತಿಯ ಬಹಳಷ್ಟು ಉದಾಹರಣೆಗಳನ್ನು ಕನ್ನಡ ಪ್ರಯೋಗದಲ್ಲಿ ಎತ್ತಿಕೊಡಬಹುದು. ಅದೇ ಜಗತ್ತಿನ ಬಹುಭಾಗವನ್ನು ಆಕ್ರಮಿಸಿಕೊಂಡಿರುವ ಇಂಗ್ಲಿಷ್‌ನಲ್ಲಿ ಉಚ್ಚಾರಕ್ಕೂ ಬರಹಕ್ಕೂ ಸಾಂಗತ್ಯವೇ ಇಲ್ಲ. ಎಷ್ಟೋ ಕಡೆ ಅಕ್ಷರಗಳು ಬರಹದಲ್ಲಿ ಬಳಕೆಯಲ್ಲಿವೆ, ಉಚ್ಚಾರದಲ್ಲಿ ಅವು ಸೈಲೆಂಟ್ ಆಗುತ್ತವೆ. Walk, Could, Should, Psychology ಇತ್ಯಾದಿ. ಈ ಎಡವಟ್ಟು ಕನ್ನಡಕ್ಕಿಲ್ಲ. ಇದು ಗಮನಾರ್ಹ ವಿಷಯ.

ಕನ್ನಡದ ಇನ್ನೊಂದು ವಿಶೇಷವೆಂದರೆ ಕಾಗುಣಿತ ಪ್ರಯೋಗ. ತಲೆಕಟ್ಟು, ದೀರ್ಘ, ಹ್ರಸ್ವ, ಏತ್ವ, ಐತ್ವ, ಓತ್ವ, ಔತ್ವದಂಥ ವಿಚಾರದಲ್ಲಿ ಆಗುವ ಅರ್ಥ ವ್ಯತ್ಯಾಸಗಳು ಕನ್ನಡ ಭಾಷೆಯ ಸಂಕೀರ್ಣತೆಯನ್ನು, ಸೂಕ್ಷ್ಮತೆಯನ್ನು ಬಿಂಬಿಸುತ್ತವೆ. ಇಲ್ಲಿ ಉದಾಹರಣೆಗೆ ಎರಡು ಪದಗಳನ್ನು ನೋಡಿ. ಅರಿತು = ತಿಳಿದುಕೊಂಡು. ಅರತು = ಬತ್ತಿ ಹೋಗು, ಬತ್ತಿ ಹೋದ. ಇಲ್ಲಿ 'ರ'ಕ್ಕೆ ಇಳಿ ಬಂದರೆ ಅರಿತು ಅದೇ 'ರ'ಕ್ಕೆ ತಲೆಕಟ್ಟು ಉಳಿದರೆ ಅರತು. ಅರ್ಥವ್ಯತ್ಯಾಸ ಅಗಾಧ ರೀತಿಯಲ್ಲಿ ಆಗುತ್ತದೆ. ಪ್ರಯೋಗಕ್ಕಾಗಿ ಈ ವಚನ ನೋಡಿ: ಮೊದಲ ಭಾಗ– **ಅಹಂಕಾರವರತು ಗುರುವಾಗಿ, ಜಗವರತು ಲಿಂಗವಾಗಿ, ತ್ರಿವಿಧವರತು ಜಂಗಮವಾಗಿ, ಸಕಲೇಂದ್ರಿಯದ ಲಂಪಟವರತು ಭಕ್ತನಾಗಿ.**


ಎರಡನೇ ಭಾಗ– **ಸಂಸಾರವೆಂಬ ಗಡಬಡೆಯಲ್ಲಿ ಸಿಲುಕದೆ, ಆವಸ್ಥಲದಲ್ಲಿ ನಿಂದು ನೋಡಿದರೂ ಭಾವ ಶುದ್ಧವಾಗಿ, ಗುರುವಿಂಗೆ ಗುರುವಾಗಿ ಲಿಂಗಕ್ಕೆ ಲಿಂಗವಾಗಿ, ಜಂಗಮಕ್ಕೆ ಜಂಗಮವಾಗಿ, ಭಕ್ತರ ಯುಕ್ತಿಯ ಮಾರಿಕೊಂಡಿಪ್ಪ ಸದ್ಭಕ್ತ, ಕಾಲಾಂತಕ ಭೀಮೇಶ್ವರ ಲಿಂಗವು ತಾನೇ (ಢಕ್ಕೆಯ ಬೊಮ್ಮಣ್ಣನ ವಚನ – 10).**

ವಚನದ ಮೊದಲ ಭಾಗದಲ್ಲಿ ಅರತು = ಬತ್ತಿ ಹೋಗಿ, ಇಲ್ಲವಾಗಿ, ಲಯವಾಗಿ ಎಂಬ ಅರ್ಥ ಪ್ರತೀತಗೊಂಡು ವಚನದ ಆಶಯ ಬೆಳೆದಿದೆ. ಸಂಸಾರದ ಗಡಬಡೆಯಲ್ಲಿ ಗುರುಲಿಂಗ ಜಂಗಮಗಳು ಸಿಲುಕದಿರಬೇಕಾದರೆ ಅಹಂಕಾರ, ಜಗ, ತ್ರಿವಿಧಗಳು ಅಂದರೆ ಈ ಗುಣಗಳು ಬತ್ತಿ ಹೋಗಬೇಕು, ವರ್ಜಿತವಾದವುಗಳಾಗಬೇಕು. ಅದು ತಪ್ಪಿ ಅವುಗಳನ್ನು ಒಳಗೊಂಡಿದ್ದರೆ ಅವನು ಗುರು, ಲಿಂಗ, ಜಂಗಮ ಸ್ವರೂಪಿಯಾಗಲಾರ. ಕಾಲಾಂತಕ ಭೀಮೇಶ್ವರ ಲಿಂಗವು ತಾನೇ ಆಗಲಾರ. ಇದು ವಚನದ ಎರಡನೇ ಭಾಗದ ಆಶಯ.

ಇಲ್ಲಿ ಇದೇ ಅರತು ಪದಕ್ಕೆ ಬದಲಾಗಿ ಅರಿತು ಪದಪ್ರಯೋಗ ಮಾಡಿನೋಡಿ. ಅರ್ಥವ್ಯತ್ಯಾಸದ ಪರಿ ಹೇಗೆ ಬೆಳೆಯುತ್ತದೆ ಎಂಬುದು ಕುತೂಹಲಕರ ವಿಚಾರ. ಅರಿತು ಎಂದರೆ ತಿಳಿದುಕೊಂಡು ಎಂದರ್ಥ. ಅರಿವು ಎಂಬುದು ಕೇವಲ ತಿಳಿವಳಿಕೆಯಾದರೆ ಕ್ರಿಯೆ ಇಲ್ಲದ ಅರಿವು ಹೀನವಪ್ಪುದು. ಈ ವಚನದಲ್ಲಿ ಮುಂದಿನ ಭಾಗಕ್ಕೆ ಹೊಂದಿಸಿಕೊಂಡಾಗ ಕ್ರಿಯೆಯ ವಿಚಾರದ ಪರಿಣಾಮವನ್ನು ಧ್ವನಿತ ಭಾವದಲ್ಲಿ ವ್ಯಂಜಿಸುತ್ತಿದೆ. ಈ ಪರಿಯ ಪ್ರಯೋಗವನ್ನು ಅಧ್ಯಾಹಾರದ ಭಾವಾರ್ಥ ಪ್ರಯೋಗ ಎಂದು ಕರೆಯುತ್ತಾರೆ. ಹೀಗಾಗಿ ಗುರು, ಲಿಂಗ, ಜಂಗಮಗಳು ತಾನೇ ಕಾಲಾಂತಕ ಭೀಮೇಶ್ವರ ಲಿಂಗವಾಗುವುದಕ್ಕೆ ಈ ತಿಳಿವು ಮುಖ್ಯ ಎಂಬುದನ್ನು ಇದು ಸಾರುತ್ತಿದೆ.

ಮೇಲುನೋಟಕ್ಕೆ ಎರಡೂ ಪ್ರಯೋಗಗಳು ಸರಿ ಹಾಗೂ ಸಮ ಎನ್ನಿಸುವಂತೆ ಕಂಡರೂ ಅರತು ಎಂಬುದು ಸಾಧಕನ ಅಂತಿಮ ಪರಿಣಾಮ ಗುಣವನ್ನು ಪರಿಭಾವಿಸಿ ಹೇಳುತ್ತಿದೆ. ಅರಿತು ಎಂಬುದು ಸಾಧಕನ ಪ್ರಯೋಗಶೀಲ ಗುಣವನ್ನು ಸಾದರಪಡಿಸಿದಂತೆ ವ್ಯಂಜಿಸಿ ಹೇಳುತ್ತಿದೆ. ಹೀಗೆ ಎರಡೂ ಪ್ರಯೋಗಗಳ ಆಂತರ್ಯದ ವ್ಯತ್ಯಯ ತುಂಬಾ ಸಂಕೀರ್ಣವಾದುದು. ಇದು ಭಾಷಾ ಬಳಕೆಯ ಪ್ರಜ್ಞಾಪರಿಣತಿಗೆ ಸಂಬಂಧಿಸಿದ್ದು. ಕನ್ನಡಪ್ರಜ್ಞೆ ಇಂಥ ಸೂಕ್ಷ್ಮತೆಗಳ ನೆಲೆಯಲ್ಲಿ ಜ್ಞಾನ ವಿಚಾರಗಳನ್ನು ಧಾರಣ ಮಾಡಿಕೊಂಡಿದೆ. ಈ ಸೂಕ್ಷ್ಮತೆಯ ಅರಿವಿಲ್ಲದ ಜನ, ಕನ್ನಡ ಭಾಷೆಯನ್ನಾಡುವ ಕನ್ನಡಜನ ತಮ್ಮ ಭಾಷೆಯ ಬಗೆಗೆ ತಾವೇ ಕೀಳರಿಮೆ ಬೆಳೆಸಿಕೊಂಡಿರುವುದು ಕನ್ನಡ ಭಾಷೆಯ ದೌರ್ಭಾಗ್ಯ, ಕನ್ನಡ ಜನತೆಯ ದುರಂತ. ನಮ್ಮ ಪೂರ್ವಿಕರ ಭಾಷಾ ಸೂಕ್ಷ್ಮತೆಯ ಅರಿವು ಅರತ ಭಾವಸ್ಥಿತಿ ನಮ್ಮದಾಗಿದೆ. ಇದರಿಂದ ಭಾಷೆಗೆ ಒಳ್ಳೆಯದಲ್ಲ; ಭಾಷಾ ಸಮುದಾಯಕ್ಕೂ ಭವಿಷ್ಯವಿಲ್ಲ.

ಗೂಗಲ್, ಅಮೆಜಾನ್‌ಗಳಲ್ಲಿ ಈಗ ಆಗಿರುವ ಅವಮಾನಕಾರಕ ಘಟನೆಗಳು ಖಂಡನಾರ್ಹ. ಇವುಗಳನ್ನು ಪ್ರಶ್ನಿಸುವಾಗ, ಇದಕ್ಕೆ ಕಾರಣವಾದ ನಮ್ಮ ಕ್ರಿಯಾಹೀನ ಅರಿವನ್ನೂ ಆತ್ಮವಿಮರ್ಶೆಗೆ ಒಡ್ಡಿಕೊಳ್ಳಬೇಕಾಗಿದೆ.



ಚುರುಮುರಿ



ವ್ಯಾಕ್ಸಿನ್ ಚಿತ್ರಣ

• ಸುಮಂಗಲಾ

ಕೋಲ್ಕತ್ತದಿಂದ ವರ್ಕ್ ಫ್ರಮ್ ಹೋಂನಲ್ಲಿದ್ದ ಸಹೋದ್ಯೋಗಿಯೊಂದಿಗೆ ವಿಡಿಯೊ ಕಾಲ್‌ನಲ್ಲಿದ್ದೆ. ನಡುವೆ ಬಂದ ಬೆಕ್ಕಣ್ಣ 'ನೀನು ಮೋದಿ ಚಿತ್ರದ ವ್ಯಾಕ್ಸಿನು ಹಾಕಿಸಿಕೊಂಡೀಯೋ ಅಥವಾ ದೀದಿ ಚಿತ್ರದ್ದಾ?' ಎಂದು ಅವನಿಗೆ ಕೇಳಿತು.

ಮಾರ್ಜಾಲ ಪ್ರಶ್ನೆ ಅರ್ಥವಾಗದೆ ಅವನು ತಲೆ ಕೆರೆದುಕೊಂಡ.

'ಕೋವಿಶೀಲ್ಡು, ಕೋವ್ಯಾಕ್ಸಿನು, ಸ್ಪುಟ್ನಿಕ್, ಫೈಜರ್ ಈ ಎಲ್ಲಾ ಕೇಳೀವಿ. ಅದ್ಯಾವುದಲೇ ಹೊಸಾ ವ್ಯಾಕ್ಸಿನು' ಎಂದೆ ಅಚ್ಚರಿಯಿಂದ.

'ವ್ಯಾಕ್ಸಿನ್ ಹಾಕಿಸಿಗೆಂಡ ಮ್ಯಾಲೆ ಸರ್ಟಿಫಿಕೇಟ್ ಕೊಡ್ತಾರಲ್ಲ, ಅದ್ರಾಗೆ ನಮ್ಮ ಮೋದಿಮಾಮನ ಚಿತ್ರ ಇರತೈತಲ್ಲ. ಹಂಗ ಬಂಗಾಳದಾಗೆ ರಾಜ್ಯ ಸರ್ಕಾರ ರೊಕ್ಕ ಕೊಟ್ಟ ತಗಂಡ ವ್ಯಾಕ್ಸಿನ್ ಹಾಕಿಸ್ಕೆಂಡರೆ ಸರ್ಟಿಫಿಕೇಟಿನಾಗೆ ದೀದಿ ಚಿತ್ರ ಇರತೈತಂತ. ನಮ್ಮಲ್ಲೂ ಹೀಂಗ ರಾಜ್ಯದ ರೊಕ್ಕದಾಗೆ ಖರೀದಿ ಮಾಡಿರೂ ವ್ಯಾಕ್ಸಿನ್ ಸರ್ಟಿಫಿಕೇಟಿನಾಗೆ ಯಡ್ಯೂರಜ್ಜಾರ ಫೋಟೊ ಇರಬೇಕಿತ್ತು' ಎಂದು ಬೆಕ್ಕಣ್ಣ ಉದ್ದಕ್ಕೆ ವಿವರಿಸಿತು.

'ನಿಮ್ಮ ಅಜ್ಜಾರಿಗಿ ಕುರ್ಚಿ ಉಳಿದ್ರ ಸಾಕಾಗೇತಿ, ಒಂದು ಕಾಲು ಅಲುಗಾಡತೈತಿ ಅಂತ ಬೆಣೆ ಹೊಡೆದು ಸರಿ ಮಾಡೂ ಹೊತ್ತಿಗೆ ಇನ್ನೊಂದು ಕಾಲು ಅಲುಗಾಡತೈತಿ. ಹಿಂತಾ ಕಾರುಬಾರಿಗೆ ಟೈಮ್ ಎಲ್ಲೈತಿ?' ಎಂದೆ.

'ಸರ್ಕಾರದಿಂದ ಉಚಿತ ವ್ಯಾಕ್ಸಿನ್ ತಗಂಡರ ಸರ್ಟಿಫಿಕೇಟಿನಾಗೆ ಅವರ ಫೋಟೊ ಇರೂದು ಬರೋಬ್ಬರಿ. ಆದ್ರೆ ರೊಕ್ಕ ಇದ್ದವರು ಖಾಸಗಿ ಆಸ್ಪತ್ರೆವಳಗ ಸಾವಿರಗಟ್ಟಲೆ ಕೊಟ್ಟು ಹಾಕಿಸಿಕೊಂಡ್ರ, ಆವಾಗ ಯಾರ ಫೋಟೊ ಇರಬೇಕು? ರೊಕ್ಕ ಕೊಟ್ಟು ವ್ಯಾಕ್ಸಿನು ಹಾಕಿಸಿಕೊಳ್ಳೂ ಮಂದಿ ಸರ್ಟಿಫಿಕೇಟಿನಾಗೆ 'ನಮ್ಮದೇ ಫೋಟೊ ಪ್ರಿಂಟು ಮಾಡ್ರಿ' ಅಂದ್ರ ಆವಾಗೇನು ಮಾಡದು? ಅದಕ್ಕೇ ಖರೇ ಅಂದ್ರ, ಯಾರು ವ್ಯಾಕ್ಸಿನು ಕಂಡುಹಿಡಿದ್ರೋ ಆ ವಿಜ್ಞಾನಿ ಅಥವಾ ಆ ಕಂಪನಿ ಫೋಟೊ ಹಾಕೂದೇ ಬರೋಬ್ಬರಿ' ಬಂಗಾಳಿ ಬಾಬು ವಾದ ಮಂಡಿಸಿದ.

'ಸರ್ಟಿಫಿಕೇಟಿನಾಗೆ ಕೊರೊನಣ್ಣನ ಚಿತ್ರನೇ ಇರಬೇಕಿತ್ತು. ಕೊನೇಪಕ್ಷ ಅಂವ ಜಾತಿ, ಧರ್ಮ ಅಂತಸ್ತು ಅಂತೆಲ್ಲ ಭೇದಭಾವ ಮಾಡದೆ ಎಲ್ಲಾರನ್ನೂ ಸಮಾನವಾಗಿ ಕಾಣತಾನ' ಬೆಕ್ಕಣ್ಣ ಜಾಣನಗು ಬೀರಿತು.

ಸಂಗತ

ಪರೀಕ್ಷೆಗೆ ಈಗ 'ಪರೀಕ್ಷಾ' ಕಾಲ

ಜಗತ್ತಿನ ಎಲ್ಲಾ ಪರಿಣತರು ಸತತವಾದ, ವಿದ್ಯಾರ್ಥಿಸ್ನೇಹಿ ಮೌಲ್ಯಮಾಪನವಿರಬೇಕು, ಅಂತಿಮ ಪರೀಕ್ಷೆಗಳಲ್ಲ ಎಂದಿದ್ದರೂ ಯಾಕೆ ಈ ದಿಸೆಯಲ್ಲಿ ಪ್ರಯತ್ನ ನಡೆಯಲಿಲ್ಲ?

• ರಾಜೇಂದ್ರ ಚೆನ್ನಿ

ನಮ್ಮ ಪರೀಕ್ಷಾ ಪದ್ಧತಿಗಳ ವಿರೋಧಾಭಾಸವೆಂದರೆ, ಅವು ವಿದ್ಯಾರ್ಥಿಗಳ ಬುದ್ಧಿಮತ್ತೆ, ಸಾಮರ್ಥ್ಯ ಅಥವಾ ಕೌಶಲಗಳನ್ನು ಅಳೆಯುವುದರಲ್ಲಿ ಅಸಮರ್ಪಕವೆಂದೇ ಎಲ್ಲಾ ಪರಿಣತರು ಒಪ್ಪುತ್ತಾರೆ. ಆದರೆ ಇಡೀ ಶಿಕ್ಷಣ ವ್ಯವಸ್ಥೆಯೇ ಪರೀಕ್ಷೆಗಳನ್ನು ಆಧರಿಸಿದೆ.

ಎಷ್ಟರಮಟ್ಟಿಗೆ ಅಂದರೆ, ದ್ವಿತೀಯ ಪಿ.ಯು. ಮತ್ತು ಸಿ.ಇ.ಟಿ. ಪರೀಕ್ಷೆಗಳಿಗಾಗಿ ಕೋಚಿಂಗ್ ಕೊಡುವ ಕರ್ನಾಟಕದ ಕೆಲವು ಸಂಸ್ಥೆಗಳು ಕೋವಿಡ್ ಕಾಲದಲ್ಲಿಯೂ ವಿದ್ಯಾರ್ಥಿಗಳನ್ನು ಮನೆಗೆ ಕಳಿಸಿಕೊಡುವುದಿಲ್ಲವೆಂದು ಹಟ ಮಾಡಿದ್ದರಿಂದ ಅವರ ಪಾಲಕರು ಜಗಳ, ಹರತಾಳ ಮಾಡಿ ಮಕ್ಕಳನ್ನು ವಾಪಸ್ ಪಡೆಯಬೇಕಾಯಿತು.

ಜೆಇಇ, ಐಐಟಿ, ನೀಟ್ ಪರೀಕ್ಷೆಗಳಿಗೆ ಕೋಚಿಂಗ್ ಮಾಡುವ 'ಕೋಟಾ' ಎನ್ನುವ ನಗರವೇ ರಾಜಸ್ಥಾನದಲ್ಲಿದೆ. ವರ್ಷಕ್ಕೆ 1.50 ಲಕ್ಷ ವಿದ್ಯಾರ್ಥಿಗಳು ಈ ಕೋಚಿಂಗ್ ಪಡೆಯುತ್ತಿದ್ದು, ಒಟ್ಟು ವ್ಯವಹಾರವು ವಾರ್ಷಿಕ ₹3,600 ಕೋಟಿಯದು. ಇಂಥ ಉದಾಹರಣೆಗಳನ್ನು ಬಿಟ್ಟರೂ ಪರೀಕ್ಷೆಗಳೇ ಶಿಕ್ಷಣ ಪದ್ಧತಿಯ ಬುನಾದಿ ಎಂದು ನಾವೆಲ್ಲ ಮಾನಸಿಕವಾಗಿ ಒಪ್ಪಿಕೊಂಡಿದ್ದೇವೆ. ಪಿ.ಯು. ಪರೀಕ್ಷೆಗಳು ಪವಿತ್ರ ಮತ್ತು ಅವುಗಳನ್ನು ನಡೆಸಿಯೇ ತೀರುತ್ತೇವೆ ಎಂದು ಸಚಿವರು ಮತ್ತು ಪಿ.ಯು. ಮಂಡಳಿ ವೀರೋಚಿತವಾಗಿ ಹೋರಾಟ ಮಾಡಿ, ಕೊನೆಗೆ ಪರೀಕ್ಷೆಗಳನ್ನು ರದ್ದು ಮಾಡುವ ನಿರ್ಧಾರವನ್ನು ಪ್ರಧಾನಿ ಪ್ರಕಟಿಸಿದ ಮೇಲೆ ಅವರು ತಮ್ಮ ನೀತಿಯನ್ನು ಬದಲಾಯಿಸಬೇಕಾಗಿ ಬಂತು. ಆದರೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳನ್ನು ವಿಭಿನ್ನ ರೀತಿಯಲ್ಲಾದರೂ ನಡೆಸಲೇಬೇಕು ಎಂದು ಈಗಲೂ ಹೇಳಲಾಗುತ್ತಿದೆ.

ಪರೀಕ್ಷೆಗಳ ನಿರ್ವಹಣೆಯಲ್ಲಿ ಅಸಮರ್ಪಕತೆ, ಪ್ರಶ್ನೆ ಪತ್ರಿಕೆಗಳ ಸೋರಿಕೆ, ನಕಲು ಮಾಡುವ ಸುದೀರ್ಘ ಪರಂಪರೆಯೇ ಇದೆ. ಜಗತ್ತಿನ ಇತಿಹಾಸದಲ್ಲಿಯೇ ಅತಿ ಭೀಕರವಾದ ಪಿಡುಗಿನ ಕಾಲದಲ್ಲಿ ಪರೀಕ್ಷೆಗಳು ಇಷ್ಟು ಅನಿವಾರ್ಯ ಹಾಗೂ ಪವಿತ್ರವಾಗಿಬಿಟ್ಟವು ಎನ್ನುವುದು ಆಶ್ಚರ್ಯದ ವಿಷಯ. ಕರ್ನಾಟಕವು ಸಿ.ಇ.ಟಿ. ಮೂಲಕ ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸುಗಳಿಗೆ ಪ್ರವೇಶಾತಿಯನ್ನು ಶುರು ಮಾಡಿದ ಮೇಲೆ ನಮ್ಮ ಮಧ್ಯಮವರ್ಗದ ಸ್ಥಿತಿಗಳು ಆಮೂಲಾಗ್ರವಾಗಿ ಬದಲಾದವು. ಇಂದು ಕಾಣುವ ನಗರೀಕರಣ, ಮಾಹಿತಿ ತಂತ್ರಜ್ಞಾನದ ಆಧಾರದ ಮೇಲೆ ನಿಂತಿರುವ ಜಾಗತೀಕರಣ, ಶಿಕ್ಷಿತ ಮಧ್ಯಮ ವರ್ಗದ ವಲಸೆ, ಶ್ರೀಮಂತಿಕೆ ಇವೆಲ್ಲವೂ ಈ ವಿದ್ಯಮಾನಕ್ಕೆ ಸಂಬಂಧಪಟ್ಟವು. ಆದರೆ ಸಿ.ಇ.ಟಿ. ಪ್ರಾಮುಖ್ಯತೆಯಿಂದಾಗಿ ಆರಂಭವಾದ ಖಾಸಗಿ ಕೋಚಿಂಗ್ ಸಂಸ್ಥೆಗಳು ತಮ್ಮದೇ ಪರ್ಯಾಯವಾದ ಅರ್ಥವ್ಯವಸ್ಥೆಯನ್ನೇ ನಿರ್ಮಿಸಿಕೊಳ್ಳುವಷ್ಟು ಪ್ರಬಲವಾದವು. ಇಂಗ್ಲಿಷ್ ಕಾದಂಬರಿಕಾರ ಡಿಕನ್ಸ್, ಶಾಲೆಗಳಿಗೆ 'Finish em' ('ಅವರನ್ನು/ ಮಕ್ಕಳನ್ನು ಮುಗಿಸಿ') ಎನ್ನುವ ಹೆಸರು ಕೊಡುತ್ತಾನೆ. ಅದು ಈ ಕೋಚಿಂಗ್ ಸೆಂಟರ್‌ಗಳಿಗೆ ಅನ್ವಯವಾಗುತ್ತದೆ. ಆದರೆ ಇದರಿಂದಾಗಿ ನಮ್ಮ ಉದಾರವಾದಿ ಮಾನವಿಕ ಶಿಕ್ಷಣವೇ ಮೂಲೆಗುಂಪಾಗಿ, ಪರೀಕ್ಷಾ ಕೇಂದ್ರಿತವಾದ ವ್ಯಾಪಾರಿ ಶಿಕ್ಷಣವು ಮುನ್ನೆಲೆಗೆ ಬಂದಿತು.

ಇದರ ಇತರ ಸಾಮಾಜಿಕ ಪರಿಣಾಮಗಳನ್ನು ಗಮನಿಸಿ. ಪರೀಕ್ಷೆಯಲ್ಲಿ ಅಂಕ ಗಳಿಸಿದವರೇ 'ಮೆರಿಟ್' ವಿದ್ಯಾರ್ಥಿಗಳೆಂದಾಗಿ, ಒಂದು ಮೆರಿಟೋಕ್ರಸಿಯೇ ಅಸ್ತಿತ್ವಕ್ಕೆ ಬಂದಿತು. ಸಾಮಾಜಿಕ ನ್ಯಾಯ, ಮೀಸಲಾತಿ ವಿರುದ್ಧ ದ್ವೇಷದ ಭಾವನೆ ಉಂಟಾಯಿತು. ಲೋಹಿಯಾ ಹೇಳಿದಂತೆ, ಇಂಗ್ಲಿಷ್, ಜಾತಿ ಮತ್ತು ಮೆರಿಟ್‌ಗಳು ಮೂಲತಃ ಸಂವಿಧಾನ ವಿರೋಧಿ ನಿಲುವುಗಳನ್ನು ಬೆಳೆಸಿದವು. ಇದರ ಹಿಂದೆ ಪರೀಕ್ಷಾ ಪದ್ಧತಿಯ ಪ್ರಾಬಲ್ಯವಿದೆ.

ಎಸ್‌ಎಸ್‌ಎಲ್‌ಸಿ ಮತ್ತು ಪಿ.ಯು. ಪರೀಕ್ಷೆ ಪಾಸು ಮಾಡಿದರೆ ಉದ್ಯೋಗಗಳು ಸಿಕ್ಕುತ್ತವೆ ಮತ್ತು ಮುಂದಿನ ಶಿಕ್ಷಣಕ್ಕೆ ಪ್ರವೇಶ ಸಿಕ್ಕುತ್ತದೆ ಎನ್ನುವ ಸುಳ್ಳು ವಾದಗಳನ್ನು ಮುಂದಿಡಲಾಗುತ್ತದೆ. ಕರ್ನಾಟಕದಲ್ಲಿ ಎಲ್ಲಾ ಪ್ರತಿಷ್ಠಿತ ಖಾಸಗಿ ಪಿ.ಯು. ಕಾಲೇಜುಗಳಲ್ಲಿ ಈಗಾಗಲೇ ಪ್ರವೇಶಗಳು ಮುಗಿದಿರುವುದು ಸರ್ಕಾರಕ್ಕೆ ಮಾತ್ರ ಗೊತ್ತಿಲ್ಲದ ಸಾರ್ವಜನಿಕ ವಾಸ್ತವವಾಗಿದೆ!



ದ್ವಿತೀಯ ಪಿ.ಯು. ಪರೀಕ್ಷೆಯ ಬಗ್ಗೆ ಮಹಾನ್ ಧೀಮಂತ ಚರ್ಚೆಗಳು ನಡೆಯುತ್ತಿರುವಾಗ ಎಲ್ಲಾ ಪ್ರತಿಷ್ಠಿತ ಖಾಸಗಿ ಕಾಲೇಜುಗಳಲ್ಲಿ ಪದವಿ ತರಗತಿಗಳ ಪ್ರವೇಶವು ಅಲ್ಲಿಯ ಪ್ರವೇಶ ಪರೀಕ್ಷೆಗಳ ಮೂಲಕ ನಡೆದು ಎರಡು ತಿಂಗಳಾಗಿದೆ. ಹೀಗಾಗಿ ಯಾವ ವಿಭಿನ್ನ ಶೈಲಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸಿದರೂ ದಲಿತ, ಹಿಂದುಳಿದ ಬಡ ವಿದ್ಯಾರ್ಥಿಗಳಿಗೆ ಸರ್ಕಾರಿ ಕಾಲೇಜುಗಳೇ ಗತಿ. ಅಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲೇಬೇಕಲ್ಲ, ಅದು ಸಂವಿಧಾನದ ಆಶಯವೂ ಹೌದಲ್ಲವೆ? ಹಾಗಿದ್ದರೆ ಎಂಸಿಕ್ಯುಗಳೇ (ಬಹು ಆಯ್ಕೆ ಪರೀಕ್ಷೆ) ಇರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಸರ್ಕಸ್ ಏಕೆ ಬೇಕು?

ಜಗತ್ತಿನ ಎಲ್ಲಾ ಪರಿಣತರು ಸತತವಾದ, ವಿದ್ಯಾರ್ಥಿಸ್ನೇಹಿ ಮೌಲ್ಯಮಾಪನವಿರಬೇಕು, ಅಂತಿಮ ಪರೀಕ್ಷೆಗಳಲ್ಲ ಎಂದು ಹೇಳಿದ್ದರೂ ಯಾಕೆ ಈ ದಿಸೆಯಲ್ಲಿ ಪ್ರಯತ್ನಗಳೇ ನಡೆಯಲಿಲ್ಲ? ಖಾಸಗಿ ಶಾಲೆಗಳಲ್ಲಿ ಮಾತ್ರ ಇದು ಹೇಗೆ ಸಾಧ್ಯವಾಗುತ್ತದೆ?

ಶಾಲೆಗಳಿಗೆ ನೀರು, ಶೌಚಾಲಯ, ಶಿಕ್ಷಕರು, ಆರೋಗ್ಯ ವ್ಯವಸ್ಥೆಯನ್ನು ನಿರ್ಲಕ್ಷ್ಯ ಮಾಡಿ, ಈಗ ಪರೀಕ್ಷೆಗಳೇ ಪವಿತ್ರವೆನ್ನುವ ಚಿಂತನೆ ಅಮಾನವೀಯವಲ್ಲವೇ? ಈಗಲೂ ಎಲ್ಲಾ ವಯಸ್ಕ ವಿದ್ಯಾರ್ಥಿಗಳಿಗೆ ತಕ್ಷಣ ಲಸಿಕೆ ನೀಡಬೇಕು ಎಂದು ಶಿಕ್ಷಣ ಇಲಾಖೆ ಯಾಕೆ ಹೇಳುವುದಿಲ್ಲ? ಆದರೆ ಈಗಾಗಲೇ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಕ್ಯಾಲೆಂಡರ್, ಪರೀಕ್ಷಾ ದಿನಾಂಕಗಳು ನಿಗದಿಯಾಗುತ್ತಿವೆ. ಇವುಗಳ ಬಗ್ಗೆ ಕೊರೊನಾ ಕಾಲದಲ್ಲಿಯೂ ಚಿಂತಿಸದೆ ಪರೀಕ್ಷೆಗಳನ್ನು ಹೇರುವ ಅಮಾನವೀಯತೆಗೆ ಕೊನೆಯೇ ಇಲ್ಲವೆ?

ವಾಚಕರ ವಾಣಿ

ಹಾರೆಗಳಿಗೆ ಅಭಿನಂದನೆ!

ದಾರಿಗೆ ಅಡ್ಡಿಯಾಗಿರುವ ಬಂಡೆಯನ್ನು ಹಾರೆಯಿಂದ ಮೀಟಿ ಎಬ್ಬಿಸಿ ಉರುಳಿಸಬೇಕಾದರೆ, ಆ ಹಾರೆಗೆ ಬಲವಾದ ಸಣ್ಣ ಅಡಿಗಲ್ಲು ಬೇಕಾಗುತ್ತದೆ. ತಮ್ಮ ದಾರಿಗೆ ಅಡ್ಡಿಯಾಗಿದ್ದ ಮೈಸೂರಿನ ಜಿಲ್ಲಾಧಿಕಾರಿ 'ರೋಹಿಣಿ ಸಿಂಧೂರಿ ಐಎಎಸ್' ಎಂಬ ಬಂಡೆಯನ್ನು ಮೀಟಿ ಎಬ್ಬಿಸಿ ಅಲ್ಲಿಂದ ಉರುಳಿಸಲು, ರಾಜಕಾರಣಿಗಳೆಂಬ ಹಾರೆಗಳು ಮೈಸೂರು ಮಹಾನಗರಪಾಲಿಕೆಯ ಆಯುಕ್ತೆ 'ಶಿಲ್ಪಾ ನಾಗ್ ಐಎಎಸ್' ಎಂಬ ಬಲವಾದ ಸಣ್ಣ ಅಡಿಗಲ್ಲನ್ನು ಬಳಸಿ, ಬಂಡೆಯೊಂದಿಗೆ ಸಣ್ಣ ಅಡಿಗಲ್ಲನ್ನೂ ಉರುಳಿಸಿ ಯಶಸ್ವಿಯಾಗಿದ್ದಾರೆ. ಹಾರೆಗಳಿಗೆ ಅಭಿನಂದನೆ!

ಪಿ.ಜೆ.ರಾಘವೇಂದ್ರ, ಮೈಸೂರು

ಅರ್ಧದಷ್ಟಾದರೂ ಮರಗಳು ಉಳಿಯಲಿ

ಹೆದ್ದಾರಿಗಳ ಇಕ್ಕೆಲಗಳಲ್ಲಿ ಅರಣ್ಯ ಇಲಾಖೆಯು ಸಸಿ ನೆಟ್ಟು ಪೋಷಿಸುತ್ತದೆ. ಆದರೆ ಮುಂದೆ ಅದೇ ಮರಗಳು ಇಕ್ಕೆಲಗಳ ವಿದ್ಯುತ್ ತಂತಿಗಳಿಗೆ ತಗುಲಿ ವಿದ್ಯುತ್ ಅವಘಡ ಸಂಭವಿಸುತ್ತದೆ ಎಂಬ ಕಾರಣಕ್ಕೆ, ನಿರ್ದಾಕ್ಷಿಣ್ಯವಾಗಿ ಅವುಗಳನ್ನು ಕಡಿದು ಹಾಕಲಾಗುತ್ತದೆ. ಇದನ್ನು ತಪ್ಪಿಸುವ ಹೊಣೆ ಯಾರದು?

ಇನ್ನಾದರೂ ಸರ್ಕಾರ ಎಚ್ಚೆತ್ತುಕೊಂಡು, ಒಂದು ಬದಿಯಲ್ಲಿ ವಿದ್ಯುತ್ ಕಂಬಗಳನ್ನು, ಮತ್ತೊಂದು ಬದಿಯಲ್ಲಿ ನೆಟ್ಟ ಸಸಿಗಳನ್ನು ಉಳಿಸುವ ಸ್ಪಷ್ಟ ನಿಯಮವನ್ನು ಜಾರಿಗೊಳಿಸಬೇಕು. ಆಗ ಕನಿಷ್ಠ ಅರ್ಧದಷ್ಟಾದರೂ ಮರಗಳನ್ನು ಉಳಿಸಿ ಬೆಳೆಸಲು ಸಾಧ್ಯವಾಗುತ್ತದೆ.

ಮಾ.ನಾ.ಶಿವಕುಮಾರ್, ಮಾರಸಂದ್ರ

ಪ್ರಶಸ್ತಿಗೆ ಆಯ್ಕೆ ಸಮಿತಿ ರಚಿಸಿ

ಹಲವಾರು ವರ್ಷಗಳಿಂದ ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ನೀಡುತ್ತಿರುವ 'ಉತ್ತಮ ಶಿಕ್ಷಕ' ಪ್ರಶಸ್ತಿಯ ಆಯ್ಕೆ ಪ್ರಕ್ರಿಯೆಯು ಶಿಕ್ಷಕರಿಗೆ ಅಪಮಾನ ಮಾಡುವ ರೀತಿಯದ್ದಾಗಿದೆ. ಈಗ 'ರಾಷ್ಟ್ರಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ'ಗೆ ಅರ್ಜಿ ಆಹ್ವಾನಿಸಲಾಗಿದೆ. ಪ್ರಶಸ್ತಿ ಪಡೆಯುವ ಇಚ್ಛೆ ಇರುವ ಶಿಕ್ಷಕರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹತ್ತಾರು ವರ್ಷ ಕಷ್ಟ ಕಾರ್ಪಣ್ಯಗಳ ನಡುವೆ ಪಾಠ ಹೇಳಿ ಸಾವಿರಾರು ವಿದ್ಯಾರ್ಥಿಗಳ ಬದುಕಿನಲ್ಲಿ ದೀಪ ಹಚ್ಚಿದ ಶಿಕ್ಷಕರು 'ನನ್ನನ್ನು ಉತ್ತಮ ಶಿಕ್ಷಕ ಎಂದು ಆಯ್ಕೆ ಮಾಡಿ' ಎಂದು ಕೇಳಿಕೊಳ್ಳುವುದು ಎಷ್ಟು ಸರಿ?

ಇತ್ತೀಚಿನ ವರ್ಷಗಳಲ್ಲಿ ಹೀಗೆ ಪ್ರಶಸ್ತಿಗೆ ಅರ್ಜಿ ಹಾಕಿ ತಮ್ಮ ಜಾತಿಯ ಪ್ರಭಾವಿಗಳ ಮನೆಬಾಗಿಲಲ್ಲಿ ನಿಲ್ಲುವ ಸ್ಥಿತಿ ಎದುರಾಗಿದೆ. ಜಾತ್ಯತೀತ ಮೌಲ್ಯಗಳನ್ನು ಮಕ್ಕಳಿಗೆ ಹೇಳಿಕೊಟ್ಟ ಶಿಕ್ಷಕಿ, ಶಿಕ್ಷಕ ಹೀಗೆ ಕೊನೆಯಲ್ಲಿ ಪ್ರಶಸ್ತಿಯ ಆಸೆಗಾಗಿ ತಮ್ಮ ಜಾತಿಯ ವಿಷವರ್ತುಲದಲ್ಲಿ ನಿಲ್ಲುವುದು ಕ್ರೌರ್ಯ. ಆದ್ದರಿಂದ ಪ್ರಶಸ್ತಿ ನೀಡುವ ಇಲಾಖೆಗಳು ಆಯ್ಕೆ ಪ್ರಕ್ರಿಯೆಯನ್ನು ಬದಲಿಸಿ, ಸಮಿತಿಗಳನ್ನು ರಚಿಸಿ ಆಯ್ಕೆ ಮಾಡುವುದು ಸೂಕ್ತ.

ಹುಲಿಕುಂಟೆ ಮೂರ್ತಿ, ಬೆಂಗಳೂರು

ಕೂಲಿಕಾರರ ಮಧ್ಯೆ ಜಾತಿ ತರದಿರಿ

ಮೇ ಎರಡನೇ ವಾರದಲ್ಲಿ ಸರ್ಕಾರವು ಲಾಕ್‌ಡೌನ್ ಘೋಷಿಸಿದಾಗ, ದೂರದೂರುಗಳಿಗೆ ಕೆಲಸಕ್ಕಾಗಿ ವಲಸೆ ಹೋಗಿದ್ದವರು ರಾತ್ರೋರಾತ್ರಿ ಸಿಕ್ಕ ಸಿಕ್ಕ ಬಸ್, ಟೆಂಪೊ, ಲಾರಿಗಳನ್ನು ಹತ್ತಿ ಊರುಗಳಿಗೆ ಬಂದಿಳಿದರು. ಇತ್ತ ಉದ್ಯೋಗ ಖಾತರಿಯ ಹಣ ಯಾತಕ್ಕೋ ಜಮಾ ಆಗಿಲ್ಲವೆಂದು ಮನೆಮಂದಿಯ ಚಿಂತೆ. ಕೆಲಸ ಮಾಡಿದ 15 ದಿನಗಳಲ್ಲಿ ಖಾತೆಗೆ ಜಮಾ ಆಗಬೇಕಾಗಿದ್ದ ಕೂಲಿ ಹಣ ಇನ್ನೂ ಬಂದಿಲ್ಲ. ವಿಚಾರ ಮಾಡಿ ನೋಡಿದಾಗ ಕೆಲವರಿಗೆ ಜಮಾ ಆಗುತ್ತಿದೆ. ಕೆಲವರಿಗೆ ಇಲ್ಲ. ಮತ್ತೂ ಕೂಲಂಕಷವಾಗಿ ವಿಚಾರ ಮಾಡಿದಾಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಹಣ ಜಮಾ ಆಗುತ್ತಿಲ್ಲ, ಸಾಮಾನ್ಯ ವರ್ಗದವರಿಗೆ ಆಗುತ್ತಿದೆ ಎಂದಾಗ ಸಖೇದಾಶ್ಚರ್ಯ.

ತಾಲ್ಲೂಕು, ಜಿಲ್ಲೆ, ಕಡೆಗೆ ರಾಜ್ಯ ಮಟ್ಟದವರೆಗೆ ವಿಚಾರಿಸಿದರೂ ಒಂದೇ ಉತ್ತರ– ಮೇಲಿಂದ ಬಂದಿದೇರೀ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ವರ್ಗಗಳ ಕೂಲಿಕಾರರ ಪಟ್ಟಿಯನ್ನು ಬೇರೆ ಬೇರೆ ಮಾಡಬೇಕೆಂದು ಆದೇಶವಾಗಿದೆ ಎಂದು. ಯಾತಕ್ಕೆ, ಏನು ಒಂದೂ ಸಮಜಾಯಿಷಿ ಇಲ್ಲ. ಕಾರ್ಮಿಕರ ಬ್ಯಾಂಕ್ ಖಾತೆಗೆ ಹಣ ಹಾಕಲು ಆರಂಭಿಸಿ 12 ವರ್ಷಗಳೇ ಉರುಳಿದ್ದರೂ ಇನ್ನೂವರೆಗೆ 15 ದಿನಗಳಲ್ಲಿ ಪಗಾರ ಹಾಕುವುದು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ.

ಈ ಸಮಸ್ಯೆಗೆ ಪರಿಹಾರ ಹುಡುಕುವುದರ ಬದಲು, ಹೊಸ ಸಮಸ್ಯೆ ಸೃಷ್ಟಿ ಮಾಡಹೊರಟಿದ್ದು ವಿಷಾದನೀಯ. ಉದ್ಯೋಗ ಖಾತರಿ ಕೂಲಿ ಹಣ ವರ್ಗಾವಣೆಯ ವಿಚಾರದಲ್ಲಿ ಸರ್ಕಾರದ ಆಟ ಈಗಿನದಲ್ಲ. 15 ವರ್ಷಗಳಿಂದಲೂ ಕೂಲಿ ಕೊಡುವ ವ್ಯವಸ್ಥೆಯಲ್ಲಿ ಪದೇಪದೇ ಬದಲಾವಣೆ. ಮೊದಲು ಕೈಯಲ್ಲೇ ಹಣ ಕೊಟ್ಟರು, ನಂತರ ಚೆಕ್ ಕೊಟ್ಟರು, ನಂತರ ಖಾತೆಗಳಿಗೆ ಜಮಾ ಮಾಡಲು ಆರಂಭಿಸಿದರು. ಎಲ್ಲ ಡಿಜಿಟಲೀಕರಣವಾಗಿದ್ದರೂ ಕೆಲಸ ಮಾಡಿದ 15 ದಿನಗಳಲ್ಲಿ ಕೂಲಿ ತಲುಪಿಸುವುದು ಇನ್ನೂವರೆಗೆ ಸರ್ಕಾರಕ್ಕೆ ಆಗುತ್ತಿಲ್ಲ. ಒಮ್ಮೆ ಜಿಲ್ಲಾ ಪಂಚಾಯಿತಿಯಿಂದ ಹಣ ಬರುವುದೆಂದರು, ಇನ್ನೊಮ್ಮೆ ರಾಜ್ಯದ ಖಜಾನೆಯಿಂದ ಎಂದರು, ಈಗ ದಿಲ್ಲಿಯಿಂದ ನೇರವಾಗಿ ಕೂಲಿಕಾರರ ಖಾತೆಗೆ ಎನ್ನುತ್ತಾರೆ. ಆದರೆ ಯಾವುದೇ ಹೊಸ ಬದಲಾವಣೆ ದಿಲ್ಲಿಯಿಂದ ಹಳ್ಳಿಯ ಪಂಚಾಯಿತಿಗಳ ಕಂಪ್ಯೂಟರಿಗೆ ಮುಟ್ಟುವ ವೇಳೆಗೆ ಅನೇಕ ತಿಂಗಳುಗಳೇ ಉರುಳಿ, ಕೂಲಿಕಾರರು ಹಣ ಬರುತ್ತದೆಂದು ಕಾಯುತ್ತ ಕುಳಿತಿರಬೇಕು. ಈಗ ಹೊಸದೊಂದು ಬದಲಾವಣೆ. ಬದಲಾವಣೆಯ ಕಾರಣಕ್ಕಾಗಿ ಮತ್ತೆ ಕೂಲಿಕಾರರು ತಿಂಗಳುಗಟ್ಟಲೆ ಕಾಯುವ ಪರಿಸ್ಥಿತಿ.

ಹತ್ತು ವರ್ಷಗಳ ಮೇಲಾಯಿತು, ಉದ್ಯೋಗ ಖಾತರಿಯಲ್ಲಿ ಹಳ್ಳಿಯ ಜನರೆಲ್ಲ ಒಟ್ಟಾಗಿ ದುಡಿಯುತ್ತಾರೆ. ಅಲ್ಲೇ ಹತ್ತಿರ ಹತ್ತಿರ ಕುಳಿತು ಊಟ ಮಾಡುತ್ತಾರೆ. ಕೆಲಸ ಮುಗಿದಿದ್ದರೆ ಚೌಕಾಬಾರ, ಪಗಡೆ ಮುಂತಾದ ಆಟಗಳನ್ನೂ ಆಡುತ್ತಾರೆ. ಕ್ರಮೇಣವಾಗಿ ಜಾತಿಗಳ ಬೇಲಿಯನ್ನೂ ಮುರಿಯುವ ದಿನಗಳು ಹತ್ತಿರ ಬಂದಿದ್ದವು. ಹೀಗಿರುವಾಗ ಸರ್ಕಾರವು ಯಾವುದೇ ಕಾರಣ ಕೊಡದೆ, ಜಾತಿವಾರು ಎಫ್.ಟಿ.ಒ ಮಾಡುತ್ತಿರುವುದು, ಒಂದೊಂದು ಜಾತಿಯವರಿಗೆ ಒಂದೊಂದು ಸಾರಿ ಸಂಬಳ ಕೊಡುವ ಹೊಸ ನೀತಿಯು ಕೂಲಿಕಾರರಲ್ಲಿ ಜಾತಿ ಮನೋಭಾವವನ್ನು ಮತ್ತೊಮ್ಮೆ ಗಟ್ಟಿಮಾಡಿದಂತೆ ಆಗುವುದಿಲ್ಲವೇ?

ಶಾರದಾ ಗೋಪಾಲ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಎರಡು ಹೆಜ್ಜೆ ಹಿಂದಕ್ಕಿರಿಸಿದ ಭಾರತ

ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆ ದುಬಾರಿ



ವಿಶ್ವಸಂಸ್ಥೆಯ 'ಸುಸ್ಥಿರ ಅಭಿವೃದ್ಧಿ ಗುರಿ' (ಎಸ್‌ಡಿಜಿ) ಸಾಧನೆಯಲ್ಲಿ ಭಾರತ ಎಡವಿದೆ. ಕಳೆದ ವರ್ಷಕ್ಕಿಂತ ಎರಡು ಶ್ರೇಯಾಂಕ ಕೆಳಗಿಳಿದಿದ್ದು, 117ನೇ ರ‍್ಯಾಂಕ್‌ಗೆ ತೃಪ್ತಿಪಟ್ಟುಕೊಂಡಿದೆ. 'ಭಾರತದ ಪರಿಸರ ಸ್ಥಿತಿಗತಿ ವರದಿ 2021'ರಲ್ಲಿ ಈ ಅಂಶ ಉಲ್ಲೇಖವಾಗಿದೆ. ಭಾರತವು 100ಕ್ಕೆ ಒಟ್ಟಾರೆ 61.9 ಅಂಕಗಳನ್ನು ಪಡೆದಿದ್ದು, ದಕ್ಷಿಣ ಏಷ್ಯಾದ ನಾಲ್ಕು ದೇಶಗಳಾದ ಭೂತಾನ್, ನೇಪಾಳ, ಶ್ರೀಲಂಕಾ ಮತ್ತು ಬಾಂಗ್ಲಾದೇಶಕ್ಕಿಂತ ಕಡಿಮೆ ಅಂಕ ಸಂಪಾದಿಸಿದೆ.

ವಿಶ್ವಸಂಸ್ಥೆಯ 193 ಸದಸ್ಯ ರಾಷ್ಟ್ರಗಳು 2015ರಲ್ಲಿ ರೂಪಿಸಿದ್ದ '2030 ಕಾರ್ಯಸೂಚಿ'ಯ ಭಾಗವಾಗಿ ಒಟ್ಟು 17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿ) ನಿಗದಿಪಡಿಸಲಾಗಿದೆ. ಭಾರತದ ಶ್ರೇಯಾಂಕವು 115ರಿಂದ 117ಕ್ಕೆ ಕುಸಿಯಲು ಕಾರಣವಾಗಿರುವ ಎಸ್‌ಡಿಜಿಗಳನ್ನು ವರದಿಯು ಪಟ್ಟಿ ಮಾಡಿದೆ.

ಹಸಿವು ಕೊನೆಗೊಳಿಸುವುದು ಮತ್ತು ಆಹಾರ ಭದ್ರತೆ ಸಾಧಿಸುವುದು (ಎಸ್‌ಡಿಜಿ 2), ಲಿಂಗ ಸಮಾನತೆ ಸಾಧಿಸುವುದು (ಎಸ್‌ಡಿಜಿ 5) ಮತ್ತು ಮೂಲಸೌಕರ್ಯ ನಿರ್ಮಾಣ, ಸುಸ್ಥಿರ ಕೈಗಾರಿಕೀಕರಣ ಉತ್ತೇಜನ ಹಾಗೂ ನಾವೀನ್ಯತೆ ಉತ್ತೇಜಿಸುವ (ಎಸ್‌ಡಿಜಿ 9) ಅಂಶಗಳು ದೇಶಕ್ಕೆ ಸವಾಲಾಗಿವೆ ಎಂದು ವರದಿ ಹೇಳಿದೆ.

ರಾಜ್ಯವಾರು ಸಾಧನೆಯನ್ನು ಗಮನಿಸಿದರೆ, ಜಾರ್ಖಂಡ್ ಮತ್ತು ಬಿಹಾರ 2030ರೊಳಗೆ ಸಾಧಿಸಬೇಕಾದ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ತಲುಪುವ ವಿಚಾರದಲ್ಲಿ ಕೊನೆಯ ಸಾಲಿನಲ್ಲಿ ನಿಂತಿವೆ. ಜಾರ್ಖಂಡ್ ಐದು ಗುರಿಗಳಲ್ಲಿ ಹಾಗೂ ಬಿಹಾರ ಏಳು ಗುರಿಗಳಲ್ಲಿ ಹಿಂದಿವೆ. ಆದರೆ ಕೇರಳ, ಹಿಮಾಚಲ ಪ್ರದೇಶ ಮತ್ತು ಚಂಡೀಗಢ ಗುರಿ ಸಾಧನೆಗೆ ನಿಗದಿಪಡಿಸಿರುವ ಒಟ್ಟಾರೆ ಅಂಕ ಗಳಿಕೆಯಲ್ಲಿ ಉತ್ತಮ ಸಾಧನೆ ಮಾಡಿವೆ ಎಂದು ವರದಿ ತಿಳಿಸಿದೆ.

ಪ್ರಸ್ತುತ ಮತ್ತು ಭವಿಷ್ಯದಲ್ಲಿ ಈ ಭೂಮಂಡಲ ಮತ್ತು ವಿಶ್ವದ ಎಲ್ಲ ಜನರು ಶಾಂತಿ ಮತ್ತು ಸಮೃದ್ಧಿಯನ್ನು ಸಾಧಿಸುವ ನೀಲನಕ್ಷೆಯನ್ನು 2030 ಎಸ್‌ಡಿಜಿ ಒದಗಿಸುತ್ತದೆ.

ಪರಿಸರ ವಿಕೋಪ, ಹವಾಮಾನ, ವಾಯುಮಾಲಿನ್ಯ, ನೈರ್ಮಲ್ಯ ಮತ್ತು ಕುಡಿಯುವ ನೀರು, ಪರಿಸರ ವ್ಯವಸ್ಥೆಯ ಸೇವೆಗಳು, ಜೀವವೈವಿಧ್ಯ ಸೇರಿದಂತೆ ವಿವಿಧ ಸೂಚ್ಯಂಕಗಳ ಮೇಲೆ ನಿಗದಿಪಡಿಸಲಾದ 'ಪರಿಸರ ಸಾಧನೆ ಸೂಚ್ಯಂಕ'ದ (ಇಪಿಐ) ಪ್ರಕಾರ ಭಾರತವು 180 ದೇಶಗಳ ಪೈಕಿ 168ನೇ ಸ್ಥಾನದಲ್ಲಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಪರಿಸರ ವಿನಾಶದ ಅಪಾಯಗಳಿಂದ ವಿವಿಧ ದೇಶಗಳು ತಮ್ಮ ಜನರನ್ನು ಎಷ್ಟು ಚೆನ್ನಾಗಿ ರಕ್ಷಿಸುತ್ತಿವೆ ಎಂಬುದರ ಸೂಚಕವಾಗಿರುವ 'ಪರಿಸರ ಆರೋಗ್ಯ ವಿಭಾಗ'ದಲ್ಲಿ ಭಾರತದ ಶ್ರೇಯಾಂಕ 172 ಆಗಿದೆ.

ಯೇಲ್ ವಿಶ್ವವಿದ್ಯಾಲಯದ ಇಪಿಐ 2020ರ ವರದಿಯ ಪ್ರಕಾರ, ಭಾರತವು 148ನೇ ಸ್ಥಾನ ಗಳಿಸಿದ್ದು, ಪಾಕಿಸ್ತಾನಕ್ಕಿಂತ 21 ಸ್ಥಾನ ಹಿಂದಿದೆ. 'ಜೀವವೈವಿಧ್ಯ ಮತ್ತು ಆವಾಸಸ್ಥಾನ' ವಿಭಾಗದಲ್ಲಿ 127ನೇ ಸ್ಥಾನದಲ್ಲಿರುವ ಪಾಕಿಸ್ತಾನವು ನೈಸರ್ಗಿಕ ಪರಿಸರ ವ್ಯವಸ್ಥೆ ಉಳಿಸಿಕೊಳ್ಳುವ ಮತ್ತು ಜೀವವೈವಿಧ್ಯ ರಕ್ಷಿಸುವ ವಿಚಾರದಲ್ಲಿ ಉತ್ತಮವಾಗಿದೆ.

ಆಧಾರ : ಪಿಟಿಐ

ಗುರಿಗಳು

- **ಎಸ್‌ಡಿಜಿ 1** ಬಡತನ ನಿರ್ಮೂಲನೆ– ಯಾವ ಸ್ವರೂಪದಲ್ಲಿಯೂ ಬಡತನವಿರಬಾರದು. ಸಮಸ್ತ ನಾಗರಿಕರಿಗೂ ಸಾಮಾಜಿಕ ಭದ್ರತೆ ಇರಬೇಕು
- **ಎಸ್‌ಡಿಜಿ 2** ಶೂನ್ಯ ಹಸಿವು– ಹಸಿವಿನಿಂದ ಯಾರೂ ಬಳಲಬಾರದು. ಎಲ್ಲರಿಗೂ ಆಹಾರ ಭದ್ರತೆ ಇರಬೇಕು. ಪೌಷ್ಟಿಕಾಂಶಯುಕ್ತ ಆಹಾರ ದೊರೆಯಬೇಕು. ಸುಸ್ಥಿರ ಕೃಷಿ ನೀತಿಗೆ ಉತ್ತೇಜನ
- **ಎಸ್‌ಡಿಜಿ 3** ಉತ್ತಮ ಆರೋಗ್ಯ– ಎಲ್ಲರಿಗೂ ಉತ್ತಮ ವೈದ್ಯಕೀಯ ಸೌಲಭ್ಯ ದೊರೆಯಬೇಕು. ಎಲ್ಲಾ ವಯಸ್ಸಿನವರು, ವರ್ಗದವರ ಆರೋಗ್ಯ ಉತ್ತಮ ಸ್ಥಿತಿಯಲ್ಲಿ ಇರಬೇಕು
- **ಎಸ್‌ಡಿಜಿ 4** ಗುಣಮಟ್ಟದ ಶಿಕ್ಷಣ– ಎಲ್ಲರನ್ನೂ ಒಳಗೊಂಡ ಶಿಕ್ಷಣ ನೀತಿ. ಜೀವನ ನಿರ್ವಹಣೆಗೆ ಅವಕಾಶಗಳನ್ನು ಒದಗಿಸುವಂತಹ ಗುಣಮಟ್ಟದ ಶಿಕ್ಷಣ ನೀತಿ
- **ಎಸ್‌ಡಿಜಿ 5** ಲಿಂಗ ಸಮಾನತೆ– ಲಿಂಗ ಸಮಾನತೆ ಎಲ್ಲೆಡೆ ಸಾಧ್ಯವಾಗಬೇಕು. ಮಹಿಳೆಯರು ಮತ್ತು ಬಾಲಕಿಯರ ಸಬಲೀಕರಣ
- **ಎಸ್‌ಡಿಜಿ 6** ಶುದ್ಧ ನೀರು ಮತ್ತು ಶುಚಿತ್ವ– ಎಲ್ಲರಿಗೂ ಶುದ್ಧನೀರಿನ ನಿರಂತರ ಲಭ್ಯತೆ ಮತ್ತು ಶುಚಿತ್ವ ನಿರ್ವಹಣೆಗೆ ಅಗತ್ಯವಾದ ಸೌಲಭ್ಯ
- **ಎಸ್‌ಡಿಜಿ 7** ಕೈಗೆಟಕುವ ಶುದ್ಧ ಇಂಧನ– ಎಲ್ಲರಿಗೂ ಕೈಗೆಟಕುವ ಬೆಲೆಯಲ್ಲಿ ಪರಿಸರ ಸ್ನೇಹಿ ಇಂಧನ ದೊರೆಯಬೇಕು
- **ಎಸ್‌ಡಿಜಿ 8** ಗುಣಮಟ್ಟದ ಕೆಲಸ ಮತ್ತು ಆರ್ಥಿಕ ಬೆಳವಣಿಗೆ– ಎಲ್ಲರಿಗೂ ಉತ್ತಮ ಗುಣಮಟ್ಟದ ಕೆಲಸ ದೊರೆಯಬೇಕು. ಎಲ್ಲರನ್ನೂ ಒಳಗೊಳ್ಳುವ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆ
- **ಎಸ್‌ಡಿಜಿ 9** ಕೈಗಾರಿಕೆ/ಅನ್ವೇಷಣೆ/ಮೂಲಸೌಕರ್ಯ– ಎಲ್ಲರನ್ನೂ ಒಳಗೊಂಡ ಮತ್ತು ಸುಸ್ಥಿರ ಕೈಗಾರಿಕಾ ಅಭಿವೃದ್ಧಿ
- **ಎಸ್‌ಡಿಜಿ 10** ಅಸಮಾನತೆ ನಿರ್ಮೂಲನೆ– ಜನರು/ಜಿಲ್ಲೆಗಳು/ರಾಜ್ಯಗಳು/ದೇಶಗಳ ನಡುವಣ ಅಸಮಾನತೆ ನಿರ್ಮೂಲನೆ
- **ಎಸ್‌ಡಿಜಿ 11** ಸುಸ್ಥಿರ ನಗರ ಮತ್ತು ಸಮುದಾಯಗಳು– ಜನವಸತಿ ಪ್ರದೇಶಗಳು ಸುರಕ್ಷಿತ ಮತ್ತು ಸುಸ್ಥಿರವಾಗಿರಬೇಕು
- **ಎಸ್‌ಡಿಜಿ 12** ಹೊಣೆಯಾಧಾರಿತ ಬಳಕೆ ಮತ್ತು ಉತ್ಪಾದನೆ– ಎಲ್ಲಾ ಸರಕು ಮತ್ತು ಸೇವೆಗಳ ಸುಸ್ಥಿರವಾದ ಉತ್ಪಾದನಾ ನೀತಿ ಮತ್ತು ಜವಾಬ್ದಾರಿಯುತ ಬಳಕೆ ಉತ್ತೇಜನ
- **ಎಸ್‌ಡಿಜಿ 13** ಹವಾಮಾನ– ಹವಾಮಾನ ವೈಪರೀತ್ಯ ಮತ್ತು ಅದರ ಪರಿಣಾಮಗಳ ನಿಯಂತ್ರಣಕ್ಕೆ ತಕ್ಷಣದ ಕ್ರಮಗಳು
- **ಎಸ್‌ಡಿಜಿ 14** ಜಲಚರ ಜೀವಿಗಳು– ಜಲಚರ ಜೀವಿಗಳ ಸಂರಕ್ಷಣೆ ಮತ್ತು ಸಮುದ್ರದ ಸಂಪನ್ಮೂಲಗಳ ಸುಸ್ಥಿರ ಬಳಕೆ
- **ಎಸ್‌ಡಿಜಿ 15** ನೆಲಜೀವಿಗಳು– ಪರಿಸರ ಸಂರಕ್ಷಣೆ, ಜೀವವೈವಿಧ್ಯ ಸಂರಕ್ಷಣೆ
- **ಎಸ್‌ಡಿಜಿ 16** ಶಾಂತಿ, ನ್ಯಾಯ ಮತ್ತು ಪ್ರಬಲ ಸಂಸ್ಥೆಗಳು– ಸಮುದಾಯಗಳಲ್ಲಿ ಶಾಂತಿಯನ್ನು ಉತ್ತೇಜಿಸಬೇಕು. ಎಲ್ಲರಿಗೂ ನ್ಯಾಯ ಕೈಗೆಟುಕಬೇಕು

ಕೇರಳ

70 2019ರಲ್ಲಿನ ಅಂಕಗಳು
75 2020ರಲ್ಲಿನ ಅಂಕಗಳು

ಎಲ್ಲಾ 16 ಗುರಿಗಳಲ್ಲಿ ಹೆಚ್ಚು ಪ್ರಗತಿ ಸಾಧಿಸಿದ ರಾಜ್ಯಗಳ ಪಟ್ಟಿಯಲ್ಲಿ ಕೇರಳ ಮೊದಲ ಸ್ಥಾನದಲ್ಲಿದೆ. ಗರಿಷ್ಠ 100 ಅಂಕಗಳಲ್ಲಿ ಕೇರಳವು ಒಟ್ಟು 75 ಅಂಕಗಳನ್ನು ಪಡೆದಿದೆ. ಉತ್ತಮ ಪ್ರಗತಿ ಸಾಧಿಸಿದ್ದರೂ, ಸುಧಾರಿಸಿಕೊಳ್ಳಬೇಕಾದ ಅಂಶಗಳನ್ನು ಪಟ್ಟಿ ಮಾಡಲಾಗಿದೆ

- ಗ್ರಾಮೀಣ ಉದ್ಯೋಗವಕಾಶಕ್ಕೆ ಅವಕಾಶ ನೀಡುವ ನರೇಗಾ ಯೋಜನೆ ನಿರೀಕ್ಷಿತ ಪ್ರಗತಿ ಸಾಧಿಸಬೇಕಿದೆ
- ಮಹಿಳೆಯರ ಮೇಲೆ ಎಸಗಲಾದ ಅಪರಾಧ ಕೃತ್ಯಗಳ ಪ್ರಮಾಣದಲ್ಲಿ ನಿರೀಕ್ಷಿತ ಇಳಿಕೆ ಸಾಧ್ಯವಾಗಿಲ್ಲ. ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ದೊರೆಯುತ್ತಿಲ್ಲ
- ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯವಿರುವ ಶಾಲೆಗಳ ಸಂಖ್ಯೆ ಸುಧಾರಿಸಬೇಕಿದೆ
- ಇಂಟರ್ನೆಟ್ ಬಳಕೆದಾರರ ಸಂಖ್ಯೆ ಇಳಿಕೆಯಾಗಿದೆ
- ಘನತ್ಯಾಜ್ಯ, ಕೊಳಚೆನೀರು ನಿರ್ವಹಣೆ ಸುಧಾರಿಸಬೇಕಿದೆ
- ಒಟ್ಟು ಅಪರಾಧಗಳ ಸಂಖ್ಯೆ ಏರಿಕೆಯಾಗಿದೆ

ಕರ್ನಾಟಕ

66 2019ರಲ್ಲಿ ಪಡೆದ ಅಂಕಗಳು
72 2020ರಲ್ಲಿ ಪಡೆದ ಅಂಕಗಳು

100ಕ್ಕೆ 72 ಅಂಕಗಳನ್ನು ಪಡೆದಿರುವ ಕರ್ನಾಟಕವು ಗೋವಾ, ಆಂಧ್ರಪ್ರದೇಶ ಮತ್ತು ಉತ್ತರಾಖಂಡದ ಜತೆ ಜಂಟಿಯಾಗಿ ಮೂರನೇ ಸ್ಥಾನವನ್ನು ಪಡೆದುಕೊಂಡಿದೆ. ಈ ಗುರಿಗಳನ್ನು ಸಾಧಿಸುವಲ್ಲಿ ಕರ್ನಾಟಕವು ಒಟ್ಟಾರೆ ತನ್ನ ಅಂಕಗಳನ್ನು ಉತ್ತಮಪಡಿಸಿಕೊಂಡಿದ್ದರೂ, ಕೆಲವು ಗುರಿಗಳಲ್ಲಿ ಋಣಾತ್ಮಕ ಪ್ರಗತಿ ಸಾಧಿಸಿದೆ. ಈ ಕಾರಣದಿಂದಲೇ ರಾಜ್ಯದ ಒಟ್ಟು ಸ್ಥಿತಿ ಗರಿಷ್ಠಮಟ್ಟದಲ್ಲಿ ಪ್ರಗತಿ ದಾಖಲಿಸಲು ವಿಫಲವಾಗಿದೆ. ಋಣಾತ್ಮಕ ಪ್ರಗತಿ ಸಾಧಿಸಿದ ಕ್ಷೇತ್ರಗಳ ಪಟ್ಟಿ ಈ ಮುಂದಿನಂತಿದೆ

- ರಾಜ್ಯದ ಲಿಂಗಾನುಪಾತ 2019ರಲ್ಲಿ 1,000 ಬಾಲಕರಿಗೆ 929 ಬಾಲಕಿಯರು; 2020ರಲ್ಲಿ 1,000 ಬಾಲಕರಿಗೆ ಬಾಲಕಿಯರ ಸಂಖ್ಯೆ 924ಕ್ಕೆ ಇಳಿದಿದೆ
- ಹೊಸ ಶಾಲೆಗಳನ್ನು ಆರಂಭಿಸಲಾಗಿದ್ದರೂ, ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ಇರುವ ಶಾಲೆಗಳ ಪ್ರಮಾಣ ಇಳಿಕೆಯಾಗಿದೆ
- ಕೈಗಾರಿಕೆಗಳಲ್ಲಿ ಮಾಲಿನ್ಯ ನಿಯಂತ್ರಣ ನಿಯಮಗಳ ಪಾಲನೆ ಗರಿಷ್ಠಮಟ್ಟದಲ್ಲಿ ಇಲ್ಲ. ಕೊಳಚೆ ನೀರಿನ ಪ್ರಮಾಣ ಹೆಚ್ಚಾಗಿದ್ದು, ಕೊಳಚೆ ನೀರಿನ ಸಂಸ್ಕರಣ ಘಟಕಗಳ ಸಂಖ್ಯೆ ಏರಿಕೆಯಾಗಿಲ್ಲ
- ಮಹಿಳಾ ಜನ ಪ್ರತಿನಿಧಿಗಳ ಪ್ರಮಾಣ ಇಳಿಕೆಯಾಗಿದೆ
- ಮಕ್ಕಳ ಮೇಲೆ ಎಸಗಲಾದ ಅಪರಾಧ ಪ್ರಕರಣಗಳ ಪ್ರಮಾಣ ಏರಿಕೆಯಾಗಿದೆ

ಬಿಹಾರ

50 2019ರಲ್ಲಿ ಪಡೆದ ಅಂಕಗಳು
52 2020ರಲ್ಲಿ ಪಡೆದ ಅಂಕಗಳು

ಈ ಗುರಿಗಳನ್ನು ಸಾಧಿಸುವಲ್ಲಿ ನಿಗದಿಪಡಿಸಲಾದ ಅಂಕಗಳಲ್ಲಿ ಅತ್ಯಂತ ಕಡಿಮೆ ಅಂಕಗಳನ್ನು ಪಡೆದ ರಾಜ್ಯಗಳ ಪಟ್ಟಿಯಲ್ಲಿ ಬಿಹಾರ ಕೊನೆಯ ಸ್ಥಾನದಲ್ಲಿದೆ. 10 ಗುರಿಗಳಲ್ಲಿ ಬಿಹಾರವು 60ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿದೆ. ಎರಡು ಗುರಿಗಳಲ್ಲಿ ಋಣಾತ್ಮಕ ಪ್ರಗತಿ ಸಾಧಿಸಿದೆ.

- ರಾಜ್ಯದಲ್ಲಿ ವೈದ್ಯರು, ದಾದಿಯರ ಸಂಖ್ಯೆ ಕಡಿಮೆ ಇದೆ
- ಮಹಿಳೆಯರ ಮೇಲೆ ಎಸಗಲಾದ ಅಪರಾಧ ಕೃತ್ಯಗಳ ಪ್ರಮಾಣ ಏರಿಕೆಯಾಗಿದೆ
- ದುಡಿಯುವ ಮಹಿಳೆಯರ ಪ್ರಮಾಣ ಇಳಿಕೆಯಾಗಿದೆ
- ಲಿಂಗಾನುಪಾತವು 1,000:900ರಿಂದ 1,000:895ಕ್ಕೆ ಇಳಿಕೆಯಾಗಿದೆ
- ಕೊಳಚೆ ನಿರ್ಮೂಲನಾ ನಿಯಮಗಳ ಅನುಷ್ಠಾನ ಪರಿಣಾಮಕಾರಿಯಾಗಿಲ್ಲ
- ನಿರುದ್ಯೋಗದ ಪ್ರಮಾಣ ಏರಿಕೆಯಾಗಿದೆ. ಮೊಬೈಲ್ ಬಳಕೆದಾರರ ಸಂಖ್ಯೆ ಇಳಿಕೆಯಾಗಿದೆ
- ಪ್ರತ್ಯೇಕ ಶೌಚಾಲಯ ಇರುವ ಮನೆಗಳ ಪ್ರಮಾಣ ಇಳಿಕೆಯಾಗಿದೆ
- ಅರಣ್ಯದ ಪ್ರಮಾಣ ಇಳಿಕೆಯಾಗಿದೆ
- ಮಕ್ಕಳ ಮೇಲೆ ಎಸಗಲಾದ ಅಪರಾಧ ಕೃತ್ಯಗಳ ಪ್ರಮಾಣ ಏರಿಕೆಯಾಗಿದೆ

ಆಧಾರ: ನೀತಿ ಆಯೋಗದ ಎಸ್‌ಡಿಜಿ ಇಂಡೆಕ್ಸ್ ಮತ್ತು ಡ್ಯಾಷ್‌ಬೋರ್ಡ್ 2021

ಮಲಯಾಳ ನಿಷೇಧ ಆದೇಶ ಹಿಂಪಡೆದ ದೆಹಲಿ ಆಸ್ಪತ್ರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನರ್ಸ್‌ಗಳು ಕೆಲಸದ ವೇಳೆಯಲ್ಲಿ ಮಲಯಾಳ ಭಾಷೆಯಲ್ಲಿ ಮಾತನಾಡಬಾರದು, ಹಿಂದಿ ಅಥವಾ ಇಂಗ್ಲಿಷ್‌ನಲ್ಲಿ ಮಾತನಾಡುವುದು ಕಡ್ಡಾಯ ಎಂದು ದೆಹಲಿಯ ಸರ್ಕಾರಿ ಆಸ್ಪತ್ರೆಯೊಂದು ಶನಿವಾರ ಆದೇಶ ಹೊರಡಿಸಿತ್ತು. ಅದು ವಿವಾದಕ್ಕೀಡಾಗಿ, ಹಲವಾರು ರಾಜಕೀಯ ಮುಖಂಡರು ಮತ್ತು ಜನರಿಂದ ಟೀಕೆಗಳು ವ್ಯಕ್ತವಾಗುತ್ತಲೇ 24 ಗಂಟೆಗಳಲ್ಲಿ ಆದೇಶವನ್ನು ಹಿಂಪಡೆದಿದೆ.

ಆಸ್ಪತ್ರೆಯಲ್ಲಿ ಹೆಚ್ಚಿನ ರೋಗಿಗಳು ಮತ್ತು ಸಿಬ್ಬಂದಿಗೆ ಮಲಯಾಳ ಅರ್ಥವಾಗುವುದಿಲ್ಲ. ನರ್ಸ್‌ಗಳು ಮಲಯಾಳದಲ್ಲಿ ಮಾತನಾಡುವುದರಿಂದ ರೋಗಿಗಳಿಗೆ ಅಸಹಾಯಕ ಭಾವ ಬರುತ್ತದೆ ಎಂಬ ಕಾರಣ ನೀಡಿ ನರ್ಸಿಂಗ್ ಅಧೀಕ್ಷಕರು ಮಲಯಾಳ ಬಳಕೆಯನ್ನು ನಿಷೇಧಿಸಿದ್ದರು. ಆಸ್ಪತ್ರೆ ವಿರುದ್ಧ ಟೀಕೆಗಳು ಎದುರಾಗುತ್ತಲೇ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು ಮತ್ತೊಂದು ಆದೇಶ ಹೊರಡಿಸಿದ್ದಾರೆ. 'ಆಸ್ಪತ್ರೆ ಆಡಳಿತ ಮತ್ತು ದೆಹಲಿ ಸರ್ಕಾರದ ಗಮನಕ್ಕೆ ತರದೇ ನರ್ಸಿಂಗ್ ಅಧೀಕ್ಷಕರು ಮಲಯಾಳ ನಿಷೇಧದ ಆದೇಶ ಹೊರಡಿಸಿದ್ದರು. ಆ ಆದೇಶವನ್ನು ಕೂಡಲೇ ಹಿಂಪಡೆಯಲಾಗುತ್ತದೆ' ಎಂದು ಹೊಸ ಆದೇಶದಲ್ಲಿ ಹೇಳಲಾಗಿದೆ.

ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿ, ಜೈರಾಮ್ ರಮೇಶ್ ಮತ್ತು ಶಶಿ ತರೂರ್, ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ಬಿಜೆಪಿ ಮುಖಂಡ ಟಾಮ್ ವಡಕ್ಕನ್ ಮುಂತಾದ ನಾಯಕರು ಆಸ್ಪತ್ರೆಯ ಕ್ರಮವನ್ನು ಖಂಡಿಸಿ ಟ್ವೀಟ್ ಮಾಡಿದ್ದಾರೆ.

'ಮಲಯಾಳ ಕೂಡಾ ಭಾರತೀಯ ಭಾಷೆ. ಭಾಷಾ ತಾರತಮ್ಯವನ್ನು ನಿಲ್ಲಿಸಿ' ಎಂದು ರಾಹುಲ್ ಟ್ವೀಟ್ ಮಾಡಿದ್ದಾರೆ. ಈ ಆದೇಶವನ್ನು ಹಿಂಪಡೆಯುವಂತೆ ಆಗ್ರಹಿಸಿ ಟ್ವೀಟ್ ಮಾಡಿರುವ ಯೆಚೂರಿ, 'ಇದು ಹಾಸ್ಯಾಸ್ಪದ. ಮಾತನಾಡುವ ಮತ್ತು ಅರ್ಥ ಮಾಡಿಕೊಳ್ಳುವ ಜನರು ಇರುವ ವರೆಗು ದೇಶದ ಯಾವುದೇ ಭಾಷೆಯನ್ನು ನಿಷೇಧಿಸುವಂತಿಲ್ಲ. ಈ ಕ್ರಮವನ್ನು ಹಿಂಪಡೆಯಿರಿ' ಎಂದಿದ್ದಾರೆ.

ಆಸ್ಪತ್ರೆ ಆದೇಶ ಹಿಂಪಡೆದ ಬಳಿಕ, ಶಶಿ ತರೂರ್ ಅವರು ಟ್ವೀಟ್ ಮಾಡಿ ಹರ್ಷ ವ್ಯಕ್ತಪಡಿಸಿದ್ದಾರೆ. ಇದು ಸಂಕುಚಿತ ಮನೋಭಾವ ಮತ್ತು ಅಂದಾಭಿಮಾನದ ವಿರುದ್ಧ ಸಭ್ಯತೆ ಮತ್ತು ಸಾಮಾನ್ಯ ತಿಳಿವಳಿಕೆಗೆ ಸಿಕ್ಕಿರುವ ಜಯ ಎಂದಿದ್ದಾರೆ. ಆದೇಶ ಹಿಂಪಡೆಯುವ ಮೊದಲು ಅವರು ಕಠಿಣ ಶಬ್ದಗಳಿಂದ ಆದೇಶವನ್ನು ಟೀಕಿಸಿದ್ದರು.

ಜಿ.ಬಿ. ಪಂತ್ ನರ್ಸ್‌ಗಳ ಸಂಘವು ಪ್ರತಿಕ್ರಿಯೆ ನೀಡಿದೆ. ಸುಮಾರು 850 ನರ್ಸ್‌ಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರಲ್ಲಿ 400 ಜನರು ಕೇರಳದವರು ಎಂದಿದೆ. ಇನ್‌ಸ್ಟಿಟ್ಯೂಟ್ ಆಫ್ ಲಿವರ್ ಆ್ಯಂಡ್ ಬೈಲರಿ ಸೈನ್ಸಸ್ ಕೂಡಾ ಇಂಥದ್ದೇ ಆದೇಶವನ್ನು ಕಳೆದ ವರ್ಷ ಹೊರಡಿಸಿತ್ತು. ಸಂಸ್ಥೆಯ ಆವರಣದಲ್ಲಿ ಪ್ರಾದೇಶಿಕ ಭಾಷೆಗಳನ್ನು ಬಳಸುವಂತಿಲ್ಲ ಎಂದು ಸಿಬ್ಬಂದಿಗೆ ಹೇಳಿತ್ತು.

ಹರಿಯಾಣ: ಟಿಕಾಯತ್ ನೇತೃತ್ವದಲ್ಲಿ ರೈತರ ಧರಣಿ

ಟೊಹಾನಾ (ಹರಿಯಾಣ) (ಪಿಟಿಐ): ಬಂಧಿತ ರೈತರ ಬಿಡುಗಡೆಗೆ ಆಗ್ರಹಿಸಿ ಭಾರತೀಯ ಕಿಸಾನ್ ಯೂನಿಯನ್ ಮುಖಂಡ ರಾಕೇಶ್ ಟಿಕಾಯತ್ ನೇತೃತ್ವದಲ್ಲಿ ಭಾರಿ ಸಂಖ್ಯೆಯಲ್ಲಿ ರೈತರು ಫತೇಹಾಬಾದ್‌ನ ಸದರ್ ಪೊಲೀಸ್ ಠಾಣೆ ಮುಂಭಾಗ ಭಾನುವಾರ ಧರಣಿ ಮುಂದುವರಿಸಿದ್ದಾರೆ.


ಜನನಾಯಕ ಜನತಾ ಪಕ್ಷದ ಶಾಸಕ ದೇವೇಂದ್ರ ಸಿಂಗ್ ಬಬ್ಲಿ ನಿವಾಸಕ್ಕೆ ಮುತ್ತಿಗೆ ಹಾಕಲು ರೈತರು ಬುಧವಾರ ರಾತ್ರಿ ಯತ್ನಿಸಿದ್ದರು. ಇದಕ್ಕೆ ಸಂಬಂಧಿಸಿ ವಿಕಾಸ್ ಮತ್ತು ರವಿ ಆಜಾದ್ ಅವರನ್ನು ಪೊಲೀಸರು ಬಂಧಿಸಿದ್ದರು.

'ಬಂಧಿತ ರೈತರ ಬಿಡುಗಡೆಯಾಗುವವರೆಗೂ ಪ್ರತಿಭಟನೆನಿರತ ರೈತರು ಇಲ್ಲಿಂದ ಕದಲುವುದಿಲ್ಲ. ನಾವು ಬಂಧನಕ್ಕೆ ಸಿದ್ಧರಿದ್ದೇವೆ. ನಮ್ಮನ್ನೂ ಬಂಧಿಸಿ ಇಲ್ಲವೇ ಬಂಧಿತರನ್ನು ಬಿಡುಗಡೆಗೊಳಿಸಿ' ಎಂದು ಟಿಕಾಯತ್ ಆಗ್ರಹಿಸಿದ್ದಾರೆ.

ತಮ್ಮ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ ಶಾಸಕ ಬಬ್ಲಿ ವಿರುದ್ಧ ಪ್ರಕರಣ ದಾಖಲಿಸುವಂತೆ ಪ್ರತಿಭಟನೆನಿರತ ರೈತರು ಈ ಹಿಂದೆ ಆಗ್ರಹಿಸಿದ್ದರು. ಬಳಿಕ, ಬಬ್ಲಿ ತಮ್ಮ ಅನುಚಿತ ವರ್ತನೆಗೆ ವಿಷಾದ ವ್ಯಕ್ತಪಡಿಸಿದ್ದರು.

ರೈತರು ಶನಿವಾರ ರಾತ್ರಿ ಇಲ್ಲಿನ ಬೆಳೆ ಮಾರುಕಟ್ಟೆಯಲ್ಲಿ ಜಮಾಯಿಸಿ ನಂತರ ಪೊಲೀಸ್ ಠಾಣೆಯತ್ತ ಸಾಗಿದ್ದರು.

'ಸರ್ಕಾರವು ಕೃಷಿ ಕಾನೂನುಗಳನ್ನು ರದ್ದುಗೊಳಿಸುವವರೆಗೆ ಮತ್ತು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಕಾಯ್ದೆ ಜಾರಿಗೊಳಿಸುವವರೆಗೆ ಕೃಷಿ ಕಾನೂನುಗಳ ವಿರುದ್ಧದ ಆಂದೋಲನ ಮುಂದುವರಿಯಲಿದೆ. ರೈತರ ಆಂದೋಲನವನ್ನು ದೆಹಲಿಯ ಗಡಿಯಿಂದ ಹರಿಯಾಣದ ರೋಹ್ಟಕ್–ಜಿಂದ್ ಗಡಿಗೆ ಸ್ಥಳಾಂತರಿಸಲು ಸರ್ಕಾರ ಬಯಸಿದೆ. ಆದರೆ ಇದು ಯಶಸ್ವಿಯಾಗಲು ಬಿಡುವುದಿಲ್ಲ' ಎಂದು ಟಿಕಾಯತ್ ಹೇಳಿದ್ದಾರೆ.



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'**ಪಂಜಾಬ್‌ನ** ಕಾಂಗ್ರೆಸ್ ನೇತೃತ್ವದ ಸರ್ಕಾರವು ಕೇಂದ್ರ ಸರ್ಕಾರದಿಂದ ಉಚಿತವಾಗಿ ಪಡೆದ ಕೋವಿಡ್ ಲಸಿಕೆಗಳನ್ನು ಖಾಸಗಿ ಆಸ್ಪತ್ರೆಗಳಿಗೆ ದುಬಾರಿ ಬೆಲೆಗೆ ಮಾರಾಟ ಮಾಡಿದೆ. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾದ ಕಾರಣ, ಈಗ ಖಾಸಗಿ ಆಸ್ಪತ್ರೆಗಳಿಂದ ಕೋವಿಡ್ ಲಸಿಕೆಗಳನ್ನು ವಾಪಸ್ ಪಡೆದಿದೆ. ಅಲ್ಲದೆ, 18-44 ವರ್ಷದವರಿಗೆ ಕೋವಿಡ್ ಲಸಿಕೆ ಹಾಕುವುದಕ್ಕೆ ಖಾಸಗಿ ಆಸ್ಪತ್ರೆಗಳಿಗೆ ನೀಡಿದ್ದ ಅನುಮತಿಯನ್ನು ವಾಪಸ್ ಪಡೆದಿದೆ. ಕಾಂಗ್ರೆಸ್ ತನ್ನ ಮುಖ ಉಳಿಸಿಕೊಳ್ಳಲು ಇಷ್ಟೆಲ್ಲಾ ಕ್ರಮ ತೆಗೆದುಕೊಂಡಿದೆ' ಎಂದು ಪೋಸ್ಟ್‌ಕಾರ್ಡ್ ಕನ್ನಡ ತನ್ನ ಫೇಸ್‌ಬುಕ್ ಪುಟದಲ್ಲಿ ಪೋಸ್ಟರ್ ಪ್ರಕಟಿಸಿದೆ.



ಈ ಪೋಸ್ಟರ್‌ನಲ್ಲಿ ಇರುವ ಎಲ್ಲಾ ಮಾಹಿತಿಗಳೂ ಸತ್ಯವಲ್ಲ. ಪೋಸ್ಟ್‌ಕಾರ್ಡ್‌ನ ಪೋಸ್ಟರ್‌ನಲ್ಲಿ ಇರುವಂತೆ ಕೇಂದ್ರ ಸರ್ಕಾರವು ಉಚಿತವಾಗಿ ನೀಡಿದ ಲಸಿಕೆಯನ್ನು ಪಂಜಾಬ್ ಸರ್ಕಾರವು ಖಾಸಗಿ ಆಸ್ಪತ್ರೆಗಳಿಗೆ ಮಾರಾಟ ಮಾಡಿಲ್ಲ. ಬದಲಿಗೆ ರಾಜ್ಯ ಸರ್ಕಾರಗಳಿಗೆ ಹಂಚಿಕೆ ಮಾಡಿದ್ದ ಲಸಿಕೆಯ ಕೋಟಾದಡಿ, ಒಂದು ಡೋಸ್‌ಗೆ ₹ 412 ದರದಲ್ಲಿ ಖರೀದಿಸಿದ್ದ ಲಸಿಕೆಗಳನ್ನು ಪ್ರತಿ ಡೋಸ್‌ಗೆ ₹ 1,060ರಂತೆ ಖಾಸಗಿ ಆಸ್ಪತ್ರೆಗಳಿಗೆ ಮಾರಾಟ ಮಾಡಿತ್ತು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾದ ಕಾರಣ, ಮಾರಾಟ ಮಾಡಿದ್ದ ಎಲ್ಲಾ ಡೋಸ್‌ಗಳನ್ನು ವಾಪಸ್ ಪಡೆದಿದೆ.

ಗುಂಡಣ್ಣ



ದಿನ ಭವಿಷ್ಯ

ಸೋಮವಾರ ಜೂನ್ 7, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ರೋಹಿಣಿ ದ್ವಾದಶೀ ಗಂ. 7-23 (ಬೆ. 8-58) ಸೋಮವಾರ ನಿತ್ಯ ನಕ್ಷತ್ರ ಭರಣಿ ಗಂ. 59-18 (ಬೆ.ಝಾ. 5-44) ಅತಿಗಂಡ ನಾಮ ಯೋಗ ಗಂ. 60-00 ತೈತಲ ಕರಣ ಗಂ. 7-23 ವಿಷ ಗಂ. 19-39 ಅಮೃತ ಗಂ. 46-11 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 5-56 ಸೂರ್ಯಾಸ್ತ: 6-40 ಅದೃಷ್ಟ ಸಂಖ್ಯೆ 1 8

ಮೇಷ: ಲೇವಾದೇವಿ ವ್ಯವಹಾರದಲ್ಲಿ ಅಧಿಕ ಲಾಭ. ಉದಾರ ಮನೋಭಾವದಿಂದಾಗಿ ಅನೇಕರಿಗೆ ಸಾಂತ್ವನ ನೆಮ್ಮದಿ ನೀಡುವಿರಿ. ಸಾರ್ವಜನಿಕ ಪುರಸ್ಕಾರಕ್ಕೆ ಪಾತ್ರರಾಗುವ ಸಾಧ್ಯತೆ.

ವೃಷಭ: ಮನಸ್ಸಿನಲ್ಲಿ ಮೂಡಿರುವ ಭಯದಿಂದ ಮುಕ್ತಿಹೊಂದುವಿರಿ. ವೈಯುಕ್ತಿಕ ಸಂಬಂಧಗಳಲ್ಲಿ ಬದಲಾವಣೆ. ಕುಟುಂಬ ವರ್ಗದವರಿಂದ ಶುಭ ಸಮಾಚಾರಗಳು ಕೇಳಿಬರಲಿವೆ. ದೇವರ ದರ್ಶನ ಭಾಗ್ಯ.

ಮಿಥುನ: ಕಾರ್ಯದಲ್ಲಿ ಹೆಚ್ಚಿನ ಉತ್ಸಾಹ ಹಾಗೂ ಯಶಸ್ಸನ್ನು ಕಾಣುವಿರಿ. ಇತರರ ಹಸ್ತಕ್ಷೇಪವನ್ನು ವಿರೋಧಿಸಿ ಕೆಂಗಣ್ಣಿಗೆ ತುತ್ತಾಗುವ ಸಾಧ್ಯತೆ. ಪರಿಸ್ಥಿತಿ ನಿಭಾಯಿಸಲು ಗಟ್ಟಿ ನಿರ್ಧಾರ ಅವಶ್ಯ.

ಕರ್ಕಾಟಕ: ಗೊಂದಲಗಳಿಗೆ ಸುಲಭ ಪರಿಹಾರ ದೊರಕಲಿದೆ. ಸಾಮಾಜಿಕ ಜೀವನದಲ್ಲಿ ಗೌರವ ಮನ್ನಣೆಗಳು. ಕಾರ್ಯಕ್ಷೇತ್ರದಲ್ಲಿ ತೊಡಕುಂಟಾಗುವ ಸಾಧ್ಯತೆ. ಸ್ನೇಹಿತರ ನೆರವಿನಿಂದಾಗಿ ಚಿಂತೆದೂರ.

ಸಿಂಹ: ಆತ್ಮೀಯರ ಸಲಹೆಗಳನ್ನು ತಿರಸ್ಕರಿಸಬೇಡಿ. ಕಾರ್ಯಕಲಾಪಗಳಿಗೆ ಉತ್ತಮ ಸಹಕಾರ, ಬೆಂಬಲ ದೊರಕುವುದು. ವಿದ್ಯಾರ್ಥಿಗಳಿಗೆ ಪ್ರಯತ್ನದಲ್ಲಿ ಯಶಸ್ಸು. ಆರೋಗ್ಯದಲ್ಲಿ ವ್ಯತ್ಯಯ ಸಾಧ್ಯತೆ. ವೃಥಾ ಖರ್ಚು ಸಾಧ್ಯತೆ.

ಕನ್ಯಾ: ಬೇರೆಯವರಿಂದ ಮೋಸಹೋಗುವ ಸಾಧ್ಯತೆ ಇದ್ದು, ಸಕಾಲಿಕ ನಿರ್ಣಯದಿಂದಾಗಿ ಹೊರಬರಲಿದ್ದೀರಿ. ನಿಮ್ಮ ಔದಾರ್ಯದ ದುರುಪಯೋಗ ಆಗದಂತೆ ನೋಡಿಕೊಳ್ಳಿ. ಕುಶಲಕರ್ಮಿಗಳಿಗೆ ಅವಕಾಶಗಳು ಹರಿದುಬರಲಿವೆ.

ತುಲಾ: ಅತ್ಯಾಕಾಂಕ್ಷೆಯ ಯೋಜನೆಯೊಂದು ಕಾರ್ಯರೂಪಕ್ಕೆ ಬರುವಲ್ಲಿ ಸ್ವತಂತ್ರ ನಿರ್ಧಾರ ಕೈಗೊಳ್ಳುವಿರಿ. ವೃತ್ತಿಯಲ್ಲಿ ಯಶಸ್ಸು. ನಿರುದ್ಯೋಗಿಗಳಿಗೆ ಶುಭ ಸಮಾಚಾರ. ಸಂಗಾತಿಯ ಆರೋಗ್ಯದ ಬಗ್ಗೆ ಗಮನ ಅಗತ್ಯ.

ವೃಶ್ಚಿಕ: ಧೈರ್ಯದಿಂದ ಕೆಲಸ ಕಾರ್ಯಗಳಲ್ಲಿ ಯಶಸ್ಸು. ಕುಟುಂಬ ಸಹಿತ ಶುಭ ಸಮಾರಂಭಗಳಲ್ಲಿ ಭಾಗವಹಿಸುವ ಸಾಧ್ಯತೆ. ದಿಟ್ಟ ನಿಲುವಿನಿಂದಾಗಿ ಮನೆಯಲ್ಲಿ ಸಮಾಧಾನದ ವಾತಾವರಣ.

ಧನು: ಪರಸ್ಪರ ಸಂಶಯಗಳು ದೂರವಾಗಿ ಮನಸ್ಸು ಹಗುರವಾಗುವುದು. ಸ್ಥೈರ್ಯ, ಧೈರ್ಯದ ನಡೆಯಿಂದ ಕೆಲಸ ಕಾರ್ಯಗಳು ಕೈಗೂಡುವವು. ಹಣಕಾಸಿನ ಮುಗ್ಗಟ್ಟಿನಿಂದಾಗಿ ಯೋಜನೆಗಳಿಗೆ ಅಡ್ಡಿ ಆತಂಕಗಳ ಸಾಧ್ಯತೆ.

ಮಕರ: ಕೂಲಂಕಷ ಚರ್ಚೆಯ ನಂತರ ಯಾವುದೇ ನಿರ್ಧಾರ ಕೈಗೊಳ್ಳುವುದು ಉತ್ತಮ. ಕೆಲವು ಅನಿರೀಕ್ಷಿತ ಬದಲಾವಣೆಗಳನ್ನು ನಿರೀಕ್ಷಿಸಬಹುದು. ಸ್ನಾಯು ಸಂಬಂಧಿ ನೋವುಗಳನ್ನು ಅನುಭವಿಸುವ ಸಾಧ್ಯತೆ.

ಕುಂಭ: ಉನ್ನತ ಭಾವನೆಯಿಂದಾಗಿ ಯೋಜನೆಗಳಲ್ಲಿ ಯಶಸ್ಸು. ಸಮಾಜದಲ್ಲಿ ಗೌರವ ಪ್ರಾಪ್ತಿ. ಕುರುಡು ಅಭಿಮಾನಗಳು ದೂರವಾಗಿ ನಿಷ್ಕಲ್ಮಷ ಪ್ರೀತಿ ವಿಶ್ವಾಸ ಗಳಿಸುವಿರಿ. ಕುಲದೇವತಾ ದರ್ಶನದಿಂದ ನೆಮ್ಮದಿ.

ಮೀನ: ಮನಸ್ಸಿನ ನೋವುಗಳೆಲ್ಲವೂ ದೂರವಾಗಿ ನೆಮ್ಮದಿ. ಇತರರ ಕಷ್ಟ ಸುಖಗಳಲ್ಲಿ ಭಾಗಿಯಾಗುವಿರಿ. ಕಾರ್ಯ ಯೋಜನೆಗೆ ಪೂರಕವಾದ ವಿಷಯಗಳು ಸಂಗ್ರಹಗೊಂಡು ಯಶಸ್ಸಿನತ್ತ ಹೆಜ್ಜೆ ಹಾಕುವಿರಿ.

ನಿಮ್ಮ ಜನ್ಮದಿನ 7-ಜೂನ್ ಈ ಈ ದಿನವು ಅತ್ಯಂತ ಶುಭಕರವಾಗಿದ್ದು, ಸರ್ಕಾರಿ ಅಥವಾ ಖಾಸಗಿ ನೌಕರಿಯಲ್ಲಿ ಯಶಸ್ಸನ್ನು ಕಾಣುವಿರಿ. ಸಾಮಾಜಿಕ ಕಾರ್ಯಗಳಿಗಾಗಿ ಸಮಯ ಮತ್ತು ಧನವನ್ನು ಅತಿಯಾಗಿ ವ್ಯಯಿಸುವುದರಿಂದಾಗಿ ಆರ್ಥಿಕ ಸಂಕಷ್ಟ ಎದುರಿಸಬೇಕಾದೀತು. ಸ್ವಯಂ ಉದ್ಯೋಗದಲ್ಲಿ ತೊಂದರೆ ಉಂಟಾಗಬಹುದು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಜೀವ – ಜೀವ ಪ್ರೀತಿ

ಹರಿಗೆ ನಿನ್ನನುರಾಗವೆಲ್ಲವನು ಸಲ್ಲಿಸೆನೆ |
ಮರುನುಡಿಯ ನುಡಿವನೇನ್ ಒಡಲ ತೋರದನು ? ||
ಪರಿತಪಿಸುವುದು ಜೀವ ಜೀವಸರಸವನೆಳಸಿ |
ನರಧರ್ಮಸೂಕ್ಷ್ಮವಿದು – ಮಂಕುತಿಮ್ಮ || 425 ||

ಪದ-ಅರ್ಥ: ನಿನ್ನನುರಾಗವೆಲ್ಲವನು = ನಿನ್ನ + ಅನುರಾಗ + ಎಲ್ಲವನು, ಮರುನುಡಿ = ಪ್ರತಿಯಾಗಿ ಉತ್ತರ, ಜೀವಸರಸವನೆಳಸಿ = ಜೀವ + ಸರಸವ + ಎಳಸಿ (ಬಯಸಿ).

ವಾಚ್ಯಾರ್ಥ: ಭಗವಂತನಿಗೆ ನಿನ್ನ ಪ್ರೀತಿಯೆಲ್ಲವನು ಸಲ್ಲಿಸುವೆನೆಂದರೆ ದೇಹವನ್ನೇ ತೋರದ ಅವನು ಪ್ರತಿನುಡಿಯ ನೀಡುತ್ತಾನೆಯೇ? ಒಂದು ಜೀವ ಮತ್ತೊಂದು ಜೀವದೊಂದಿಗೆ ಸರಸವನ್ನಪೇಕ್ಷಿಸುತ್ತದೆ. ಇದೇ ಮನುಷ್ಯ ಧರ್ಮದ ಸೂಕ್ಷ್ಮ.

ವಿವರಣೆ: ಚಾತಕ ಪಕ್ಷಿ ಎನ್ನುವುದು ಒಂದು ಕಾಲ್ಪನಿಕ ಪಕ್ಷಿ. ನಂಬಿಕೆಯ ಪ್ರಕಾರ, ಈ ಹಕ್ಕಿ ನೀರನ್ನು ಯಾವ ಮೂಲದಿಂದಲೂ ಕುಡಿಯುವುದಿಲ್ಲ. ಆಕಾಶದಲ್ಲಿ ಮೋಡ ಕವಿದಾಗ ಅದು ಬಾಯಿತೆರೆದುಕೊಂಡು ನಿಲ್ಲುತ್ತದಂತೆ. ನೇರವಾಗಿ ಆಕಾಶದಿಂದ ಬೀಳುವ ನೀರಹನಿಗಳಿಂದಲೇ ಅದರ ದಾಹ ತೃಪ್ತಿ. ಅಂತಹ ಪಕ್ಷಿಗೆ ಒಬ್ಬ ಸಂಸ್ಕೃತ ಸುಭಾಷಿತಕಾರ ಹೇಳುತ್ತಾನೆ. 'ನನ್ನ ಸ್ನೇಹಿತನಾದ ಚಾತಕ ಪಕ್ಷಿಯೇ, ಸಾವಧಾನವಾಗಿ ನಾನು ಹೇಳುವುದನ್ನು ಕೇಳು. ಆಕಾಶದಲ್ಲಿ ಎಲ್ಲ ಮೋಡಗಳೂ ನೀರನ್ನು ಸುರಿಸುವುದಿಲ್ಲ. ಕೆಲವು ಮಾತ್ರ ಸಿಂಚನದಿಂದ ಭೂಮಿಯನ್ನು ತಂಪು ಮಾಡುತ್ತವೆ, ಬಹಳಷ್ಟು ಕೇವಲ ಸದ್ದು ಮಾಡಿ ಮರೆಯಾಗುತ್ತವೆ. ಆದ್ದರಿಂದ ಎಲ್ಲರ ಮುಂದೆ ಬಾಯಿ ತೆರೆದು ನಿಲ್ಲದೆ ನೀರು ಕೊಡುವ ಮೋಡಗಳನ್ನು ಮಾತ್ರ ಕೇಳು'. ಅಂದರೆ ಯಾರು ನಿನ್ನ ಬೇಡಿಕೆಗಳನ್ನು, ಅಪೇಕ್ಷೆಗಳನ್ನು ಪೂರೈಸಬಹುದೋ ಅವರನ್ನು ಮಾತ್ರ ಯಾಚಿಸು. ಇದು ನಮ್ಮ ಬದುಕಿಗೂ ಅನ್ವಯಿಸುವಂಥದ್ದು.


ನಮ್ಮ ಮನವಿಯನ್ನು ಪುರಸ್ಕರಿಸದವರ ಮುಂದೆ ಬೇಡಿಕೆ ಏಕೆ? ಅದು ಸುಂಕದವನ ಮುಂದೆ ಕಷ್ಟ-ಸುಖ ಹೇಳಿಕೊಂಡಂತೆ. ಯಾರು ನಿಮ್ಮ ಸಂಪರ್ಕಕ್ಕೇ ಬರುವುದಿಲ್ಲವೋ ಅವರೊಂದಿಗೆ ನಿಮ್ಮ ಅನುರಾಗವೇಕೆ? ಇದೇ ಧಾಟಿಯಲ್ಲಿ, ಕಗ್ಗ ಒಂದು ವಿನೋದದ ಪ್ರಶ್ನೆಯನ್ನು ಕೇಳುತ್ತದೆ. ಭಗವಂತನಿಗೆ ನೀನು ಎಲ್ಲ ಅನುರಾಗವನ್ನು ಕೊಡಬೇಕು ಎಂದು ಹಾತೊರೆಯುತ್ತೀಯಾ, ಆದರೆ ತನ್ನ ದೇಹವನ್ನೇ ತೋರದೆ ಮರೆಮಾಚಿಕೊಂಡವನು ನಿನ್ನ ಅನುರಾಗಕ್ಕೆ ಸ್ಪಂದಿಸುತ್ತಾನೆಯೇ? ಇದುವರೆಗೂ ನಿನಗವನು ಕಂಡಿಲ್ಲ, ಅವನ ಧ್ವನಿಯನ್ನು ನೀನು ಕೇಳಿಲ್ಲ. ಅಂಥವನ ಬಗ್ಗೆ ಅನುರಾಗವೇಕೆ? ಅದಕ್ಕೆ ಬದಲಾಗಿ, ನಿನ್ನ ಸುತ್ತಮುತ್ತಲಿರುವ, ನಿನ್ನ ಭಾವನೆಗಳಿಗೆ ಪ್ರತಿಕ್ರಿಯಿಸುವ ಜೀವಗಳ ಜೊತೆಗೆ ಸರಸ ಒಳ್ಳೆಯದು. ಅದಕ್ಕಾಗಿಯೇ, ಪರಿವಾರದಲ್ಲಿ, ಊರಿನಲ್ಲಿ, ದೇಶದಲ್ಲಿ, ವಿಶ್ವದಲ್ಲಿ ಜೀವಗಳು ಮತ್ತಷ್ಟು ಜೀವಗಳೊಡನೆ ಅನುರಾಗವನ್ನು ಹಂಚಿಕೊಳ್ಳುವುದಕ್ಕಾಗಿ ಪರಿತಪಿಸುತ್ತವೆ. ನಿಮ್ಮ ಧ್ವನಿಗೆ ಅವು ಮಾರ್ದನಿ ನೀಡುತ್ತವೆ. ಆದರೆ ಒಂದು ತಮಾಷೆ. ಹೀಗೆ ಜೀವಜೀವಗಳ ನಡುವಿನ ಪ್ರೇಮ, ಕೊನೆಗೆ ಆ ಕಣ್ಣಿಗೆ ಕಾಣದ ಚೇತನದ ಕಡೆಗೇ ಸೆಳೆದೊಯ್ಯುತ್ತದೆ. ದ.ರಾ. ಬೇಂದ್ರೆಯವರ ಕವನದ ಎರಡು ಸಾಲುಗಳು ಆ ದರ್ಶನ ಮಾಡಿಸುತ್ತವೆ. 'ನಾನೂ ನೀನೂ ಒಳಗ ಕೂಡಿ, ಪ್ರೀತಿ ಹಾಂಗ ಹೊರಮೂಡಿ, ಹೂವಾಗಿ ಬರಬೇಕು ಬಣ್ಣಾ, ಬಣ್ಣಾ, ಆವಾಗ ತೆರಿತಾವ ಒಳಗಾನ ಕಣ್ಣ!' ಎರಡು ಜೀವಗಳು ಪ್ರೀತಿಯಿಂದ ಕೂಡಿ, ಅನುರಾಗದ ಪುಷ್ಪ ಫಲಿತಾಗ, ನಮ್ಮ ಒಳಗಣ್ಣು ತೆರೆಯುತ್ತದೆ. ಆಗ, ದೇಹ ತೋರದ, ಮೇಲ್ನೋಟಕ್ಕೆ ಪ್ರತಿಕ್ರಿಯೆ ನೀಡದ ಆ ಶಕ್ತಿಯ ದರ್ಶನವಾಗುತ್ತದೆ. ❖

ಪದಬಂಧ 4620

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಇತರರು ಮಾಡಿದಂತೆ ಮಾಡುವುದು (5)
3.ಪ್ರಯಾಸದಿಂದ ಅದ ಹೆರಿಗೆ! (3)
5.ತೂಕಡಿಕೆ ಬಂದಾಗ ಹೀಗೆ ಬಾಯಿ ತೆರೆದು ಮುಚ್ಚು (4)
8.ತಪ್ಪಾಗಿ ಭಾವಿಸುವಿಕೆ (5)
11.ಹೊಸದಾಗಿ ಅಭಿನಯಿಸುತ್ತಿರುವವಳು (4)
13.ಯುದ್ಧೋತ್ಸಾಹದಿಂದ ಕಾದಾಡುವ ಹುಮ್ಮಸ್ಸು (3)
14.ಮೈಗುಣವಿದು (5)

ಮೇಲಿಂದ ಕೆಳಕ್ಕೆ
1.ಪಾಠವನ್ನು ಕಲಿಸುವವಳು (4)
2.ಚಪಾತಿ ಲಟ್ಟಿಸುವ ಸಾಧನ (3)
4.ಕಾಡಿನ ಹೂವಿದು (4)
6.ಊಹೆಯನ್ನು ಹೀಗೆನ್ನಿ (3)
7.ಕರಿಯನ್ನು ಕೊನೆಗಿಟ್ಟಾಗಿನ ಮಾರಾಟ! (3)
8.ತನಯ ಈ ರೀತಿ ಮಗ್ನ ! (3)
9.ವರ ಪಡೆದುಕೊಂಡಿರುವ ಬೇಡ (4)
10.ನಡುವೆ ವನ ಬಂದದ್ದಕ್ಕೇ ಈ ದುರ್ದಸೆ! (4)
12.ವಿವಾದವಿಲ್ಲದ ಮದುವೆ (3)



4619ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅವಧಾನ 3.ಬಾಲಂಗೋಸಿ 5.ಗುಡಾಣ 6.ತಿಮಿರ 8.ಜಳಕ 9.ಶುಕ 10.ಜಲ್ಲಿ 11.ಕವಳ 12.ಸುದಾಮ 14.ಮದುವೆ 16.ಸರೋವರ 17.ನಾಗರೀಕ

ಮೇಲಿಂದ ಕೆಳಕ್ಕೆ: 1.ಅದಿತಿ 2.ನಗು 3.ಬಾಣ 4.ಸಿಡುಕ 7.ರಸಕವಳ 8.ಜಗಜಗಿಸು 11.ಕಳಸ 13.ಮಶಕ 14.ಮರ 15.ವೆನಾ

ಸುಡೊಕು 5006

		7	1		2		6	
				3				9
2		4				1		
	6	8		5			4	1
						7	9	
9	4			2				
3	7			8		9		5
		6					8	
	8		3		5	6		2

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5005 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ರಾಜ್ಯದಲ್ಲಿ ಕೋವಿಡ್ ಮರಣ ಪ್ರಮಾಣ ದರ ಶೇ 2.62 ರಷ್ಟು

ದೃಢ ಪ್ರಮಾಣ ಶೇ 7.71ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 12,209 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣವು ಶೇ 7.71ಕ್ಕೆ ಇಳಿಕೆಯಾಗಿದೆ.

ಕಳೆದ ತಿಂಗಳು ಮೊದಲೆರಡು ವಾರ ರಾಜ್ಯದಲ್ಲಿ ಈ ಪ್ರಮಾಣವು ಶೇ 40ರ ಗಡಿಯ ಆಸುಪಾಸಿಗೆ ಏರಿಕೆಯಾಗಿತ್ತು. ಸೋಂಕು ದೃಢ ಪ್ರಮಾಣ ದರವು ಶೇ 5ಕ್ಕೆ ಹಾಗೂ ಮರಣ ಪ್ರಮಾಣ ದರವು ಶೇ 1ಕ್ಕೆ ಇಳಿಕೆಯಾಗುವವರೆಗೂ ಲಾಕ್‌ಡೌನ್ ಮುಂದುವರಿಸಬೇಕೆಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಿತ್ತು.

ರಾಜ್ಯದಲ್ಲಿ ಕೊರೊನಾ ಸೋಂಕಿತರಲ್ಲಿ 320 ಮಂದಿ ಸಾವಿಗೀಡಾಗಿರುವುದು ಭಾನುವಾರ ಖಚಿತಪಟ್ಟಿದೆ. ಮರಣ ಪ್ರಮಾಣ ದರ ಶೇ 2.62ರಷ್ಟು ವರದಿಯಾಗಿದೆ.

ಈವರೆಗೆ ಮೃತಪಟ್ಟವರ ಒಟ್ಟು ಸಂಖ್ಯೆ 31,580ಕ್ಕೆ ಏರಿಕೆಯಾಗಿದೆ. ಪರೀಕ್ಷೆಗಳ ಸಂಖ್ಯೆ ಮತ್ತೆ ಏರುಗತಿ ಪಡೆದುಕೊಂಡಿದೆ. ಒಂದು ದಿನದ ಅವಧಿಯಲ್ಲಿ 1.58 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ.

ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 26.95 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 2.54 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸೋಂಕಿತರಲ್ಲಿ 25,659 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 24.09 ಲಕ್ಷ ದಾಟಿದೆ.

ರಾಜ್ಯದ 27 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 187 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮೈಸೂರಿನಲ್ಲಿ 19 ಮಂದಿ, ಬೆಳಗಾವಿಯಲ್ಲಿ 15 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ.

ಬೆಂಗಳೂರಿನಲ್ಲಿ 24 ಗಂಟೆಗಳ ಅವಧಿಯಲ್ಲಿ 2,944 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಮೈಸೂರಿನಲ್ಲಿ 1,237 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. 24 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ಕ್ಕಿಂತ ಕಡಿಮೆ ವರದಿಯಾಗಿವೆ.

ಮಕ್ಕಳಿಗೆ ಲಸಿಕೆ: ಚೀನಾ ಅನುಮೋದನೆ

ಬೀಜಿಂಗ್ (ಪಿಟಿಐ): 3ರಿಂದ 17 ವರ್ಷದ ಒಳಗಿನ ಮಕ್ಕಳಿಗೆ 'ಕೊರೊನಾವ್ಯಾಕ್' ಲಸಿಕೆಯನ್ನು ತುರ್ತು ಬಳಸಲು ಚೀನಾ ಅನುಮೋದನೆ ನೀಡಿದೆ.

ಕೋವಿಡ್–19 ವಿರುದ್ಧ ಈ ಲಸಿಕೆಯನ್ನು ಚೀನಾದ ಸಿನೊವ್ಯಾಕ್ ಕಂಪನಿ ತಯಾರಿಸಿದೆ.

'ಸಿನೊವ್ಯಾಕ್ ಮೊದಲ ಮತ್ತು ಎರಡನೇ ಹಂತದ ಕ್ಲಿನಿಕಲ್ ಸಂಶೋಧನೆಗಳನ್ನು ಕೈಗೊಂಡಿದೆ. ಈ ವಯೋಮಿತಿಯಲ್ಲಿನ ನೂರಾರು ಸ್ವಯಂ ಸೇವಕರ ಮೇಲೆ ಪ್ರಯೋಗ ಕೈಗೊಳ್ಳಲಾಗಿದೆ. ಈ ಲಸಿಕೆಯು ಸುರಕ್ಷಿತ ಮತ್ತು ಸಮರ್ಥವಾಗಿದೆ ಎನ್ನುವುದು ಪ್ರಯೋಗದ ಸಂದರ್ಭದಲ್ಲಿ ಸಾಬೀತಾಗಿದೆ' ಎಂದು ಸಿನೊವ್ಯಾಕ್ ಕಂಪನಿ ಅಧ್ಯಕ್ಷ ಯಿನ್ ವಿಯಿಡಾಂಗ್ ತಿಳಿಸಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಜೂನ್ 1ರಂದು ಸಿನೊವ್ಯಾಕ್ ಕಂಪನಿಯ ಲಸಿಕೆಗೆ ಅನುಮೋದನೆ ನೀಡಿತ್ತು. ಇದು ಚೀನಾದ ಎರಡನೇ ಲಸಿಕೆಯಾಗಿತ್ತು. ಈ ಮೊದಲು, ಡಬ್ಲ್ಯುಎಚ್‌ಒ ಸಿನೊಫಾರ್ಮಾ ಕಂಪನಿಯ ಲಸಿಕೆಗೆ ಅನುಮೋದನೆ ನೀಡಿತ್ತು.

ಹೈಕಮಾಂಡ್ ಹೇಳಿದರೆ ರಾಜೀನಾಮೆ

ಒಂದನೇ ಪುಟದಿಂದ

ಜೂನ್ 7 ರ ಬಳಿಕ ಶಾಸಕಾಂಗ ಪಕ್ಷದ ಸಭೆ ನಡೆಸುವಂತೆ ಪಕ್ಷದ ವರಿಷ್ಠರು ಯಡಿಯೂರಪ್ಪ ಅವರಿಗೆ ಸೂಚಿಸಿದ್ದಾರೆ ಎಂಬ ಸುದ್ದಿಯೂ ಇತ್ತು.

ಅದರ ಬೆನ್ನಲ್ಲೇ ದೆಹಲಿಗೆ ತೆರಳಿದ್ದ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಹಾಗೂ ಯಡಿಯೂರಪ್ಪ ಪುತ್ರ ಬಿ.ವೈ. ವಿಜಯೇಂದ್ರ, ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಹಲವು ನಾಯಕರನ್ನು ಭೇಟಿಮಾಡಿ ಬಂದಿದ್ದರು.ಈ ಎಲ್ಲ ಬೆಳವಣಿಗೆಗಳ ಮಧ್ಯೆಯೇ, ಮುಖ್ಯಮಂತ್ರಿ ನೀಡಿರುವ ಹೇಳಿಕೆ ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

'ಮನಸ್ಸಿಗೆ ನೋವಾಗಿರಬಹುದು'



ಬೆಂಗಳೂರು: 'ಯಡಿಯೂರಪ್ಪ ಅವರ ಮನಸ್ಸಿಗೆ ನೋವಾದಂತೆ ಕಾಣುತ್ತಿದೆ. ಅದಕ್ಕಾಗಿ ಅವರು ಈ ರೀತಿ ಮಾತನಾಡಿರಬಹುದು' ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

'ನಾಯಕತ್ವ ಬದಲಾವಣೆ ಇಲ್ಲ ಎಂದು ಪಕ್ಷದ ವರಿಷ್ಠರು ಈಗಾಗಲೇ ಹೇಳಿದ್ದಾರೆ. ಸಚಿವ ಸಿ.ಪಿ. ಯೋಗೇಶ್ವರ್ ಕೂಡ ಯಡಿಯೂರಪ್ಪ ಅವರೇ ನಾಯಕ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಯಡಿಯೂರಪ್ಪ ಅವರು 40 ವರ್ಷಗಳಿಂದ ಪಕ್ಷಕ್ಕಾಗಿ ದುಡಿದಿದ್ದಾರೆ. ಸಮರ್ಥವಾಗಿ ಸರ್ಕಾರ ಮುನ್ನಡೆಸುತ್ತಿದ್ದಾರೆ. ಅವರ ಕಡೆ ಯಾರೂ ಬೆರಳು ತೋರಿಸಲು ಸಾಧ್ಯವಿಲ್ಲ' ಎಂದರು.


ಪಕ್ಷಕ್ಕೆ ಬದ್ಧವಾಗಿರುವ ಸಂದೇಶ



ರಾಜೀನಾಮೆ ನೀಡುವುದಾಗಿ ಯಡಿಯೂರಪ್ಪ ಅವರು ಎಲ್ಲಿಯೂ ಹೇಳಿಲ್ಲ. ಅವರ ಹೇಳಿಕೆಯನ್ನು ಸ್ಥಾನ ತ್ಯಜಿಸುತ್ತಾರೆ ಎಂದು ಅರ್ಥೈಸುವುದು ಬೇಡ' ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರತಿಕ್ರಿಯಿಸಿದರು.

'ಯಾವ ದೃಷ್ಟಿಯಲ್ಲಿ ಈ ಹೇಳಿಕೆ ನೀಡಿದ್ದಾರೊ ಗೊತ್ತಿಲ್ಲ. ಪಕ್ಷದ ಶಿಸ್ತಿನ ಸಿಪಾಯಿಯಾಗಿರುವ ನಾನು, ಪಕ್ಷದ ನಿರ್ಣಯಕ್ಕೆ ಬದ್ಧ ಎಂದು ಹೇಳಿದ್ದಾರೆ. ಈಗ ಅವರು ನಮ್ಮ ಮುಖ್ಯಮಂತ್ರಿ. ಅವರೇ ಮುಂದುವರಿಯುತ್ತಾರೆ. ಈ ಬಗ್ಗೆ ಅನುಮಾನ ಬೇಡ' ಎಂದರು.


'ಆತ್ಮಾವಲೋಕನ ಮಾಡಿಕೊಳ್ಳಲಿ'



'ಯಡಿಯೂರಪ್ಪ ನಾಯಕತ್ವದ ವಿಚಾರದಲ್ಲಿ ಬಿಜೆಪಿ ಹೈಕಮಾಂಡ್‌ಗೆ ಗೊಂದಲವಿಲ್ಲ. ನಾವು ಕೂಡ ಅವರ ನಾಯಕತ್ವದಲ್ಲೇ ಬಂದಿದ್ದೇವೆ. ಮುಂದೆಯೂ ಇರುತ್ತೇವೆ' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

'ಪಕ್ಷದ ಹೈಕಮಾಂಡ್ ಸಂಪೂರ್ಣವಾಗಿ ಯಡಿಯೂರಪ್ಪ ಪರವಾಗಿದೆ. ಆದರೂ, ಕೆಲವರು ನಾಯಕತ್ವ ಬದಲಾವಣೆಯ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಯವರಿಗೆ ನೋವು ಇರುವುದು ಅವರೊಂದಿಗೆ ಇತ್ತೀಚೆಗೆ ಮಾತನಾಡುವಾಗ ಗೊತ್ತಾಯಿತು. ಅಪಸ್ವರ ಎತ್ತಿರುವವರು ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದರು.

'ಆಡಳಿತ ಕುಸಿಯಲು ದಾರಿ'



'ಪಕ್ಷ ಸೂಚಿಸಿದರೆ ರಾಜೀನಾಮೆಗೆ ಸಿದ್ಧ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಹಿರಂಗ ಹೇಳಿಕೆ ನೀಡಿರುವುದು ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಕುಸಿಯಲು ದಾರಿಯಾಗಬಹುದು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

'ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆ ಕುರಿತು ಆರು ತಿಂಗಳಿನಿಂದಲೂ ಚರ್ಚೆ ನಡೆಯುತ್ತಿದೆ. ಅಧಿಕಾರಿಗಳು ಯಾರ ಮಾತನ್ನೂ ಕೇಳುತ್ತಿಲ್ಲ ಎಂಬುದಕ್ಕೆ ಮೈಸೂರು ಪ್ರಕರಣ ಸಾಕ್ಷಿ. ಮುಖ್ಯಮಂತ್ರಿಯೇ ಹೀಗೆ ಬಹಿರಂಗ ಹೇಳಿಕೆ ನೀಡಿದರೆ ಆಡಳಿತ ಇನ್ನಷ್ಟು ದುರ್ಬಲಗೊಳ್ಳುತ್ತದೆ' ಎಂದರು.

'ಯಡಿಯೂರಪ್ಪ ಅವರೇ ನಮ್ಮ ನಾಯಕರು'


ರಾಮನಗರ: 'ಯಡಿಯೂರಪ್ಪ ಅವರೇ ನಮ್ಮ ನಾಯಕರು. ನಾನೆಂದೂ ಅವರ ವಿರುದ್ಧವಾಗಿ ಮಾತನಾಡಿಲ್ಲ' ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಹೇಳಿದರು.

ಸಿಎಂ ಹೇಳಿಕೆ ಸ್ವಾಗತಿಸುವೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಹೈಕಮಾಂಡ್ ಕೇಳಿದಾಗ ರಾಜೀನಾಮೆ ಕೊಡುವುದಾಗಿ ಹೇಳುವ ಮೂಲಕ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಹಳ ದೊಡ್ಡ ಮಾತನ್ನಾಡಿದ್ದಾರೆ. ಅವರ ಹೇಳಿಕೆಯನ್ನು ಸ್ವಾಗತಿಸುತ್ತೇನೆ' ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ತಿಳಿಸಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಎಲ್ಲವೂ ಹೈಕಮಾಂಡ್ ತೀರ್ಮಾನದಂತೆ ನಡೆಯುತ್ತದೆ. ನಾನೂ ದೆಹಲಿ ನಾಯಕರ ಮಾತನ್ನು ಮೀರುವುದಿಲ್ಲ ಎಂದು ಯಡಿಯೂರಪ್ಪ ಹೇಳಿದ್ದಾರೆ. ರಾಜ್ಯದ ಆಡಳಿತ, ಜನರ ಹಿತದೃಷ್ಟಿಯಿಂದ ಅಧಿಕಾರ ಬಿಟ್ಟುಕೊಡಲು ಸಿದ್ಧವಿರುವುದಾಗಿ ಹೇಳಿದ್ದನ್ನು ನಾಡಿನ ಜನರೂ ಸ್ವಾಗತಿಸುತ್ತಾರೆ' ಎಂದು ಹೇಳಿದರು.



ಎಚ್.ವಿಶ್ವನಾಥ್

ವೀರಶೈವರಿಗೆ ಅವಕಾಶ ನೀಡಲಿ: ರಾಜ್ಯದಲ್ಲಿ ತಮಗೆ ಪರ್ಯಾಯ ನಾಯಕರು ಇದ್ದಾರೆ ಎಂದು ಹೇಳಿರುವುದು ಕೂಡ ಯಡಿಯೂರಪ್ಪ ಅವರ ದೊಡ್ಡ ಮಾತು . ಮುಖ್ಯಮಂತ್ರಿ ಸ್ಥಾನಕ್ಕೆ ಹೊಸಬರನ್ನು ಆಯ್ಕೆ ಮಾಡುವಾಗ ವೀರಶೈವ ಸಮುದಾಯಕ್ಕೆ ಆದ್ಯತೆ ನೀಡಲಿ. ಸಾಕಷ್ಟು ಅನುಭವ ಹೊಂದಿರುವ ಮುರುಗೇಶ ನಿರಾಣಿ, ನೇರ ಮಾತಿಗೆ ಹೆಸರಾದ ಬಸನಗೌಡ ಪಾಟೀಲ ಯತ್ನಾಳ್ ಅಂಥವರಿಗೆ ಅವಕಾಶ ಕೊಡಬೇಕು ವಿಶ್ವನಾಥ್ ಆಗ್ರಹಿಸಿದರು.

'ಎಲ್ಲರ ಜತೆ ಕೇಂದ್ರದ ಜಗಳ'

ನವದೆಹಲಿ (ಪಿಟಿಐ): ಮನೆ ಬಾಗಿಲಿಗೆ ಪಡಿತರ ವಿತರಣೆಯ ಯೋಜನೆಯನ್ನು ಸ್ಥಗಿತಗೊಳಿಸಿದ್ದು ಏಕೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಶ್ನಿಸಿದ್ದಾರೆ. ತಮ್ಮ ಸರ್ಕಾರದ ಯೋಜನೆಯ ಅನುಷ್ಠಾನಕ್ಕೆ ರಾಷ್ಟ್ರೀಯ ಹಿತಾಸಕ್ತಿಯ ದೃಷ್ಟಿಯಿಂದ ಅವಕಾಶ ಕೊಡಬೇಕು ಎಂದು ಅವರು ಕೋರಿದ್ದಾರೆ.

ಈ ಯೋಜನೆಯನ್ನು ದೇಶವಿಡೀ ವಿಸ್ತರಿಸಬೇಕು. ಇಲ್ಲದೇ ಇದ್ದರೆ ಪಡಿತರ ಅಂಗಡಿಗಳು ಕೋವಿಡ್ ಹರಡುವಿಕೆ ಕೇಂದ್ರಗಳಾಗಬಹುದು ಎಂದೂ ಅವರು ಹೇಳಿದ್ದಾರೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಮಹಾರಾಷ್ಟ್ರ, ದೆಹಲಿ ಮತ್ತು ಜಾರ್ಖಂಡ್‌ನ ಸರ್ಕಾರಗಳು, ರೈತರು, ಲಕ್ಷದ್ವೀಪದ ಜನರು ಹೀಗೆ ಎಲ್ಲರ ಜತೆಗೂ ಕೇಂದ್ರ ಸರ್ಕಾರವು ಜಗಳಕ್ಕೆ ನಿಂತಿದೆ. ಎಲ್ಲರ ಜತೆಗೂ ಸರ್ಕಾರ ಜಗಳ ಕಾಯುತ್ತಿದೆ ಎಂಬುದು ಜನರಲ್ಲಿ ವೇದನೆ ಉಂಟು ಮಾಡಿದೆ. ಹೀಗೆ ಜಗಳ ಆಡುತ್ತಿದ್ದರೆ ಕೋವಿಡ್ ಪಿಡುಗನ್ನು ಎದುರಿಸುವುದು ಹೇಗೆ ಎಂದೂ ಅವರು ಪ್ರಶ್ನಿಸಿದ್ದಾರೆ.

'ಮನೆಬಾಗಿಲಿಗೆ ಪಡಿತರ' ಯೋಜನೆ ಜಾರಿಗೆ ದೆಹಲಿ ಸರ್ಕಾರಕ್ಕೆ ಕೇಂದ್ರದ ಅನುಮತಿ ಬೇಕಿಲ್ಲ. ಹಾಗಿದ್ದರೂ ಅನಗತ್ಯ ವಿವಾದ ತಪ್ಪಿಸುವುದಕ್ಕಾಗಿ ಐದು ಬಾರಿ ಅನುಮತಿ ಕೇಳಲಾಗಿದೆ ಎಂದು ತಿಳಿಸಿದ್ದಾರೆ.



> **ಪಿಜ್ಜಾ, ಬರ್ಗರ್, ಮೊಬೈಲ್ ಮತ್ತು ಬಟ್ಟೆಗಳನ್ನು ಮನೆಬಾಗಿಲಿಗೆ ತಲುಪಿಸಬಹುದಾದರೆ ಪಡಿತರವನ್ನು ಮನೆ ಬಾಗಿಲಿಗೆ ಒಯ್ದು ಏಕೆ ಕೊಡಬಾರದು?**
> **ಅರವಿಂದ ಕೇಜ್ರಿವಾಲ್,** ದೆಹಲಿ ಮುಖ್ಯಮಂತ್ರಿ

ಲೆಫ್ಟಿನೆಂಟ್ ಗವರ್ನರ್ ಅವರು ಯೋಜನೆ ಜಾರಿಯನ್ನು ಸ್ಥಗಿತಗೊಳಿಸಿದ್ದಾರೆ. ಕೇಂದ್ರದ ಅನುಮತಿ ಕೋರಿಲ್ಲ ಎಂಬ ಕಾರಣ ಕೊಟ್ಟಿದ್ದಾರೆ ಎಂದು ದೆಹಲಿ ಸರ್ಕಾರ ಶನಿವಾರ ಹೇಳಿತ್ತು.

ಈ ಯೋಜನೆಯು ದೆಹಲಿ ಪ್ರಭಾವಿ ಪಡಿತರ ಮಾಫಿಯಾವನ್ನು ದಮನ ಮಾಡುತ್ತಿತ್ತು. ರಾಷ್ಟ್ರ ರಾಜಧಾನಿಯ 72 ಲಕ್ಷ ಜನರಿಗೆ ಅನುಕೂಲ ಆಗುತ್ತಿತ್ತು ಎಂದು ಕೇಜ್ರಿವಾಲ್ ಹೇಳಿದ್ದಾರೆ. 'ನೀವು ಪಡಿತರ ಮಾಫಿಯಾ ಜತೆಗೆ ನಿಂತರೆ ಬಡ ಜನರ ಜತೆಗೆ ನಿಲ್ಲುವವರು ಯಾರು' ಎಂದು ಅವರು ಪ್ರಶ್ನಿಸಿದ್ದಾರೆ.

ಹಗರಣಕ್ಕೆ ಕೇಂದ್ರ ತಡೆ ಒಡ್ಡಿತು: ಬಿಜೆಪಿ



ಸಂಬಿತ್ ಪಾತ್ರಾ

ಸಹಾಯಧನದಲ್ಲಿ ಪೂರೈಸುವ ಆಹಾರ ಧಾನ್ಯಗಳನ್ನು ಬೇರೆಡೆಗೆ ತಿರುಗಿಸುವ ಮೂಲಕ ದೆಹಲಿ ಸರ್ಕಾರವು ನಡೆಸಬಹುದಾಗಿದ್ದ ದೊಡ್ಡ ಹಗರಣವನ್ನು ಕೇಂದ್ರ ಸರ್ಕಾರವು ತಡೆದಿದೆ ಎಂದು ಕೇಜ್ರಿವಾಲ್ ಅವರಿಗೆ ಬಿಜೆಪಿ ತಿರುಗೇಟು ನೀಡಿದೆ.

ದೆಹಲಿ ಸರ್ಕಾರವು ತಾನೇ ಖರೀದಿ ಮಾಡಿದ ಧಾನ್ಯಗಳನ್ನು ಹೀಗೆ ವಿತರಿಸಲು ಯಾವ ಅಡ್ಡಿಯೂ ಇಲ್ಲ. ಆಹಾರ ಭದ್ರತೆ ಕಾಯ್ದೆ ಅಡಿಯಲ್ಲಿ ಪೂರೈಸಲಾದ ರಾಷ್ಟ್ರೀಯ ಕಾರ್ಯಕ್ರಮದ ಸಹಾಯಧನ ಆಧಾರಿತ ಆಹಾರ ಧಾನ್ಯಗಳನ್ನು ಬೇರೆಡೆಗೆ ತಿರುಗಿಸುವ ಹಕ್ಕು ದೆಹಲಿ ಸರ್ಕಾರಕ್ಕೆ ಇಲ್ಲ ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಹೇಳಿದ್ದಾರೆ.

ದೆಹಲಿಯಲ್ಲಿ ಪಡಿತರ ಚೀಟಿಯ ಜತೆಗೆ ಆಧಾರ್ ಜೋಡಣೆಯ ಪ್ರಮಾಣ ಸೊನ್ನೆ. ರಾಷ್ಟ್ರೀಯ ಸರಾಸರಿ ಶೇ 80ರಷ್ಟು ಇದೆ. ಅಂದರೆ, ಆಹಾರ ಧಾನ್ಯಗಳು ಅಗತ್ಯ ಇರುವವರಿಗೆ ಸಿಕ್ಕಿದೆಯೇ ಅಥವಾ ಬೇರೆಡೆಗೆ ವರ್ಗಾವಣೆ ಆಗಿದೆಯೇ ಎಂಬುದನ್ನು ತಿಳಿದುಕೊಳ್ಳಲು ಅವಕಾಶವೇ ಇಲ್ಲ. ಅರವಿಂದ ಕೇಜ್ರಿವಾಲ್ ಅವರು ಧಾನ್ಯಗಳನ್ನು ಯಾರಿಗೆ ಕೊಟ್ಟಿದ್ದಾರೆ ಎಂಬುದು ತಿಳಿಯುವುದೇ ಇಲ್ಲ. ಆಹಾರ ಧಾನ್ಯ ವರ್ಗಾವಣೆಯ ದೊಡ್ಡ ಯೋಜನೆ ಆರಂಭಿಸಲು ಅವರು ಬಯಸಿದ್ದರು' ಎಂದು ಪಾತ್ರಾ ಆರೋಪಿಸಿದ್ದಾರೆ.

ಪ್ರಜಾವಾಣಿ DH ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 26 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 31ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.



ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ಡೆಬಿಟ್/ಕ್ರೆಡಿಟ್ ಕಾರ್ಡ್, ಯುಪಿಐ, ಇ-ವ್ಯಾಲೆಟ್ ಅಥವಾ ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸುವವರು QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಈ ಕೆಳಗಿನ ಲಿಂಕ್‌ಗೆ ಭೇಟಿ ಮಾಡಿ: **https://bit.ly/3uKxGny**

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in **ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.**

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ವಿನ್ ನಿರ್ಮಾಣ್ ಫೌಂಡೇಶನ್**, ನಿರ್ಮಾಣ್ ಶೆಲ್ಟರ್ಸ್(ಬಿ) ಪ್ರೈ. ಲಿಮಿಟೆಡ್, 45ಎ, ನಿಸರ್ಗ ನಂದನ, ಕಾರ್ಪೊರೇಶನ್ ಬ್ಯಾಂಕ್ ಎದುರು, ನಿಸರ್ಗ ಲೇಔಟ್, ಬೆಂಗಳೂರು	2,00,000
2	**ಶ್ರೀನಿವಾಸ**, ಮಲ್ಲೇಶ್ವರ, ಬೆಂಗಳೂರು	1,25,000
3	**ಸುಮಶರ ಆರ್. ಭಟ್ ಆ್ಯಂಡ್ ರಾಮಕೃಷ್ಣ ಎಸ್**, ಚಾರ್ಟರ್ಡ್ ಬೆವರ್ಲಿ ಹಿಲ್ಸ್ ಅಪಾರ್ಟ್‌ಮೆಂಟ್, 604, ಗುಬ್ಬಲಾಳ ಪೋಸ್ಟ್, ಸುಬ್ರಮಣ್ಯಪುರ, ಬೆಂಗಳೂರು	1,00,101
4	**ಮಲ್ಲಿಗೆ ಎಸ್ಟೇಟ್ ಪ್ರೈ. ಲಿಮಿಟೆಡ್**, 31, ಕ್ರೆಸೆಂಟ್ ರಸ್ತೆ, ಬೆಂಗಳೂರು	90,000
5	**ಶರದ್ ಎಂ. ತಂಗಾ**, ತೋಟಗಾರಿಕೆ ಕಚೇರಿ ಎದುರು, ಐವಾನ್–ಎ– ಶಾಹಿ, ಕಲಬುರ್ಗಿ	55,001
6	**ಪದ್ಮಾವತಿ ಅಂಡ್ ಜಿ.ಎಲ್. ಚಂದ್ರಶೇಖರ್ ರಾವ್**, #2, ಪದ್ಮಾಲಯ, ಸೇಂಟ್ ಮರೀನಾ ಸ್ಕೂಲ್ ಎದುರು (ಝಾಯ್ ಸ್ಕೂಲ್), ಸೋಮಣ್ಣ ಗಾರ್ಡನ್, ವಿದ್ಯಾರಣ್ಯಪುರ, ಬೆಂಗಳೂರು	50,001
7	**ಸುಬ್ರಮಣ್ಯನ್ ಕೃಷ್ಣನ್**, 60, 1ನೇ ಕ್ರಾಸ್, ಎಚ್‌ಎಎಲ್ 3ನೇ ಹಂತ, ಬೆಂಗಳೂರು	50,000
8	**ಎಸ್‌ಕೆಎಂ ಫಾರ್ಮಾ ಪ್ರೈ. ಲಿಮಿಟೆಡ್**, ಟಿಎಫ್–10, ಸಿಟಿ ಪಾಯಿಂಟ್, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು	30,000
9	**ಲಕ್ಷ್ಮಮ್ಮ ರಾಮಚಂದ್ರಸ್ವಾಮಿ ಚಾರಿಟೀಸ್**, ಪವಮಾನ, 51, ಸುಬ್ಬರಾಮ ಚೆಟ್ಟಿ ರಸ್ತೆ, ಬಸವನಗುಡಿ, ಬೆಂಗಳೂರು	25,000
10	**ರಾಮಚಂದ್ರ ಸಾಳೆ**, 1113/1, 'ಮಾನಸ' 2ನೇ ಕ್ರಾಸ್, 1ನೇ ಮೇನ್ ರೋಡ್, ಗಿರಿನಗರ, 2ನೇ ಹಂತ, ಬೆಂಗಳೂರು	25,000
11	**ಸುನೀತಾ ಚಾಮರಾಜ್**, 001, ಎಚ್‌ಎಂ ವಿಂಬರ್ಲಿ, 6 ಬರ್ಲಿ ಸ್ಟ್ರೀಟ್ ಕ್ರಾಸ್, ಲ್ಯಾಂಗ್‌ಫೋರ್ಡ್ ಟೌನ್, ಬೆಂಗಳೂರು	20,000
12	**ಪ್ರಶಾಂತ್ ಕೊಡ್ನಾಡ್**, ನಂ. 488, 'ಚಿಗುರು', 3ನೇ ಮೇನ್, 5ನೇ ಕ್ರಾಸ್, ಎಎಂಎಸ್ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು	10,001
13	**ಅರುಣಾ ಗೌಡ**, #63, 7ನೇ ಮುಖ್ಯ ರಸ್ತೆ, ಶಾರದಾ ಕಾಲೊನಿ, ಬಸವೇಶ್ವರನಗರ, ಬೆಂಗಳೂರು	10,000
14	**ಆನಂದ ರಾವ್ ಎಸ್.ವಿ**, #54, ಮೂಕಾಂಬಿಕಾ ನಿಲಯ, 7ನೇ ಕ್ರಾಸ್, 9ನೇ ಮೇನ್, ಕಾಫಿ ಬೋರ್ಡ್ ಲೇಔಟ್, ಕೆಂಪಾಪುರ, ಹೆಬ್ಬಾಳ, ಬೆಂಗಳೂರು	10,000
15	**ಕೆ. ಅಂಬಾಜಿ ರಾವ್**, 238, 43ನೇ ಕ್ರಾಸ್, 5ನೇ ಬ್ಲಾಕ್, ಜಯನಗರ, ಬೆಂಗಳೂರು	10,000
16	**ಎಸ್. ನಿರ್ಮಲಾ**, ಪ್ರೊಫೆಸರ್ ಅಂಡ್ ಹೆಡ್ ಆಫ್ ರೇಡಿಯೇಶನ್ ಆಂಕಾಲಜಿ, ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜ್ ಆ್ಯಂಡ್ ಹಾಸ್ಪಿಟಲ್, ಬೆಂಗಳೂರು	5,000
17	**ಕುಸುಮ ರಾವ್**, 238, 43ನೇ ಕ್ರಾಸ್, 5ನೇ ಬ್ಲಾಕ್, ಜಯನಗರ, ಬೆಂಗಳೂರು	5,000
18	**ಕೆ.ಎಸ್. ಪಾರ್ಥಸಾರಥಿ**, ಫ್ಲ್ಯಾಟ್ ನಂ. 1105, ಪೂರ್ವ ಏಟ್ರಿಯಾ ಪ್ಲ್ಯಾಟಿನಾ, ಡಾಲರ್ಸ್ ಕಾಲೊನಿ, ಅಶ್ವತ್ಥ ನಗರ, ಬೆಂಗಳೂರು	5,000
19	**ರಂಗನಾಥ್ ಮೂಡಗೋಡು**, ಹೊಸಬಾಳೆ ಪಿ.ಒ. ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ	2501
20	**ಭಾರತಿ ಕೆ**, ಪೋಸ್ಟಲ್ ಅಸಿಸ್ಟೆಂಟ್, ಮಾನಸ ಗಂಗೋತ್ರಿ ಪೋಸ್ಟ್, ಮೈಸೂರು	2500
21	**ಕಳಸೇಗೌಡ**, ನಂ. ಯು.99, ಮಾರುತಿ ಎಕ್ಸ್‌ಟೆನ್ಷನ್, ಪಿ.ಜಿ. ಹಳ್ಳಿ, ವೈಯಾಲಿಕಾವಲ್ ಬಳಿ, ಬೆಂಗಳೂರು	2111
22	**ಶಿವರಾಜ್ ಆಂಜಿನಪ್ಪ**, #254, 1ನೇ ಮೇನ್, 4ನೇ ಕ್ರಾಸ್, ಎಸ್.ವಿ.ಪಬ್ಲಿಕ್ ಸ್ಕೂಲ್ ಬಳಿ, ಕೊಟ್ಟಿಗೆಪಾಳ್ಯ, ಬೆಂಗಳೂರು	2,001
23	**ಗಾಯತ್ರಿ**, 203, ಬ್ರಿಗೇಡ್ ಕ್ಲಾಸಿಕ್ ಅಪಾರ್ಟ್‌ಮೆಂಟ್ಸ್, ಆರ್ಮುಗಂ ಸರ್ಕಲ್, ಬಸವನಗುಡಿ, ಬೆಂಗಳೂರು	1,500
24	**ಶ್ರೀನಿವಾಸ ಮೂರ್ತಿ ವಿ**, # 39/2, ಎನ್‌ಎಟಿ ರೋಡ್,ಬಸವನಗುಡಿ, ಬೆಂಗಳೂರು	1,100
25	**ಶ್ಯಾಮ್ ಕೆ.ಕೆ. ಕುಮಾರ್**, ಇ–202, ಓಷನಸ್ ಟ್ರೈಟಾನ್, ಸರ್ಜಾಪುರ ರಸ್ತೆ, ಬೆಂಗಳೂರು	1,001
26	**ಕೊಡಕ್ಕಲ್ ಶಿವಪ್ರಸಾದ್**,ಇಂಡಿಯನ್ ಡಿಸೇಬಿಲಿಟಿ ಎಂಪವರ್‌ಮೆಂಟ್ ಅಸೋಸಿಯೇಷನ್, ಶಿವಮೊಗ್ಗ	1,001
27	**ನಾರಾಯಣ ಸಿ.ವಿ.**, ನಂ. 2, 4ನೇ ಕ್ರಾಸ್, ಹುರಿಯೋಪೇಟೆ, ಬೆಂಗಳೂರು	1,000
28	**ಸ್ಮಿತಾ ಪಿ.**, ಹೊಸಕೆರೆಹಳ್ಳಿ, ಬೆಂಗಳೂರು	1,000
29	**ಮಹೇಶ್ ಹೊನ್ನಪ್ಪ**,'ಹೊಂಗಿರಣ',87, 6ನೇ ಕ್ರಾಸ್,ಗಣೇಶನಗರ, ಕೊಡಿಗೇಹಳ್ಳಿ, ಬೆಂಗಳೂರು	1,000
30	**ಜಿ.ಜಿ.ರಾಮಯ್ಯ**, ಹರಿಹರ ಕೃಪ, ನಂ.626, 2ನೇ ಕ್ರಾಸ್, 7ನೇ ಬ್ಲಾಕ್, ಬನಶಂಕರಿ 3ನೇ ಹಂತ, 2ನೇ ಘಟ್ಟ, ಬೆಂಗಳೂರು	1,000
	ಒಟ್ಟು ಹಣ	8,42,819

'ಪಶ್ಚಿಮ ಬಂಗಾಳದಲ್ಲಿ ಅಪಾಯಕಾರಿ ಸ್ಥಿತಿ'


ಕೋಲ್ಕತ್ತ (ಪಿಟಿಐ): ವಿಧಾನಸಭೆ ಚುನಾವಣೆಯ ನಂತರ ಪಶ್ಚಿಮ ಬಂಗಾಳದಲ್ಲಿ ಕಾನೂನು ಸುವ್ಯವಸ್ಥೆಯು ಅತ್ಯಂತ ಅಪಾಯಕಾರಿಯಾಗಿದೆ. ಅಸಂಖ್ಯ ಹತ್ಯೆಗಳು ಮತ್ತು ಅತ್ಯಾಚಾರಗಳು ನಡೆದಿವೆ ಎಂದು ರಾಜ್ಯಪಾಲ ಜಗದೀಪ್ ಧನಕರ್ ಭಾನುವಾರ ಆರೋಪಿಸಿದ್ದಾರೆ. ಪ್ರತೀಕಾರದ ಹಿಂಸಾಚಾರ ತಡೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎಂಬುದನ್ನು ತಿಳಿದುಕೊಳ್ಳಲು ಮುಖ್ಯಕಾರ್ಯದರ್ಶಿ ಎಚ್.ಕೆ. ದ್ವಿವೇದಿ ಅವರನ್ನು ಕರೆಸಿಕೊಳ್ಳಲು ನಿರ್ಧರಿಸಿದ್ದಾರೆ.

ರಾಜಕೀಯ ಪ್ರತಿಸ್ಪರ್ಧಿಗಳ ಮೇಲೆ ಹಿಂಸೆ ಎಸಗುವುದಕ್ಕಾಗಿ ರಾಜ್ಯ ಪೊಲೀಸ್ ಇಲಾಖೆಯು ಆಡಳಿತ ಪಕ್ಷದ ಭಾಗದಂತೆ ವರ್ತಿಸುತ್ತಿದೆ ಎಂದು ಧನಕರ್ ಆರೋಪ ಮಾಡಿದ್ದಾರೆ.

'ಲಕ್ಷಾಂತರ ಜನರು ನಿರ್ವಸಿತರಾಗಿದ್ದಾರೆ. ನೂರಾರು ಕೋಟಿ ಮೌಲ್ಯದ ಸೊತ್ತು ನಾಶವಾಗಿದೆ. ಭದ್ರತಾ ಸ್ಥಿತಿಯಲ್ಲಿ ಭಾರಿ ರಾಜಿ ಮಾಡಿಕೊಳ್ಳಲಾಗಿದೆ. ಪರಿಸ್ಥಿತಿ ಗಂಭೀರವಾಗಿರುವ ಕಾರಣಕ್ಕೆ ಸೋಮವಾರ ಬಂದು ಮಾಹಿತಿ ನೀಡುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚಿಸಲಾಗಿದೆ' ಎಂದು ರಾಜ್ಯಪಾಲರು ಟ್ವೀಟ್ ಮಾಡಿದ್ದಾರೆ.



ಗ್ರಾಮಾರೋಗ್ಯ; ಆಗಲಿ ಇನ್ನಷ್ಟು ಯೋಗ್ಯ



ಧಾರವಾಡ ಜಿಲ್ಲೆಯ ಗ್ರಾಮಗಳಲ್ಲಿ ವ್ಯಾಪಿಸಿದ ಕೋವಿಡ್–19 ವೈರಾಣು: ವೈದ್ಯರ ಕೊರತೆ

ಕಾಳಜಿ ಕೇಂದ್ರಗಳತ್ತ ನಿರಾಸಕ್ತಿ

• ಇ.ಎಸ್. ಸುಧೀಂದ್ರ ಪ್ರಸಾದ್



ಅಣ್ಣಿಗೇರಿ ತಾಲ್ಲೂಕಿನ ಬಸಾಪುರ ಗ್ರಾಮದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿ ಮನೆಮನೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು
ಪ್ರಜಾವಾಣಿ ಚಿತ್ರ: ಬಿ.ಎಂ. ಕೇದಾರನಾಥ

ಧಾರವಾಡ: ಗ್ರಾಮ ಮಟ್ಟದಲ್ಲಿ ಕೆಲಸ ಮಾಡಲು ಆಹ್ವಾನಿಸಿದರೆ ಅರ್ಜಿಯನ್ನೇ ಹಾಕದ ಎಂಬಿಬಿಎಸ್ ಪದವೀಧರರು, ಕೆಲಸಕ್ಕೆ ಸೇರಿದ ಒಂದೇ ದಿನಕ್ಕೆ ರಾಜೀನಾಮೆ ನೀಡಿದ ವೈದ್ಯ, ಆಸ್ಪತ್ರೆ ಕೆಲಸದ ಜತೆಗೆ, ಊರು, ಕೇರಿಗಳನ್ನು ಸುತ್ತುವ ಹೆಚ್ಚುವರಿ ಹೊಣೆಯಲ್ಲಿ ಹೈರಾಣಾದ ಶುಶ್ರೂಷಕರು–ಇದು ಜಿಲ್ಲೆಯ ಗ್ರಾಮೀಣ ಭಾಗದ ಆರೋಗ್ಯದ ಚಿತ್ರಣ.

ಹುಬ್ಬಳ್ಳಿ ಕಿಮ್ಸ್ ಉತ್ತರ ಕರ್ನಾಟಕ ಭಾಗದ ಅತಿ ದೊಡ್ಡ ಹೆಸರು. ಬಾಗಲಕೋಟೆ, ವಿಜಯಪುರದಿಂದಲೇ ಏಕೆ, ಸದ್ಯ ಕೋವಿಡ್ ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ತುಮಕೂರು, ಶಿವಮೊಗ್ಗದ ಸೋಂಕಿತರೂ ಇಲ್ಲಿಗೇ ಬಂದು ದಾಖಲಾಗುತ್ತಿರುವಷ್ಟು ಪ್ರಸಿದ್ಧಿ ಪಡೆದಿದೆ. ಇದೇ ಆವರಣದಲ್ಲಿ ಸಿಎಸ್ಆರ್ ನಿಧಿಯಲ್ಲಿ ಮೇಕ್‌ಶಿಫ್ಟ್ ಆಸ್ಪತ್ರೆಯೂ ಸಿದ್ಧಗೊಳ್ಳುತ್ತಿದೆ. ಆದರೆ ಕೋವಿಡ್ ಸೋಂಕಿನ 2ನೇ ಅಲೆಯು ಗ್ರಾಮೀಣ ಭಾಗದಲ್ಲಿ ವ್ಯಾಪಿಸಿರುವ ಸಂದರ್ಭದಲ್ಲಿ ಅಲ್ಲಿನ ಆಸ್ಪತ್ರೆಗಳು ಮಾತ್ರ ವೈದ್ಯರಿಲ್ಲದ, ಹೆಚ್ಚು ಸೌಕರ್ಯಗಳಿಲ್ಲದ ಕೇಂದ್ರಗಳಂತೆ ಕಂಡುಬರುತ್ತಿವೆ.

ಜಿಲ್ಲೆಯಲ್ಲಿ ಗ್ರಾಮೀಣ ಭಾಗದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ತುರ್ತಾಗಿ 9 ಎಂಬಿಬಿಎಸ್ ವೈದ್ಯರು ಬೇಕಾಗಿದ್ದಾರೆ. ಆದರೆ ಈವರೆಗೂ ಅದು ಭರ್ತಿಯಾಗಿಲ್ಲ. ಇರುವ ಆಯುಷ್ ವೈದ್ಯರಿಂದಲೇ ಹೊರೆಯನ್ನು ನಿರ್ವಹಿಸಲಾಗುತ್ತಿದೆ. ಗಡಿ ಭಾಗದ ಸೋಂಕಿತರು ಗದಗ, ಬಾಗಲಕೋಟೆ ಆಸ್ಪತ್ರೆಗಳತ್ತ ಮುಖ ಮಾಡುತ್ತಿದ್ದಾರೆ. ತೀವ್ರ ಆರೋಗ್ಯ ಸಮಸ್ಯೆ ಇರುವವರು ಕಿಮ್ಸ್ ಬಾಗಿಲಿಗೆ ಎಡತಾಕುತ್ತಿದ್ದಾರೆ.

ಸೋಂಕು ಉಲ್ಬಣಿಸಿದಾಗ ಜಿಲ್ಲೆಯ 144 ಗ್ರಾಮ ಪಂಚಾಯ್ತಿಗಳಿರುವ ಜಿಲ್ಲೆಯಲ್ಲಿ ಸುಮಾರು 40ಕ್ಕೂ ಹೆಚ್ಚು ಗ್ರಾಮ ಪಂಚಾಯ್ತಿಗಳು ಸ್ವಯಂ ಲಾಕ್‌ಡೌನ್ ಹೇರಿವೆ. ಹೊರಗಿನಿಂದ ಬಂದವರಿಂದಲೇ ಸೋಂಕು ಹರಡಿದೆ ಎಂಬ ಆರೋಪ ಇದೆ. ಸುಮಾರು 400 ಜನ ಗ್ರಾಮೀಣ ಭಾಗಕ್ಕೆ ಬಂದಿದ್ದಾರೆ ಎಂದು ಜಿಲ್ಲಾ ಪಂಚಾಯ್ತಿ ದಾಖಲೆ ಹೇಳುತ್ತದೆ. ಜಿಲ್ಲೆಯಲ್ಲಿ ಕೋವಿಡ್ ಆರೈಕೆ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಆದರೆ ಜನರು ಆಮ್ಲಜನಕ, ವೆಂಟಿಲೇಟರ್ ಸೌಕರ್ಯಗಳುಳ್ಳ ಆಸ್ಪತ್ರೆ ಅಗತ್ಯ ಎನ್ನುತ್ತಿದ್ದಾರೆ.

ಧಾರವಾಡ ತಾಲ್ಲೂಕಿನ ನವಲೂರು, ನರೇಂದ್ರ ಗ್ರಾಮಗಳಲ್ಲಿ ಕಳೆದ 15 ದಿನಗಳಲ್ಲಿ 30ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ. ಇವರಲ್ಲಿ ಕೊರೊನಾದಿಂದ ಮೃತಪಟ್ಟವರು ಎಂದು ದಾಖಲಾಗಿರುವವರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ಕನಿಷ್ಠ ದಿನಕ್ಕೊಂದು ಸಾವು ಕಾಣುತ್ತಿರುವ ಗ್ರಾಮಸ್ಥರಲ್ಲಿ ಭಯ ಮನೆ ಮಾಡಿದೆ.

ನವಲಗುಂದ ತಾಲ್ಲೂಕಿನ ಮೊರಬ, ತಿರ್ಲಾಪುರ, ಯಮನೂರು ಸೇರಿದಂತೆ ವಿವಿಧ ಗ್ರಾಮಗಳ ಪರಿಸ್ಥಿತಿಯೂ ಭಿನ್ನವಾಗಿಲ್ಲ. ಮೊರಬದಲ್ಲಿ 22 ಸಾವಿರ ಜನಸಂಖ್ಯೆಯಲಿ ಕಾರ್ಮಿಕರೇ ಹೆಚ್ಚು. ಗ್ರಾಮದಲ್ಲಿರುವ 6 ಹಾಸಿಗೆಗಳ ಪ್ರಾಥಮಿಕ ಆರೋಗ್ಯ ಕೇಂದ್ರದ ಎದುರು ಮಧ್ಯಾಹ್ನದವರೆಗೂ ವೈದ್ಯರಿಗಾಗಿ ಜನರು ಕಾದು ನಿಂತಿದ್ದರು. ವೈದ್ಯರು ಬರುವವರೆಗೂ ಕಾಯುವಂತೆ ಜನರಿಗೆ ಶುಶ್ರೂಷಕರು ಮನವಿ ಮಾಡಿಕೊಳ್ಳುತ್ತಿದ್ದರು. ಇಲ್ಲಿದ್ದ ಆಂಬುಲೆನ್ಸ್ ಅನ್ನು ಬೇರೆಡೆ ಸ್ಥಳಾಂತರಿಸಿರುವುದೂ ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿತ್ತು.

ಅಣ್ಣಿಗೇರಿ ತಾಲ್ಲೂಕಿನ ಶಲವಡಿ, ಬಸಾಪುರ, ಕುಂದಗೋಳ ತಾಲ್ಲೂಕಿನ ಯಲಿವಾಳ ಹಾಗೂ ತರ್ಲಘಟ್ಟ ಗ್ರಾಮಗಳ ಪರಿಸ್ಥಿತಿಯೂ ಭಿನ್ನವಾಗಿಲ್ಲ. ನವಲಗುಂದ ಬಾಲಕಿಯರ ವಸತಿ ಗೃಹದಲ್ಲಿ ಆರೈಕೆ ಕೇಂದ್ರವನ್ನು ತೆರೆಯಲಾಗಿದೆ. ಮೂರು ಪಾಳಿಯಲ್ಲಿ ತಲಾ ಒಬ್ಬರು ಶುಶ್ರೂಷಕರನ್ನು ನೇಮಿಸಲಾಗಿದೆ. ವೈದ್ಯರು ಇರಲಿಲ್ಲ. ಸೋಂಕಿತರ ಆರೋಗ್ಯ ಸ್ಥಿತಿ ಗಂಭೀರವಿದ್ದಲ್ಲಿ ಮಾತ್ರ ಕರೆ ಮಾಡಿ ತಿಳಿಸುವಂತೆ ಸೂಚಿಸಿದ್ದಾರೆ ಎಂದು ಅಲ್ಲಿ ಮೇಲ್ವಿಚಾರಕರು ತಿಳಿಸಿದರು.

ಉಳಿದಂತೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಆರೈಕೆ ಕೇಂದ್ರ ತೆರೆಯಲು ಸಿದ್ಧತೆಗಳು ನಡೆದಿದ್ದು, ನಾವಳ್ಳಿ, ಭದ್ರಾಪುರ ಹಾಗೂ ಕುರಹಟ್ಟಿಯಲ್ಲಿ ಕೇಂದ್ರಗಳು ಆರಂಭವಾಗಿವೆ. ಅಳಗವಾಡಿ, ಬೆಳಾರ, ಅಣ್ಣಿಗೇರಿಯಲ್ಲಿ ವೈದ್ಯರ ಕೊರತೆ ಇದೆ. ಇವುಗಳನ್ನು ಆಯುಷ್ ವೈದ್ಯರೇ ನಿಭಾಯಿಸುತ್ತಿದ್ದಾರೆ.

ಅಳ್ನಾವರ ತಾಲ್ಲೂಕು ಸ್ಥಾನಮಾನ ಪಡೆದರೂ ಇರುವುದೊಂದೇ ಪ್ರಾಥಮಿಕ ಆರೋಗ್ಯ ಕೇಂದ್ರ. ಅಲ್ಲಿ ಎಂಬಿಬಿಎಸ್ ವೈದ್ಯರು ಒಬ್ಬರೇ ಇದ್ದು, ಅವರು ಕಲಘಟಗಿ ಮತ್ತು ಅಳ್ನಾವರ ಎರಡೂ ತಾಲ್ಲೂಕುಗಳನ್ನು ನಿಭಾಯಿಸಬೇಕು. ಮತ್ತೊಬ್ಬರು ಆಯುಷ್ ವೈದ್ಯರು. ತಾಲ್ಲೂಕಿಗಾಗಿಯೇ ಎಂಬಿಬಿಎಸ್ ವೈದ್ಯರೊಬ್ಬರು ನೇಮಕಗೊಂಡಿದ್ದರು. ಒಂದೇ ದಿನಕ್ಕೆ ರಾಜೀನಾಮೆ ಸಲ್ಲಿಸಿದರು ಎಂದು ಇಲ್ಲಿನ ಆಸ್ಪತ್ರೆಯ ಸಿಬ್ಬಂದಿ ತಿಳಿಸಿದರು.

ಇನ್ನು ಕಲಘಟಗಿ ಗ್ರಾಮದ ಮಿಶ್ರಿಕೋಟಿ, ಹೊನ್ನಾಪುರ ಗ್ರಾಮಗಳಲ್ಲಿ ಕಳೆದ ಬಾರಿಯಂತೆ ಈ ಬಾರಿ ನಿಯಂತ್ರಣ ಇಲ್ಲದಿರುವುದಕ್ಕೆ ಬೇಸರ ವ್ಯಕ್ತಪಡಿಸುತ್ತಾರೆ. 'ಕಳೆದ ಬಾರಿ ಪರ ಊರಿನಿಂದ ಬರುವವರನ್ನು ಕಡ್ಡಾಯವಾಗಿ ಪರೀಕ್ಷೆಗೆ ಒಳಪಡಿಸಲಾಗುತ್ತಿತ್ತು. ಸೋಂಕಿತರ ಮನೆಗೆ ಬೇಲಿ ಕಟ್ಟಿ ಪ್ರತ್ಯೇಕಿಸಲಾಗುತ್ತಿತ್ತು' ಎಂದರು ನಾಗರಾಜ ಗಂಜಿಗಟ್ಟಿ.

ತಾಲ್ಲೂಕಿನ ಬಮ್ಮಿಗಟ್ಟಿ, ಮುಕ್ಕಲ, ತಾವರಗೇರಿ, ಬೆಲವಂತರ ಸೇರಿದಂತೆ ಒಟ್ಟು 14 ಕೋವಿಡ್ ಕಾಳಜಿ ಕೇಂದ್ರ ತೆರೆಯಲಾಗಿದೆ. ಇವುಗಳನ್ನು ಶುಶ್ರೂಷಕರು ನಿರ್ವಹಿಸುತ್ತಿದ್ದು, ತುರ್ತು ಇದ್ದಲ್ಲಿ ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರಿಗೆ ಮಾಹಿತಿ ಕೊಡುತ್ತೇವೆ ಎಂದರು.

ಸಿಎಸ್ಆರ್ ನಿಧಿಯಲ್ಲಿ ಹಲವು ಕಂಪನಿಗಳು ಆಮ್ಲಜನಕ ಸಾಂದ್ರಕಗಳನ್ನು ದೇಣಿಗೆಯಾಗಿ ಜಿಲ್ಲಾಡಳಿತಕ್ಕೆ ನೀಡುತ್ತಿವೆ. ಅವುಗಳನ್ನು ಜಿಲ್ಲಾ ಆಸ್ಪತ್ರೆ ಮತ್ತು ಕೊರೊನಾ ಕಾಳಜಿ ಕೇಂದ್ರಕ್ಕೆ ನೀಡಲಾಗಿದೆ. ಆದರೆ ಜನರನ್ನು ಈ ಕೇಂದ್ರದತ್ತ ತರುವುದು ಮತ್ತೊಂದು ದೊಡ್ಡ ಸವಾಲಾಗಿದೆ.

ಮಹಿಳೆಯರಿಗೆ ಅಸುರಕ್ಷತೆ ಭಾವ

ಪ್ರತಿ ಗ್ರಾಮ ಪಂಚಾಯ್ತಿ ಮಟ್ಟದಲ್ಲೂ ಇರುವ ಶಾಲೆ, ಕಾಲೇಜು ಕಟ್ಟಡಗಳನ್ನೇ ಕೋವಿಡ್ ಕಾಳಜಿ ಕೇಂದ್ರವನ್ನಾಗಿ ಪರಿವರ್ತಿಸಲಾಗುತ್ತಿದೆ. ಪುರುಷ ಹಾಗೂ ಮಹಿಳೆಯರಿಗೆ ಇಲ್ಲಿ ಪ್ರತ್ಯೇಕ ವಾರ್ಡ್‌ಗಳಿವೆ. ಆದರೂ, ಅಸುರಕ್ಷೆಯ ಭಾವ ಕಾಡುವುದರಿಂದ ಮಹಿಳೆಯರು ಮನೆಯಲ್ಲೇ ಕಾಳಜಿ ಮಾಡಿಕೊಳ್ಳುತ್ತೇವೆ ಎನ್ನುತ್ತಾರೆ ಎಂದು ಕಲಘಟಗಿಯ ಕಾಳಜಿ ಕೇಂದ್ರದ ಶುಶ್ರೂಷಕಿಯೊಬ್ಬರು ತಿಳಿಸಿದರು.

ಮತ್ತೊಂದೆಡೆ ಪುರುಷರು ತಮಗೆ ಮನರಂಜನೆಗೆ ಟಿ.ವಿ. ಇಲ್ಲ, ಪತ್ರಿಕೆಗಳು ತರಿಸುತ್ತಿಲ್ಲ. ನಮಗೆ ಇಸ್ಪೀಟ್ ಎಲೆಗಳನ್ನಾದರೂ ಕೊಡಿ ಎಂದು ಪಿಡಿಒಗಳಿಗೆ ದುಂಬಾಲು ಬಿದಿದ್ದಾರೆ. ಇವರ ಬೇಡಿಕೆ ಈಡೇರಿಸುವಂತೆ ಹಿರಿಯ ಅಧಿಕಾರಿಗಳಿಂದಲೂ ಆದೇಶವಿದೆ ಎಂದು ಹೆಸರು ಹೇಳಲಿಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದರು.

ಸಮನ್ವಯ ಕೊರತೆ

ಕೋವಿಡ್ ಆರೈಕೆ ಕೇಂದ್ರ ನಿರ್ವಹಣೆಯಲ್ಲಿ ಪಂಚಾಯ್ತಿ ಅಧಿಕಾರಿಗಳು ಮತ್ತು ಕಂದಾಯ ಇಲಾಖೆ ನೌಕರರದ್ದು ಸಮಪಾಲು. ಕೇಂದ್ರದ ನಿರ್ವಹಣೆ, ಅಲ್ಲಿರುವವರಿಗೆ ಊಟೋಪಚಾರಗಳನ್ನು ಪಂಚಾಯ್ತಿ ಅಧಿಕಾರಿಗಳು ನಿರ್ವಹಿಸುತ್ತಿದ್ದಾರೆ. ಊಟದ ವೆಚ್ಚ ಕಂದಾಯ ಇಲಾಖೆ ಪಾವತಿಸಬೇಕು. ಆದರೆ ಪಂಚಾಯ್ತಿಯವರೇ ನಿರ್ವಹಿಸುತ್ತಿರುವುದು ಹೊರೆಯಾಗಿದೆ ಎಂದೆನ್ನಲಾಗುತ್ತಿದೆ.

ಸೋಂಕಿತರಿಗೆ ಪೌಷ್ಟಿಕ ಆಹಾರ ನೀಡಲು ಜಿಲ್ಲಾಡಳಿತ ಸೂಚಿಸಿದೆ. ಆದರೆ ಗ್ರಾಮಗಳಲ್ಲಿ ಇರುವ ಚಹಾ ಅಂಗಡಿಗಳೇ ಅಲ್ಲಿ ಊಟೋಪಚಾರ ನೀಡುವ ಪ್ರಮುಖ ಕೇಂದ್ರ. ಹಣ್ಣಿನ ರಸ, ಒಣ ಹಣ್ಣುಗಳು ಇತ್ಯಾದಿಗಳನ್ನು ತರುವುದಾದರೂ ಎಲ್ಲಿಂದ? ಇಸ್ಕಾನ್ ಸಂಸ್ಥೆಗೆ ಊಟ ನೀಡುವಂತೆ ಮಾಡಿದಲ್ಲಿ ಹೆಚ್ಚು ಅನುಕೂಲವಾಗಲಿದೆ ಎಂದು ಪಂಚಾಯ್ತಿಯ ಅಧಿಕಾರಿಗಳು ಹೇಳಿದರು.

ಶುಶ್ರೂಷಕಿಯರಿಗೆ ಹೊರೆ ಹೆಚ್ಚು

ಜಿಲ್ಲೆಯ ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಶುಶ್ರೂಷಕಿಯರೇ ನಿಭಾಯಿಸುತ್ತಿದ್ದಾರೆ. ಒಬ್ಬರು ಶುಶ್ರೂಷಕಿಯರಿಗೆ 2ರಿಂದ 3 ಹೆಚ್ಚುವರಿ ಹೊಣೆ ನೀಡಲಾಗಿದೆ. ಆಸ್ಪತ್ರೆಯಲ್ಲಿ ರೋಗಿಗಳನ್ನು ನೋಡಿಕೊಳ್ಳಬೇಕು. ಬಯಲು ಸೀಮೆಯಲ್ಲಿ 4ರಿಂದ 5 ಸಾವಿರ ಜನಸಂಖ್ಯೆ ಇರುವ 8ರಿಂದ 10 ಓಣಿಗಳನ್ನು ನೋಡಿಕೊಳ್ಳುವ ಜವಾಬ್ದಾರಿಯಾದರೆ, ಮಲೆನಾಡು ಪ್ರದೇಶಗಳಲ್ಲಿ 10ರಿಂದ 12 ಹಳ್ಳಿಗಳನ್ನು ಇವರೇ ನಿಭಾಯಿಸಬೇಕಾಗಿದೆ ಎಂದು ಶುಶ್ರೂಷಕರು ತಮ್ಮ ಅಳಲು ತೋಡಿಕೊಂಡರು.

ಧಾರವಾಡ ಜಿಲ್ಲಾ
ಕೋವಿಡ್ ಅಂಕಿ–ಅಂಶ

57,197 ▲ ಒಟ್ಟು ಸೋಂಕಿತರು

3,196 ▼	52,992 ▲	1,008 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	262 ▲
ಗುಣಮುಖ	628 ▼
ಸಾವು	9 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ



ಗ್ರಾಮದ ಪ್ರತಿ ಮನೆಗೂ ಭೇಟಿ ನೀಡಿ ಆರೋಗ್ಯ ವಿಚಾರಿಸುತ್ತಿದ್ದೇವೆ. ಸೋಂಕಿತರಿಗೆ ಮತ್ತು ಶಂಕಿತರಿಗೆ ಇಲಾಖೆ ನೀಡಿರುವ ಮಾತ್ರೆಗಳ ಪೊಟ್ಟಣಗಳನ್ನು ನೀಡಿ, ನಿಗಾ ವಹಿಸಲಾಗುತ್ತಿದೆ.
ಮಂಜುಳಾ ಕುಂಬಾರ, ಶುಶ್ರೂಷಕಿ, ನವಲಗುಂದ



ಕೋವಿಡ್ ಶಂಕಿತರು ಮತ್ತು ಬಾಣಂತಿಯರ ಆರೈಕೆ ಒಂದೇ ಆಸ್ಪತ್ರೆಯಲ್ಲಿ ನಡೆಸಲಾಗುತ್ತಿದೆ. ಇದು ಆತಂಕಕಾರಿ ವಿಷಯವಾಗಿದೆ
ಎಂ.ಎಂ. ಮುಲ್ಲಾ, ನಿವಾಸಿ, ಮೊರಬ



ಒಂಬತ್ತು ವೈದ್ಯರ ನೇಮಕಾತಿಗಾಗಿ ಅರ್ಜಿ ಕರೆಯಲಾಗಿತ್ತು. ಒಬ್ಬರೂ ಅರ್ಜಿ ಹಾಕಲಿಲ್ಲ. ಶುಶ್ರೂಷಕಿಯರಲ್ಲಿ ಹಲವರು ಪದೋನ್ನತಿ ಹೊಂದಿದ್ದು, ಅವರ ಜಾಗಕ್ಕೆ ಬೇರೆಯವರನ್ನು ನೇಮಕ ಮಾಡಿಕೊಳ್ಳಬೇಕಾಗಿದೆ. ಇರುವ ಸಿಬ್ಬಂದಿಯಲ್ಲಿ ಪರಿಸ್ಥಿತಿ ನಿಭಾಯಿಸಲಾಗುತ್ತಿದೆ.
ಡಾ. ಯಶವಂತ ಮದೀನಕರ್, ಜಿಲ್ಲಾ ಆರೋಗ್ಯಾಧಿಕಾರಿ



20 ಸಾವಿರ ಜನಸಂಖ್ಯೆ ಇರುವ ಹಳ್ಳಿಯಲ್ಲಿ ಈವರೆಗೂ 150 ಜನರ ಕೋವಿಡ್ ಪರೀಕ್ಷೆ ಆಗಿದೆ. ಆದರೆ ಗ್ರಾಮದಲ್ಲಿ 25ಕ್ಕೂ ಹೆಚ್ಚು ಮರಣಗಳಾಗಿವೆ. ಗ್ರಾಮಸ್ಥರ ಪರಿಸ್ಥಿತಿ ಕೇಳುವವರು ಯಾರೂ ಇಲ್ಲದಾಗಿದೆ.
ಮಹಾವೀರ ಜೈನ್, ಹಿರಿಯ, ನವಲೂರು

ಕೋವಿಡ್ ಮರಣ: ಹಳ್ಳಿಗಳಲ್ಲಿ ತಲ್ಲಣ

ಒಂದನೇ ಪುಟದಿಂದ

ಇಂಥ ದೂರು ದುಮ್ಮಾನಗಳು ಸಮಸ್ಯೆಗಳು ಗ್ರಾಮಗಳಿಗೆ ಭೇಟಿ ನೀಡಿದ 'ಪ್ರಜಾವಾಣಿ' ತಂಡಕ್ಕೆ ಹೆಜ್ಜೆ ಹೆಜ್ಜೆಗೂ ಕಂಡು ಬಂದವು.

ದವಾಖಾನೆಯಲ್ಲಿ ವೈದ್ಯರೇ ಇಲ್ಲ!: ಜಿಲ್ಲೆಯಲ್ಲಿರುವ 67 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ ಕಾಡುತ್ತಿದೆ. ದೇವರಗುಡ್ಡ, ತುಮ್ಮಿನಕಟ್ಟಿ, ಮಾಕನೂರು, ಮೇಡ್ಲೇರಿ, ಕರ್ಜಗಿ, ಕಡಕೋಳ, ಚಿಕ್ಕೇರೂರು, ಕಾಟೇನಹಳ್ಳಿ ಮುಂತಾದ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರೇ ಇಲ್ಲ. ಇನ್ನು ಕೆಲವು ಕಡೆ ತಾಂತ್ರಿಕ ಸಿಬ್ಬಂದಿ ಕೊರತೆ ಇರುವುದರಿಂದ 'ಕೋವಿಡ್ ಪರೀಕ್ಷೆ'ಗೂ ತೊಡಕಾಗಿದೆ. ವೈದ್ಯಾಧಿಕಾರಿ ಮತ್ತು ತಜ್ಞ ವೈದ್ಯರ 33 ಹುದ್ದೆಗಳು ಖಾಲಿ ಉಳಿದಿವೆ. ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ 99 ಹುದ್ದೆಗಳು ಭರ್ತಿಯೇ ಆಗಿಲ್ಲ.

ಆರೋಗ್ಯ ಕೇಂದ್ರಗಳಲ್ಲಿ ಮಾತ್ರೆ ಕೊಟ್ಟು ರೋಗಿಗಳನ್ನು ತಾಲ್ಲೂಕು ಮತ್ತು ಜಿಲ್ಲಾಸ್ಪತ್ರೆಗೆ ಸಾಗ ಹಾಕುತ್ತಾರೆ.

'ನಮ್ಮೂರಿನಲ್ಲಿ ಉದ್ಘಾಟನೆಯಾದ ಐದು ವರ್ಷಗಳ ನಂತರ 'ಆರೋಗ್ಯ ಮತ್ತು ಕ್ಷೇಮ ಕೇಂದ್ರ' ಕಾರ್ಯಾರಂಭ ಮಾಡಿದೆ. ಸರ್ಕಾರಿ ಆಸ್ಪತ್ರೆಗಳ ಅವ್ಯವಸ್ಥೆಯಿಂದಾಗಿ ಜನರು ಮನೆಗಳಲ್ಲೇ ಚಿಕಿತ್ಸೆ ಪಡೆಯುತ್ತಿದ್ದಾರೆ. ಗ್ರಾಮೀಣ ಜನರ ಆರೋಗ್ಯ ಸೇವೆಗೆ ಇಲಾಖೆ ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ಹಾವೇರಿ ತಾಲ್ಲೂಕು ಕನಕಾಪುರ ಗ್ರಾಮದ ರೈತ ಮುಖಂಡ ಫಕ್ಕೀರಗೌಡ ಗಾಜೀಗೌಡ್ರ ಅವರ ಒತ್ತಾಯಿಸುತ್ತಾರೆ.

ಮರಣದ ತಲ್ಲಣ: ಜಿಲ್ಲೆಯಲ್ಲಿ ಕಳೆದ 15 ದಿನಗಳಲ್ಲಿ 120 ಮಂದಿ ಕೋವಿಡ್‌ಗೆ ಬಲಿಯಾಗಿದ್ದಾರೆ. ಕಳೆದ ವಾರ ಕೋವಿಡ್ ಮರಣ ಪ್ರಮಾಣವು ರಾಜ್ಯದಲ್ಲಿ ಶೇ 1.4ರಷ್ಟಿದ್ದರೆ, ಜಿಲ್ಲೆಯಲ್ಲಿ ಶೇ 3.81ರಷ್ಟಿತ್ತು. ರಾಜ್ಯದಲ್ಲೇ ಹಾವೇರಿ ಜಿಲ್ಲೆ ಮರಣ ಪ್ರಮಾಣದಲ್ಲಿ ಮೊದಲ ಸ್ಥಾನಕ್ಕೇರಿ ಜನರಲ್ಲಿ ತೀವ್ರ ಆತಂಕ ಸೃಷ್ಟಿಸಿತ್ತು. ಈಗ ಮರಣ ಪ್ರಮಾಣ ಶೇ 2.18ಕ್ಕೆ ಇಳಿಕೆಯಾಗಿದೆ.

'ಬೆಡ್ ಸಿಗ್ತಾ ಇಲ್ಲ': ಜಿಲ್ಲಾಸ್ಪತ್ರೆಯನ್ನು 'ಕೋವಿಡ್ ಆಸ್ಪತ್ರೆ'ಯಾಗಿ ಪರಿವರ್ತಿಸಲಾಗಿದೆ. 330 ಹಾಸಿಗೆಗಳಲ್ಲಿ 194 ಹಾಸಿಗೆಗಳನ್ನು ಕೋವಿಡ್ ಪೀಡಿತರಿಗೆ ಮೀಸಲಿಡಲಾಗಿದೆ. 6 ತಾಲ್ಲೂಕು ಆಸ್ಪತ್ರೆಗಳಲ್ಲಿ 387 ಹಾಗೂ 5 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 50 ಹಾಸಿಗೆಗಳನ್ನು ಕೋವಿಡ್ ರೋಗಿಗಳಿಗೆ ಕಾಯ್ದಿರಿಸಲಾಗಿದೆ. ಕೋವಿಡ್ ಕೇರ್ ಸೆಂಟರ್‌ಗಳಲ್ಲಿ 881 ಹಾಸಿಗೆಗಳ ವ್ಯವಸ್ಥೆ ಮಾಡಲಾಗಿದೆ.

ಆದರೆ, ಜಿಲ್ಲಾಸ್ಪತ್ರೆ ಮತ್ತು ತಾಲ್ಲೂಕು ಆಸ್ಪತ್ರೆಗಳ ಆಮ್ಲಜನಕ ಸಹಿತ ಹಾಸಿಗೆಗಳು ಬಹುತೇಕ ಭರ್ತಿಯಾಗಿ, ಸಕಾಲದಲ್ಲಿ ಚಿಕಿತ್ಸೆ ದೊರೆಯುತ್ತಿಲ್ಲ. ಹುಬ್ಬಳ್ಳಿ, ದಾವಣಗೆರೆ ಆಸ್ಪತ್ರೆಗಳಿಗೆ ಹೋಗುವ ಅನಿವಾರ್ಯ ಎದುರಾಗಿದೆ ಎಂಬ ದೂರುಗಳು ಜನರಿಂದ ಕೇಳಿ ಬಂದವು.

'ನಮಗೆ 3 ತಿಂಗಳಿಂದ ಗೌರವಧನ ಸಿಕ್ಕಿಲ್ಲ. ಸರಿಯಾಗಿ ಮಾಸ್ಕ್, ಸ್ಯಾನಿಟೈಸರ್ ಕೊಟ್ಟಿಲ್ಲ. ಗ್ರಾಮಸ್ಥರು ಹೀಗಳೆಯುತ್ತಾರೆ, ಜರೆಯುತ್ತಾರೆ. ಸೋಂಕಿನ ಲಕ್ಷಣಗಳನ್ನು ಮುಚ್ಚಿಟ್ಟು, ಜೀವಕ್ಕೆ ಕುತ್ತು ತಂದುಕೊಳ್ಳುತ್ತಿದ್ದಾರೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಆಶಾ ಕಾರ್ಯಕರ್ತೆಯೊಬ್ಬರು ಬೇಸರ ವ್ಯಕ್ತಪಡಿಸಿದರು.

ಹಳ್ಳಿಗಳೇ ಹಾಟ್‌ಸ್ಪಾಟ್: ಕೋವಿಡ್ ಎರಡನೇ ಅಲೆಯಲ್ಲಿ, ಸೋಂಕು ಹರಡುವಿಕೆಯಲ್ಲಿ ಹಳ್ಳಿಗಳೇ ಹಾಟ್‌ಸ್ಪಾಟ್‌ಗಳಾಗಿವೆ. ಮೇ ಅಂತ್ಯಕ್ಕೆ ಜಿಲ್ಲೆಯಲ್ಲಿರುವ 699 ಕಂದಾಯ ಗ್ರಾಮಗಳಲ್ಲಿ 419 (ಶೇ 60) ಗ್ರಾಮಗಳಲ್ಲಿ ಕೊರೊನಾ ಸೋಂಕು ಹರಡಿದೆ ಎಂದು ಆರೋಗ್ಯ ಇಲಾಖೆಯ ಅಂಕಿಅಂಶಗಳು ತಿಳಿಸುತ್ತವೆ. ವಾಸ್ತವದಲ್ಲಿ ಶೇ 80ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಕೊರೊನಾ ಸೋಂಕಿದೆ ಎಂಬುದು ಗ್ರಾಮಸ್ಥರ ವಾದ.

60 ವರ್ಷ ಮೇಲ್ಪಟ್ಟವರು ಮಾತ್ರ ಮಾಸ್ಕ್ ಧರಿಸಿ, ಹಳ್ಳಿ ಕಟ್ಟೆ, ದೇವಸ್ಥಾನ, ಮನೆಯ ಜಗುಲಿ ಮುಂತಾದ ಕಡೆ ಕುಳಿತಿದ್ದರು. ಆದರೆ, ಯುವಕರು ಮತ್ತು ಮಧ್ಯ ವಯಸ್ಕರು ಮಾಸ್ಕ್ ಧರಿಸದೆ, ಅಂತರ ಕಾಯ್ದುಕೊಳ್ಳದೆ ಗುಂಪು ಗುಂಪಾಗಿ ನಿಂತುಕೊಂಡು ಹರಟೆ ಹೊಡೆಯುತ್ತಾ, ಬೈಕ್‌ಗಳಲ್ಲಿ ತಿರುಗುತ್ತಿದ್ದ ದೃಶ್ಯಗಳು ಕಂಡು ಬಂದವು.

ಲಸಿಕೆಯ ಮುಖವನ್ನೇ ನೋಡಿಲ್ಲ...

ಶಿಗ್ಗಾವಿ ತಾಲ್ಲೂಕು ದುಂಡಶಿ ಅರಣ್ಯ ವಲಯದಲ್ಲಿ ಬರುವ ಕುಗ್ರಾಮ ಗೌಳಿದಡ್ಡಿಯಲ್ಲಿ ಹಿಂದೂ ದನಗರ್ ಗೌಳಿ ಮರಾಠ ಸಮುದಾಯದ 38 ಕುಟುಂಬಗಳಿದ್ದು, ಸುಮಾರು 190 ಜನಸಂಖ್ಯೆ ಇದೆ. 44 ವರ್ಷ ಮೇಲ್ಪಟ್ಟವರೇ 50ಕ್ಕೂ ಹೆಚ್ಚು ಮಂದಿ ಇದ್ದಾರೆ. ಇವರಲ್ಲಿ ಒಬ್ಬರೂ ಕೋವಿಡ್ ಲಸಿಕೆ ಹಾಕಿಸಿಕೊಂಡಿಲ್ಲ.

ಲಸಿಕೆಯ ಬಗ್ಗೆ ಸರಿಯಾದ ಜಾಗೃತಿ ಇಲ್ಲ. ಲಸಿಕೆಗಾಗಿ 12 ಕಿ.ಮೀ. ದೂರದ ದುಂಡಶಿ ಹಾಗೂ 9 ಕಿ.ಮೀ. ದೂರದ ಹೊಸೂರು ಗ್ರಾಮಕ್ಕೆ ಹೋಗಲು ಬಸ್ ವ್ಯವಸ್ಥೆ ಇಲ್ಲ. ವಯೋವೃದ್ಧರು ಕಾಡಿನ ದಾರಿಯಲ್ಲಿ ಮಳೆಗಾಲದಲ್ಲಿ ನಡೆದುಕೊಂಡು ಹೋಗಲು ಸಾಧ್ಯವಾಗುತ್ತಿಲ್ಲ ಎಂದು ಅಲ್ಲಿನ ನಿವಾಸಿಗಳು ಅಳಲು ತೋಡಿಕೊಂಡರು.



ಆಸ್ಪತ್ರೆಯಲ್ಲಿ ಉಳ್ಳವರು ಮತ್ತು ಬಡವರ ನಡುವೆ ತಾರತಮ್ಯ ಮಾಡುತ್ತಾರೆ. ಸಂಬಂಧಿಯನ್ನು ದಾಖಲಿಸಿದ್ದಾಗ ಈ ನೋವು ಅನುಭವಿಸಿದ್ದೇನೆ
ಪ್ರಕಾಶ ಮಾಗೋಡ, ಕುಂಚೂರು ನಿವಾಸಿ



ಸರ್ಕಾರಿ ಆಸ್ಪತ್ರೆಯಲ್ಲಿ ಸಮರ್ಪಕವಾದ ಚಿಕಿತ್ಸೆ ಸಿಗದೇ ನಮ್ಮ ಊರಿನಲ್ಲಿ ಹದಿನೈದು ದಿನಗಳಲ್ಲಿ ಎಂಟು ಮಂದಿ ಸಾವನ್ನಪ್ಪಿದ್ದಾರೆ
ಹರಿಹರಗೌಡ ಪಾಟೀಲ, ಮುಷ್ಠೂರ ಗ್ರಾಮದ ನಿವಾಸಿ

ಹಾವೇರಿ ಜಿಲ್ಲಾ
ಕೋವಿಡ್ ಅಂಕಿ–ಅಂಶ

20,747 ▲ ಒಟ್ಟು ಸೋಂಕಿತರು

1,146 ▼	19,116 ▲	485 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	138 ▼
ಗುಣಮುಖ	159 ▲
ಸಾವು	06 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

9.27 ಲಕ್ಷ ಮಕ್ಕಳಲ್ಲಿ 'ತೀವ್ರ ಸ್ವರೂಪದ ಅಪೌಷ್ಟಿಕತೆ'



ನವದೆಹಲಿ (ಪಿಟಿಐ): ದೇಶದಲ್ಲಿ ಕಳೆದ ವರ್ಷ ನವೆಂಬರ್‌ವರೆಗೆ ಸಮೀಕ್ಷೆ ನಡೆಸಲಾಗಿದ್ದು, 'ತೀವ್ರ ಸ್ವರೂಪದ ಅಪೌಷ್ಟಿಕತೆ' ಹೊಂದಿರುವ 6 ತಿಂಗಳಿಂದ 6 ವರ್ಷ ವಯೋಮಾನದ 9,27,606 ಮಕ್ಕಳನ್ನು ಗುರುತಿಸಲಾಗಿದೆ.

'ತೀವ್ರ ಸ್ವರೂಪದ ಅಪೌಷ್ಟಿಕತೆ'ಯಿಂದ ಬಳಲುವ ಮಕ್ಕಳ ಸಂಖ್ಯೆ ಉತ್ತರ ಪ್ರದೇಶದಲ್ಲಿ ಅಧಿಕವಾಗಿದ್ದರೆ, ನಂತರದ ಸ್ಥಾನದಲ್ಲಿ ಬಿಹಾರ ಇದೆ.

ಆರ್‌ಟಿಐ ಅಡಿ ಸಲ್ಲಿಸಿದ್ದ ಅರ್ಜಿಗೆ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ನೀಡಿರುವ ಉತ್ತರದಲ್ಲಿ ಈ ಮಾಹಿತಿ ಇದೆ.

'ಬಡತನದಿಂದ ತತ್ತರಿಸಿರುವ ಜನರು ಕೋವಿಡ್–19 ಪಿಡುಗಿನಿಂದ ಮತ್ತಷ್ಟು ಸಂಕಷ್ಟಕ್ಕೀಡಾಗುವರು. ಇದು, ಈ ವರ್ಗದ ಜನರಲ್ಲಿ ಪೌಷ್ಟಿಕತೆ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಇನ್ನಷ್ಟು ಬಿಗಡಾಯಿಸಲಿದೆ' ಎಂದು ಸಚಿವಾಲಯ ಕಳವಳ ವ್ಯಕ್ತಪಡಿಸಿದೆ.

ಉತ್ತರ ಪ್ರದೇಶದಲ್ಲಿ 3,98,359, ಬಿಹಾರದಲ್ಲಿ 2,79,427 ಮಕ್ಕಳು ತೀವ್ರ ಸ್ವರೂಪದ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಲಡಾಖ್, ಲಕ್ಷದ್ವೀಪ, ನಾಗಾಲ್ಯಾಂಡ್, ಮಣಿಪುರ ಹಾಗೂ ಮಧ್ಯಪ್ರದೇಶದ ಮಕ್ಕಳಲ್ಲಿ ತೀವ್ರ ಸ್ವರೂಪದ ಅಪೌಷ್ಟಿಕತೆ ಕಂಡು ಬಂದಿಲ್ಲ ಎಂದು ಸಚಿವಾಲಯ ತಿಳಿಸಿದೆ.

'ಕೋವಿಡ್–19 ಪಿಡುಗಿನ ಮೂರನೇ ಅಲೆ ಕಾಣಿಸಿಕೊಂಡರೆ, ಆಗ ಮಕ್ಕಳ ಪೌಷ್ಟಿಕತೆ ಮೇಲೆ ಹೆಚ್ಚು ಪರಿಣಾಮ ಉಂಟಾಗುವುದು. ನಿರುದ್ಯೋಗ ಹೆಚ್ಚಾಗುವುದು. ಕುಟುಂಬಗಳ ಆರ್ಥಿಕತೆಯೂ ಕುಸಿಯುವುದರಿಂದ ಅದರ ನೇರ ಪರಿಣಾಮ ಹಸಿವಿನ ಮೇಲಾಗುತ್ತದೆ. ಹಸಿವು ತಣಿಯದಿದ್ದರೆ ಅದು ಅಪೌಷ್ಟಿಕತೆಗೆ ಕಾರಣವಾಗುತ್ತದೆ' ಎಂದೂ ಸಚಿವಾಲಯ ಅಭಿಪ್ರಾಯಪಟ್ಟಿದೆ.

'ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಹೋಗಲಾಡಿಸುವಲ್ಲಿ ಅಂಗನವಾಡಿಗಳು ಹೆಚ್ಚು ಕ್ರಿಯಾಶೀಲವಾಗಬೇಕು' ಎಂದು ಎಚ್‌ಎಕ್ಯೂ ಸೆಂಟರ್ ಫಾರ್ ಚೈಲ್ಡ್ ರೈಟ್ಸ್‌ನ ಸಹ ಸಂಸ್ಥಾಪಕಿ ಈನಾಕ್ಷಿ ಗಂಗೂಲಿ ಹೇಳುತ್ತಾರೆ.

'ಲಾಕ್‌ಡೌನ್‌ನಿಂದಾಗಿ ಮಕ್ಕಳು ಅಂಗನವಾಡಿಗಳಿಗೆ ಹೋಗಲು ಸಾಧ್ಯವಾಗದಿದ್ದರೆ, ಅಂಗನವಾಡಿಗಳೇ ಸಂಕಷ್ಟದಲ್ಲಿರುವ ಮಕ್ಕಳ ಮನೆಗೆ ಆಹಾರವನ್ನು ತಲುಪಿಸಬೇಕು. ಈ ನಿಟ್ಟಿನಲ್ಲಿ ಸರ್ಕಾರ ಏನು ಸಿದ್ಧತೆ ಮಾಡಿಕೊಂಡಿದೆ' ಎಂದೂ ಅವರು ಪ್ರಶ್ನಿಸುತ್ತಾರೆ.



'ಆಪರೇಷನ್ ಬ್ಲೂಸ್ಟಾರ್' 37ನೇ ವರ್ಷಾಚರಣೆಯ ಭಾಗವಾಗಿ ಶಿರೋಮಣಿ ಅಕಾಲಿ ದಳದ (ಎಸ್‌ಎಡಿ) ಬೆಂಬಲಿಗರು ಭಾನುವಾರ ಪಂಜಾಬ್‌ನ ಅಮೃತಸರದಲ್ಲಿರುವ ವಿಶ್ವ ಪ್ರಸಿದ್ಧ ಸ್ವರ್ಣ ಮಂದಿರದಲ್ಲಿ ಖಲಿಸ್ತಾನ ಪರ ಘೋಷಣೆಗಳನ್ನು ಕೂಗಿದರು.

ಮೋದಿ– ಯೋಗಿ ನಡುವೆ ಭಿನ್ನಾಭಿಪ್ರಾಯವಿಲ್ಲ

'ಉತ್ತರ ಪ್ರದೇಶ ಸಿ.ಎಂ ಬದಲಾವಣೆ ಇಲ್ಲ'

ಲಖನೌ: ಉತ್ತರ ಪ್ರದೇಶದಲ್ಲಿ ಮುಖ್ಯ ಮಂತ್ರಿ ಬದಲಾವಣೆ ಇಲ್ಲ ಎಂದು ಬಿಜೆಪಿ ಭಾನುವಾರ ಸ್ಪಷ್ಟಪಡಿಸಿದೆ.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹಾಗೂ ಪ್ರಧಾನಿ ಮೋದಿ ಮತ್ತು ಕೆಲವು ರಾಷ್ಟ್ರೀಯ ಬಿಜೆಪಿ ನಾಯಕರ ನಡುವೆ ಭಿನ್ನಾಭಿಪ್ರಾಯಗಳು ಉಂಟಾಗಿವೆ ಎನ್ನುವ ವರದಿಗಳ ಹಿನ್ನೆಲೆಯಲ್ಲಿ ಬಿಜೆಪಿ ಈ ಸ್ಪಷ್ಟನೆ ನೀಡಿದೆ.

ರಾಜ್ಯಪಾಲರಾದ ಆನಂದಿಬೇನ್ ಪಟೇಲ್ ಅವರನ್ನು ರಾಜಭವನದಲ್ಲಿ ಭಾನುವಾರ ಭೇಟಿಯಾದ ಬಳಿಕ ಈ ಬಗ್ಗೆ ಪ್ರತಿಕ್ರಿಯಿಸಿರುವ ಉತ್ತರ ಪ್ರದೇಶದ ಬಿಜೆಪಿ ಉಸ್ತುವಾರಿ ರಾಧಾ ಮೋಹನ್ ಸಿಂಗ್ ಅವರು, 'ರಾಷ್ಟ್ರೀಯ ನಾಯಕರು ಮತ್ತು ಮುಖ್ಯಮಂತ್ರಿ ಅವರ ನಡುವೆ ಯಾವುದೇ ಭಿನ್ನಾಭಿಪ್ರಾಯಗಳು ಇಲ್ಲ. ಕೇವಲ ಕಾಲ್ಪನಿಕ ವರದಿಗಳನ್ನು ಸೃಷ್ಟಿಸಲಾಗುತ್ತಿದೆ' ಎಂದು ಹೇಳಿದರು.

ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಉತ್ತರಿಸಿದ ಅವರು, 'ಮುಖ್ಯಮಂತ್ರಿ ಅವರು ಈ ಬಗ್ಗೆ ನಿರ್ಧಾರ ಕೈಗೊಳ್ಳಲಿದ್ದಾರೆ' ಎಂದರು.

2022ರ ಮಾರ್ಚ್‌ನಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯ ದೃಷ್ಟಿಯಿಂದ ಸಚಿವ ಸಂಪುಟ ಪುನರ್‌ರಚನೆ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಶನಿವಾರ ರಾತ್ರಿ ರಾಧಾ ಮೋಹನ್ ಸಿಂಗ್ ಅವರು, ಉತ್ತರ ಪ್ರದೇಶ ಬಿಜೆಪಿ ಘಟಕದ ಅಧ್ಯಕ್ಷ ಸ್ವತಂತ್ರ ದೇವ್ ಸಿಂಗ್ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಸುನೀಲ್ ಬನ್ಸಲ್ ಅವರ ಜತೆ ಸಭೆ ನಡೆಸಿದ್ದು ಹಲವು ಊಹಾಪೋಹಗಳಿಗೆ ಕಾರಣವಾಗಿತ್ತು.

ಶಿಕ್ಷಣ ಗುಣಮಟ್ಟ: ಕಾರ್ಯಕ್ಷಮತೆ ಸೂಚ್ಯಂಕದಲ್ಲಿ ಎ++

ತಮಿಳುನಾಡು, ಕೇರಳ ಅತ್ಯುತ್ತಮ

ಪ್ರಜಾವಾಣಿ ವಾರ್ತೆ



ನವದೆಹಲಿ: ಶಾಲಾ ಶಿಕ್ಷಣದ ಗುಣಮಟ್ಟ ಗುರುತಿಸುವ 'ಕಾರ್ಯಕ್ಷಮತೆ ಶ್ರೇಣೀಕೃತ ಸೂಚ್ಯಂಕ'ದಲ್ಲಿ (ಪಿಜಿಐ) ಪಂಜಾಬ್, ತಮಿಳುನಾಡು, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಚಂಡೀಗಡ ಹಾಗೂ ಕೇರಳ ಎ + + ಪಡೆದಿವೆ.

ಶಿಕ್ಷಣ ಸಚಿವಾಲಯ 2019–20ನೇ ಸಾಲಿನ ಪಿಜಿಐ ವರದಿಯನ್ನು ಭಾನುವಾರ ಬಿಡುಗಡೆ ಮಾಡಿದೆ. 70 ಮಾನದಂಡಗಳ ಆಧಾರದ ಮೇಲೆ ಶ್ರೇಣೀಕೃತ ಸೂಚ್ಯಂಕ ನೀಡಲಾಗಿದೆ.

ಕರ್ನಾಟಕದ ಶಿಕ್ಷಣ ಗುಣಮಟ್ಟ ಹಿಂದಿನ ವರ್ಷಗಳಿಗೆ ಹೋಲಿಸಿದಾಗ ಅಲ್ಪಮಟ್ಟಿಗೆ ಸುಧಾರಣೆ ಕಂಡಿದ್ದು, 'ಎ' ಸೂಚ್ಯಂಕ ಪಡೆದಿದೆ. ಅಂದರೆ, ಗ್ರೇಡ್ 1ರಲ್ಲಿದೆ.

ದೆಹಲಿ, ಗುಜರಾತ್, ಹರಿಯಾಣ, ರಾಜಸ್ಥಾನ, ಪುದುಚೇರಿ, ದಾದ್ರಾ ಮತ್ತು ನಗರ ಹವೇಲಿ ಎ + ವಿಭಾಗದಲ್ಲಿ ಸ್ಥಾನ ಪಡೆದಿವೆ.

ಆಡಳಿತ ಮತ್ತು ನಿರ್ವಹಣೆಯಲ್ಲಿ ಪಂಜಾಬ್ ಗರಿಷ್ಠ ಅಂಕಗಳನ್ನು ಪಡೆದಿದೆ. ಮೂಲಸೌಕರ್ಯಗಳು ಮತ್ತು ಸೌಲಭ್ಯಗಳ ವಿಷಯದಲ್ಲಿ ಬಿಹಾರ ಮತ್ತು ಮೇಘಾಲಯ ಅತಿ ಕಡಿಮೆ ಅಂಕಗಳನ್ನು ಪಡೆದಿವೆ.

13 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಮೂಲಸೌಕರ್ಯಗಳು ಮತ್ತು ಇತರ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಶೇಕಡ 10ರಷ್ಟು ಸುಧಾರಣೆಯಾಗಿವೆ. ಅದರಲ್ಲೂ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಹಾಗೂ ಒಡಿಶಾ ಮೂಲಸೌಕರ್ಯಗಳನ್ನು ಕಲ್ಪಿಸುವಲ್ಲಿ ಮಹತ್ವದ ಸುಧಾರಣೆ ಕ್ರಮಗಳನ್ನು ಕೈಗೊಂಡಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

19 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಆಡಳಿತ ಪ್ರಕ್ರಿಯೆಯಲ್ಲಿ ಶೇಕಡ 10ರಷ್ಟು ಮಾತ್ರ ಸುಧಾರಣೆ ಕ್ರಮಗಳನ್ನು ಕೈಗೊಂಡಿವೆ ಎಂದು ತಿಳಿಸಿದೆ.

'ಶಿಕ್ಷಕರು, ಪ್ರಾಂಶುಪಾಲರು ಮತ್ತು ಆಡಳಿತ ಸಿಬ್ಬಂದಿ ಕೊರತೆ, ನಿಯಮಿತವಾಗಿ ಶಾಲೆಗಳ ತಪಾಸಣೆ ಮಾಡದಿರುವುದು, ಸಕಾಲಕ್ಕೆ ಹಣಕಾಸು ಲಭ್ಯವಾಗದಿರುವುದು ಸೇರಿದಂತೆ ಹಲವು ಸಮಸ್ಯೆಗಳಿಂದ ದೇಶದ ಶಿಕ್ಷಣ ವ್ಯವಸ್ಥೆಯ ಸುಧಾರಣೆಗೆ ಅಡ್ಡಿಯಾಗಿವೆ' ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

'ಸೂಚ್ಯಂಕದ ಆಧಾರದ ಮೇಲೆ ಕೊರತೆಗಳನ್ನು ವಸ್ತುನಿಷ್ಠವಾಗಿ ಮತ್ತು ನಿಯಮಿತವಾಗಿ ಪರಿಶೀಲಿಸಿ ನಿವಾರಿಸಿಕೊಳ್ಳಬಹುದು. ಜತೆಗೆ ಯಾವ ವಲಯಕ್ಕೆ ಆದ್ಯತೆ ನೀಡಬೇಕು ಎನ್ನುವುದು ಸಹ ರಾಜ್ಯಗಳಿಗೆ ತಿಳಿಯಲಿದೆ' ಎಂದು ಸಲಹೆ ನೀಡಲಾಗಿದೆ.

ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಬಹುತೇಕ ರಾಜ್ಯಗಳು ಸೂಚ್ಯಂಕದಲ್ಲಿ ಸುಧಾರಣೆ ಕಂಡಿವೆ.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪಿಜಿಐ ಅನ್ನು ಮೊದಲ ಬಾರಿ 2019ರಲ್ಲಿ ಬಿಡುಗಡೆ ಮಾಡಲಾಗಿತ್ತು. 2017–18ನೇ ಶೈಕ್ಷಣಿಕ ವರ್ಷವನ್ನು ಆಧಾರವಾಗಿಟ್ಟುಕೊಂಡು ಈ ಪಿಜಿಐ ವರದಿ ಬಿಡುಗಡೆ ಮಾಡಲಾಗಿತ್ತು.

ಕೊಂಕಣ ರೈಲ್ವೆ: 9 ನಿಲ್ದಾಣಗಳಲ್ಲಿ ಮಳೆ ಮಾಪನ ಕೇಂದ್ರ ಸ್ಥಾಪನೆ

ಮುಂಬೈ: ಕೊಂಕಣ ರೈಲ್ವೆ ವ್ಯಾಪ್ತಿಯ 9 ರೈಲು ನಿಲ್ದಾಣಗಳಲ್ಲಿ ಸ್ವಯಂ ದಾಖಲು ಸೌಲಭ್ಯದ ಮಳೆ ಮಾಪನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಪ್ರವಾಹ ಕುರಿತು ಮುನ್ಸೂಚನೆ ನೀಡುವ ಸಂಬಂಧ ಮೂರು ಸ್ಥಳಗಳಲ್ಲಿ ವಿಶೇಷ ವ್ಯವಸ್ಥೆಯನ್ನು ಸಹ ಅಳವಡಿಸಲಾಗಿದೆ ಎಂದು ಕೊಂಕಣ ರೈಲ್ವೆ ನಿಗಮ ತಿಳಿಸಿದೆ.

ಕೊಂಕಣ ರೈಲು ಮಾರ್ಗವು ಮಹಾರಾಷ್ಟ್ರ, ಗೋವಾ ಹಾಗೂ ಕರ್ನಾಟಕದ ಮೂಲಕ ಹಾಯ್ದು ಹೋಗುತ್ತದೆ. ಕೊಂಕಣ ಪ್ರದೇಶದಲ್ಲಿ ಮುಂಗಾರು ಅವಧಿಯಲ್ಲಿ ಭಾರಿ ಮಳೆಯಾಗುತ್ತದೆ. ಹೀಗಾಗಿ 740 ಕಿ.ಮೀ. ಉದ್ದದ ಮಾರ್ಗದಲ್ಲಿ ಈ ಸಮಯದಲ್ಲಿ ರೈಲುಗಳ ಸಂಚಾರಕ್ಕೆ ಸಾಕಷ್ಟು ಅಡ್ಡಿಯುಂಟಾಗುತ್ತದೆ.

ಮನಗಾಂವ, ಚಿಪ್ಳೂಣ, ರತ್ನಗಿರಿ, ವಿಲ್ವಾಡೆ, ಕನಕವಲಿ, ಮಡಗಾಂವ, ಕಾರವಾರ, ಭಟ್ಕಳ ಹಾಗೂ ಉಡುಪಿಗಳಲ್ಲಿ ಮಳೆ ಮಾಪನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಮನಗಾಂವ ಹಾಗೂ ವೀರ್ ನಡುವೆ ಕಾಳಿ ನದಿ ಹರಿಯುವ ಸ್ಥಳದಲ್ಲಿ, ಸಾವಿತ್ರಿ ನದಿ ಬಳಿ (ವೀರ್ ಹಾಗೂ ಸಾಪೆ ವಾಮಣೆ ನಡುವೆ), ವಶಿಷ್ಠಿ ನದಿ ಬಳಿ (ಚಿಪ್ಳೂಣ ಹಾಗೂ ಕಮತೆ ನಡುವೆ) ಪ್ರವಾಹ ಮುನ್ಸೂಚನೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ದಿಢೀರ್ ಪ್ರವಾಹ ಬಂದ ಸಂದರ್ಭದಲ್ಲಿ, ನದಿಗಳಲ್ಲಿ ನೀರು ಅಪಾಯದ ಮಟ್ಟ ತಲುಪಿದಾಗ ಈ ಕೇಂದ್ರಗಳು ಅಧಿಕಾರಿಗಳಿಗೆ ಎಚ್ಚರಿಕೆ ಸಂದೇಶವನ್ನು ರವಾನಿಸುತ್ತವೆ ಎಂದು ನಿಗಮ ತಿಳಿಸಿದೆ.

ಗಾಳಿಯ ವೇಗವನ್ನು ಅಳೆಯುವ ಮಾಪಕಗಳನ್ನು ನಾಲ್ಕು ಸ್ಥಳಗಳಲ್ಲಿ ಅಳವಡಿಸಲಾಗಿದೆ. ಬೇಲಾಪುರ, ರತ್ನಗಿರಿ ಹಾಗೂ ಮಡಗಾಂವಗಳಲ್ಲಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದೆ. ನೈರುತ್ಯ ಮುಂಗಾರು ಬರುವ ದಿನಗಳಲ್ಲಿ ಮತ್ತಷ್ಟು ಚುರುಕಾಗುವ ಕಾರಣ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ನಿಗಮ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಬ್ಲೂಟಿಕ್ ಗುರುತು ಗೊಂದಲ: ರಾಹುಲ್ ಟೀಕೆ

ನವದೆಹಲಿ (ಪಿಟಿಐ): 'ಕೋವಿಡ್ ಲಸಿಕೆ ವಿಷಯದಲ್ಲಿ ಜನರು ಸ್ವಾವಲಂಬಿ ಆಗಬೇಕು. ಕೇಂದ್ರ ಸರ್ಕಾರ, ಟ್ವಿಟರ್‌ನ ಬ್ಲೂಟಿಕ್ ಬ್ಯಾಡ್ಜ್‌ಗಾಗಿ ಹೋರಾಟ ನಡೆಸಿದೆ' ಎಂದು ಕಾಂಗ್ರೆಸ್ ಮುಖಂಡರ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ಟ್ವಿಟರ್ ಆಡಳಿತವು ಉಪ ರಾಷ್ಟ್ರಪತಿ ವೆಂಕಯ್ಯನಾಯ್ಡು ಮತ್ತು ಮೋಹನ್ ಭಾಗವತ್ ಸೇರಿ ಆರ್‌ಎಸ್‌ಎಸ್ ಉನ್ನತ ನಾಯಕರ ಖಾತೆಯಿಂದ ಬ್ಲೂಟಿಕ್ ಗುರುತು ತೆಗೆದ ಗೊಂದಲ ಕುರಿತು ಹೀಗೆ ಪ್ರತಿಕ್ರಿಯಿಸಿದ್ದಾರೆ.

ನಿಯಮಗಳ ಅನುಸಾರ ಆರು ತಿಂಗಳು ಯಾವುದೇ ಖಾತೆ ನಿಷ್ಕ್ರಿಯವಾಗಿದ್ದರೆ, ಸ್ವಯಂಚಾಲಿತವಾಗಿ ಬ್ಲೂಟಿಕ್ ಗುರುತನ್ನು ತೆಗೆಯಲಾಗುತ್ತದೆ ಎಂದು ಟ್ವಿಟರ್ ಪ್ರತಿಕ್ರಿಯಿಸಿದೆ.

ಮೋದಿ ಸರ್ಕಾರ ಈಗ ಬ್ಲೂ ಟಿಕ್ ಗುರುತಿಗಾಗಿ ಹೋರಾಟ ನಡೆಸಿದೆ. ನಿಮಗೆ ಕೋವಿಡ್ ಲಸಿಕೆ ಬೇಕಿದ್ದಲ್ಲಿ ಸ್ವಾವಲಂಬಿಯಾಗಿ ಎಂದು ಟ್ವೀಟ್ ಮಾಡಿದ್ದಾರೆ.

ಬಿಜೆಪಿ ತಿರುಗೇಟು: ಕೋವಿಡ್ ಲಸಿಕೆ ಕುರಿತಂತೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಸಾಮಾಜಿಕ ಜಾಲತಾಣದಿಂದ ಹೊರಬಂದು ವಾಸ್ತವ ಸ್ಥಿತಿ ಅರಿಯಬೇಕು ಎಂದು ಬಿಜೆಪಿ ತಿರುಗೇಟು ನೀಡಿದೆ.

ಲಸಿಕೆ ಕುರಿತ ಹೇಳಿಕೆಗೆ ಪ್ರತಿಕ್ರಿಯಿಸಿರುವ ಬಿಜೆಪಿ, ಲಸಿಕೆ ಅಕ್ರಮ ಕುರಿತಂತೆ ಕಾಂಗ್ರೆಸ್ ಪಕ್ಷದ ಆಡಳಿತವಿರುವ ರಾಜ್ಯ ಸರ್ಕಾರಗಳ ಜೊತೆಗೆ ಚರ್ಚಿಸಲಿ ಎಂದು ಸಲಹೆ ಮಾಡಿದೆ.

ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಅವರು, ಟ್ವಿಟರ್‌ನಲ್ಲಿ ರಾಜಕಾರಣ ಮಾಡುವುದು ರಾಹುಲ್ ಗಾಂಧಿ ಅವರಿಗೆ ಮಹತ್ವದ ವಿಷಯ. ಲಸಿಕೆ ವಿಷಯದಲ್ಲಿ ಮೋದಿ ಸರ್ಕಾರ ಗಮನಾರ್ಹ ಕೆಲಸ ಮಾಡಿದೆ ಎಂದು ಹೇಳಿದ್ದಾರೆ.

2030ರಲ್ಲಿ ಶುಕ್ರನತ್ತ ಗಗನನೌಕೆ: ನಾಸಾ

ನಾಟಿಂಗ್‌ಹ್ಯಾಮ್, ಬ್ರಿಟನ್ (ಪಿಟಿಐ): ಸೌರವ್ಯೂಹದ ಸದಸ್ಯ ಶುಕ್ರಗ್ರಹಕ್ಕೆ ವ್ಯೋಮನೌಕೆ ಕಳಿಸಿ, ಅಧ್ಯಯನ ಕೈಗೊಳ್ಳುವ ಎರಡು ಯೋಜನೆಗಳನ್ನು ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ ಘೋಷಿಸಿದೆ.

ಈ ಮಹತ್ವಾಕಾಂಕ್ಷೆ ಬಾಹ್ಯಾಕಾಶ ಕಾರ್ಯಕ್ರಮಗಳನ್ನು ಕ್ರಮವಾಗಿ 2028 ಹಾಗೂ 2030ರಲ್ಲಿ ಕಾರ್ಯಗತಗೊಳಿಸಲಾಗುವುದು ಎಂದು ನಾಸಾ ಹೇಳಿರುವುದು ಅಂತರಿಕ್ಷ ವಿಜ್ಞಾನಿಗಳಲ್ಲಿ ಸಂಭ್ರಮಕ್ಕೆ ಕಾರಣವಾಗಿದೆ.

ಶುಕ್ರ ಗ್ರಹ ಪ್ರತಿಕೂಲ ವಾತಾವರಣ ಹೊಂದಿದೆ. ಇಲ್ಲಿನ ವಾತಾವರಣದಲ್ಲಿ ಗಂಧಕಾಮ್ಲ ಇದೆ. ಶೇ 96ರಷ್ಟು ಪ್ರಮಾಣ ಇಂಗಾಲದ ಡೈಆಕ್ಸೈಡ್ ಇರುವ ಕಾರಣ ಮೇಲ್ಮೈ ತಾಪಮಾನ 470 ಡಿಗ್ರಿ ಸೆಲ್ಸಿಯಸ್ ಇರುತ್ತದೆ. ಈ ಉಷ್ಣತೆಯಲ್ಲಿ ಸೀಸ ಸಹ ಕರಗುತ್ತದೆ. ಹೀಗಾಗಿ ಈ ಗ್ರಹದ ಅನ್ವೇಷಣೆ ವಿಜ್ಞಾನಿಗಳ ಪಾಲಿಗೆ ಈಗಲೂ ಸವಾಲಾಗಿಯೇ ಉಳಿದಿದೆ.

1970ರಲ್ಲಿ ಆಗಿನ ಸೋವಿಯತ್ ಒಕ್ಕೂಟ 'ವೆನೆರಾ–7' ಎಂಬ ಗಗನನೌಕೆಯನ್ನು ಶುಕ್ರ ಗ್ರಹಕ್ಕೆ ಕಳಿಸಿತ್ತು. ಆ ಗ್ರಹದ ಮೇಲೆ ಇಳಿಯುವ ಮುನ್ನವೇ, ಅಲ್ಲಿನ ಉಷ್ಣತೆಗೆ ಪ್ಯಾರಾಚೂಟ್ ಕರಗಿದ ಕಾರಣ, ಆ ವ್ಯೋಮಯಾನ ವಿಫಲವಾಗಿತ್ತು. ಆದರೆ, ನಾಶವಾಗುವ ಮುನ್ನ, 'ವೆನೆರಾ' ಗಗನನೌಕೆಯು ಭೂಮಿಗೆ 20 ನಿಮಿಷಗಳ ಡೇಟಾವನ್ನು ರವಾನಿಸಿತ್ತು!

ಕೃಷಿ ವಲಯದ ಮೇಲೆ ಪರಿಣಾಮ ಬೀರದು: ನೀತಿ ಆಯೋಗ

ನವದೆಹಲಿ (ಪಿಟಿಐ): ಕೋವಿಡ್–19 ಎರಡನೇ ಅಲೆ ದೇಶದ ಕೃಷಿ ವಲಯದ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ನೀತಿ ಆಯೋಗದ ಸದಸ್ಯ (ಕೃಷಿ ಕ್ಷೇತ್ರ) ರಮೇಶ ಚಾಂದ್ ಭಾನುವಾರ ಹೇಳಿದ್ದಾರೆ.

'ದೇಶದ ಗ್ರಾಮೀಣ ಭಾಗದಲ್ಲಿ ಮೇ ತಿಂಗಳಲ್ಲಿ ಕೊರೊನಾ ಸೋಂಕಿನ ಪ್ರಕರಣಗಳು ಕಾಣಿಸಿಕೊಂಡಿದ್ದವು. ಆ ಸಂದರ್ಭದಲ್ಲಿ ಕೃಷಿ ಚಟುವಟಿಕೆಗಳು ಅಷ್ಟೇನು ಚುರುಕಾಗಿ ನಡೆದಿರಲಿಲ್ಲ' ಎಂದು ಅವರು ವಿವರಿಸಿದ್ದಾರೆ.

ಅವರು ಪಿಟಿಐ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಕೃಷಿ ವಲಯಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಮಾತನಾಡಿದ್ದಾರೆ.



ಭಾರತ ಫುಟ್‌ಬಾಲ್ ತಂಡದ ಆಟಗಾರರು –ಪಿಟಿಐ ಚಿತ್ರ

ಚೆಟ್ರಿ ಬಳಗಕ್ಕೆ ಬಾಂಗ್ಲಾ ಎದುರಾಳಿ

ಫುಟ್‌ಬಾಲ್: ಏಷ್ಯಾಕಪ್ ಅರ್ಹತೆಗೆ ಕೊನೆಯ ಅವಕಾಶ

ದೋಹಾ (ಪಿಟಿಐ): ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಗೆ ಅರ್ಹತೆ ಗಳಿಸುವ ಭಾರತ ತಂಡದ ಕನಸು ಜೀವಂತವಾಗಿರಬೇಕಾದರೆ ಬಾಂಗ್ಲಾದೇಶ ವಿರುದ್ಧ ಸೋಮವಾರ ನಡೆಯುವ ಪಂದ್ಯದಲ್ಲಿ ಗೆಲ್ಲಲೇಬೇಕಾಗಿದೆ. ಈ ವರೆಗೆ ಆರು ಪಂದ್ಯಗಳನ್ನು ಆಡಿರುವ ಸುನಿಲ್ ಚೆಟ್ರಿ ಬಳಗಕ್ಕೆ ಟೂರ್ನಿಯಲ್ಲಿ ಗೆಲುವು ಮರೀಚಿಕೆಯಾಗಿದೆ.

ವಿಶ್ವಕಪ್ ಮತ್ತು 2023ರ ಏಷ್ಯಾಕಪ್‌ಗೆ ಅರ್ಹತೆ ಗಳಿಸುವ ಟೂರ್ನಿ ಜೊತೆಯಾಗಿ ನಡೆಯುತ್ತಿದೆ. ವಿಶ್ವಕಪ್ ಅರ್ಹತೆಯಿಂದ ಭಾರತ ಈಗಾಗಲೇ ಹೊರಬಿದ್ದಿರುವ ಕಾರಣ ಈಗ ಏಷ್ಯಾಕಪ್ ಅಷ್ಟೇ ತಂಡದ ಕನಸು. ಆದರೆ ಅದರಲ್ಲೂ ಉತ್ತಮ ಸಾಮರ್ಥ್ಯ ತೋರಲು ಆಗಿಲ್ಲ.

ಆರು ಪಂದ್ಯಗಳಲ್ಲಿ ತಂಡ ಈ ವರೆಗೆ ಮೂರು ಪಾಯಿಂಟ್ ಗಳಿಸಿದ್ದು 'ಇ' ಗುಂಪಿನಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಎಂಟು ಗುಂಪುಗಳ ಪೈಕಿ ಅತ್ಯುತ್ತಮ ಸಾಧನೆ ಮಾಡಿ ನಾಲ್ಕನೇ ಸ್ಥಾನ ಗಳಿಸುವ ನಾಲ್ಕು ತಂಡಗಳಿಗೆ ನೇರವಾಗಿ ಮೂರನೇ ಸುತ್ತು ಪ್ರವೇಶಿಸುವ ಅರ್ಹತೆ ಇದೆ. ಭಾರತಕ್ಕೆ ಸದ್ಯ ಈ ಅವಕಾಶವೂ ಸಿಗುವ ಸಾಧ್ಯತೆ ಇಲ್ಲ. ಬಾಂಗ್ಲಾ ವಿರುದ್ಧ ಜಯ ಗಳಿಸಿದರೆ ತಂಡದ ಸ್ಥಿತಿ ಉತ್ತಮವಾಗಲಿದ್ದು ಸಮಸ್ಯೆಗಳಿಂದ ಹೊರಬರಲು ಸಾಧ್ಯ.


ಉತ್ತಮ ಸಾಮರ್ಥ್ಯ ತೋರದೆ ನಾಲ್ಕನೇ ಸ್ಥಾನ ಗಳಿಸುವ ನಾಲ್ಕು ತಂಡಗಳು ಮತ್ತು ಪ್ರತಿ ಗುಂಪಿನ ಕೊನೆಯ ಸ್ಥಾನಗಳಲ್ಲಿ ಉಳಿಯುವ ತಂಡಗಳಿಗೆ ಪ್ಲೇ ಆಫ್ ಸುತ್ತು ಇರುತ್ತದೆ. ಪರಿಸ್ಥಿತಿಯನ್ನು ಅಲ್ಲಿಯ ವರೆಗೂ ಕೊಂಡೊಯ್ಯುವುದು ಬೇಡ ಎಂದಿದ್ದರೆ ತಂಡ ಈಗಲೇ ಎಚ್ಚೆತ್ತುಕೊಳ್ಳಬೇಕಿದೆ.

ಸದ್ಯ ನಾಲ್ಕನೇ ಸ್ಥಾನದಲ್ಲಿರುವ ತಂಡಗಳ ಪೈಕಿ ಆರು ತಂಡಗಳು ಭಾರತಕ್ಕಿಂತ ಹೆಚ್ಚು ಪಾಯಿಂಟ್‌ಗಳನ್ನು ಹೊಂದಿದ್ದು ಉತ್ತಮ ಸ್ಥಿತಿಯಲ್ಲಿವೆ.

ಆರಂಭ: ರಾತ್ರಿ 7.20 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ 1,2,3

ಫ್ರೆಂಚ್ ಓಪನ್: ಹಿಂದೆ ಸರಿದ ಫೆಡರರ್


ರೋಜರ್ ಫೆಡರರ್

ಪ್ಯಾರಿಸ್ (ಎಎಫ್‌ಪಿ): ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರರಲ್ಲಿ ಒಬ್ಬರಾಗಿದ್ದ ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಿಂದ ಭಾನುವಾರ ಹಿಂದೆ ಸರಿದಿದ್ದಾರೆ. ಮೊಣಕಾಲಿನ ನೋವಿಗೆ ಚಿಕಿತ್ಸೆ ಪಡೆದಿದ್ದ ಅವರು ವಿಂಬಲ್ಡನ್ ಟೂರ್ನಿಗಿಂತ ಮೊದಲು ವಿಶ್ರಾಂತಿಗಾಗಿ ಈ ನಿರ್ಧಾರ ಕೈಗೊಂಡಿರುವುದಾಗಿ ತಿಳಿಸಿದ್ದಾರೆ.

20 ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಗೆದ್ದಿರುವ ಫೆಡರರ್ ಶನಿವಾರ ರಾತ್ರಿ ನಡೆದ ಮೂರೂವರೆ ತಾಸುಗಳ ಸುದೀರ್ಘ ಹಣಾಹಣಿಯಲ್ಲಿ ಜರ್ಮನಿಯ ಡೊಮಿನಿಕ್ ಕೋಫರ್ ಎದುರು 7–6, 6–7, 7–6, 7–5ರಲ್ಲಿ ಗೆದ್ದು ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು.

'ಎರಡು ಬಾರಿ ಮೊಣಕಾಲಿನ ಶಸ್ತ್ರಚಿಕಿತ್ಸೆಗೆ ಒಳಗಾಗಿ ಒಂದು ವರ್ಷ ಪುನಶ್ಚೇತನ ಯೋಜನೆಯಲ್ಲಿದ್ದ ಕಾರಣ ದೇಹ ಹೇಳುವಂತೆ ಕೇಳಬೇಕಾದ ಪರಿಸ್ಥಿತಿ ಇದೆ. ಸಮಸ್ಯೆಯಿಂದ ಹೊರಬರಲು ತರಾತುರಿ ಮಾಡಿದರೆ ತೊಂದರೆಗೆ ಸಿಲುಕುವ ಸಾಧ್ಯತೆ ಇದೆ. ಮೂರು ಸುತ್ತುಗಳಲ್ಲಿ ಆಡಲು ಸಾಧ್ಯವಾದದ್ದರಿಂದ ಸಂತಸವಾಗಿದೆ' ಎಂದು ಫೆಡರರ್ ಹೇಳಿದ್ದಾರೆ.

ಡಬ್ಲ್ಯುಟಿಸಿ ಫೈನಲ್: ಮಾಜಿ ಕ್ರಿಕೆಟಿಗ ದಿಲೀಪ್ ವೆಂಗ್‌ಸರ್ಕಾರ್ ಅಭಿಮತ

'ಭಾರತ ತಂಡಕ್ಕೆ ಅಭ್ಯಾಸದ ಕೊರತೆ'



ದಿಲೀಪ್ ವೆಂಗ್‌ಸರ್ಕಾರ್

ಮುಂಬೈ (ಪಿಟಿಐ): ನ್ಯೂಜಿಲೆಂಡ್ ಎದುರಿನ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ಗೆ ಸಜ್ಜಾಗುತ್ತಿರುವ ಭಾರತ ತಂಡಕ್ಕೆ ಅಭ್ಯಾಸದ ಕೊರತೆ ಕಾಡದು ಎಂದು ತಂಡದ ನಾಯಕ ವಿರಾಟ್ ಕೊಹ್ಲಿ ಕೆಲವು ದಿನಗಳ ಹಿಂದೆ ಹೇಳಿದ್ದರು. ಆದರೆ ಸಾಕಷ್ಟು ಅಭ್ಯಾಸ ಮಾಡದೆ ಕಣಕ್ಕೆ ಇಳಿಯುವುದರಿಂದ ಕೆಟ್ಟ ಪರಿಣಾಮ ಉಂಟಾಗಲಿದೆ ಎಂದು ಮಾಜಿ ಕ್ರಿಕೆಟಿಗ ದಿಲೀಪ್ ವೆಂಗ್‌ಸರ್ಕಾರ್ ಅಭಿಪ್ರಾಯಪಟ್ಟಿದ್ದಾರೆ.

ಜೂನ್ 18ರಂದು ಆರಂಭವಾಗಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್‌ನಲ್ಲಿ ಆಡುವ ಭಾರತ ತಂಡ ಗುರುವಾರ ಇಂಗ್ಲೆಂಡ್ ತಲುಪಿದ್ದು ಸೌತಾಂಪ್ಟನ್‌ನಲ್ಲಿ ಮೂರು ದಿನಗಳ ಕಠಿಣ ಕ್ವಾರಂಟೈನ್‌ನಲ್ಲಿದೆ. ಎದುರಾಳಿ ನ್ಯೂಜಿಲೆಂಡ್ ಆತಿಥೇಯ ಇಂಗ್ಲೆಂಡ್ ಎದುರು ಟೆಸ್ಟ್ ಪಂದ್ಯಗಳನ್ನು ಆಡುತ್ತಿದೆ. ಮೊದಲ ಟೆಸ್ಟ್ ಭಾನುವಾರ ಮುಕ್ತಾಯಗೊಂಡಿದೆ.

'ವಿರಾಟ್ ಕೊಹ್ಲಿ ಮತ್ತು ಆರಂಭಿಕ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಆದರೂ ಅಭ್ಯಾಸದ ಕೊರತೆ ಅವರ ಸಾಮರ್ಥ್ಯದ ಮೇಲೆ ಪರಿಣಾಮ ಬೀರಲಿದೆ. ಇಂಗ್ಲೆಂಡ್ ಪ್ರವಾಸದ ಮೊದಲ ಪಂದ್ಯವಾದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಅದು ಸ್ಪಷ್ಟವಾಗಿ ಗೋಚರಿಸಲಿದೆ' ಎಂದು ಭಾರತದ ಪರ 116 ಟೆಸ್ಟ್ ಪಂದ್ಯಗಳನ್ನು ಆಡಿರುವ ವೆಂಗ್‌ಸರ್ಕಾರ್ ಹೇಳಿದರು.

'ವಿರಾಟ್ ಕೊಹ್ಲಿ ಬಹಳ ಕಾಲದಿಂದ ಉತ್ತಮ ಕ್ರಿಕೆಟ್ ಆಡುತ್ತಿದ್ದಾರೆ. ಅವರು ಅತ್ಯದ್ಭುತ ಬ್ಯಾಟ್ಸ್‌ಮನ್ ಎನ್ನುವುದರಲ್ಲಿ ಅನುಮಾನವೇ ಇಲ್ಲ. ವಿರಾಟ್, ರೋಹಿತ್ ಶರ್ಮಾ ಮುಂತಾದವರು ಜಗತ್ತಿನ ಅತಿಶ್ರೇಷ್ಠ ಆಟಗಾರರು. ತಂಡವನ್ನು ಗೆಲ್ಲಿಸುವಲ್ಲಿ ಅವರ ಪಾತ್ರ ಮಹತ್ವದ್ದು. ಆದರೆ ಈಗ ಅಭ್ಯಾಸದ ಕೊರತೆ ಅವರನ್ನು ಕಾಡಬಹುದು' ಎಂದು ಸುದ್ದಿಸಂಸ್ಥೆಯ ಜೊತೆ ಮಾತನಾಡಿದ ವೆಂಗ್‌ಸರ್ಕಾರ್ ನುಡಿದರು.

ಮೂರು ಪಂದ್ಯಗಳ 'ಫೈನಲ್'ನಿಂದ ಅನುಕೂಲ: ಯುವರಾಜ್


ಯುವರಾಜ್ ಸಿಂಗ್

ನವದೆಹಲಿ (ಪಿಟಿಐ): ಸದ್ಯದ ಪರಿಸ್ಥಿತಿಯಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಮೂರು ಪಂದ್ಯಗಳಿಂದ ಕೂಡಿದ್ದರೆ ಅನುಕೂಲ ಆಗುತ್ತಿತ್ತು ಎಂದು ಭಾರತದ ಮಾಜಿ ಆಲ್‌ರೌಂಡರ್ ಯುವರಾಜ್ ಸಿಂಗ್ ಅಭಿಪ್ರಾಯಪಟ್ಟಿದ್ದಾರೆ. ಒಂದೇ ಫೈನಲ್‌ನಿಂದ ಭಾರತಕ್ಕೆ ಹಿನ್ನಡೆಯಾಗುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ.

'ನ್ಯೂಜಿಲೆಂಡ್ ಈಗಾಗಲೇ ಪಂದ್ಯಗಳಲ್ಲಿ ತೊಡಗಿಸಿಕೊಂಡಿದೆ. ಭಾರತಕ್ಕೆ ಫೈನಲ್‌ಗೂ ಮೊದಲು ಅಭ್ಯಾಸಕ್ಕೆ ಹೆಚ್ಚು ಅವಕಾಶವಿಲ್ಲ. ಫೈನಲ್ ಮೂರು ಪಂದ್ಯಗಳಿಂದ ಕೂಡಿದ್ದರೆ ಮೊದಲ ಪಂದ್ಯದಲ್ಲಿ ಸೋತರೂ ಚೇತರಿಸಿಕೊಳ್ಳಲು ಮತ್ತೆ ಎರಡು ಅವಕಾಶಗಳಿರುತ್ತಿತ್ತು' ಎಂದು ಸಂವಾದ ಕಾರ್ಯಕ್ರಮವೊಂದರಲ್ಲಿ ಅವರು ಹೇಳಿದರು.

'ಭಾರತ ಬಲಿಷ್ಠ ತಂಡ. ಈಚೆಗೆ ವಿದೇಶಗಳಲ್ಲಿ ನಡೆದ ಸರಣಿಗಳಲ್ಲಿ ವಿರಾಟ್ ಬಳಗ ಅತ್ಯುತ್ತಮ ಸಾಮರ್ಥ್ಯ ತೋರಿದೆ. ಆದರೆ ಈಗ ಬ್ಯಾಟಿಂಗ್‌ನಷ್ಟು ಬೌಲಿಂಗ್ ಬಲಿಷ್ಠವಾಗಿಲ್ಲ' ಎಂದ ಯುವರಾಜ್ 'ನೆಟ್ಸ್‌ನಲ್ಲಿ ಅಭ್ಯಾಸಕ್ಕೆ ಅವಕಾಶವಿದೆಯಾದರೂ ಅಭ್ಯಾಸ ಪಂದ್ಯಗಳಿಂದ ಆಗುವ ಪರಿಣಾಮವೇ ಬೇರೆ' ಎಂದರು.


'ಇಂಗ್ಲೆಂಡ್‌ನಲ್ಲಿ ಟೆಸ್ಟ್ ಪಂದ್ಯದ ಪ್ರತಿಯೊಂದು ಅವಧಿಯೂ ಭಿನ್ನವಾಗಿರುತ್ತದೆ. ಬೆಳಿಗ್ಗಿನ ಅವಧಿಯಲ್ಲಿ ಚೆಂಡು ಸ್ವಿಂಗ್ ಆಗುತ್ತದೆ. ವೇಗವೂ ಹೆಚ್ಚು ಇರುತ್ತದೆ. ಭೋಜನಾನಂತರದ ಅವಧಿಯಲ್ಲಿ ರನ್‌ಗಳು ಹರಿದುಬರುತ್ತವೆ. ಚಹಾ ವಿರಾಮದ ನಂತರ ಮತ್ತೆ ಚೆಂಡು ಸ್ವಿಂಗ್ ಆಗುತ್ತದೆ. ಈ ಎಲ್ಲ ಸಂದರ್ಭಗಳಿಗೂ ಹೊಂದಿಕೊಳ್ಳಲು ಸಾಧ್ಯವಾದರೆ ಯಶಸ್ಸು ಸಿಗಬಲ್ಲುದು' ಎಂದು ಅವರು ಅಭಿಪ್ರಾಯಪಟ್ಟರು.

ಸುದ್ದಿ 2 ನಿಮಿಷ

'ಕೋವಿಡ್‌ನಿಂದ ಚೇತರಿಸಿಕೊಂಡ ಅಥ್ಲೀಟ್‌ಗಳು ಲಸಿಕೆ ಪಡೆಯಲಿ'

ನವದೆಹಲಿ (ಪಿಟಿಐ): ಕೋವಿಡ್‌ನಿಂದ ಚೇತರಿಸಿಕೊಂಡಿರುವ, ಒಲಿಂಪಿಕ್ ಅರ್ಹತೆ ಪಡೆದಿರುವ ಅಥ್ಲೀಟ್‌ಗಳಿಗೆ ಸಾಧ್ಯವಾದಷ್ಟು ಶೀಘ್ರ ಲಸಿಕೆಯ ಮೊದಲ ಡೋಸ್ ಪಡೆಯುವಂತೆ ಭಾರತ ಒಲಿಂಪಿಕ್ಸ್ ಸಂಸ್ಥೆ (ಐಒಎ) ಸೂಚಿಸಿದೆ.

2018ರ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತೆ ಬಾಕ್ಸರ್ ಸಿಮ್ರನ್‌ಜೀತ್ ಕೌರ್ (60 ಕೆಜಿ ವಿಭಾಗ), ಶೂಟರ್‌ಗಳಾದ ಸೌರಭ್ ಚೌಧರಿ, ರಾಹಿ ಸರ್ನೋಬತ್, ದೀಪಕ್ ಕುಮಾರ್ ಹಾಗೂ ಮೈರಾಜ್ ಅಹಮದ್ ಖಾನ್ ಅವರು ಕೊರೊನಾ ಸೋಂಕಿನಿಂದ ಚೇತರಿಸಿಕೊಂಡಿರುವವರು.



'ಅಥ್ಲೀಟ್‌ಗಳಿಗೆ ಆದಷ್ಟು ತುರ್ತಾಗಿ ಮತ್ತು ಅಗತ್ಯವಾಗಿ ಲಸಿಕೆಯನ್ನು ನೀಡಲು ಬಾಕ್ಸಿಂಗ್ ಮತ್ತು ಶೂಟಿಂಗ್ ಫೆಡರೇಷನ್‌ಗಳಿಗೆ ವಿನಂತಿಸುತ್ತೇನೆ' ಎಂದು ಐಒಎ ಅಧ್ಯಕ್ಷ ನರಿಂದರ್ ಬಾತ್ರಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಇತ್ತೀಚೆಗೆ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಿದ್ದ ಸಿಮ್ರನ್‌ಜೀತ್ ಸೆಮಿಫೈನಲ್‌ನಲ್ಲಿ ಸೋತು ಕಂಚಿನ ಪದಕಕ್ಕೆ ಸಮಾಧಾನಪಟ್ಟುಕೊಂಡಿದ್ದರು.

120 ಅಥ್ಲೀಟ್‌ಗಳು ಹಾಗೂ 27 ಪ್ಯಾರಾ ಅಥ್ಲೀಟ್‌ಗಳು ಇದುವರೆಗೆ ಕೋವಿಡ್ ಲಸಿಕೆಯ ಕನಿಷ್ಠ ಮೊದಲ ಡೋಸ್ ತೆಗದುಕೊಂಡಿದ್ದಾರೆ. ನಾಲ್ವರು ಪ್ಯಾರಾ ಅಥ್ಲೀಟ್‌ಗಳು ಸೇರಿದಂತೆ 62 ಮಂದಿ ಸಂಪೂರ್ಣ ಲಸಿಕೆ ಪಡೆದಿದ್ದಾರೆ ಎಂದು ಐಒಎ ತಿಳಿಸಿದೆ. ಕೋಚ್ ಮತ್ತು ನೆರವು ಸಿಬ್ಬಂದಿಯ ಪೈಕಿ 114 ಮಂದಿ ಮೊದಲ ಡೋಸ್ ಹಾಗೂ 37 ಮಂದಿ ಎರಡೂ ಡೋಸ್ ಲಸಿಕೆ ತೆಗೆದುಕೊಂಡಿದ್ದಾರೆ.

ಇಂಗ್ಲೆಂಡ್–ನ್ಯೂಜಿಲೆಂಡ್ ಟೆಸ್ಟ್ ಡ್ರಾ

ಲಂಡನ್ (ರಾಯಿಟರ್ಸ್): ನ್ಯೂಜಿಲೆಂಡ್ ಮತ್ತು ಆತಿಥೇಯ ಇಂಗ್ಲೆಂಡ್ ನಡುವಿನ ಮೊದಲ ಟೆಸ್ಟ್ ಪಂದ್ಯ ಡ್ರಾದಲ್ಲಿ ಮುಕ್ತಾಯಗೊಂಡಿತು. ಕೊನೆಯ ದಿನವಾದ ಭಾನುವಾರ 273 ರನ್‌ಗಳ ಜಯದ ಗುರಿ ಬೆನ್ನತ್ತಿದ ಇಂಗ್ಲೆಂಡ್ ಮೂರು ವಿಕೆಟ್‌ಗಳಿಗೆ 170 ರನ್ ಗಳಿಸಿತು.

ನಾಲ್ಕನೇ ದಿನದಾಟದ ಮುಕ್ತಾಯಕ್ಕೆ ಎರಡನೇ ಇನಿಂಗ್ಸ್‌ನಲ್ಲಿ ಎರಡು ವಿಕೆಟ್ ಕಳೆದುಕೊಂಡು 62 ರನ್ ಗಳಿಸಿದ್ದ ನ್ಯೂಜಿಲೆಂಡ್ ಭಾನುವಾರ ವೇಗವಾಗಿ ರನ್ ಕಲೆ ಹಾಕಲು ಮುಂದಾಯಿತು. ಭೋಜನ ವಿರಾಮದ ವೇಳೆ ಆರು ವಿಕೆಟ್‌ಗಳಿಗೆ 169 ರನ್ ಗಳಿಸಿ ಡಿಕ್ಲೇರ್ ಮಾಡಿ ಇಂಗ್ಲೆಂಡ್‌ಗೆ ಸವಾಲಿನ ಗುರಿ ನೀಡಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 378; ಇಂಗ್ಲೆಂಡ್: 275; ಎರಡನೇ ಇನಿಂಗ್ಸ್: ನ್ಯೂಜಿಲೆಂಡ್ (ಶನಿವಾರ 30 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 62): 52.3 ಓವರ್‌ಗಳಲ್ಲಿ 6ಕ್ಕೆ 169 ಡಿಕ್ಲೇರ್ (ಟಾಮ್ ಲಥಾಮ್ 36, ಡೆವೋನ್ ಕಾನ್ವೆ 23, ರಾಸ್ ಟೇಲರ್ 33, ಹೆನ್ರಿ ನಿಕೋಲ್ಸ್ 23; ಸ್ಟುವರ್ಟ್ ಬ್ರಾಡ್ 34ಕ್ಕೆ1, ಒಲಿ ರಾಬಿನ್ಸನ್ 26ಕ್ಕೆ3, ಮಾರ್ಕ್ ವುಡ್ 31ಕ್ಕೆ1, ಜೋ ರೂಟ್ 16ಕ್ಕೆ1); ಇಂಗ್ಲೆಂಡ್: 70 ಓವರ್‌ಗಳಲ್ಲಿ 3ಕ್ಕೆ 170 (ರೋರಿ ಬರ್ನ್ಸ್ 25, ಡಾಮ್ ಸಿಬ್ಲಿ ಔಟಾಗದೆ 60, ಜೋ ರೂಟ್ 40, ಒಲಿ ಪಾಪ್ ಔಟಾಗದೆ 20; ಟಿಮ್ ಸೌಥಿ 37ಕ್ಕೆ1, ನೀಲ್ ವ್ಯಾಗ್ನರ್ 27ಕ್ಕೆ2).

ಫಲಿತಾಂಶ: ಪಂದ್ಯ ಡ್ರಾ.

ಫ್ರೆಂಚ್ ಓಪನ್ ಟೆನಿಸ್: ಕ್ವಾರ್ಟರ್‌ಫೈನಲ್‌ಗೆ ಮೆಡ್ವೆಡೆವ್, ಬೋಪಣ್ಣ ಜೋಡಿ

ಅಜರೆಂಕಾಗೆ ಆಘಾತ ನೀಡಿದ ಪಾವ್ಲಿಚೆಂಕೊವಾ

ಪ್ಯಾರಿಸ್ (ಎಎಫ್‌ಪಿ): ಈ ಹಿಂದೆ ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿದ್ದ ವಿಕ್ಟೋರಿಯಾ ಅಜರೆಂಕಾ ಅವರಿಗೆ ಆಘಾತ ನೀಡಿದ ಅನಸ್ತೇಸಿಯಾ ಪಾವ್ಲಿಚೆಂಕೊವಾ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ. ಭಾನುವಾರ ನಡೆದ ಮಹಿಳಾ ಸಿಂಗಲ್ಸ್ ವಿಭಾಗದ ಪ್ರೀಕ್ವಾರ್ಟರ್ ಹಣಾಹಣಿಯಲ್ಲಿ 5–7, 6–3, 6–2ರಿಂದ ಗೆದ್ದ ಅನಸ್ತೇಸಿಯಾ ದಶಕದ ಬಳಿಕ ಟೂರ್ನಿಯಲ್ಲಿ ಎಂಟರ ಘಟ್ಟ ಪ್ರವೇಶಿಸಿದ ಶ್ರೇಯ ಗಳಿಸಿದರು.

2011ರಲ್ಲಿ ಟೂರ್ನಿಯ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿದ್ದ ರಷ್ಯಾದ ಅನಸ್ತೇಸಿಯಾ, ಆಗ ಫ್ರಾನ್ಸೆಸ್ಕಾ ಶಿಯಾವೊನ್ ಎದುರು ಸೋಲನುಭವಿಸಿದ್ದರು. 31ನೇ ಶ್ರೇಯಾಂಕದ ಅನಸ್ತೇಸಿಯಾ ಈ ಪಂದ್ಯದಲ್ಲಿ ಎಂಟು ಬಾರಿ ಬೆಲಾರಸ್ ಆಟಗಾರ್ತಿ ಅಜರೆಂಕಾ ಅವರ ಸರ್ವ್ ಮುರಿದರು. ಮೊದಲ ಸೆಟ್ ಹಿನ್ನಡೆಯಿಂದ ಪುಟಿದೆದ್ದು ಗೆಲುವಿನ ನಗೆ ಬೀರಿದರು.

ಮುಂದಿನ ಪಂದ್ಯದಲ್ಲಿ ಅವರು ಎಲೆನಾ ರಿಬಾಕಿನಾ ಎದುರು ಆಡಲಿದ್ದಾರೆ.


ಅನಸ್ತೇಸಿಯಾ ಪಾವ್ಲಿಚೆಂಕೊವಾ ಚೆಂಡು ಹಿಂದಿರುಗಿಸಿದ ಪರಿ– ಎಎಫ್‌ಪಿ ಚಿತ್ರ

ಪೌಲಾ ಜಯಭೇರಿ: ಸ್ಪೇನ್‌ನ ಪೌಲಾ ಬಡೋಸಾ ಮೊದಲ ಬಾರಿ ಗ್ರ್ಯಾನ್ ಸ್ಲಾಮ್ ಟೂರ್ನಿಯ ಎಂಟರಘಟ್ಟ ತಲುಪಿದ ಸಂತಸ ಅನುಭವಿಸಿದರು. 16ರ ಘಟ್ಟದ ಹಣಾಹಣಿಯಲ್ಲಿ ಅವರು 6-4, 3-6, 6-2ರಿಂದ ಜೆಕ್ ಗಣರಾಜ್ಯದ ಮರ್ಕೆಟಾ ವೊಂಡ್ರೊಸೊವಾ ಅವರನ್ನು ಮಣಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ 6–2, 6–1, 7–5ರಿಂದ ಚಿಲಿಯ ಕ್ರಿಸ್ಟಿಯನ್ ಗರಿನ್ ಎದುರು ಜಯಿಸಿ ಎಂಟರಘಟ್ಟ ತಲುಪಿದರು. ಮುಂದಿನ ಪಂದ್ಯದಲ್ಲಿ ಅವರು ಗ್ರೀಸ್ ಆಟಗಾರ ಸ್ಟೆಫನೋಸ್ ಸಿಟ್ಸಿಪಾಸ್ ಅವರನ್ನು ಎದುರಿಸುವರು. ಮತ್ತೊಂದು ಹಣಾಹಣಿಯಲ್ಲಿ ಸಿಟ್ಸಿಪಾಸ್ 6-3, 6-2, 7-5ರಿಂದ ಸ್ಪೇನ್‌ನ ಪ್ಯಾಬ್ಲೊ ಕರೆನೊ ಬುಸ್ಟಾ ಅವರಿಗೆ ಸೋಲುಣಿಸಿದರು.

ಸೆರೆನಾ ಕನಸು ಭಗ್ನ

24ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದು ಮಾರ್ಗರೇಟ್ ಕೋರ್ಟ್ ಅವರ ದಾಖಲೆ ಸರಿಗಟ್ಟಬೇಕೆಂಬ ಸೆರೆನಾ ವಿಲಿಯಮ್ಸ್ ಅವರ ಕನಸು ಇಲ್ಲಿಯೂ ನನಸಾಗಲಿಲ್ಲ.

ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅಮೆರಿಕದ ಆಟಗಾರ್ತಿ 3–6, 5–7ರಿಂದ ಕಜಕಸ್ತಾನದ ಎಲೆನಾ ರಿಬಾಕಿನಾ ಎದುರು ಮಣಿದರು.

ಎಂಟರಘಟ್ಟಕ್ಕೆ ಬೋಪಣ್ಣ ಜೋಡಿ: ಭಾರತದ ರೋಹನ್ ಬೋಪಣ್ಣ ಮತ್ತು ಕ್ರೊವೇಷಿಯಾದ ಫ್ರಾಂಕೊ ಸುಗೊರ್, ಪುರುಷರ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಈ ಜೋಡಿಗೆ ವಾಕ್ ಓವರ್ ಲಭಿಸಿತು. ನೆದರ್ಲೆಂಡ್ಸ್‌ನ ಮಾಟ್ವೆ ಮಿಡಲ್‌ಕೂಪ್ ಮತ್ತು ಮಾರ್ಸೆಲೊ ಅರೆವಾಲೊ ಎದುರು ಬೋಪಣ್ಣ ಮತ್ತು ಸುಗೊರ್ 16ರ ಘಟ್ಟದ ಪಂದ್ಯದಲ್ಲಿ ಸೆಣಸಬೇಕಾಗಿತ್ತು.

ಫಾರ್ಮುಲಾ 2: ಜೆಹಾನ್ 7ನೇ ಸ್ಥಾನ

ಬಾಕು (ಪಿಟಿಐ): ಭಾರತದ ಜೆಹಾನ್ ದಾರುವಾಲಾ ಅವರು ಅಜರ್‌ಬೈಜಾನ್‌ನಲ್ಲಿ ನಡೆಯುತ್ತಿರುವ ಎಫ್‌ಐಎ ಫಾರ್ಮುಲಾ 2 ಚಾಂಪಿಯನ್‌ಷಿಪ್‌ನ ಫೀಚರ್ ರೇಸ್‌ನಲ್ಲಿ ಏಳನೇ ಸ್ಥಾನ ಗಳಿಸಿದರು.

ಇದಕ್ಕೂ ಮೊದಲು ನಡೆದ ಸ್ಪ್ರಿಂಟ್ ರೇಸ್‌ನಲ್ಲೂ ರೆಡ್‌ಬುಲ್ ಮೋಟರ್‌ಸ್ಪೋರ್ಟ್ಸ್ ತಂಡದ ಜೆಹಾನ್ 'ಪೋಡಿಯಂ ಫಿನಿಶ್' ಮಾಡಿದ್ದರು.

ಕೋವಿಡ್ ಸಂಕಷ್ಟಕ್ಕೆ ಇಪಿಎಫ್ ಹಣ ಪಡೆಯಬೇಕೇ?


ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಕೋವಿಡ್ ಮೊದಲನೆಯ ಅಲೆಯಿಂದಾಗಿ ಉಂಟಾದ ಆರ್ಥಿಕ ಸಂಕಷ್ಟದಿಂದ ಚೇತರಿಸಿಕೊಳ್ಳಲು ಸಹಾಯ ಆಗಲಿ ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರವು ಕಾರ್ಮಿಕರ ಭವಿಷ್ಯ ನಿಧಿಯಿಂದ (ಇಪಿಎಫ್) ಹಣ ಹಿಂದಕ್ಕೆ ಪಡೆಯಲು ಅವಕಾಶ ಕಲ್ಪಿಸಿಕೊಟ್ಟಿತ್ತು. ಈ ವರ್ಷದ ಮೇ 31ರವರೆಗೆ ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಸುಮಾರು 76.31 ಲಕ್ಷ ಕೋವಿಡ್ ಸಂಬಂಧಿತ ಮುಂಗಡ ಕ್ಲೇಮ್‌ಗಳನ್ನು ಇತ್ಯರ್ಥಪಡಿಸಿದೆ.

ಈವರೆಗೆ ಸುಮಾರು ₹ 18,698.15 ಕೋಟಿ ಮೊತ್ತವನ್ನು ಇಪಿಎಫ್ ಖಾತೆದಾರರಿಗೆ ನೀಡಲಾಗಿದೆ. ಎರಡನೆಯ ಅಲೆಯ ವೇಳೆ ಕೂಡ ಜನ ಹಣಕಾಸಿನ ತೊಡಕು ಎದುರಿಸುತ್ತಿರುವ ಕಾರಣ ಇಪಿಎಫ್ ಖಾತೆಯಿಂದ ಮುಂಗಡ ಹಣ ಪಡೆದುಕೊಳ್ಳುವ ಅವಕಾಶ ನೀಡಲಾಗಿದೆ. ಆದರೆ ಸಣ್ಣಪುಟ್ಟ ಕಾರಣಗಳನ್ನು ನೀಡಿ ಇಪಿಎಫ್ ಹಣ ಹಿಂಪಡೆದುಕೊಂಡರೆ ದೀರ್ಘಾವಧಿ ಲಾಭಗಳಿಂದ ನೀವು ವಂಚಿತರಾಗುತ್ತೀರಿ ಎಂಬುದು ಗಮನದಲ್ಲಿ ಇರಬೇಕು.

ಸಾಧ್ಯತೆ ಅರಿತು ಮುನ್ನಡೆಯಿರಿ: ತುರ್ತು ಅಗತ್ಯಗಳಿಗಾಗಿ ಇಪಿಎಫ್ ಹಣ ಪಡೆದುಕೊಂಡರೆ ತೆರಿಗೆಯ ಭಾರ ಇಲ್ಲ ಎನ್ನುವುದು ಸರಿ. ಆದರೆ ಈ ಹಣ ತೆಗೆದುಕೊಳ್ಳುವ ಮುನ್ನ ಅಳೆದು–ತೂಗಿ ನಿರ್ಧಾರಕ್ಕೆ ಬನ್ನಿ. ಇಪಿಎಫ್ ಖಾತೆಯಿಂದ ಹಣ ತೆಗೆದರೆ ದೀರ್ಘಾವಧಿಯಲ್ಲಿ ಚಕ್ರಬಡ್ಡಿಯ (Compounding Interest) ಲಾಭ ಕಳೆದುಕೊಳ್ಳಬೇಕಾಗುತ್ತದೆ. ಹಾಗಾಗಿ ತಾತ್ಕಾಲಿಕ ಹಣಕಾಸಿನ ಅಗತ್ಯಗಳನ್ನು ಸಾಧ್ಯವಾದಷ್ಟೂ ಬೇರೆ ಮೂಲಗಳಿಂದ ಸರಿದೂಗಿಸಬಹುದೇ ಎಂಬುದನ್ನು ಪರಿಶೀಲಿಸಿ. ವಿಮೆ ಬಾಂಡ್, ಎಫ್‌.ಡಿ. ಅಥವಾ ಮನೆಯಲ್ಲಿಟ್ಟಿರುವ ಚಿನ್ನದ ಮೇಲೆ ಸಾಲ ಪಡೆಯಲು ಸಾಧ್ಯವಿದೆಯೇ ಎಂಬುದನ್ನು ಪರಿಗಣಿಸಿ.

ಹೀಗೆ ಮಾಡಿದಾಗ, ನಿವೃತ್ತಿ ಜೀವನಕ್ಕೆ ಅವಶ್ಯವಿರುವ ಇಪಿಎಫ್ ಹಣ ಉಳಿಸಿಕೊಳ್ಳುವುದರ ಜತೆಗೆ ದೀರ್ಘಾವಧಿಯ ಗಳಿಕೆ ಲಾಭವೂ ಸಿಗುತ್ತದೆ. ಒಂದೊಮ್ಮೆ ಬೇರೆ ಆಯ್ಕೆ ಇಲ್ಲ ಎಂದಾಗ ಮಾತ್ರ ಇಪಿಎಫ್ ಖಾತೆಯಿಂದ ಹಣ ಪಡೆಯಿರಿ.

ಯಾರೆಲ್ಲಾ ಇಪಿಎಫ್ ಹಣ ಪಡೆಯಬಹುದು?: ಇಪಿಎಫ್ ಖಾತೆ ಹೊಂದಿದ್ದು ಪ್ರತಿ ತಿಂಗಳು ಅದಕ್ಕೆ ಕೊಡುಗೆ ನೀಡುವ ಉದ್ಯೋಗಿಗಳು ಕೋವಿಡ್ ಕಾರಣ ನೀಡಿ ಹಣ ಪಡೆಯಬಹುದು. ಇಪಿಎಫ್‌ನಲ್ಲಿ ನೋಂದಾಯಿಸಿಕೊಂಡಿರುವ ಸುಮಾರು 4.8 ಕೋಟಿ ಮಂದಿಗೆ ಇದರ ಅನುಕೂಲ ಸಿಗಲಿದೆ. ಇಪಿಎಫ್ ವೆಬ್‌ಸೈಟ್ ಮೂಲಕ ಉದ್ಯೋಗಿಗಳು ನೇರವಾಗಿ ಅರ್ಜಿ ಸಲ್ಲಿಸಬಹುದು.

ಎಷ್ಟು ಹಣ ಹಿಂಪಡೆದುಕೊಳ್ಳಬಹುದು?: ನಿಮ್ಮ ಇಪಿಎಫ್ ಖಾತೆಯಲ್ಲಿರುವ ಶೇಕಡ 75 ರಷ್ಟು ಹಣ ಅಥವಾ 3 ತಿಂಗಳ ಮೂಲ ವೇತನ ಮತ್ತು ತುಟ್ಟಿ ಭತ್ಯೆಯ ಮೊತ್ತ ಅಥವಾ ನಿಮಗೆ ಅಗತ್ಯವಿರುವಷ್ಟು ಹಣ, ಈ ಮೂರರಲ್ಲಿ ಯಾವುದು ಕಡಿಮೆ ಇದೆಯೋ ಅಷ್ಟನ್ನು ಹಿಂದಕ್ಕೆ ಪಡೆಯಬಹುದು. ಉದಾಹರಣೆಗೆ ಈ ವರ್ಷದ ಮಾರ್ಚ್ 31ಕ್ಕೆ ನಿಮ್ಮ ಇಪಿಎಫ್ ಖಾತೆಯಲ್ಲಿ ₹ 10 ಲಕ್ಷ ಇದ್ದು, ನಿಮ್ಮ ಮೂಲ ವೇತನ ₹ 50,000 ಎಂದುಕೊಳ್ಳೋಣ. ಈ ಸಂದರ್ಭದಲ್ಲಿ ನೀವು ₹ 1.5 ಲಕ್ಷ ಮಾತ್ರ ಹಿಂದಕ್ಕೆ ಪಡೆದುಕೊಳ್ಳಲು ಸಾಧ್ಯ. ಒಂದೊಮ್ಮೆ ನಿಮ್ಮ ಇಪಿಎಫ್ ಬಾಕಿ ₹ 2 ಲಕ್ಷ ಇದ್ದು ಮಾಸಿಕ ಮೂಲ ವೇತನ ₹ 51 ಸಾವಿರ ಇದ್ದರೆ ಈ ಸಂದರ್ಭದಲ್ಲೂ ನೀವು ರೂ. 1.5 ಲಕ್ಷ ಮಾತ್ರ ಪಡೆದುಕೊಳ್ಳಬಹುದು. (ಗಮನಿಸಿ: ಇಪಿಎಫ್ ಖಾತೆಯಲ್ಲಿರುವ ಒಟ್ಟು ಮೊತ್ತದಲ್ಲಿ ಶೇ 75ರಷ್ಟು ಎಂದರೆ ₹ 1.5 ಲಕ್ಷ. ನಿಮ್ಮ ಮೂರು ತಿಂಗಳ ಮೂಲ ವೇತನಕ್ಕಿಂತ ಇದು ಕಡಿಮೆ ಇರುವ ಕಾರಣ ಇಷ್ಟು ಮೊತ್ತವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.)

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

3ನೇ ವಾರ ಜಿಗಿತ: ದಾಖಲೆ ಬರೆದ ಷೇರುಪೇಟೆ



ಭಾರತೀಯ ಷೇರುಪೇಟೆ ಸೂಚ್ಯಂಕಗಳು ಇತಿಹಾಸ ಸೃಷ್ಟಿಸಿವೆ. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ಇ ದೇ ಮೊದಲ ಬಾರಿಗೆ 52,516 ಅಂಶಗಳಿಗೆ ತಲುಪಿದೆ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 15,733 ಅಂಶ ತಲುಪಿದೆ. ಇದರಿಂದಾಗಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸತತ ಮೂರನೇ ವಾರ ಜಿಗಿತ ದಾಖಲಿಸಿದಂತಾಗಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕ ವಹಿವಾಟು, ಆರ್‌ಬಿಐ ಹಣಕಾಸು ನೀತಿಯಲ್ಲಿ ಯಥಾಸ್ಥಿತಿ, ವಾಹನ ಮಾರಾಟ ಅಂಕಿ-ಅಂಶದಲ್ಲಿ ಸುಧಾರಣೆ, ಕೋವಿಡ್ ಪ್ರಕರಣಗಳಲ್ಲಿ ಇಳಿಕೆ, ಹಲವು ರಾಜ್ಯಗಳಲ್ಲಿ ಲಾಕ್‌ಡೌನ್ ತೆರವುಗೊಳಿಸಲು ತಯಾರಿ ಸೇರಿ ಹಲವು ಅಂಶಗಳು ಮಾರುಕಟ್ಟೆಯ ಜಿಗಿತಕ್ಕೆ ಕಾರಣವಾಗಿವೆ.

ಜೂನ್ 4ಕ್ಕೆ ಕೊನೆಗೊಂಡ ವಾರದ ಅವಧಿಯಲ್ಲಿ ಸೆನ್ಸೆಕ್ಸ್ ಶೇ 1.31ರಷ್ಟು ಹೆಚ್ಚಳ ಕಂಡಿದೆ. 15,670 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ಶೇ 1.52ರಷ್ಟು ಏರಿಕೆಯಾಗಿದೆ. ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 12ರಷ್ಟು, ಮಿಡ್ ಕ್ಯಾಪ್ ಶೇ 10ರಷ್ಟು ಮತ್ತು ಲಾರ್ಜ್ ಕ್ಯಾಪ್ ಶೇ 6ರಷ್ಟು ಜಿಗಿತ ಕಂಡಿವೆ.

ವಲಯವಾರು ಪ್ರಗತಿಯಲ್ಲಿ, ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 18ರಷ್ಟು, ನಿಫ್ಟಿ ಮಾಧ್ಯಮ ವಲಯ ಶೇ 16.7ರಷ್ಟು, ನಿಫ್ಟಿ ಲೋಹ ಶೇ 15ರಷ್ಟು ಹೆಚ್ಚಳವಾಗಿದೆ. ನಿಫ್ಟಿ ಐ.ಟಿ. ವಲಯ ಶೇ 0.6ರಷ್ಟು ಇಳಿಕೆಯಾಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 5,462.20 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 801.95 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಒಎನ್‌ಜಿಸಿ ಶೇ 2.41ರಷ್ಟು, ಅದಾನಿ ಪೋರ್ಟ್ಸ್ ಶೇ 7.43ರಷ್ಟು, ಬಜಾಜ್ ಫೈನಾನ್ಸ್ ಶೇ 6.82ರಷ್ಟು, ಟೈಟಾನ್ ಶೇ 6.50ರಷ್ಟು ಮತ್ತು ಟಾಟಾ ಮೋಟರ್ಸ್ ಶೇ 5.08ರಷ್ಟು ಹೆಚ್ಚಳ ದಾಖಲಿಸಿವೆ. ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 4.88ರಷ್ಟು, ಐಟಿಸಿ ಶೇ 1.95ರಷ್ಟು, ಇನ್ಫೊಸಿಸ್ ಶೇ 1.38ರಷ್ಟು, ಇಂಡಸ್ ಇಂಡ್ ಬ್ಯಾಂಕ್ ಶೇ 0.99ರಷ್ಟು ಮತ್ತು ಟೆಕ್ ಮಹೀಂದ್ರ ಶೇ 0.69ರಷ್ಟು ಕುಸಿತ ಕಂಡಿವೆ.

ಮುನ್ನೋಟ: ಈ ವಾರ ಎಂಆರ್‌ಎಫ್, ಸೆಂಟ್ರಲ್ ಬ್ಯಾಂಕ್, ಯೂನಿಯನ್ ಬ್ಯಾಂಕ್, ಪ್ರೆಸ್ಟೀಜ್, ಗೇಲ್, ಬಿಇಎಂಎಲ್, ಡಿಎಲ್‌ಎಫ್, ಸೆರಾ, ಸೆಂಚುರಿ ಪ್ಲೈ, ಎಸ್‌ಎಐಎಲ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಅಮೆರಿಕದ ಉದ್ಯೋಗದ ಸ್ಥಿತಿಗತಿ ಕುರಿತ ದತ್ತಾಂಶ ಬಿಡುಗಡೆಯಾಗಲಿದೆ. ಲೋಹ ಮತ್ತು ರಿಯಲ್ ಎಸ್ಟೇಟ್ ವಲಯದ ಷೇರುಗಳಲ್ಲಿ ಮತ್ತೆ ಏರಿಕೆ ಕಂಡುಬರುತ್ತಿದೆ.

ಒಂದೆರಡು ವಾರಗಳಲ್ಲಿ ಲೌಕ್‌ಡೌನ್ ಕೊನೆಗೊಳ್ಳಬಹುದು, ವಹಿವಾಟು ಮತ್ತೆ ಪುಟಿದೇಳಬಹುದು ಎಂಬ ವಿಶ್ವಾಸ ಕಂಪನಿಗಳಲ್ಲಿ ಇದೆ. ಮುಂದಿನ ವರ್ಷ ಪ್ರಮುಖ ರಾಜ್ಯಗಳಲ್ಲಿ ಚುನಾವಣೆ ಎದುರಾಗುವುದರಿಂದ ಈ ವರ್ಷದ ದ್ವಿತೀಯ ಭಾಗದಲ್ಲಿ ಹೆಚ್ಚು ಖರ್ಚು ಮಾಡುವ ನಿರೀಕ್ಷೆಯಲ್ಲಿ ಮಾರುಕಟ್ಟೆ ಇದೆ. ಸದ್ಯ ಮಾರುಕಟ್ಟೆ ಏರುಗತಿಯಲ್ಲಿದ್ದರೂ ಉತ್ತಮ ಕಂಪನಿಗಳ ಷೇರುಗಳು ಮಾತ್ರ ಒಳ್ಳೆಯ ಬೆಳವಣಿಗೆ ಸಾಧಿಸುತ್ತಿರುವುದನ್ನು ಹೂಡಿಕೆದಾರರು ಗಮನಿಸಬೇಕಿದೆ.

10,000 ಮೀಟರ್ಸ್ ಓಟ: ಸಿಫಾನ್ ವಿಶ್ವ ದಾಖಲೆ

ಹೆಂಗೆಲೊ, ನೆದರ್ಲೆಂಡ್ಸ್ (ಎಎಫ್‌ಪಿ): ಟ್ರ್ಯಾಕ್‌ನಲ್ಲಿ ಮಿಂಚು ಹರಿಸಿದ ನೆದರ್ಲೆಂಡ್ಸ್‌ನ ಸಿಫಾನ್ ಹಸನ್ ಮಹಿಳೆಯರ 10 ಸಾವಿರ ಮೀಟರ್ಸ್ ಓಟದಲ್ಲಿ ವಿಶ್ವದಾಖಲೆ ಬರೆದರು. 28 ವರ್ಷದ ಸಿಫಾನ್ ಭಾನುವಾರ ನಡೆದ ಹೆಂಗೆಲೊ ಕ್ರೀಡಾಕೂಟದಲ್ಲಿ 29 ನಿಮಿಷ, 6.82 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಇಥಿಯೋಪಿಯಾದ ಅಲ್ಮಾಜ್ ಅಯಾನ 2016ರ ರಿಯೊ ಒಲಿಂಪಿಕ್ಸ್‌ನಲ್ಲಿ 29 ನಿಮಿಷ 17.45 ಸೆಕೆಂಡುಗಳಲ್ಲಿ ಗುರಿಮುಟ್ಟಿ ದಾಖಲೆ ಬರೆದಿದ್ದರು. ಅದನ್ನು ಸಿಫಾನ್ ಹಿಂದಿಕ್ಕಿದ್ದಾರೆ. ಟೋಕಿಯೊ ಒಲಿಂಪಿಕ್ಸ್‌ಗೆ ಕೆಲವೇ ವಾರಗಳು ಉಳಿದಿರುವಾಗ ಈ ದಾಖಲೆ ಮೂಡಿಬಂದಿದೆ.

'ಅಬ್ಬ...ಇದು ಕನಸೋ ನನಸೋ ಎಂದು ಗೊತ್ತಾಗುತ್ತಿಲ್ಲ. ಇಲ್ಲಿ ದಾಖಲೆಯ ಓಟ ಓಡಲು ಸಾಧ್ಯವಾದದ್ದು ಖುಷಿ ತಂದಿದೆ' ಎಂದು ಅವರು ಹೇಳಿದರು.


ಸಿಫಾನ್ ಹಸನ್ –ಎಎಫ್‌ಪಿ ಚಿತ್ರ

ಇಥಿಯೋಪಿಯಾದಲ್ಲಿ ಜನಿಸಿದ ಸಿಫಾನ್ 2008ರಲ್ಲಿ 15ನೇ ವಯಸ್ಸಿನಲ್ಲಿ ಇಲ್ಲಿಗೆ ಬಂದಿದ್ದರು. 2013ರಲ್ಲಿ ಅವರಿಗೆ ಇಲ್ಲಿನ ನಾಗರಿಕತ್ವ ನೀಡಲಾಗಿತ್ತು. ಈಗ ನಿಷೇಧಕ್ಕೊಳಗಾಗಿರುವ ಆಲ್ಬರ್ಟೊ ಸಲಾಜರ್ ಬಳಿ ತರಬೇತಿ ಪಡೆದಿದ್ದರು.

ಮಿಲ್ಖಾ ಸಿಂಗ್ ಆರೋಗ್ಯದಲ್ಲಿ ಮತ್ತಷ್ಟು ಚೇತರಿಕೆ

ಚಂಡೀಗಡ (ಪಿಟಿಐ): ಭಾರತದ ದಿಗ್ಗಜ ಅಥ್ಲೀಟ್ ಮಿಲ್ಖಾ ಸಿಂಗ್ ಅವರ ಆರೋಗ್ಯದಲ್ಲಿ ಹಂತಹಂತವಾಗಿ ಸುಧಾರಣೆ ಕಂಡುಬರುತ್ತಿದೆ ಎಂದು ಆಸ್ಪತ್ರೆಯ ವಕ್ತಾರರು ಭಾನುವಾರ ತಿಳಿಸಿದ್ದಾರೆ.

ಕೊರೊನಾ ಸೋಂಕಿತರಾಗಿರುವ 91 ವರ್ಷದ ಮಿಲ್ಖಾ ಸಿಂಗ್ ಇಲ್ಲಿಯ ಪಿಜಿಐಎಂಇಆರ್‌ಯಲ್ಲಿ (ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆ, ಸ್ನಾತಕೋತ್ತರ ಸಂಸ್ಥೆ) ಚಿಕಿತ್ಸೆ ಪಡೆಯುತ್ತಿದ್ದಾರೆ. ವೈದ್ಯರ ತಂಡವು ಅವರ ಆರೋಗ್ಯದ ಮೇಲೆ ನಿಗಾ ಇರಿಸಿದೆ.ಜೂ

'ಜೂನ್ 3ರಂದು ದಾಖಲಾಗಿರುವ ಮಿಲ್ಖಾಸಿಂಗ್ ಅವರ ಆರೋಗ್ಯದಲ್ಲಿ ನಿರಂತರವಾಗಿ ಚೇತರಿಕೆ ಕಂಡುಬರುತ್ತಿದೆ' ಎಂದು ಆಸ್ಪತ್ರೆಯ ವಕ್ತಾರ ಅಶೋಕ ಕುಮಾರ್ ಅವರು ಹೇಳಿದ್ದಾರೆ.

ಆರ್‌ಬಿಐನ ಎಂಪಿಸಿ ಸಭೆಯಲ್ಲಿ ಅಭಿಪ್ರಾಯ

ಹಣದುಬ್ಬರ ನಿಯಂತ್ರಣ: ಆಗಬೇಕು ತೈಲ ಬೆಲೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೈಲ ದರವು ದಿನೇ ದಿನೇ ಹೆಚ್ಚಾಗುತ್ತಿರುವುದರಿಂದ ದೇಶದಲ್ಲಿ ಹಣದುಬ್ಬರ ಮತ್ತಷ್ಟು ಹೆಚ್ಚಬಹುದು ಎಂಬ ಆತಂಕವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ಈಚಿನ ದಿನಗಳಲ್ಲಿ ವ್ಯಕ್ತಪಡಿಸಿದೆ. ಜೂನ್ ಮೊದಲ ವಾರದಲ್ಲಿ ನಡೆದ ಎಂಪಿಸಿ ಸಭೆಯಲ್ಲಿ ಕೂಡ ತೈಲ ಬೆಲೆ ಏರಿಕೆಗೆ ಸಂಬಂಧಿಸಿದಂತೆ ಕಳವಳ ವ್ಯಕ್ತವಾಗಿದೆ.

'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಳ ಆಗುತ್ತಿರುವುದು, ಸಾಗಣೆ ವೆಚ್ಚವು ಜಾಸ್ತಿ ಆಗುವುದು ದೇಶದಲ್ಲಿ ಮುಂದೆ ಹಣದುಬ್ಬರ ಹೆಚ್ಚಾಗುವ ಅಪಾಯ ಸೃಷ್ಟಿಸಿವೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಪೆಟ್ರೋಲ್, ಡೀಸೆಲ್ ಮೇಲೆ ವಿಧಿಸುತ್ತಿರುವ ಎಕ್ಸೈಸ್ ಸುಂಕ, ಸೆಸ್ ಮತ್ತು ತೆರಿಗೆಗಳನ್ನು ಪರಸ್ಪರ ಸಹಕಾರದಿಂದ ಹೊಂದಾಣಿಕೆ ಮಾಡಿ, ತೈಲ ಬೆಲೆ ಏರಿಕೆಯಿಂದ ವಸ್ತುಗಳ ಬೆಲೆ ಏರಿಕೆ ಉಂಟಾಗುವುದನ್ನು ನಿಯಂತ್ರಿಸಬೇಕು' ಎಂದು ಎಂಪಿಸಿಯ ನಿರ್ಣಯದಲ್ಲಿ ಹೇಳಲಾಗಿದೆ.

ಕೇಂದ್ರ ಸರ್ಕಾರವು ಹಣದುಬ್ಬರವನ್ನು ಶೇಕಡ 4ರ ಮಟ್ಟದಲ್ಲಿ (ಇದರಲ್ಲಿ ಶೇ 2ರಷ್ಟು ಹೆಚ್ಚು ಅಥವಾ ಶೇ 2ರಷ್ಟು ಕಡಿಮೆ ಆಗಬಹುದು) ಇರಿಸುವ ಗುರಿಯನ್ನು ಆರ್‌ಬಿಐಗೆ ನಿಗದಿ ಮಾಡಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ 5.1ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. ಎಂಪಿಸಿ ಸಭೆಯು ಪೆಟ್ರೋಲ್, ಡೀಸೆಲ್ ಬೆಲೆ ಕಡಿಮೆ ಮಾಡಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದು ಇದೇ ಮೊದಲಲ್ಲ. ಫೆಬ್ರುವರಿ ಮೊದಲ ವಾರದಲ್ಲಿ ನಡೆದ ಸಭೆಯಲ್ಲಿ, 'ಪೆಟ್ರೋಲ್ ಮತ್ತು ಡೀಸೆಲ್‌ನ ಮಾರುಕಟ್ಟೆ ಬೆಲೆಯು ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಯನ್ನು ತಗ್ಗಿಸುವುದರಿಂದ ಬೆಲೆ ಹೆಚ್ಚಳದ ಒತ್ತಡ ತುಸು ತಗ್ಗಬಹುದು. ಹಣದುಬ್ಬರ ದರವು ಹೆಚ್ಚಿನ ಅವಧಿಗೆ ಕಡಿಮೆ ಮಟ್ಟದಲ್ಲಿ ಇರುವಂತಹ ಪರಿಸ್ಥಿತಿ ಸೃಷ್ಟಿಯಾಗಬೇಕಿರುವುದು ಈ ಸಂದರ್ಭದ ಅಗತ್ಯ' ಎಂಬ ಅಭಿಪ್ರಾಯ ವ್ಯಕ್ತವಾಗಿತ್ತು.



ಕೆಲವು ನಗರಗಳಲ್ಲಿ ಪೆಟ್ರೋಲ್ ದರ (ಲೀಟರಿಗೆ ₹ಗಳಲ್ಲಿ)	
ಬೆಂಗಳೂರು	98.26
ಮಂಗಳೂರು	97.46
ಶಿವಮೊಗ್ಗ	99.59
ಮೈಸೂರು	97.82
ಧಾರವಾಡ	98.06
ದಾವಣಗೆರೆ	99.9
ಕಲಬುರ್ಗಿ	98.01

ಮಾಹಿತಿ: ಎಚ್‌ಪಿಸಿಎಲ್ ಜಾಲತಾಣ

'ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರವು 2020ರ ಡಿಸೆಂಬರ್‌ನಲ್ಲಿ ಶೇ 5.5ರ ಮಟ್ಟದಲ್ಲಿದೆ. ಇದಕ್ಕೆ ಒಂದು ಕಾರಣ ಕಚ್ಚಾ ತೈಲದ ಬೆಲೆ ಜಾಸ್ತಿ ಆಗುತ್ತಿರುವುದು ಹಾಗೂ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಪರೋಕ್ಷ ತೆರಿಗೆಗಳು ದೊಡ್ಡ ಪ್ರಮಾಣದಲ್ಲಿ ಇರುವುದು' ಎಂಬ ಅಭಿಪ್ರಾಯವನ್ನು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಫೆಬ್ರುವರಿಯಲ್ಲಿ ವ್ಯಕ್ತಪಡಿಸಿದ್ದರು.

ನ್ಯಾನೊ ಯೂರಿಯಾ ತಯಾರಿಕೆ ಆರಂಭಿಸಿದ ಇಫ್ಕೊ

ನವದೆಹಲಿ (ಪಿಟಿಐ): ಇಫ್ಕೊ ಸಂಸ್ಥೆಯು ದ್ರವರೂಪದ ನ್ಯಾನೊ ಯೂರಿಯಾ ತಯಾರಿಕೆಯನ್ನು ಆರಂಭಿಸಿದ್ದು, ಉತ್ತರ ಪ್ರದೇಶದ ರೈತರಿಗೆ ಮೊದಲ ಉತ್ಪನ್ನವನ್ನು ರವಾನಿಸಿದೆ.

500 ಮಿಲಿ ಲೀಟರಿನ ಪ್ರತಿ ಬಾಟಲಿಯ ಬೆಲೆ ₹ 240. ಗುಜರಾತ್‌ನಲ್ಲಿ ಇರುವ ನ್ಯಾನೊ ಜೈವಿಕ ತಂತ್ರಜ್ಞಾನ ಸಂಶೋಧನಾ ಕೇಂದ್ರದಲ್ಲಿ ಇದನ್ನು ಅಭಿವೃದ್ಧಿಪಡಿಸಲಾಗಿದೆ.

ಪರಿಸರ, ಮಣ್ಣು, ಗಾಳಿ ಮತ್ತು ನೀರನ್ನು ಭವಿಷ್ಯದ ಪೀಳಿಗೆಗೆ ಸುರಕ್ಷಿತವಾಗಿಡಲು, ಎಲ್ಲರಿಗೂ ಆಹಾರ ಭದ್ರತೆ ಖಾತರಿಪಡಿಸಲು ನ್ಯಾನೋ ಯೂರಿಯಾ ಅಗತ್ಯ ಇದೆ ಎಂದು ಇಫ್ಕೊ ಉಪಾಧ್ಯಕ್ಷ ದಿಲೀಪ್ ಶಂಗಾನಿ ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹550
12 ಮೊಟ್ಟೆಗೆ	₹72

ಮೈಸೂರು

100 ಮೊಟ್ಟೆಗೆ	₹550

ರಾಮನಗರ ರೇಷ್ಮೆ ಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹259-397

ದ್ವಿತಳಿ (ಬಿ.ವಿ)
₹288-481

ಕಾರ್ಮಿಕ ಸಂಹಿತೆಗಳ ಶೀಘ್ರ ಅನುಷ್ಠಾನ?

ನವದೆಹಲಿ (ಪಿಟಿಐ): ನಾಲ್ಕು ಕಾರ್ಮಿಕ ಸಂಹಿತೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ಮುಂದಡಿ ಇರಿಸಲಿದ್ದು, ಇವು ಇನ್ನು ಎರಡು ತಿಂಗಳಲ್ಲಿ ಜಾರಿಗೆ ಬರುವ ಸಾಧ್ಯತೆ ಇದೆ. ಸಂಹಿತೆಗಳು ಜಾರಿಗೆ ಬಂದರೆ, ನೌಕರರ ಕೈಗೆ ಸಿಗುವ ಸಂಬಳದ ಮೊತ್ತ ಕಡಿಮೆ ಆಗಲಿದ್ದು, ಭವಿಷ್ಯನಿಧಿ ಖಾತೆಗೆ (ಪಿ.ಎಫ್.) ಜಮಾ ಆಗುವ ಮೊತ್ತ ಹೆಚ್ಚಳವಾಗಲಿದೆ.

ಕಾರ್ಮಿಕ ಸಂಹಿತೆಗಳ ಭಾಗವಾಗಿರುವ ವೇತನ ಸಂಹಿತೆ ಜಾರಿಗೆ ಬಂದ ನಂತರ ಮೂಲ ವೇತನ ಹಾಗೂ ನೌಕರರಿಂದ ಕಡಿತವಾಗುವ ಪಿ.ಎಫ್. ಮೊತ್ತವನ್ನು ಲೆಕ್ಕ ಹಾಕುವ ವಿಧಾನದಲ್ಲಿ ಬದಲಾವಣೆ ಆಗಲಿದೆ. ಸಂಹಿತೆಗಳನ್ನು ಏಪ್ರಿಲ್ 1ರಿಂದಲೇ ಜಾರಿಗೆ ತರಲು ಕೇಂದ್ರ ಕಾರ್ಮಿಕ ಸಚಿವಾಲಯವು ಬಯಸಿತ್ತು.

ಸಂಹಿತೆಗಳಿಗೆ ಸಂಬಂಧಿಸಿದ ನಿಯಮಗಳನ್ನು ಸಚಿವಾಲಯ ಅಂತಿಮಗೊಳಿಸಿತ್ತು. ಆದರೆ, ಹಲವು ರಾಜ್ಯಗಳು ಈ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸುವ ಸ್ಥಿತಿಯಲ್ಲಿ ಇರಲಿಲ್ಲ. ಹಾಗಾಗಿ ಸಂಹಿತೆಗಳ ಅನುಷ್ಠಾನ ಆಗಿರಲಿಲ್ಲ. ಕರ್ನಾಟಕ ಸೇರಿದಂತೆ ಕೆಲವು ರಾಜ್ಯಗಳು ಕರಡು ನಿಯಮಗಳನ್ನು ಈಗಾಗಲೇ ಸಿದ್ಧಪಡಿಸಿವೆ ಎಂದು ಮೂಲಗಳು ತಿಳಿಸಿವೆ.

ವೇತನ ಸಂಹಿತೆಯು ಎಲ್ಲ ಬಗೆಯ ಭತ್ಯೆಗಳು ನೌಕರರ ಒಟ್ಟು ವೇತನದ ಶೇಕಡ 50ರಷ್ಟನ್ನು ಮೀರುವಂತಿಲ್ಲ ಎಂದು ಹೇಳುತ್ತದೆ. ಅಂದರೆ, ಒಟ್ಟು ಸಂಬಳದಲ್ಲಿ ಶೇಕಡ 50ರಷ್ಟು ಭಾಗವು ಮೂಲವೇತನ ಆಗಿರಬೇಕು. ಪಿ.ಎಫ್. ಖಾತೆಗೆ ವರ್ಗಾವಣೆ ಆಗುವ ಮೊತ್ತವನ್ನು ನೌಕರನ ಮೂಲವೇತನದ (ಮೂಲ ವೇತನ ಮತ್ತು ಡಿ.ಎ. ಒಟ್ಟು ಮೊತ್ತ) ಆಧಾರದಲ್ಲಿ ಲೆಕ್ಕ ಹಾಕಲಾಗುತ್ತದೆ.

ಸಂಹಿತೆಯು ಜಾರಿಗೆ ಬಂದ ನಂತರ ನೌಕರರಿಗೆ ಕೈಗೆ ಸಿಗುವ ಸಂಬಳದ ಮೊತ್ತ ಕಡಿಮೆ ಆಗುತ್ತದೆ. ಉದ್ಯೋಗದಾತರು ಪಿ.ಎಫ್.ಗೆ ಜಮಾ ಮಾಡಬೇಕಿರುವ ಮೊತ್ತ ಹೆಚ್ಚಳವಾಗುತ್ತದೆ. 300ಕ್ಕಿಂತ ಕಡಿಮೆ ನೌಕರರನ್ನು ಹೊಂದಿರುವ ಕಂಪನಿಗಳು ಸರ್ಕಾರದ ಅನುಮತಿ ಇಲ್ಲದೆಯೂ ನೌಕರರನ್ನು ಕೆಲಸದಿಂದ ತೆಗೆಯಬಹುದು ಎಂದು ಕೈಗಾರಿಕಾ ಸಂಬಂಧಗಳ ಕುರಿತ ಸಂಹಿತೆಯು ಹೇಳುತ್ತದೆ.